
# ಇತಿಹಾಸ ಮತ್ತು ರಾಜ್ಯಶಾಸ್ತ್ರ

## ಹತ್ತನೆಯ ಇಯತ್ತೆ



# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಸರಕಾರ ನಿರ್ಣಯ ಕ್ರಮಾಂಕ : ಅಭ್ಯಾಸ-2116/(ಪ್ರ.ಕ್ರ.43/16) ಎಸ್‌ಡಿ-4 ದಿನಾಂಕ 25.04.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯ ದಿನಾಂಕ 29.12.2017ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು ಕ್ರಿ.ಶ. 2018-19 ಈ ಶೈಕ್ಷಣಿಕ ವರ್ಷದಿಂದ ನಿರ್ಧರಿಸಲು ಮಾನ್ಯತೆ ನೀಡಲಾಗಿದೆ.

# ಇತಿಹಾಸ ಮತ್ತು ರಾಜ್ಯಶಾಸ್ತ್ರ

## ಹತ್ತನೆಯ ಇಯತ್ತೆ

सा विद्या या विमुक्तये
महाराष्ट्र राज्य पाठ्यपुस्तक निर्मिती व अभ्यासक्रम संशोधन मंडळ

ಮಹಾರಾಷ್ಟ್ರರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

4GDFGD

ತಮ್ಮ ಸ್ಮಾರ್ಟಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R. Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿರುವ Q.R. Codeದ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

ಪ್ರಥಮಾವೃತ್ತಿ : 2018
ಪುನರ್ಮುದ್ರಣ :
ಸೆಪ್ಟೆಂಬರ್ 2021

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411004.

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಕಡೆಗೆ ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ಈ ಪುಸ್ತಕದಲ್ಲಿಯ ಯಾವುದೇ ಭಾಗವನ್ನು ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಉದ್ಧೃತಗೊಳಿಸಬಾರದು.

**ಇತಿಹಾಸ ವಿಷಯ ಸಮಿತಿ**

ಡಾ. ಸದಾನಂದ ಮೋರೆ, ಅಧ್ಯಕ್ಷ
ಶ್ರೀ. ಮೋಹನ ಶೇಟೆ, ಸದಸ್ಯ
ಶ್ರೀ. ಪಾಂಡುರಂಗ ಬಲಕವಡೆ, ಸದಸ್ಯ
ಡಾ. ಶುಭಾಂಗನಾ ಅತ್ರೆ, ಸದಸ್ಯ
ಶ್ರೀ. ಸೋಮನಾಥ ರೋಡೆ, ಸದಸ್ಯ
ಶ್ರೀ. ಬಾಪುಸಾಹೇ ಶಿಂದೆ, ಸದಸ್ಯ
ಶ್ರೀ. ಬಾಳಕೃಷ್ಣ ಚೋಪಡೆ, ಸದಸ್ಯ
ಶ್ರೀ. ಪ್ರಶಾಂತ ಸರೂಡಕರ, ಸದಸ್ಯ
ಶ್ರೀ. ಮೊಗಲ ಜಾಧವ, ಸದಸ್ಯ - ಸಚಿವ

**ನಾಗರಿಕಶಾಸ್ತ್ರ ವಿಷಯ ಸಮಿತಿ**

ಡಾ. ಶ್ರೀಕಾಂತ ಪರಾಂಜಪೆ, ಅಧ್ಯಕ್ಷ
ಪ್ರಾ. ಸಾಧನಾ ಕುಲಕರ್ಣಿ, ಸದಸ್ಯ
ಡಾ. ಪ್ರಕಾಶ ಪವಾರ, ಸದಸ್ಯ
ಪ್ರಾ. ಅಜಿಂಕ್ಯ ಗಾಯಕವಾಡ, ಸದಸ್ಯ
ಪ್ರಾ. ಸಂಗೀತಾ ಆಹೇರ, ಸದಸ್ಯ
ಡಾ. ಮೋಹನ ಕಾಶೀಕರ, ಸದಸ್ಯ
ಶ್ರೀ. ವೈಜನಾಥ ಕಾಳೆ, ಸದಸ್ಯ
ಶ್ರೀ. ಮೊಗಲ ಜಾಧವ, ಸದಸ್ಯ - ಸಚಿವ

**ಇತಿಹಾಸ ಮತ್ತು ನಾಗರಿಕಶಾಸ್ತ್ರ ಅಭ್ಯಾಸಗಟ**

ಶ್ರೀ. ರಾಹುಲ ಪ್ರಭು
ಶ್ರೀ. ಸಂಜಯ ವಝರೇಕರ
ಶ್ರೀ. ಸುಭಾಷ ರಾಠೋಡ
ಸೌ. ಸುನೀತಾ ದಳವಿ
ಡಾ. ಶಿವಾನಿ ಲಿಮಯೆ
ಶ್ರೀ. ಭಾವುಸಾಹೇಬ ಉಮಾಟೆ
ಡಾ. ನಾಗನಾಥ ಯೆವಲೆ
ಶ್ರೀ. ಸದಾನಂದ ಡೊಂಗರೆ
ಶ್ರೀ. ರವೀಂದ್ರ ಪಾಟೀಲ
ಸೌ. ರೂಪಲಿ ಗಿರಕರ
ಡಾ. ಮೀನಾಕ್ಷಿ ಉಪಾಧ್ಯಾಯ
ಡಾ. ರಾವಸಾಹೇಬ ಶೆಳಕೆ
ಡಾ. ಸತೀಶ ಚಾಪಲೆ
ಶ್ರೀ. ವಿಶಾಲ ಕುಲಕರ್ಣಿ
ಪ್ರಾ. ಶೇಖರ ಪಾಟೀಲ
ಶ್ರೀ. ರಾಮದಾಸ ಠಾಕರ
ಡಾ. ಅಜಿತ ಆಪಟೆ
ಡಾ. ಮೋಹನ ಖಡಸೆ
ಸೌ. ಶಿವಕನ್ಯಾ ಕದೇರಕರ
ಶ್ರೀ. ಗೌತಮ ಡಾಂಗೆ
ಡಾ. ವೆಂಕಟೇಶ ಖರಾತ
ಶ್ರೀ. ರವೀಂದ್ರ ಜಿಂದೆ
ಡಾ. ಪ್ರಭಾಕರ ಲೊಂಡೆ
ಡಾ. ಮಂಜಿರಿ ಭಾಲೇರಾವ
ಪ್ರಾ. ಶಶಿ ನಿಗೋಜಕರ

**ಲೇಖಕರು**

**ಇತಿಹಾಸ**
ಡಾ. ಶುಭಾಂಗನಾ ಅತ್ರೆ
ಡಾ. ಗಣೇಶ ರಾವುತ

**ರಾಜ್ಯಶಾಸ್ತ್ರ**
ಡಾ. ವೈಭವಿ ಪಳಸುಲೆ

**ಮುಖಪುಟ ಮತ್ತು ಅಲಂಕಾರ**
ಶ್ರೀ. ದೇವದತ್ತ ಪ್ರಕಾಶ ಬಲಕವಡೆ

**ಅಕ್ಷರಜೋಡಣೆ**
ಕೇಸನ್ ಲ್ಯಾಂಗ್ವೇಜ್ ಬ್ಯೂರೋ, ಮುಂಬಯಿ.

**ಕಾಗದ**
70 ಜಿ. ಎಸ್. ಎಮ್. ಕ್ರೀಮ್‌ವೋವ್

**ಮುದ್ರಣಾದೇಶ**

**ಮುದ್ರಕ**

**ಇತಿಹಾಸ ಭಾಷಾಂತರ**
ಶ್ರೀ ಎನ್. ಎಮ್. ಕುಲಕರ್ಣಿ

**ಸಮೀಕ್ಷೆ**
ಶ್ರೀಮತಿ ವಿಜಯಲಕ್ಷ್ಮಿ ಆರ್. ರೇವಣಕರ

**ರಾಜ್ಯಶಾಸ್ತ್ರ ಭಾಷಾಂತರ**
ಶ್ರೀ ಪ್ರಕಾಶ ಎಲ್. ಪ್ರಧಾನ

**ಸಮೀಕ್ಷೆ**
ಶ್ರೀಮತಿ ವಿಜಯಲಕ್ಷ್ಮಿ ಆರ್. ರೇವಣಕರ

**ಸಂಯೋಜಕ**
ಡಾ. ಸದಾನಂದ ಎಂ. ಬಿಳ್ಳೂರ
ವಿಶೇಷಾಧಿಕಾರಿ, ಕನ್ನಡ
ಶ್ರೀ. ಆರ್. ಎಮ್. ಗಣಾಚಾರಿ,
ವಿಷಯ ಸಹಾಯಕ, ಕನ್ನಡ

**ನಿರ್ಮಿತಿ**
ಶ್ರೀ. ಸಚ್ಚಿತಾನಂದ ಆಫಳೆ,
ಮುಖ್ಯ ನಿರ್ಮಿತಿ ಅಧಿಕಾರಿ
ಶ್ರೀ. ಪ್ರಭಾಕರ ಪರಬ,
ನಿರ್ಮಿತಿ ಅಧಿಕಾರಿ
ಶ್ರೀ. ಶಶಾಂಕ ಕಣಿಕದಳೆ,
ಸಹಾಯಕ ನಿರ್ಮಿತಿ ಅಧಿಕಾರಿ

**ಪ್ರಕಾಶಕ**
ಶ್ರೀ. ವಿವೇಕ ಉತ್ತಮ ಗೋಸಾವಿ, ನಿಯಂತ್ರಕ
ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪ್ರಭಾದೇವಿ, ಮುಂಬಯಿ - 25.

# ಭಾರತದ ಸಂವಿಧಾನ

## ಪೀಠಿಕೆ

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**<br>
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು<br>
ಹಾಗೂ ಅದರ ಸಮಸ್ತ ನಾಗರಿಕರಿಗೆ :<br>
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**<br>
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ<br>
ಮತ್ತು ಉಪಾಸನಾ **ಸ್ವಾತಂತ್ರ್ಯ;**<br>
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**<br>
ನಿಶ್ಚಿತವಾಗಿ ದೊರೆಯುವಂತೆ ಮಾಡಲು<br>
ಮತ್ತು ವ್ಯಕ್ತಿಗೌರವವನ್ನು<br>
ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು<br>
ಆಶ್ವಾಸನೆ ನೀಡುವ **ಬಂಧುತ್ವವನ್ನು**<br>
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;<br>
**ನಮ್ಮ ಸಂವಿಧಾನ ಸಭೆಯಲ್ಲಿ**<br>
ಇಂದು ದಿನಾಂಕ ಇಪ್ಪತ್ತಾರನೆಯ ನವೆಂಬರ, ೧೯೪೯ ನೆಯ ಇಸವಿ<br>
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**<br>
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

ವಿದ್ಯಾರ್ಥಿ ಮಿತ್ರರೇ,

ಮೂರನೆಯ ಇಯತ್ತೆಯಿಂದ ಐದನೆಯ ಇಯತ್ತೆಯ ವರೆಗಿನ ಇತಿಹಾಸ ಮತ್ತು ನಾಗರಿಕ ಶಾಸ್ತ್ರ ವಿಷಯದ ಅಧ್ಯಯನವನ್ನು ನೀವು 'ಪರಿಸರ ಅಭ್ಯಾಸ'ದಲ್ಲಿ ಮಾಡಿದ್ದೀರಿ. ಆರನೆಯ ಇಯತ್ತೆಯಿಂದ ಅಭ್ಯಾಸಕ್ರಮದಲ್ಲಿ ಇತಿಹಾಸ ಮತ್ತು ನಾಗರಿಕ ಶಾಸ್ತ್ರ ಇವು ಸ್ವತಂತ್ರ ವಿಷಯಗಳಿವೆ. ಆರನೆಯ ಇಯತ್ತೆಯಿಂದ ಈ ಎರಡೂ ವಿಷಯಗಳ ಸಮಾವೇಶವನ್ನು ಒಂದೇ ಪಠ್ಯಪುಸ್ತಕದಲ್ಲಿ ಮಾಡಲಾಗಿದೆ. ಹತ್ತನೆಯ ಇಯತ್ತೆಯ ಪಠ್ಯಪುಸ್ತಕವನ್ನು ನಿಮ್ಮ ಕೈಗೆ ನೀಡಲು ನಮಗೆ ತುಂಬ ಆನಂದವೆನಿಸುತ್ತದೆ.

ಪಠ್ಯಪುಸ್ತಕದ ರಚನೆಯನ್ನು ವಿಷಯವು ಚೆನ್ನಾಗಿ ತಿಳಿಯಬೇಕು, ಮನರಂಜಕವೆನಿಸಬೇಕು, ಎಂಬ ಉದ್ದೇಶದಿಂದ ಮಾಡಲಾಗಿದೆ. ಈ ಪಠ್ಯಪುಸ್ತಕದ ಅಭ್ಯಾಸದಿಂದ ಜ್ಞಾನದ ಜೊತೆಗೆ ನಿಮಗೆ ಆನಂದ ದೊರೆಯಬೇಕು ಎಂದು ನಮಗೆ ಅನಿಸುತ್ತದೆ. ಅದಕ್ಕಾಗಿ ಪಠ್ಯಪುಸ್ತಕದಲ್ಲಿ ಬಣ್ಣ-ಬಣ್ಣದ ಚಿತ್ರಗಳನ್ನು ಕೊಡಲಾಗಿದೆ. ಪಠ್ಯಪುಸ್ತಕದಲ್ಲಿಯ ಪ್ರತಿಯೊಂದು ಪಾಠವನ್ನು ಲಕ್ಷಪೂರ್ವಕ ಅಭ್ಯಾಸ ಮಾಡಬೇಕು. ಅದರಲ್ಲಿಯ ಯಾವ ಭಾಗವು ನಿಮಗೆ ತಿಳಿಯುವದಿಲ್ಲವೋ ಆ ಭಾಗವನ್ನು ಶಿಕ್ಷಕರ ಮತ್ತು ಪೋಷಕರ ಕಡೆಯಿಂದ ತಿಳಿದುಕೊಳ್ಳಬೇಕು. ಚೌಕಟ್ಟಿನಲ್ಲಿ ಕೊಟ್ಟ ವಿಷಯವು ನಿಮ್ಮ ಜ್ಞಾನದಲ್ಲಿ ವೃದ್ಧಿಯನ್ನು ಮಾಡಲಿದೆ ! ಹೆಚ್ಚಿನ ಮಾಹಿತಿಗಾಗಿ 'ಆ್ಯಪ್'ದ ಮಾಧ್ಯಮದಿಂದ ಕ್ಯೂ.ಆರ್. ಕೋಡ ಮುಖಾಂತರ ಪ್ರತಿಯೊಂದು ಪಾಠಕ್ಕೆ ಸಂಬಂಧಿಸಿದ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯವು ತಮಗೆ ಲಭ್ಯವಾಗಲಿದೆ. ಅಧ್ಯಯನಕ್ಕಾಗಿ ನಿಶ್ಚಿತವಾಗಿ ಅದರ ಉಪಯೋಗವಾಗುವುದು. ಇತಿಹಾಸ ವಿಷಯವು ರಂಜಕವಾಗಿದ್ದು ಅದನ್ನು ನಮ್ಮ ಗೆಳೆಯನೆಂದು ತಿಳಿದು ಅಭ್ಯಾಸ ಮಾಡಿದರೆ ನಿಮಗೆ ಅದರಲ್ಲಿ ಅಭಿರುಚಿ ನಿಶ್ಚಿತವಾಗಿ ನಿರ್ಮಾಣವಾಗುವುದು.

ಇತಿಹಾಸದ ಭಾಗದಲ್ಲಿ 'ಅನ್ವಯಿಕ ಇತಿಹಾಸ'ವನ್ನು ಕೊಡಲಾಗಿದೆ. ಇತಿಹಾಸವು ಒಂದು ಕುತೂಹಲ ಮತ್ತು ಹವ್ಯಾಸವೆಂದು ಅನೇಕರಿಗೆ ಮೆಚ್ಚುಗೆಯದಾಗಿರುತ್ತದೆ. ಆದರೆ ಅದು ಶಾಲೆಯ ಅಭ್ಯಾಸಕ್ರಮದಲ್ಲಿ ನಿಜವಾಗಿಯೂ ಎಷ್ಟು ಅವಶ್ಯಕವಾಗಿದೆಯೆಂಬುದರ ಮೇಲೆ ವಿಶೇಷ ಗಮನ ಹರಿಸಿದರೆ ಮುಂದಿನ ಆಯುಷ್ಯದಲ್ಲಿ ವಿದ್ಯಾರ್ಥಿಗಳಿಗೆ ಯಾವ ಪ್ರಕಾರದ ಉದ್ಯೋಗಾವಕಾಶಗಳು ಉಪಲಬ್ಧವಾಗಬಹುದು, ಅವರು ಸ್ವೀಕರಿಸಿದ ಉದ್ಯೋಗದಲ್ಲಿ ಅವರಿಗೆ ಆ ವಿಷಯದ ಅಭ್ಯಾಸವು ವಿಶೇಷ ಲಾಭದಾಯಕವಾಗಬಹುದೇ ಎಂಬುದರ ಬಗ್ಗೆ ಅನೇಕರ ಮನಸ್ಸಿನಲ್ಲಿ ಸಂಶಯವಿರುತ್ತದೆ. ಅವಶ್ಯಕ ಮಾಹಿತಿ ಲಭ್ಯವಿಲ್ಲದಿರುವುದರಿಂದ ಈ ಸಂಶಯವನ್ನು ದೂರಮಾಡುವುದು ಕಠಿಣವಾಗುತ್ತದೆ. ಆ ಮಾಹಿತಿಯನ್ನು ಈ ಪಠ್ಯಪುಸ್ತಕದ ಮೂಲಕ 'ಇತಿಹಾಸ' ಈ ವಿಷಯದಲ್ಲಿ ಉಪಲಬ್ಧ ಮಾಡಿಕೊಡಲಾಗಿದೆ. ದಿನನಿತ್ಯದ ಜೀವನದಲ್ಲಿಯ ಯಾವುದೇ ವಿಷಯವಿರಲಿ, ಉದ್ಯೋಗದ ಯಾವುದೇ ಕ್ಷೇತ್ರವಿರಲಿ, ಆ ವಿಷಯಗಳ ಮತ್ತು ಆ ಉದ್ಯೋಗ ಕ್ಷೇತ್ರಗಳ ವಿಕಾಸದ ಸ್ವತಂತ್ರ ಇತಿಹಾಸವಿರುತ್ತದೆ. ಆ ಉದ್ಯೋಗದಲ್ಲಿಯ ಕೌಶಲ್ಯವೃದ್ಧಿಗಾಗಿ ಆ ಇತಿಹಾಸದ ಜ್ಞಾನದ ಉಪಯೋಗವಾಗುತ್ತದೆಯೆಂಬುದನ್ನು ಈ ಪಠ್ಯಪುಸ್ತಕದಲ್ಲಿ ಸ್ಪಷ್ಟಪಡಿಸಲಾಗಿದೆ.

ರಾಜ್ಯಶಾಸ್ತ್ರದ ವಿಭಾಗದಲ್ಲಿ 'ಭಾರತೀಯ ಸಂವಿಧಾನದ ಮುನ್ನಡೆ ಎಂಬ ವಿಷಯದ ಮಾಹಿತಿ ನೀಡಲಾಗಿದೆ. ಇದರಲ್ಲಿ ಚುನಾವಣೆ ಪ್ರಕ್ರಿಯೆಯ ಮಾಹಿತಿ, ರಾಷ್ಟ್ರೀಯ ಮತ್ತು ಪ್ರಾದೇಶಿಕ ಮಟ್ಟಗಳಲ್ಲಿಯ ಪ್ರಮುಖ ರಾಜಕೀಯ ಪಕ್ಷಗಳು, ಅವುಗಳ ಧೋರಣೆ, ಪ್ರಜಾಪ್ರಭುತ್ವವನ್ನು ಸಮರ್ಥವನ್ನಾಗಿ ಮಾಡುವ ಸಾಮಾಜಿಕ ಮತ್ತು ರಾಜಕೀಯ ಚಳುವಳಿಗಳು ಅದರಂತೆ ಭಾರತೀಯ ಪ್ರಜಾಪ್ರಭುತ್ವದ ಮುಂದಿನ ಆಹ್ವಾನಗಳು ಇತ್ಯಾದಿ ವಿಷಯಗಳನ್ನು ಕುರಿತು ಚರ್ಚೆ ಮಾಡಲಾಗಿದೆ. ಈ ವರ್ಗದಲ್ಲಿಯ ವಿದ್ಯಾರ್ಥಿಗಳು ಬೇಗನೇ ಮತದಾರರಾಗುವವರಿದ್ದಾರೆ. ಈ ಹೊಸ ಪಾತ್ರಕ್ಕಾಗಿ ವಿದ್ಯಾರ್ಥಿಗಳನ್ನು ಸಮರ್ಥರನ್ನಾಗಿ ಮಾಡುವ ಸಲುವಾಗಿ ಪಠ್ಯಪುಸ್ತಕದಲ್ಲಿಯ ಆಶಯವು ಉಪಯುಕ್ತವಾಗಿದೆ.

**(ಡಾ. ಸುನಿಲ ಮಗರ)**
ಸಂಚಾಲಕ
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು
ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

ಪುಣೆ
ದಿನಾಂಕ : 18 ಮಾರ್ಚ 2018, ಯುಗಾದಿ
ಭಾರತೀಯ ಸೌರ ದಿನಾಂಕ : 27 ಫಾಲ್ಗುಣ 1939

# - ಶಿಕ್ಷಕರಿಗಾಗಿ -

'ಇತಿಹಾಸ' ಇದು ಒಂದು ಕುತೂಹಲದ ವಿಷಯವಾಗಿದ್ದು ಹವ್ಯಾಸವೆಂದು ಅನೇಕರ ಮೆಚ್ಚುಗೆಯದಾಗಿರುತ್ತದೆ. ಆದರೆ ಅದು ಶಾಲೆಯ ಅಭ್ಯಾಸಕ್ರಮದಲ್ಲಿ ನಿಜವಾಗಿಯೂ ಎಷ್ಟು ಅವಶ್ಯಕವಾಗಿದೆ, ಎಂಬುದರ ಕಡೆಗೆ ವಿಶೇಷ ಲಕ್ಷ ಕೇಂದ್ರೀಕರಿಸಿದರೆ ಮುಂದಿನ ಆಯುಷ್ಯದಲ್ಲಿ ಮಕ್ಕಳಿಗೆ ಯಾವ ಪ್ರಕಾರದ ಉದ್ಯೋಗಾವಕಾಶಗಳು ಉಪಲಬ್ಧವಾಗಬಲ್ಲವು ಇಲ್ಲವೆ ಅವರು ಅಂಗೀಕರಿಸಿದ ವ್ಯವಸಾಯದಲ್ಲಿ ಅವರಿಗೆ ಆ ವಿಷಯದ ಅಭ್ಯಾಸದ ವಿಶೇಷ ಲಾಭವಾಗಬಹುದೇ ಎಂಬುದರ ಬಗ್ಗೆ ಬಹುತೇಕ ಜನರ ಮನಸ್ಸಿನಲ್ಲಿ ಸಂಶಯವಿರುತ್ತದೆ. ಆವಶ್ಯಕ ಮಾಹಿತಿ ಲಭ್ಯವಿಲ್ಲದಿರುವುದರಿಂದ ಈ ಸಂಶಯವನ್ನು ದೂರಮಾಡುವುದು ಕಠಿಣವೆನಿಸುತ್ತದೆ. ಆ ಮಾಹಿತಿಯನ್ನು ಈ ಪಠ್ಯಪುಸ್ತಕದ ಮೂಲಕ ಉಪಲಬ್ಧ ಮಾಡಿಕೊಡಲಾಗಿದೆ.

ಇತಿಹಾಸದ ಅಭ್ಯಾಸಪದ್ಧತಿ ಮತ್ತು ಇತಿಹಾಸಲೇಖನವೆಂದರೇನು, ಅದರಂತೆ ಇತಿಹಾಸಲೇಖನದ ಇತಿಹಾಸ ಮುಂತಾದವುಗಳ ಮಾಹಿತಿಯನ್ನು ಇಲ್ಲಿಯವರೆಗೆ ವಿದ್ಯಾರ್ಥಿಗಳಿಗೆ ಕೇವಲ ಮಹಾವಿದ್ಯಾಲಯ ಮತ್ತು ವಿಶ್ವವಿದ್ಯಾಲಯ ಮಟ್ಟಗಳಲ್ಲಿಯೇ ನೀಡಲಾಗುತ್ತಿತ್ತು. ಶಾಲಾ ಅಭ್ಯಾಸಕ್ರಮದಲ್ಲಿ ಅದರ ಸಮಾವೇಶವನ್ನು ಮಾಡಲಾಗಿರಲಿಲ್ಲ. ಅದರಿಂದಾಗಿ ಇತಿಹಾಸದ ಶಾಸ್ತ್ರಶುದ್ಧ ಪದ್ಧತಿ ಎಂದರೇನು ಎಂಬುದರ ಬಗ್ಗೆ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಗೊಂದಲ ನಿರ್ಮಾಣವಾಗುವ ಸಾಧ್ಯತೆಯನ್ನು ಗಮನದಲ್ಲಿರಿಸಿ, ಈ ಪಠ್ಯಪುಸ್ತಕದಲ್ಲಿ ಇತಿಹಾಸ ಲೇಖನ ಈ ವಿಷಯದ ಮೇಲೆ ಮೊದಲಿನ ಎರಡು ಪಾಠಗಳಲ್ಲಿ ಸುಲಭ ರೀತಿಯಿಂದ ಸ್ವಲ್ಪದರಲ್ಲಿ ಮಾಹಿತಿ ನೀಡಲಾಗಿದೆ.

ಕೇವಲ ವಿವಿಧ ರಾಜ ಪ್ರಭುತ್ವಗಳು ಹಾಗೂ ಅವರೊಳಗಿನ ಯುದ್ಧ ಅದರಂತೆ ಮಹಾನ್ ಯೋಧರ ಪರಾಕ್ರಮದ ಕಥೆಗಳು ಇದಿಷ್ಟರವರೆಗೆ ಇತಿಹಾಸವು ಸೀಮಿತವಾಗಿರುವುದಿಲ್ಲವೆಂಬುದರ ಅರಿವನ್ನು ಶಾಲೆಯ ವಿದ್ಯಾರ್ಥಿಗಳಿಗೆ ಇತಿಹಾಸ ಪಠ್ಯಪುಸ್ತಕದ ಮೂಲಕ ಕಾಲಕಾಲಕ್ಕೆ ಮಾಡಿಕೊಡಲಾಗಿದೆ. ಆದರೂ ಈ ಸಂಗತಿಗಳ ಆಚೆಗಿನ ಇತಿಹಾಸವೆಂದರೆ ನಿಜವಾಗಿ ಏನು ಹಾಗೂ ವರ್ತಮಾನದೊಡನೆ ಇತಿಹಾಸದ ಪ್ರತ್ಯಕ್ಷ ಸಂಬಂಧವು ಹೇಗಿರುತ್ತದೆಯೆಂಬುದನ್ನು ತಿಳಿದುಕೊಳ್ಳುವ ಅವಕಾಶ ಶಾಲಾ ವಿದ್ಯಾರ್ಥಿಗಳಿಗೆ ದೊರೆಯುತ್ತಿರಲಿಲ್ಲ. ಈ ಸಂಗತಿಯನ್ನು ವಿಶೇಷವಾಗಿ ಲಕ್ಷದಲ್ಲಿಟ್ಟುಕೊಂಡು ಹತ್ತನೆಯ ಇಯತ್ತೆಯ ಅಭ್ಯಾಸಕ್ರಮದ ರೂಪರೇಖೆಯನ್ನು ತಯಾರಿಸಲಾಯಿತು. ಈ ಪಠ್ಯಪುಸ್ತಕದಲ್ಲಿಯ ಪಾಠಗಳ ರಚನೆಯನ್ನು ಆ ಸಂಬಂಧದಲ್ಲಿ ಮಾಡಲಾಗಿದೆ.

ನಿಜವಾಗಿ ನೋಡಿದರೆ ನಿತ್ಯದ ವ್ಯಾವಹಾರಿಕ ಜೀವನದ ಜೊತೆಗೆ ಇತಿಹಾಸದ ಅತ್ಯಂತ ನಿಕಟವಾದ ಸಂಬಂಧವಿದೆ. ಅದನ್ನು ಸ್ಪಷ್ಟಪಡಿಸುವ 'ಅನ್ವಯಿಕ ಇತಿಹಾಸ' ಅಥವಾ 'ಜನರಿಗಾಗಿ ಇತಿಹಾಸ' ಎಂಬ ಹೊಸ ಜ್ಞಾನಶಾಖೆಯು ಕಳೆದ ಕೆಲವು ದಶಕಗಳಲ್ಲಿ ವಿಕಸಿತವಾಗುತ್ತಲಿದೆ. ವಿದೇಶಗಳಲ್ಲಿಯ ವಿಶ್ವವಿದ್ಯಾಲಯಗಳಲ್ಲಿ ಈ ವಿಷಯದ ಅಭ್ಯಾಸಕ್ರಮವು ಉಪಲಬ್ಧವಿದೆ. ಈ ಪಠ್ಯಪುಸ್ತಕದಲ್ಲಿ ಈ ಹೊಸ ವಿಷಯದ ಮಾಹಿತಿ ಮಾಡಿಕೊಡುವುದರ ಜೊತೆಗೆ ವಿವಿಧ ವ್ಯವಸಾಯಗಳಲ್ಲಿಯ ಮೂಲವರ್ಧಿತ ಸೇವೆಗಳಿಗಾಗಿ ಇತಿಹಾಸದ ಆಳವಾದ ಅಭ್ಯಾಸದ ಹಾಗೂ ಇಂಥ ಅಭ್ಯಾಸ ಮಾಡಿರುವ ಅರಿತ ಇತಿಹಾಸಕಾರರ ಅವಶ್ಯಕತೆ ಹೇಗೆ ಉಂಟಾಗುತ್ತದೆಯೆಂಬುದನ್ನೂ ಹೇಳಲಾಗಿದೆ. ಅದಕ್ಕೆ ಸಂಬಂಧಿತ ಅಭ್ಯಾಸಕ್ರಮ ಹಾಗೂ ಆ ಅಭ್ಯಾಸಕ್ರಮವು ಎಲ್ಲಿ ಲಭ್ಯವಿದೆಯೋ ಅಂಥ ಸಂಸ್ಥೆಗಳ ಮಾಹಿತಿಯನ್ನು ಮಾಡಿಕೊಡಲಾಗಿದೆ.

ನಿತ್ಯ ಜೀವನದಲ್ಲಿಯ ಯಾವುದೇ ವಿಷಯವಿರಲಿ, ಉದ್ಯೋಗದ ಯಾವುದೇ ಕ್ಷೇತ್ರವಿರಲಿ, ಆ ವಿಷಯಗಳ ಹಾಗೂ ಆ ಆ ಉದ್ಯೋಗ ಕ್ಷೇತ್ರಗಳ ವಿಕಾಸದ ತನ್ನದಾದ ಇತಿಹಾಸವಿರುತ್ತದೆ ಹಾಗೂ ಉದ್ಯೋಗದಲ್ಲಿಯ ಕೌಶಲ್ಯವೃದ್ಧಿಗಾಗಿ ಆ ಇತಿಹಾಸದ ಉಪಯೋಗವಾಗುತ್ತದೆ. ಈ ಸಂಗತಿಯನ್ನು ಈ ಪಠ್ಯಪುಸ್ತಕದಲ್ಲಿ ಸ್ಪಷ್ಟಪಡಿಸಲಾಗಿದೆ.

ಮಹಾವಿದ್ಯಾಲಯ ಪ್ರವೇಶದ ಹೊಸ್ತಿಲಲ್ಲಿ ನಿಂತಿರುವ ಹತ್ತನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಪದವಿಯನ್ನು ಪಡೆಯಲು ಹಾಗೂ ನಂತರದ ಆಯುಷ್ಯದಲ್ಲಿಯ ಪ್ರಗತಿಗಾಗಿ ಅನುಕೂಲವಾದ ಉದ್ಯೋಗವನ್ನು ಆಯ್ಕೆ ಮಾಡಲು ಯೋಗ್ಯ ದಿಶೆಯನ್ನು ಹೇಗೆ ನಿರ್ಧರಿಸುವುದು ಎಂಬುದರ ಬಗ್ಗೆ ಅನೇಕ ಪ್ರಶ್ನೆಗಳಿರುತ್ತವೆ. ವಿಶೇಷತಃ ಇತಿಹಾಸ ವಿಷಯದಲ್ಲಿ ಪ್ರಾವೀಣ್ಯವನ್ನು ಪಡೆಯುವ ಇಚ್ಛೆಯಿರುವ ವಿದ್ಯಾಥಿಗಳಿಗೆ ಉತ್ತೇಜನಪರ ಮಾರ್ಗದರ್ಶನ ಮಾಡುವ ಪುಸ್ತಕಗಳು ಕ್ವಚಿತ್ತಾಗಿಯೇ ಲಭ್ಯವಾಗುತ್ತವೆ. ಈ ಪಠ್ಯಪುಸ್ತಕದ ಮೂಲಕ ಆ ಕೊರತೆಗಳನ್ನು ತುಂಬಿತೆಗೆಯುವ ಪ್ರಯತ್ನ ಮಾಡಲಾಗಿದೆ. ಅದಕ್ಕಾಗಿ ಉಪಯುಕ್ತ ಮಾಹಿತಿಯ ಜೊತೆಗೆ ರಂಜಕ ಮಾಹಿತಿಯನ್ನು ಹಾಗೂ ಸುಸಂಬದ್ಧ ಚಿತ್ರಗಳ ಸಮಾವೇಶನ್ನೂ ಮಾಡಲಾಗಿದೆ.

ಶಾಲಾಮಟ್ಟದಲ್ಲಿಯ ನಾಗರಿಕಶಾಸ್ತ್ರ ಮತ್ತು ರಾಜ್ಯಶಾಸ್ತ್ರ ವಿಷಯಗಳ ಅಭ್ಯಾಸಕ್ರಮದಲ್ಲಿ ಸಾಮಾಜಿಕ-ರಾಜಕೀಯ ಪರಿಸರದ ಪರಿಚಯದಿಂದ ಹಿಡಿದು ಅಂತರರಾಷ್ಟ್ರೀಯ ಸಂಬಂಧ ಹಾಗೂ ನಮ್ಮ ದೇಶದಲ್ಲಿಯ ರಾಜಕೀಯ ಪ್ರಕ್ರಿಯೆಗಳ ಸ್ವರೂಪದವರೆಗಿನ ಆಶಯವನ್ನು ಸಮಾವೇಶಗೊಳಿಸಲಾಗಿದೆ. ಈ ಆಶಯಗಳ ಅಧ್ಯಯನ ಉದ್ದೇಶಗಳನ್ನು ಅಧ್ಯಾಪನದ ಮೂಲಕ ಪೂರ್ಣಮಾಡಿಯೇ ಮಾಡುತ್ತೀರಿ, ಆದರೆ ಅದರ ಜೊತೆಗೆ ಹತ್ತನೆಯ ಇಯತ್ತೆಯಲ್ಲಿ ವರ್ಗದಲ್ಲಿಯ ಅಂತರಕ್ರಿಯೆಯು ಕೇವಲ ಮಾಹಿತಿ ನೀಡುವುದಕ್ಕೆ ಮರ್ಯಾದಿತವಾಗಿರಬಾರದು. ಅವು ದೈನಂದಿನ ಘಟನೆ ಮತ್ತು ಸ್ಥಿತ್ಯಂತರಗಳೊಡನೆ ಜೋಡಿಸಲ್ಪಡಬೇಕು. ಭಾರತೀಯ ಪ್ರಜಾಪ್ರಭುತ್ವದ ಎದುರು ಆಹ್ವಾನಗಳು ನಿಶ್ಚಿತವಾಗಿಯೂ ಇವೆ, ಆದರೆ ಪ್ರಜಾಪ್ರಭುತ್ವವನ್ನು ಬಲಿಷ್ಠವನ್ನಾಗಿ ಮಾಡುವ ಪರಂಪರೆಗಳು ಕೂಡ ದೊಡ್ಡ ಪ್ರಮಾಣದಲ್ಲಿ ನಿರ್ಮಾಣವಾಗಿವೆ. ಅವುಗಳ ವಸ್ತುನಿಷ್ಠ ವಿವೇಚನೆಯು ಚರ್ಚೆ ಮತ್ತು ಸಂವಾದಗಳ ಮೂಲಕ ಆಗಬಹುದು. ಸಣ್ಣ ಗುಂಪಿನಲ್ಲಿಯ (ಛೋಟಾ ಗಟ) ವಿದ್ಯಾರ್ಥಿಗಳಿಗೆ ಅಭಿವ್ಯಕ್ತಿಯ ಅವಕಾಶವಿರಬೇಕು.

ಪಠ್ಯಪುಸ್ತಕದಲ್ಲಿಯ ಆಶಯದ ರಚನೆಯು ವಿದ್ಯಾರ್ಥಿಗಳಲ್ಲಿ ಏನಾದರೂ ಹೊಸದನ್ನು ಕಲಿಯುವ ಉತ್ಸಾಹವನ್ನು ನಿರ್ಮಾಣ ಮಾಡುವಂತಹದಾಗಿದೆ. ಅದಕ್ಕೆ ಶಿಕ್ಷಕರು ಮತ್ತು ಪೋಷಕರು ಪೂರ್ಣ ಬೆಂಬಲವನ್ನು ನೀಡುವರು, ಎಂಬುದರಲ್ಲಿ ಸಂಶಯವಿಲ್ಲ.

## ಕ್ಷಮತಾ ವಿಧಾನಗಳು

| ಅ. ಕ್ರ. | ಘಟಕ | ಕ್ಷಮತೆ |
|---|---|---|
| 1. | ಪ್ರಾಚೀನದಿಂದ ಆಧುನಿಕ ಕಾಲಖಂಡದಲ್ಲಿಯ ಇತಿಹಾಸದ ಚಿಕಿತ್ಸಕ ಸಮಾಲೋಚನೆ | • ಇತಿಹಾಸ ಲೇಖನದ ಪರಂಪರೆಯನ್ನು ಸ್ಪಷ್ಟಪಡಿಸುವುದು.<br>• ಇತಿಹಾಸ ಲೇಖನದ ಶಾಸ್ತ್ರವು ವಿಕಸಿತವಾಗಲು ಅನೇಕ ಪಾಶ್ಚಿಮಾತ್ಯ ವಿಚಾರವಂತರು ಕೊಡುಗೆಯನ್ನು ನೀಡಿದ್ದಾರೆ ಎಂಬುದನ್ನು ಅರಿಯುವುದು.<br>• ಭಾರತೀಯ ಇತಿಹಾಸದಲ್ಲಿಯ ವಿವಿಧ ಕಾಲಖಂಡಗಳ ಚಿಕಿತ್ಸಕ, ತುಲನಾತ್ಮಕ ಅಭ್ಯಾಸ ಮಾಡಲು ಬರುವುದು.<br>• ಭಾರತದಲ್ಲಿ ಹಾಗೂ ಜಗತ್ತಿನಲ್ಲಿಯ ಐತಿಹಾಸಿಕ ಸಂಶೋಧನೆಯ ಬಗ್ಗೆ ಮಾಹಿತಿ ಪಡೆಯಲು ಬರುವುದು.<br>• ಇತಿಹಾಸವು ಶಾಸ್ತ್ರಶುದ್ಧ ಅಭ್ಯಾಸವಿಷಯವಾಗಿದೆ ಎಂಬುದನ್ನು ಹೇಳಲು ಬರುವುದು. |
| 2. | ಅನ್ವಯಿಕ ಇತಿಹಾಸ | • ಅನ್ವಯಿಕ ಇತಿಹಾಸದ ಕಲ್ಪನೆಯನ್ನು ಹೇಳಲು ಬರುವುದು.<br>• ವಿವಿಧ ವಿಷಯಗಳಲ್ಲಿ ಮತ್ತು ಜೀವನದಲ್ಲಿ ಆಗುವ ಇತಿಹಾಸದ ಅನ್ವಯವನ್ನು ತಿಳಿದುಕೊಳ್ಳುವುದು ಮತ್ತು ಆಚರಣೆಯಲ್ಲಿ ತರುವುದು.<br>• ಐತಿಹಾಸಿಕ ಘಟನೆಗಳ ಸಮಕಾಲೀನತ್ವವನ್ನು ಗುರುತಿಸಲು ಬರುವುದು.<br>• ಐತಿಹಾಸಿಕ ಲೇಖನಗಳಲ್ಲಿಯ ವಿವಿಧ ವಿಚಾರ ಪ್ರವಾಹಗಳ ಪರಿಚಯ ಮಾಡಿಕೊಳ್ಳುವುದು. |
| 3. | ಪ್ರಸಾರ ಮಾಧ್ಯಮಗಳು ಮತ್ತು ಇತಿಹಾಸ | • ವಿವಿಧ ಪ್ರಸಾರ ಮಾಧ್ಯಮಗಳು ಮತ್ತು ಇತಿಹಾಸ ಇವುಗಳಲ್ಲಿಯ ಪರಸ್ಪರ ಸಂಬಂಧವನ್ನು ಗುರುತಿಸಲು ಬರುವುದು.<br>• ವಿವಿಧ ಪ್ರಸಾರ ಮಾಧ್ಯಮಗಳಲ್ಲಿಯ ಮಾಹಿತಿಯ ಆಧಾರದಿಂದ ತಟಸ್ಥವಾಗಿ ಸ್ವಂತದ ಐತಿಹಾಸಿಕ ದೃಷ್ಟಿಕೋನವನ್ನು ವಿಕಸಿತಗೊಳಿಸಲು ಬರುವುದು.<br>• ಸಂಬಂಧಿತ ವ್ಯವಸಾಯದಲ್ಲಿಯ ಉದ್ಯೋಗ ನಿರ್ಮಿತಿಯ ಕ್ಷೇತ್ರಗಳ ಮಾಹಿತಿಯನ್ನು ಪಡೆಯುವುದು. |
| 4. | ಮನರಂಜನೆಯ ಮಾಧ್ಯಮಗಳು ಮತ್ತು ಇತಿಹಾಸ | • ಮನರಂಜನೆಯ ಅವಶ್ಯಕತೆಯನ್ನು ಸ್ಪಷ್ಟಪಡಿಸಲು ಬರುವುದು.<br>• ಮನರಂಜನೆಯ ಮಾಧ್ಯಮಗಳು ಮತ್ತು ಇತಿಹಾಸ ಇವುಗಳಲ್ಲಿಯ ಪರಸ್ಪರ ಸಂಬಂಧದ ವಿಶ್ಲೇಷಣೆ ಮಾಡಲು ಬರುವುದು.<br>• ಮನರಂಜನೆಯ ಮಾಧ್ಯಮಗಳಲ್ಲಿ ಉಂಟಾಗುವ ಬದಲಾವಣೆಗಳನ್ನು ಅರಿತುಕೊಳ್ಳುವುದು. |
| 5. | ಕಲೆ, ಕ್ರೀಡೆ ಮತ್ತು ಸಾಹಿತ್ಯಕ್ಷೇತ್ರ ಹಾಗೂ ಇತಿಹಾಸ | • ಭಾರತದಲ್ಲಿಯ ವಿವಿಧ ಕಲೆಗಳ ಮಾಹಿತಿ ಹೇಳಲು ಬರುವುದು.<br>• ವಿವಿಧ ಆಟಗಳಲ್ಲಿಯ ಭಾರತೀಯರ ಪ್ರದರ್ಶನದ ಬಗ್ಗೆ ಅಭಿಮಾನವನ್ನಿಡುವುದು ಮತ್ತು ಅದರಿಂದ ಪ್ರೇರಣೆ ಪಡೆಯುವುದು.<br>• ಕಲೆ, ಕ್ರೀಡೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿಯ ವಿವಿಧ ಘಟಕಗಳ ಮಾಹಿತಿ ಹೇಳುವುದು.<br>• ಕಲೆ, ಕ್ರೀಡೆ ಮತ್ತು ಸಾಹಿತ್ಯ ಇವುಗಳ ಐತಿಹಾಸಿಕ ಅನ್ವಯವನ್ನು ಹೇಳಲು ಬರುವುದು. |
| 6. | ಪರ್ಯಟನ ಮತ್ತು ಇತಿಹಾಸ | • ಪರ್ಯಟನ ಕ್ಷೇತ್ರಕ್ಕಾಗಿ ಇತಿಹಾಸದ ಉಪಯೋಗವಾಗಬಲ್ಲದು ಎಂಬುದನ್ನು ಅರಿಯುವುದು.<br>• ನಮ್ಮ ದೇಶದಲ್ಲಿಯ ಪರ್ಯಟನೆಯ ಅವಕಾಶಗಳನ್ನು ಹೇಳಲು ಬರುವುದು.<br>• ಪರ್ಯಟನೆಯು ಅನೇಕರಿಗೆ ಉದ್ಯೋಗಾವಕಾಶಗಳನ್ನು ಉಪಲಬ್ಧ ಮಾಡಿಕೊಡುತ್ತದೆ ಎಂಬುದನ್ನು ಅರಿಯುವುದು.<br>• ಇತಿಹಾಸ ಮತ್ತು ಪರ್ಯಟನೆಗಳ ಪರಸ್ಪರ ಸಂಬಂಧವನ್ನು ತಿಳಿದುಕೊಳ್ಳುವುದು. |
| 7. | ಇತಿಹಾಸ ಮತ್ತು ಅನ್ಯಕ್ಷೇತ್ರಗಳು | • ಇತಿಹಾಸದ ಅಭ್ಯಾಸದಲ್ಲಿಯ ಸಂಗ್ರಹಾಲಯಗಳ/ಗ್ರಂಥಾಲಯಗಳ ಮಹತ್ವವನ್ನು ಹೇಳಲು ಬರುವುದು.<br>• ಇತಿಹಾಸದ ಅಭ್ಯಾಸದಿಂದ ವಸ್ತುನಿಷ್ಠ ವಿಶ್ಲೇಷಣೆ ಮಾಡಲು ಬರುತ್ತದೆ ಈ ಭಾವನೆಯನ್ನು ವಿಕಸಿತಗೊಳಿಸುವುದು.<br>• ಅನ್ಯ ಅಭ್ಯಾಸ ಕ್ಷೇತ್ರಗಳೊಂದಿಗೆ ಇತಿಹಾಸದ ಸಮನ್ವಯವನ್ನು ಸಾಧಿಸುವುದು. |

# ಅನುಕ್ರಮಣಿಕೆ

## ಅನ್ವಯಿಕ ಇತಿಹಾಸ


| ಅ.ಕ್ರ. | ಪಾಠದ ಹೆಸರು | ಪುಟ ಸಂ. |
|---|---|---|
| 1. | ಇತಿಹಾಸ ಲೇಖನ : ಪಾಶ್ಚಿಮಾತ್ಯ ಪರಂಪರೆ ....... | 1 |
| 2. | ಇತಿಹಾಸ ಲೇಖನ : ಭಾರತೀಯ ಪರಂಪರೆ ....... | 7 |
| 3. | ಅನ್ವಯಿಕ ಇತಿಹಾಸ ............................ | 15 |
| 4. | ಭಾರತೀಯ ಕಲೆಗಳ ಇತಿಹಾಸ.................... | 22 |
| 5. | ಪ್ರಸಾರ ಮಾಧ್ಯಮಗಳು ಮತ್ತು ಇತಿಹಾಸ......... | 32 |
| 6. | ಮನರಂಜನೆಯ ಮಾಧ್ಯಮಗಳು ಮತ್ತು ಇತಿಹಾಸ | 39 |
| 7. | ಆಟಗಳು ಮತ್ತು ಇತಿಹಾಸ....................... | 46 |
| 8. | ಪರ್ಯಟನೆ ಮತ್ತು ಇತಿಹಾಸ.................... | 52 |
| 9. | ಐತಿಹಾಸಿಕ ಆಸ್ತಿಯ ಸಂರಕ್ಷಣೆ.................... | 59 |

# 1. ಇತಿಹಾಸ ಲೇಖನ : ಪಾಶ್ಚಿಮಾತ್ಯ ಪರಂಪರೆ

**1.1 ಇತಿಹಾಸಲೇಖನದ ಪರಂಪರೆ.**

**1.3 ಆಧುನಿಕ ಇತಿಹಾಸಲೇಖನ.**

**1.3 ಯುರೋಪಿನಲ್ಲಿಯ ವೈಜ್ಞಾನಿಕ ದೃಷ್ಟಿಕೋನದ ವಿಕಾಸ ಮತ್ತು ಇತಿಹಾಸಲೇಖನ.**

**1.4 ಮಹತ್ವದ ವಿಚಾರವಂತರು.**


ಭೂತಕಾಲದಲ್ಲಿ ಸಂಭವಿಸಿದ ಘಟನೆಗಳನ್ನು ಕ್ರಮವಾಗಿ ಹೊಂದಿಸಿ ಅವುಗಳ ಆಕಲನೆ ಮಾಡುವ ಉದ್ದೇಶದಿಂದ ಇತಿಹಾಸದ ಸಂಶೋಧನೆ, ಲೇಖನ ಮತ್ತು ಅಭ್ಯಾಸ ಮಾಡಲಾಗುತ್ತದೆ. ಇದೊಂದು ಅವ್ಯಾಹತವಾಗಿ ನಡೆಯುವ ಪ್ರಕ್ರಿಯೆಯಾಗಿರುತ್ತದೆ.

ವೈಜ್ಞಾನಿಕ ಜ್ಞಾನಶಾಖೆಗಳಲ್ಲಿ ಲಭ್ಯವಾಗಿರುವ ಜ್ಞಾನದ ಸತ್ಯತೆಯನ್ನು ಪರೀಕ್ಷಿಸುವ ಸಲುವಾಗಿ ಪ್ರಾಯೋಗಿಕ ಪದ್ಧತಿ ಮತ್ತು ಪ್ರತ್ಯಕ್ಷ ನಿರೀಕ್ಷಣೆ - ಇವುಗಳನ್ನು ಬಳಸಲಾಗುತ್ತದೆ. ಈ ಪದ್ಧತಿಗಳ ಆಧಾರದಿಂದ ವಿವಿಧ ಘಟನೆಗಳ ಸಂದರ್ಭದಲ್ಲಿಯ ಸಾರ್ವಕಾಲಿಕ ಮತ್ತು ಸಾರ್ವತ್ರಿಕ ನಿಯಮಗಳನ್ನು ರಚಿಸುವುದು ಮತ್ತು ಆ ನಿಯಮಗಳನ್ನು ಮತ್ತೆ ಮತ್ತೆ ಸಿದ್ಧಪಡಿಸುವುದು ಸಾಧ್ಯವಾಗುತ್ತದೆ.

ಇತಿಹಾಸ ಸಂಶೋಧನೆಯಲ್ಲಿ ಪ್ರಾಯೋಗಿಕ ಪದ್ಧತಿ ಮತ್ತು ಪ್ರತ್ಯಕ್ಷ ನಿರೀಕ್ಷಣೆಗಳನ್ನು ಅವಲಂಬಿಸುವುದು ಸಾಧ್ಯವಿರುವುದಿಲ್ಲ. ಏಕೆಂದರೆ ಇತಿಹಾಸದಲ್ಲಿಯ ಘಟನೆಗಳು ಆಗಿ ಹೋಗಿರುತ್ತವೆ. ಅವುಗಳ ನಿರೀಕ್ಷಣೆಗಾಗಿ ನಾವು ಅಲ್ಲಿ ಇರುವುದಿಲ್ಲ ಮತ್ತು ಆ ಘಟನೆಗಳ ಪುನರಾವೃತ್ತಿ ಮಾಡಲು ಬರುವುದಿಲ್ಲ. ಅದರಂತೆ ಸಾರ್ವಕಾಲಿಕ ಮತ್ತು ಸಾರ್ವತ್ರಿಕ ನಿಯಮಗಳನ್ನು ಮಂಡಿಸುವುದು ಮತ್ತು ಆ ನಿಯಮಗಳನ್ನು ಸಿದ್ಧಪಡಿಸುವುದು ಸಾಧ್ಯವಿರುವುದಿಲ್ಲ.

ಸರ್ವಪ್ರಥಮವಾಗಿ ಐತಿಹಾಸಿಕ ದಸ್ತಾವೇಜುಗಳನ್ನು ಬರೆಯುವ ಸಲುವಾಗಿ ಯಾವ ಭಾಷೆಯ ಮತ್ತು ಲಿಪಿಯ ಬಳಕೆ ಮಾಡಲಾಗಿದೆಯೋ ಅವುಗಳನ್ನು ಓದುವ ಸಲುವಾಗಿ ಹಾಗೂ ಅವುಗಳ ಅರ್ಥವನ್ನು ತಿಳಿದುಕೊಳ್ಳುವ ಸಲುವಾಗಿ ಆ ಭಾಷೆ ಮತ್ತು ಲಿಪಿಯನ್ನು ಅರಿತಿರುವ ತಜ್ಞರ ಅವಶ್ಯಕತೆ ಇರುತ್ತದೆ. ಆನಂತರ ಅಕ್ಷರಗಳನ್ನು ಬರೆಯುವ ಪದ್ಧತಿ, ಲೇಖಕನ ಭಾಷಾಶೈಲಿ, ಬಳಸಲಾದ ಕಾಗದದ ನಿರ್ಮಿತಿಯ ಕಾಲ ಮತ್ತು ಕಾಗದದ ಪ್ರಕಾರ, ಅಧಿಕಾರದರ್ಶಕ ಮುದ್ರೆ ಮುಂತಾದ ವಿವಿಧ ಸಂಗತಿಗಳನ್ನು ಬಲ್ಲವರು ಸಂಬಂಧಿತ ದಸ್ತಾವೇಜು ಸತ್ಯವಾಗಿದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸಬಲ್ಲರು. ಆ ನಂತರ ಇತಿಹಾಸ ತಜ್ಞರು ಐತಿಹಾಸಿಕ ಸಂದರ್ಭಗಳ ತುಲನಾತ್ಮಕ ವಿಶ್ಲೇಷಣೆಯ ಆಧಾರದಿಂದ ದಸ್ತಾವೇಜಿನಲ್ಲಿಯ ಮಾಹಿತಿಯ ವಿಶ್ವಾಸಾರ್ಹತೆಯನ್ನು ಪರೀಕ್ಷಿಸಬಹುದು.

**ಇತಿಹಾಸ ಸಂಶೋಧನೆಯ ಪದ್ಧತಿ**



ಇತಿಹಾಸ ಸಂಶೋಧನೆಗೆ ಸಹಾಯವಾಗುವ ವಿವಿಧ ಜ್ಞಾನಶಾಖೆಗಳು ಮತ್ತು ಸಂಸ್ಥೆಗಳು ಇವೆ. ಉದಾ., ಪುರಾತತ್ವ, ಅಭಿಲೇಖಾಗಾರ, ಹಸ್ತಲಿಖಿತಗಳ ಅಭ್ಯಾಸ, ಹಿಂದಿನ ದಾಖಲೆಗಳು, ಅಕ್ಷರಗಳನ್ನು ಬರೆಯುವ ಪದ್ಧತಿ ಅಥವಾ ಶಾಸ್ತ್ರ (ಅಕ್ಷರವಟಿಕಾಶಾಸ್ತ್ರ), ಭಾಷಾ ರಚನಾಶಾಸ್ತ್ರ, ನಾಣ್ಯಶಾಸ್ತ್ರ, ವಂಶಾವಳಿಯ ಅಭ್ಯಾಸ ಇತ್ಯಾದಿ.

## 1.1 ಇತಿಹಾಸದಲೇಖನದ ಪರಂಪರೆ

ಇತಿಹಾಸದಲ್ಲಿ ಲಭ್ಯ ಪುರಾವೆಗಳ ಚಿಕಿತ್ಸಕ ಸಂಶೋಧನೆ ಮಾಡಿ, ಭೂತಕಾಲದಲ್ಲಿ ಸಂಭವಿಸಿದ ಘಟನೆಗಳನ್ನು ಹೇಗೆ ಮಂಡಿಸಲಾಗುತ್ತದೆಂಬುದನ್ನು ನಾವು ನೋಡಿದೆವು. ಈ ರೀತಿ ಮಂಡಿಸುವ ಲೇಖನ ಪದ್ಧತಿಗೆ ಇತಿಹಾಸಲೇಖನ ಎನ್ನಲಾಗುತ್ತದೆ. ಈ ರೀತಿ ಇತಿಹಾಸದ ಚಿಕಿತ್ಸಕ ಮಂಡನೆ ಮಾಡುವ ಸಂಶೋಧಕನಿಗೆ ಇತಿಹಾಸಕಾರನೆಂದು ಕರೆಯಲಾಗುತ್ತದೆ.

ಅಂದರೆ ಇತಿಹಾಸವನ್ನು ರಚಿಸುವಾಗ ಭೂತಕಾಲದಲ್ಲಿ ಸಂಭವಿಸಿದ ಪ್ರತಿಯೊಂದು ಘಟನೆಯನ್ನು ನಮೂದಿಸುವುದು ಮತ್ತು ಅದರ ಜ್ಞಾನವನ್ನು ಪಡೆಯುವುದು ಇತಿಹಾಸಕಾರನಿಗೆ ಸಾಧ್ಯವಿರುವುದಿಲ್ಲ. ಇತಿಹಾಸದ ರಚನೆ ಮಾಡುವಾಗ ಇತಿಹಾಸಕಾರನು ಭೂತಕಾಲದಲ್ಲಿಯ ಯಾವ ಘಟನೆಗಳ ಆಯ್ಕೆ ಮಾಡುತ್ತಾನೆಂಬುದು ಅವನು ವಾಚಕವೃಂದಕ್ಕೆ ಏನನ್ನು ತಲುಪಿಸಬೇಕಾಗಿಯೆಂಬುದರ ಮೇಲೆ ಅವಲಂಬಿಸಿರುತ್ತದೆ. ಆಯ್ಕೆಮಾಡಿದ ಘಟನೆಗಳು ಮತ್ತು ಅವುಗಳ ರಚನೆ ಮಾಡುವಾಗ ಅವಲಂಬಿಸಿದ ವೈಚಾರಿಕ ದೃಷ್ಟಿಕೋನ ಇತ್ಯಾದಿ ಸಂಗತಿಗಳು ಇತಿಹಾಸಕಾರನ ಲೇಖನ ಶೈಲಿಯನ್ನು ನಿರ್ಧರಿಸುತ್ತವೆ.

ಇಡೀ ಜಗತ್ತಿನಲ್ಲಿಯ ಪ್ರಾಚೀನ ಸಂಸ್ಕೃತಿಗಳಲ್ಲಿ ಈ ರೀತಿಯ ಇತಿಹಾಸಲೇಖನ ಮಾಡುವ ಪರಂಪರೆ ಇರಲಿಲ್ಲ. ಆದರೆ ಆ ಜನರಲ್ಲಿ ಭೂತಕಾಲದ ಅರಿವು ಅಥವಾ ಜಿಜ್ಞಾಸೆ ಇರಲಿಲ್ಲವೆಂದು ಹೇಳಲಾಗುವುದಿಲ್ಲ. ಹಿರಿಯ ವ್ಯಕ್ತಿಗಳಿಂದ ಕೇಳಿದ ಪೂರ್ವಜರ ಜೀವನದ ಮತ್ತು ಪರಾಕ್ರಮದ ಸಂಗತಿಗಳನ್ನು ಮುಂದಿನ ತಲೆಮಾರಿನವರೆಗೆ ಮುಟ್ಟಿಸುವ ಅವಶ್ಯಕತೆ ಆ ಕಾಲದಲ್ಲಿಯೂ ಅನಿಸುತ್ತಿತ್ತು. ಗುಹಾ ಚಿತ್ರಗಳ ಮುಖಾಂತರ ಸ್ಮಾರಕಗಳ ರಕ್ಷಣೆ ಮಾಡುವುದು, ಕಥೆಗಳನ್ನು ಹೇಳುವುದು, ಗೀತೆ ಮತ್ತು ಲಾವಣಿ ಪದಗಳನ್ನು ಹಾಡುವುದು. ಮುಂತಾದ ಪರಂಪರೆಗಳು ಇಡೀ ಜಗತ್ತಿನಲ್ಲಿಯ ಸಂಸ್ಕೃತಿಗಳಲ್ಲಿ ತುಂಬಾ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದವು. ಆಧುನಿಕ ಇತಿಹಾಸಲೇಖನದಲ್ಲಿ ಸಾಧನಗಳ ಸ್ವರೂಪದಲ್ಲಿ ಆ ಪರಂಪರೆಗಳ ಉಪಯೋಗ ಮಾಡಲಾಗುತ್ತದೆ.

**ಗೊತ್ತಿದೆಯೇ ನಿಮಗೆ?**



ಫ್ರಾನ್ಸದಲ್ಲಿಯ ಲುವ್ರ-ಎಂಬ ಸಂಗ್ರಹಾಲಯದಲ್ಲಿಯ ಅತ್ಯಂತ ಪ್ರಾಚೀನ ಶಿಲಾಲೇಖ

ಮೇಲಿನ ಚಿತ್ರದಲ್ಲಿ ಕೈಯಲ್ಲಿ ಢಾಲು ಮತ್ತು ಭಲ್ಲೆಯನ್ನು ಹಿಡಿದ ಸೈನಿಕರ ಸಿಸ್ತುಬದ್ಧ ಸಾಲು ಹಾಗೂ ಅವರ ನೇತೃತ್ವವನ್ನು ಮಾಡುವ ಸೇನಾನಿ ಕಾಣಿಸುತ್ತಿದ್ದಾರೆ.

ಐತಿಹಾಸಿಕ ಘಟನೆಗಳನ್ನು ಲಿಖಿತ ಸ್ವರೂಪದಲ್ಲಿ ಬರೆದಿರುವ ಪರಂಪರೆಯ ಆರಂಭವು ಮೆಸೊಪೊಟೇಮಿಯಾದ ಸುಮೇರ ಸಂಸ್ಕೃತಿಯಲ್ಲಿ ಆಯಿತು, ಎಂದು ಸಧ್ಯ ಪರಿಸ್ಥಿತಿಯಲ್ಲಿ ಹೇಳಬಹುದು. ಸುಮೇರ ಸಾಮ್ರಾಜ್ಯದಲ್ಲಿ ಆಗಿಹೋದ ರಾಜರು, ಅವರಲ್ಲಿಯ ಸಂಘರ್ಷದ ಕಥೆಗಳು ಮುಂತಾದವುಗಳ ವರ್ಣನೆಯನ್ನು ಆ ಕಾಲದ ಶಿಲಾಲೇಖಗಳಲ್ಲಿ ಬರೆದಿಟ್ಟು ಸಂರಕ್ಷಿಸಲಾಗಿದೆ. ಅವುಗಳಲ್ಲಿ ಅತ್ಯಂತ ಪ್ರಾಚೀನ ಶಿಲಾಲೇಖವು ಸುಮಾರು 4500 ವರ್ಷಗಳ ಹಿಂದೆ ಸುಮೇರದಲ್ಲಿಯ ಎರಡು ರಾಜ್ಯಗಳ ನಡುವೆ ನಡೆದ ಯುದ್ಧದ ವರ್ಣನೆಯನ್ನು ಬರೆದಿಟ್ಟ ಶಿಲಾಲೇಖವಾಗಿದ್ದು ಅದನ್ನು ಈಗ ಫ್ರಾನ್ಸ್‌ದಲ್ಲಿಯ ಲುವ್ರ, ಈ ಜಗತ್ಪ್ರಸಿದ್ಧ ಸಂಗ್ರಹಾಲಯದಲ್ಲಿ ಇಡಲಾಗಿದೆ.

## 1.2 ಆಧುನಿಕ ಇತಿಹಾಸಲೇಖನ

ಆಧುನಿಕ ಇತಿಹಾಸಲೇಖನ ಪದ್ಧತಿಯ ನಾಲ್ಕು ಪ್ರಮುಖ ವೈಶಿಷ್ಟ್ಯಗಳನ್ನು ಹೇಳಲಾಗುತ್ತದೆ.

(1) ಈ ಪದ್ಧತಿಯು ಶಾಸ್ತ್ರಶುದ್ಧವಾಗಿದೆ. ಅದರ ಆರಂಭವು ಯೋಗ್ಯ ಪ್ರಶ್ನೆಗಳನ್ನು ಮಂಡಿಸುವುದರ ಮುಖಾಂತರ ಆಗುತ್ತದೆ.

(2) ಈ ಪ್ರಶ್ನೆಗಳು ಮಾನವಕೇಂದ್ರಿತವಾಗಿರುತ್ತವೆ. ಅಂದರೆ ಅವು ಭೂತಕಾಲದಲ್ಲಿಯ ವಿವಿಧ ಮಾನವೀ ಸಮಾಜದ ಸದಸ್ಯರು ವಿಶಿಷ್ಟ ಕಾಲಾವಧಿಯಲ್ಲಿ ಮಾಡಿರುವ ಕೃತಿಗಳ ವಿಷಯವಾಗಿ ಇರುತ್ತವೆ. ಇತಿಹಾಸದಲ್ಲಿ ಆ ಕೃತಿಗಳ

ಸಂಬಂಧವನ್ನು ದೈವೀ ಘಟನೆ ಇಲ್ಲವೆ ದೇವತೆಗಳ ಕಥೆಗಳ ಜೊತೆ ಜೋಡಿಸುವ ಪ್ರಯತ್ನ ಮಾಡಲಾಗುವುದಿಲ್ಲ.

(3) ಈ ಪ್ರಶ್ನೆಗಳ ಇತಿಹಾಸದಲ್ಲಿಯ ಉತ್ತರಗಳಿಗೆ ವಿಶ್ವಾಸಾರ್ಹ ಪುರಾವೆಗಳ ಆಧಾರವಿರುತ್ತದೆ. ಅದರಿಂದಾಗಿ ಇತಿಹಾಸದ ರಚನೆಯು ತರ್ಕಬದ್ಧವಾಗಿರುತ್ತದೆ.

(4) ಮಾನವ ಸಮಾಜವು ಭೂತಕಾಲದಲ್ಲಿ ಮಾಡಿದ ಕೃತಿಗಳ ಆಧಾರದಿಂದ ಇತಿಹಾಸದ ಮೂಲಕ ಮಾನವ ಸಮಾಜದ ಪ್ರಗತಿಯನ್ನು ತಿಳಿದುಕೊಳ್ಳಲಾಗುತ್ತದೆ.

ಮೇಲಿನ ವೈಶಿಷ್ಟ್ಯಗಳಿಂದ ಕೂಡಿದ ಆಧುನಿಕ ಇತಿಹಾಸಲೇಖನದ ಪರಂಪರೆಯ ಬೀಜಗಳು ಪ್ರಾಚೀನ ಗ್ರೀಕ ಇತಿಹಾಸಕಾರರ ಲೇಖನಗಳಲ್ಲಿ ಕಂಡುಬರುತ್ತವೆ, ಎಂದು ತಿಳಿಯಲಾಗುತ್ತದೆ. 'ಹಿಸ್ಟರಿ' ಇದು ಗ್ರೀಕ ಭಾಷೆಯ ಶಬ್ದವಾಗಿದೆ. ಕ್ರಿ.ಶ. ಪೂ 5ನೇ ಶತಮಾನದಲ್ಲಿ ಆಗಿಹೋದ 'ಹಿರೋಡೊಟಸ್' ಎಂಬ ಗ್ರೀಕ ಇತಿಹಾಸಕಾರನು ಇದನ್ನು ಪ್ರಥಮವಾಗಿ ತನ್ನ 'ದ ಹಿಸ್ಟರೀಜ್' ಎಂಬ ಗ್ರಂಥದ ತಲೆಬರಹಕ್ಕಾಗಿ ಬಳಸಿದನು.

## 1.3 ಯುರೋಪಿನಲ್ಲಿಯ ವೈಜ್ಞಾನಿಕ ದೃಷ್ಟಿಕೋನದ ವಿಕಾಸ ಮತ್ತು ಇತಿಹಾಸಲೇಖನ.

ಕ್ರಿಸ್ತಶಕ ಹದಿನೆಂಟನೆಯ ಶತಮಾನದ ವರೆಗೆ ಯುರೋಪಿನಲ್ಲಿ ತತ್ವಜ್ಞಾನ ಮತ್ತು ವಿಜ್ಞಾನಗಳ ಕ್ಷೇತ್ರದಲ್ಲಿ ಲಕ್ಷಣೀಯ ಪ್ರಗತಿಯಾಯಿತು. ವೈಜ್ಞಾನಿಕ ಪದ್ಧತಿಯನ್ನು ಬಳಸಿ ಸಾಮಾಜಿಕ ಮತ್ತು ಐತಿಹಾಸಿಕ ವಾಸ್ತವಗಳ ಅಭ್ಯಾಸಮಾಡುವುದು ಸಾಧ್ಯವಿದೆ ಎಂಬ ವಿಶ್ವಾಸವು ವಿಚಾರವಂತರಿಗೆ ಎನಿಸತೊಡಗಿತ್ತು. ನಂತರದ ಕಾಲದಲ್ಲಿ ಯುರೋಪ-ಅಮೇರಿಕಾಗಳಲ್ಲಿ ಇತಿಹಾಸ ಮತ್ತು ಇತಿಹಾಸಲೇಖನ ಈ ವಿಷಯಗಳನ್ನು ಕುರಿತು ಸಾಕಷ್ಟು ವಿಚಾರ ಮಂಥನವಾಯಿತು; ಇತಿಹಾಸಲೇಖನದಲ್ಲಿ ವಸ್ತುನಿಷ್ಠತೆಗೆ ಮಹತ್ವ ಬರತೊಡಗಿತು.

ಹದಿನೆಂಟನೆಯ ಶತಮಾನಕ್ಕಿಂತ ಮೊದಲು ಯುರೋಪಿನಲ್ಲಿಯ ವಿಶ್ವವಿದ್ಯಾಲಯಗಳಲ್ಲಿ ಎಲ್ಲೆಡೆ ಈಶ್ವರನನ್ನು ಕುರಿತು ಚರ್ಚೆ ಮತ್ತು ಅದಕ್ಕೆ ಸಂಬಂಧಿತವಾದ ತತ್ವಜ್ಞಾನ ಈ ವಿಷಯಗಳಿಗೇನೇ ಹೆಚ್ಚು ಮಹತ್ವ ನೀಡಲಾಗಿತ್ತು. ಆದರೆ ನಿಧಾನವಾಗಿ ಈ ಚಿತ್ರವು ಬದಲಾಗತೊಡಗಿತು. ಕ್ರಿ.ಶ. 1737ರಲ್ಲಿ ಜರ್ಮನಿಯಲ್ಲಿ ಗಾಟಿಂಗೇನ ವಿಶ್ವವಿದ್ಯಾಲಯದ ಸ್ಥಾಪನೆಯಾಯಿತು. ಈ ವಿಶ್ವವಿದ್ಯಾಲಯದಲ್ಲಿ ಪ್ರಪ್ರಥಮವಾಗಿ ಇತಿಹಾಸ ವಿಷಯಕ್ಕೆ ಸ್ವತಂತ್ರ ಸ್ಥಾನ ಪ್ರಾಪ್ತವಾಯಿತು. ಅದರ ನಂತರ ಜರ್ಮನಿಯಲ್ಲಿಯ ಇತರ ವಿಶ್ವವಿದ್ಯಾಲಯಗಳೂ ಇತಿಹಾಸದ ಅಭ್ಯಾಸದ ಕೇಂದ್ರಗಳಾದವು.


## 1.4 ಮಹತ್ವದ ವಿಚಾರವಂತರು

ಇತಿಹಾಸಲೇಖನದ ಶಾಸ್ತ್ರವು ವಿಕಸಿತವಾಗುವುದರಲ್ಲಿ ಅನೇಕ ವಿಚಾರವಂತರ ಸಹಾಯವು ಲಭಿಸಿತು. ಅವರಲ್ಲಿಯ ಕೆಲವು ವಿಚಾರವಂತರ ಮಾಹಿತಿಯನ್ನು ಪಡೆಯೋಣ.

**ರೇನೆ ದೇಕಾರ್ತ (ಕ್ರಿ.ಶ. 1596-1650) :** ಇತಿಹಾಸಲೇಖನಕ್ಕಾಗಿ ಬಳಸಲಾಗುವ ಐತಿಹಾಸಿಕ ಸಾಧನಗಳ ವಿಶೇಷತಃ ಕಾಗದ ಪತ್ರಗಳ ವಿಶ್ವಾಸಾರ್ಹತೆಯನ್ನು ಪರೀಕ್ಷಿಸಿಕೊಳ್ಳುವುದು ಅವಶ್ಯಕವಾಗಿದೆ. ಎಂಬ ವಿಚಾರವನ್ನು ಒತ್ತಾಯ ಪೂರ್ವಕವಾಗಿ ಮಂಡಿಸಲಾಗುತ್ತಿತ್ತು. ಅದರಲ್ಲಿ ರೇನೆ ದೇಕಾರ್ತ ಎಂಬ ಫ್ರೆಂಚ್ ತತ್ವಜ್ಞಾನಿಯು ಅಗ್ರಭಾಗದಲ್ಲಿದ್ದನು. ಅವನು ಬರೆದ 'ಡಿಸ್ಕೋರ್ಸ್ ಆನ್ ದ ಮೆಥಡ್' ಎಂಬ ಗ್ರಂಥದಲ್ಲಿಯ ಒಂದು ನಿಯಮವು ಶಾಸ್ತ್ರಶುದ್ಧ ಸಂಶೋಧನೆಯ ದೃಷ್ಟಿಯಿಂದ ತುಂಬಾ ಮಹತ್ವದ್ದೆಂದು ತಿಳಿಯಲಾಗುತ್ತದೆ. 'ಯಾವುದೊಂದು ಸಂಗತಿಯು ಎಲ್ಲಿಯ ವರೆಗೆ ಸತ್ಯವಾಗಿದೆಯೆಂಬುದು ನಿಸ್ಸಂಶಯವಾಗಿ ಸಿದ್ಧವಾಗುವುದಿಲ್ಲವೋ ಅಲ್ಲಿಯ ವರೆಗೆ ಅದನ್ನು ಸ್ವೀಕರಿಸಲೇಬಾರದು' ಎಂಬುದೇ ಈ ನಿಯಮ.


ರೇನೆ ದೇಕಾರ್ತ

**ವಾಲ್ಟೇರ (ಕ್ರಿಶ. 1694-1778):** ವಾಲ್ಟೇರನ ಮೂಲ ಹೆಸರು ಫ್ರಾನ್ಸ್ವಾಮರಿಅರೂಯೆ ಎಂದಿತ್ತು. ಇತಿಹಾಸಲೇಖನಕ್ಕಾಗಿ ಕೇವಲ ವಸ್ತುನಿಷ್ಠ ಸತ್ಯ ಮತ್ತು ಘಟನೆಗಳ ಕಾಲಾನುಕ್ರಮ ಇಷ್ಟರಮೇಲೆ ಲಕ್ಷವನ್ನು ಕೇಂದ್ರೀಕರಿಸದೆ ಆ ಕಾಲದ ಸಮಾಜದ ಪರಂಪರೆ, ವ್ಯಾಪಾರ, ಆರ್ಥಿಕ ವ್ಯವಸ್ಥೆ, ಕೃಷಿ ಮುಂತಾದ ಸಂಗತಿಗಳ ವಿಚಾರ ಮಾಡುವುದು ಅವಶ್ಯಕವಾಗಿದೆ ಎಂಬ ವಿಚಾರವನ್ನು ವಾಲ್ಟೇರ ಎಂಬ ಫ್ರೆಂಚ ತತ್ವಜ್ಞಾನಿಯು ಮಂಡಿಸಿದನು. ಅದರಿಂದಾಗಿ ಇತಿಹಾಸದ ರಚನೆ ಮಾಡುವಾಗ ಮಾನವ ಜೀವನದ ಸರ್ವಾಂಗೀಣ ವಿಚಾರವಾಗಬೇಕು ಎಂಬ ವಿಚಾರ ಮುಂದೆ ಬಂದಿತು. ಆ ದೃಷ್ಟಿಯಿಂದ ವಾಲ್ಟೇರ್‌ನು ಆಧುನಿಕ ಇತಿಹಾಸಲೇಖನದ ಜನಕನಾಗಿದ್ದನು ಎಂದು ಹೇಳಬಹುದು.


ವಾಲ್ಟೇರ



ಜಾರ್ಜ್ ವಿಲ್ಹೆಮ್ ಫ್ರೆಡರಿಕ್ ಹೆಗೆಲ್

**ಜಾರ್ಜ್ ವಿಲ್ಹೆಮ್ ಫ್ರೆಡರಿಕ್ ಹೆಗೆಲ್ (ಕ್ರಿ.ಶ. 1770-1831) :** ಈ ಜರ್ಮನಿಯ ತತ್ವಜ್ಞಾನಿಯು ಐತಿಹಾಸಿಕ ವಾಸ್ತವವು ತರ್ಕಬದ್ಧ ಪದ್ಧತಿಯಿಂದ ಮಂಡಿಸಲ್ಪಡಬೇಕು ಎಂಬುದಕ್ಕೆ ಮಹತ್ವ ನೀಡಿದನು. ಇತಿಹಾಸದಲ್ಲಿಯ ಘಟನಾಕ್ರಮವು ಪ್ರಗತಿಯ ಹಂತಗಳನ್ನು ತೋರಿಸುತ್ತಿರುತ್ತದೆ. ಅದರ ಜೊತೆಗೆ ಇತಿಹಾಸದ ರಚನೆಯನ್ನು ಇತಿಹಾಸಕಾರನು ಕಾಲಕಾಲಕ್ಕೆ ಲಭ್ಯವಾಗುತ್ತಿರುವ ಪುರಾವೆಗಳಿಗನುಸಾರವಾಗಿ ಬದಲಾವಣೆ ಮಾಡುವುದು ಸ್ವಾಭಾವಿಕವಾಗಿರುತ್ತದೆ ಎಂದು ಅವನು ಪ್ರತಿಪಾದನೆ ಮಾಡಿದನು. ಅವನ ವಿವೇಚನೆಯಿಂದಾಗಿ ಇತಿಹಾಸದ ಅಭ್ಯಾಸ ಪದ್ಧತಿಗಳು ವಿಜ್ಞಾನದ ಪದ್ಧತಿಗಳಿಗಿಂತ ಬೇರೆಯಾಗಿದ್ದರೂ ಅವು ಕಡಿಮೆ ದರ್ಜೆಯದಾಗಿಲ್ಲವೆಂಬುದು ಅನೇಕ ತತ್ವಜ್ಞಾನಿಗಳಿಗೆ ಭರವಸೆಯುಂಟಾಯಿತು. 'ಎನ್‌ಸೈಕ್ಲೋಪಿಡಿಯಾ ಆಫ್ ಫಿಲಾಸಾಫಿಕಲ್ ಸೈನ್ಸೆಸ್' ಎಂಬ ಗ್ರಂಥದಲ್ಲಿ ಅವನ ಉಪನ್ಯಾಸಗಳ ಮತ್ತು ಲೇಖನಗಳ ಸಂಕಲನೆ ಇದೆ. ಹೆಗೆಲ್‌ನು ಬರೆದ 'ರೀಝುನ್ ಇನ್ ಹಿಸ್ಟರಿ' ಎಂಬ ಪುಸ್ತಕವು ಪ್ರಸಿದ್ಧವಾಗಿದೆ.


> **ಅರಿತುಕೊಳ್ಳಿರಿ.**
>
> ಹೆಗೆಲ್‌ನ ಅಭಿಪ್ರಾಯದಂತೆ ಯಾವುದೇ ಘಟನೆಯನ್ನು ಅರ್ಥೈಸುವಾಗ ಅದನ್ನು ಎರಡು ವಿರುದ್ಧ ಪ್ರಕಾರಗಳಲ್ಲಿ ವಿಂಗಡಿಸಬೇಕಾಗುತ್ತದೆ. ಅದರ ಹೊರತು ಮಾನವೀ ಮನಸ್ಸಿಗೆ ಆ ಘಟನೆಯ ಆಕಲನೆಯಾಗುವುದಿಲ್ಲ. ಉದಾಹರಣೆಗಾಗಿ ಸತ್ಯ-ಅಸತ್ಯ, ಒಳ್ಳೆಯದು-ಕೆಟ್ಟದ್ದು. ಈ ಪದ್ಧತಿಗೆ ದ್ವಂದ್ವವಾದ (ಡೈಲೆಕ್ಟಿಕ್ಸ್) ಎಂದು ಕರೆಯಲಾಗುತ್ತದೆ. ಈ ಪದ್ಧತಿಯಲ್ಲಿ ಮೊದಲು ಒಂದು ಸಿದ್ಧಾಂತವನ್ನು ಮಂಡಿಸಲಾಗುತ್ತದೆ. ಆ ನಂತರ ಆ 'ಸಿದ್ಧಾಂತವನ್ನು ಖಂಡಿಸಿ ಅದರ ವಿರೋಧಿ ಸಿದ್ಧಾಂತವನ್ನು ಮಂಡಿಸಲಾಗುತ್ತದೆ ಈ ಎರಡೂ ಸಿದ್ಧಾಂತಗಳ ತರ್ಕಬದ್ಧ ವಿಶ್ಲೇಷಣೆಯ ನಂತರ ಆ ಎರಡರ ಸಾರವು ಯಾವುದರಲ್ಲಿ ಸಮಾವೇಶವಾಗಿದೆಯೋ ಅಂತಹ ಸಿದ್ಧಾಂತವನ್ನು ಸಮನ್ವಯ ಪದ್ಧತಿಯಿಂದ ಮಂಡಿಸಲಾಗುತ್ತದೆ.

**ಲಿಯೋಪಾಲ್ಡ ವ್ಹಾನ ರಾಂಕೆ : (ಕ್ರಿ.ಶ. 1795-1886):** ಹತ್ತೊಂಬತ್ತನೆಯ ಶತಮಾನದಲ್ಲಿಯ ಇತಿಹಾಸಲೇಖನದ ಪದ್ಧತಿಯ ಮೇಲೆ ಪ್ರಾಮುಖ್ಯವಾಗಿ ಬರ್ಲಿನ್ ವಿಶ್ವವಿದ್ಯಾಲಯದಲ್ಲಿಯ ಲಿಯೋಪಾಲ್ಡ ವ್ಹಾನ ರಾಂಕೆ - ಇವನ ವಿಚಾರಗಳ ಪ್ರಭಾವವಿತ್ತು. ಇತಿಹಾಸ ಸಂಶೋಧನೆಯ ಚಿಕಿತ್ಸಕ ಪದ್ಧತಿಯು ಹೇಗೆ ಇರಬೇಕು ಎಂಬುದನ್ನು ಅವನು ಹೇಳಿದನು. ಮೂಲ ದಸ್ತಾವೇಜುಗಳ ಆಧಾರದಿಂದ ದೊರಕಿದ ಮಾಹಿತಿಯು ಅತ್ಯಂತ ಮಹತ್ವದ್ದಾಗಿರುತ್ತದೆ ಎಂಬುದಕ್ಕೆ ಅವನು ಮಹತ್ವ ನೀಡಿದನು. ಅದರಂತೆ ಐತಿಹಾಸಿಕ ಘಟನೆಗಳಿಗೆ ಸಂಬಂಧಿತವಾಗಿರುವ ಎಲ್ಲ ಪ್ರಕಾರದ ಕಾಗದಪತ್ರಗಳು ಮತ್ತು ದಸ್ತಾವೇಜುಗಳನ್ನು ಅಮೂಲಾಗ್ರವಾಗಿ ಶೋಧಿಸುವುದು ಅತ್ಯಂತ ಮಹತ್ವದ್ದಾಗಿರುತ್ತದೆಂದು ಅವನು ಹೇಳಿದನು. ಇಂಥ ಪದ್ಧತಿಯಿಂದ ಐತಿಹಾಸಿಕ ಸತ್ಯದವರೆಗೆ ತಲುಪುವುದು ಸಾಧ್ಯವಿದೆ ಎಂಬ ವಿಶ್ವಾಸವನ್ನು ಅವನು ವ್ಯಕ್ತಪಡಿಸಿದನು. ಇತಿಹಾಸಲೇಖನದಲ್ಲಿಯ ಕಾಲ್ಪನಿಕತೆಯನ್ನು ಅವನು ಟೀಕಿಸಿದನು. ಅವನು ಜಾಗತಿಕ ಇತಿಹಾಸ ರಚನೆಗೆ ಮಹತ್ವ ನೀಡಿದನು. 'ದ ಥೇರಿ ಆ್ಯಂಡ್ ಪ್ರಾ್ಯಕ್ಟೀಸ ಆಫ್ ಹಿಸ್ಟರಿ' ಮತ್ತು 'ದ ಸಿಕ್ರೆಟ ಆಫ್ ವರ್ಲ್ಡ ಹಿಸ್ಟರಿ', ಈ ಗ್ರಂಥಗಳಲ್ಲಿ ಅವನ ವಿವಿಧ ಲೇಖಗಳ ಸಂಕಲನೆ ಇದೆ.



ಲಿಯೋಪಾಲ್ಡ ವ್ಹಾನ ರಾಂಕೆ

**ಕಾರ್ಲ ಮಾರ್ಕ್ಸ (ಕ್ರಿ.ಶ. 1818-1883):** ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕಾರ್ಲ ಮಾರ್ಕ್ಸ ಇವನು ಮಂಡಿಸಿದ ಸಿದ್ಧಾಂತಗಳಿಂದಾಗಿ ಇತಿಹಾಸದ ದೃಷ್ಟಿಕೋನದಲ್ಲಿ ಮಹತ್ವದ ಬದಲಾವಣೆಗಳನ್ನುಂಟು ಮಾಡುವ ವೈಚಾರಿಕ ಪ್ರಣಾಲಿ ಅಸ್ತಿತ್ವದಲ್ಲಿ ಬಂದಿತು. ಇತಿಹಾಸವು ಅಮೂರ್ತ ಕಲ್ಪನೆಗಳದ್ದಾಗಿರದೆ ಅದು ಜೀವಂತ ಮನುಷ್ಯರದಾಗಿರುತ್ತದೆ. ಮನುಷ್ಯ- ಮನುಷ್ಯರಲ್ಲಿಯ ಬಾಂಧವ್ಯವು ಅವರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಲಭ್ಯವಾಗಿರುವ ಉತ್ಪಾದನೆಯ ಸಾಧನಗಳ ಸ್ವರೂಪದ ಮೇಲೆ ಮತ್ತು ಒಡೆತನದ ಮೇಲೆ ಅವಲಂಬಿಸಿರುತ್ತದೆ. ಸಮಾಜದಲ್ಲಿಯ ವಿವಿಧ ಘಟಕಗಳಿಗೆ ಈ ಸಾಧನಗಳು



ಕಾರ್ಲ ಮಾರ್ಕ್ಸ

ಸಮಪ್ರಮಾಣದಲ್ಲಿ ಲಭ್ಯವಾಗುವುದಿಲ್ಲ. ಆದರಿಂದ ವರ್ಗಗಳ ಮೇಲೆ ಆಧಾರಿತ ಸಮಾಜದ ವಿಷಮ ವಿಭಜನೆಯಾಗಿ ವರ್ಗಸಂಘರ್ಷ ನಿರ್ಮಾಣವಾಗುತ್ತದೆ. ಮಾನವೀ ಇತಿಹಾಸವು ಇಂಥ ವರ್ಗಸಂಘರ್ಷದ ಇತಿಹಾಸವಾಗಿದ್ದು ಯಾವ ವರ್ಗದ ವಶದಲ್ಲಿ ಉತ್ಪಾದನೆಯ ಸಾಧನಗಳು ಇರುತ್ತವೆಯೋ ಅದು ಇತರ ವರ್ಗಗಳ ಆರ್ಥಿಕ ಶೋಷಣೆ ಮಾಡುತ್ತದೆ, ಎಂದು ಅವನು ಪ್ರತಿಪಾದಿಸಿದನು. ಅವನ 'ದಾಸ ಕ್ಯಾಪಿಟಲ' ಎಂಬ ಗ್ರಂಥವು ಜಗತ್ಪ್ರಸಿದ್ಧವಾಗಿದೆ.

**ಆ್ಯನಲ್ಸ ಪ್ರಣಾಲಿ :** ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಫ್ರಾನ್ಸಿನಲ್ಲಿ ಆ್ಯನಲ್ಸ ಎಂಬ ಹೆಸರಿನಿಂದ ಗುರುತಿಸಲ್ಪಡುವ ಇತಿಹಾಸಲೇಖನದ ಪ್ರಣಾಲಿ ಉದಯಕ್ಕೆ ಬಂದಿತು. ಆ್ಯನಲ್ಸ ಪ್ರಣಾಲಿಯಿಂದಾಗಿ ಇತಿಹಾಸಲೇಖನಕ್ಕೆ ಒಂದು ಬೇರೆ ದಿಶೆ ದೊರಕಿತು. ಇತಿಹಾಸದ ಅಭ್ಯಾಸವು ಕೇವಲ ರಾಜಕೀಯ ಸ್ಥಿತ್ಯಂತರಗಳು (ಘಟನೆಗಳು), ರಾಜರುಗಳು, ಮಹಾನ್ ನೇತಾರರು ಹಾಗೂ ಅದಕ್ಕೆ ಸಂಬಂಧಿತ ರಾಜಕಾರಣ, ಮುತ್ಸದ್ದಿತನ, ಯುದ್ಧಗಳು-ಇವುಗಳ ಮೇಲೆ ಕೇಂದ್ರಿತವಾಗಿರದೆ, ಆ ಕಾಲದ ಹವಾಮಾನ, ಸ್ಥಳೀಯ ಜನ, ಕೃಷಿ, ವ್ಯಾಪಾರ, ತಂತ್ರಜ್ಞಾನ, ಸಾರಿಗೆ, ಸಂಪರ್ಕದ ಸಾಧನಗಳು, ಸಾಮಾಜಿಕ ವಿಭಜನೆ ಹಾಗೂ ಸಮೂಹದ ಮಾನಸಿಕತೆ ಮುಂತಾದ ವಿಷಯಗಳ ಅಭ್ಯಾಸ ಮಾಡುವುದೂ ಮಹತ್ವದ್ದಾಗಿದೆಯೆಂದು ತಿಳಿಯಲಾಯಿತು. ಆ್ಯನ್ನಲ್ಸ ಪ್ರಣಾಲಿಯನ್ನು ಆರಂಭಿಸುವ ಮತ್ತು ಅದನ್ನು ವಿಕಸಿತಗೊಳಿಸುವ ಶ್ರೇಯವನ್ನು ಫ್ರೆಂಚ್ ಇತಿಹಾಸಕಾರರಿಗೆ ನೀಡಲಾಗುತ್ತದೆ.

### ಸ್ತ್ರೀವಾದಿ ಇತಿಹಾಸಲೇಖನ

ಸ್ತ್ರೀವಾದಿ ಇತಿಹಾಸಲೇಖನ ಎಂದರೆ ಮಹಿಳೆಯರ ದೃಷ್ಟಿಕೋನದಿಂದ ಮಾಡಿದ ಇತಿಹಾಸದ ಪುನರ್ರಚನೆ. ಸೀಮೊ-ದ-ಬೋವ್ವಾ ಎಂಬ ಫ್ರೆಂಚ ವಿದುಷಿಯು ಸ್ತ್ರೀವಾದದ ಮೂಲಭೂತ ನಿಲುವನ್ನು ಸಿದ್ಧಪಡಿಸಿದಳು. ಸ್ತ್ರೀವಾದಿ ಇತಿಹಾಸಲೇಖನದಲ್ಲಿ ಮಹಿಳೆಯರ ಸಮಾವೇಶವನ್ನು ಮಾಡುವುದರ ಜೊತೆಗೆ ಇತಿಹಾಸಲೇಖನ ಕ್ಷೇತ್ರದಲ್ಲಿಯ ಪುರುಷಪ್ರಧಾನ ದೃಷ್ಟಿಕೋನದ ಪುನರ್ವಿಚಾರ ಮಾಡುವುದಕ್ಕೆ ಮಹತ್ವ ನೀಡಲಾಯಿತು. ಆ ನಂತರ ಮಹಿಳೆಯರ ಜೀವನಕ್ಕೆ ಸಂಬಂಧಿತ ನೌಕರಿ, ರೋಜಗಾರು, ಟ್ರೇಡ ಯುನಿಯನ್, ಅವರ ಸಲುವಾಗಿ ಕೆಲಸ ಮಾಡುವ ಸಂಸ್ಥೆಗಳು, ಮಹಿಳೆಯರ ಕೌಟುಂಬಿಕ ಆಯುಷ್ಯ, ಮುಂತಾದ ವಿವಿಧ ಆಯಾಮಗಳ ಬಗ್ಗೆ ಸವಿಸ್ತಾರ ವಿಚಾರ ಮಾಡುವ ಸಂಶೋಧನೆಗಳು ಆರಂಭವಾದವು. 1990ರ ನಂತರ 'ಮಹಿಳೆಯರನ್ನು ಸ್ವತಂತ್ರ ವರ್ಗವೆಂದು ಮನ್ನಿಸಿ ಇತಿಹಾಸಲೇಖನಕ್ಕೆ ಮಹತ್ವ ನೀಡಿದ್ದು ಕಂಡುಬರುತ್ತದೆ.

**ಮೈಕೆಲ್ ಫುಕೊ (ಕ್ರಿ.ಶ.1926-1984) :** ಇಪ್ಪತ್ತನೆಯ ಶತಮಾನದಲ್ಲಿಯ ಫ್ರೆಂಚ ಇತಿಹಾಸಕಾರನಾದ ಮೈಕೆಲ್ ಫುಕೊ ಇವನ ಬರವಣಿಗೆಯಿಂದ ಇತಿಹಾಸಲೇಖನದ ಒಂದು ಹೊಸ ಕಲ್ಪನೆ ಮುಂದೆ ಬಂದಿತು. ತನ್ನ 'ಆರ್ಕಿಯಾಲಾಜಿ ಆಫ್ ನಾಲೇಜ' ಎಂಬ ಗ್ರಂಥದಲ್ಲಿ ಅವನು ಕಾಲಾನುಕ್ರಮವಾಗಿ ಇತಿಹಾಸದ ಅಖಂಡ ರಚನೆ ಮಾಡುವ ಪದ್ಧತಿಯು ತಪ್ಪಾಗಿದೆಯೆಂದು ಪ್ರತಿಪಾದಿಸಿದನು. ಪುರಾತತ್ವದಲ್ಲಿ ಅಂತಿಮ ಸತ್ಯದವರೆಗೆ ತಲುಪುವುದು ಗುರಿಯಾಗಿರದೆ ಭೂತಕಾಲದಲ್ಲಿಯ ಸ್ಥಿತ್ಯಂತರಗಳ ಸ್ಪಷ್ಟೀಕರಣ ನೀಡುವ ಪ್ರಯತ್ನವಿರುತ್ತದೆ ಎಂಬುದರ ಕಡೆಗೆ ಅವನು ಗಮನ ಸೆಳೆದನು. ಫುಕೊ ಇವನು ಇತಿಹಾಸದಲ್ಲಿಯ ಸ್ಥಿತ್ಯಂತರಗಳ ಸ್ಪಷ್ಟೀಕರಣ ನೀಡುವುದಕ್ಕೆ ಮಹತ್ವ ನೀಡಿದನು. ಆದ್ದರಿಂದ ಅವನು ಈ ಪದ್ಧತಿಗೆ ಜ್ಞಾನದ ಪುರಾತತ್ವ ಎಂದು ಕರೆದಿದ್ದಾನೆ.



ಮೈಕೆಲ್ ಫುಕೊ

ಇತಿಹಾಸಕಾರರು ಮೊದಲು ಗಮನ ಹರಿಸದ ಮನೋವಿಕೃತಿ, ವೈದ್ಯಕೀಯ ಶಾಸ್ತ್ರ, ಕಾರಾಗೃಹ ವ್ಯವಸ್ಥೆ ಮುಂತಾದ ವಿಷಯಗಳನ್ನು ಅವನು ಇತಿಹಾಸದ ದೃಷ್ಟಿಯಿಂದ ವಿಚಾರ ಮಾಡಿದನು.

ಆಧುನಿಕ ಇತಿಹಾಸಲೇಖನದ ವ್ಯಾಪ್ತಿಯು ಈ ರೀತಿ ಸತತವಾಗಿ ವಿಸ್ತಾರವಾಗುತ್ತಹೋಯಿತು. ಸಾಹಿತ್ಯ, ವಾಸ್ತುಶಿಲ್ಪ, ಶಿಲ್ಪಕಲೆ, ಚಿತ್ರಕಲೆ, ಸಂಗೀತ ಕಲೆ, ನೃತ್ಯಕಲೆ, ನಾಟ್ಯಕಲೆ, ಚಲನಚಿತ್ರ ನಿರ್ಮಾಣ, ದೂರದರ್ಶನ ಮುಂತಾದ ವಿವಿಧ ವಿಷಯಗಳ ಸ್ವತಂತ್ರ ಇತಿಹಾಸಗಳು ಬರೆಯಲ್ಪಡತೊಡಗಿದವು.



## ಅಭ್ಯಾಸ

**1. (ಅ) ಕೆಳಗೆ ಕೊಟ್ಟ ಪರ್ಯಾಯಗಳಲ್ಲಿ ಯೋಗ್ಯ ಪರ್ಯಾಯವನ್ನು ಆಯ್ದು ವಿಧಾನಗಳನ್ನು ಪೂರ್ಣಮಾಡಿರಿ.**

(1) .......... ನು ಆಧುನಿಕ ಇತಿಹಾಸಲೇಖನದ ಜನಕನಾಗಿದ್ದನು ಎಂದು ಹೇಳಬಹುದು.
(ಅ) ವ್ಹಾಲ್ಟೇರ (ಬ) ರೇನೆ ದೇಕಾರ್ತ
(ಕ) ಲಿಯೋಪಾಲ್ಡ ರಾಂಕೆ (ಡ) ಕಾರ್ಲಮಾರ್ಕ್ಸ

(2) ಆರ್ಕಿಯಾಲಾಜಿ ಆಫ್ ನಾಲೇಜ ಎಂಬ ಗ್ರಂಥವನ್ನು .......... ಇವನು ಬರೆದನು.
(ಅ) ಕಾರ್ಲಮಾರ್ಕ್ಸ (ಬ) ಮೈಕೆಲ್ ಫುಕೊ
(ಕ) ಲುಸಿಯಾಫೇಬರ (ಡ) ವ್ಹಾಲ್ಟೇರ

**(ಬ) ಕೆಳಗಿನವುಗಳಲ್ಲಿ ತಪ್ಪಾದ ಜೊತೆಯನ್ನು ಗುರುತಿಸಿ ಬರೆಯಿರಿ.**

(1) ಜಾರ್ಜ ವಿಲ್ಹೆಮ್ ಫ್ರೆಡರಿಕ್ ಹೆಗೆಲ್ - ರೀಝುನ್ ಇನ್ ಹಿಸ್ಟರಿ
(2) ಲಿಯೋಪಾಲ್ಡ ವ್ಹಾನ್ ರಾಂಕೆ - ದ ಥೇರಿ ಆ್ಯಂಡ್ ಪ್ರಾ್ಯಕ್ಟಿಸ್ ಆಫ್ ಹಿಸ್ಟರಿ
(3) ಹಿರೋಡೊಟಸ್ - ದ ಹಿಸ್ಟರಿಜ
(4) ಕಾರ್ಲಮಾರ್ಕ್ಸ - ಡಿಸ್‌ಕೋರ್ಸ್ ಆನ್ ದ ಮೆಥಡ್


**2. ಟಿಪ್ಪಣಿ ಬರೆಯಿರಿ.**

(1) ದ್ವಂದ್ವವಾದ (2) ಆ್ಯನಲ್ಸ ಪ್ರಣಾಲಿ

**3. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಮಹಿಳೆಯರ ಜೀವನಕ್ಕೆ ಸಂಬಂಧಿತ ವಿವಿಧ ಆಯಾಮಗಳ ಬಗ್ಗೆ ಸವಿಸ್ತಾರ ವಿಚಾರ ಮಾಡುವ ಸಂಶೋಧನೆಗಳು ಆರಂಭವಾದವು.
(2) ಫುಕೊ ಇವನ ಲೇಖನ ಪದ್ಧತಿಗೆ ಜ್ಞಾನದ ಪುರಾತತ್ವ ಎಂದು ಕರೆಯಲಾಗಿದೆ.

**4. ಕೆಳಗಿನ ಕಲ್ಪನಾಚಿತ್ರವನ್ನು ಪೂರ್ಣಮಾಡಿರಿ.**




**5. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರವಾಗಿ ಉತ್ತರ ಬರೆಯಿರಿ.**

(1) ಕಾರ್ಲಮಾರ್ಕ್ಸನ ವರ್ಗಸಿದ್ಧಾಂತವನ್ನು ಸ್ಪಷ್ಟಪಡಿಸಿರಿ.
(2) ಆಧುನಿಕ ಇತಿಹಾಸಲೇಖನ ಪದ್ಧತಿಯ ನಾಲ್ಕು ವೈಶಿಷ್ಟ್ಯಗಳು ಯಾವವು?
(3) ಸ್ತ್ರೀವಾದಿ ಇತಿಹಾಸಲೇಖನ ಎಂದರೇನು?
(4) ಲಿಯೋಪಾಲ್ಡ ವ್ಹಾನ ರಾಂಕೆಯ ಇತಿಹಾಸ ವಿಷಯದ ದೃಷ್ಟಿಕೋನವನ್ನು ಸ್ಪಷ್ಟಪಡಿಸಿರಿ.

### ಉಪಕ್ರಮ

(1) ನಿಮ್ಮ ಮೆಚ್ಚಿನ ಯಾವುದೇ ವಿಷಯದ ವಿಸ್ತೃತ ಮಾಹಿತಿಯನ್ನು ಪಡೆಯಿರಿ ಮತ್ತು ಅದರ ಇತಿಹಾಸವನ್ನು ಬರೆಯಿರಿ.
* ಪೆನ್ನಿನ (ಲೆಕ್ಕಣಿಕೆಯ) ಇತಿಹಾಸ.
* ಮುದ್ರಣಕಲೆಯ ಇತಿಹಾಸ.
* ಗಣಕಯಂತ್ರದ ಇತಿಹಾಸ.

4GHBI1

# 2. ಇತಿಹಾಸ ಲೇಖನ : ಭಾರತೀಯ ಪರಂಪರೆ

**2.1 ಭಾರತೀಯ ಇತಿಹಾಸಲೇಖನದ ಪ್ರಗತಿ**

**2.2 ಭಾರತೀಯ ಇತಿಹಾಸಲೇಖನ - ವಿವಿಧ ತಾತ್ವಿಕ ಪ್ರಣಾಲಿ.**

## 2.1 ಭಾರತೀಯ ಇತಿಹಾಸಲೇಖನದ ಪ್ರಗತಿ

ಇತಿಹಾಸಲೇಖನದ ಪಾಶ್ಚಾತ್ಯ ಪರಂಪರೆಯ ಪರಿಚಯವನ್ನು ನಾವು ಮೊದಲನೆಯ ಪಾಠದಲ್ಲಿ ಮಾಡಿಕೊಂಡೆವು. ಈ ಪಾಠದಲ್ಲಿ ನಾವು ಭಾರತೀಯ ಇತಿಹಾಸಲೇಖನದ ಪರಂಪರೆಯನ್ನು ಕುರಿತು ಮಾಹಿತಿ ಪಡೆಯುವವರಿದ್ದೇವೆ.

**ಪ್ರಾಚೀನ ಕಾಲದಲ್ಲಿಯ ಇತಿಹಾಸಲೇಖನ :** ಪ್ರಾಚೀನ ಭಾರತದಲ್ಲಿ ಪೂರ್ವಜರ ಪರಾಕ್ರಮ, ದೇವ ಪರಂಪರೆ, ಸಾಮಾಜಿಕ ಸ್ಥಿತ್ಯಂತರಗಳು ಮುಂತಾದವುಗಳ ಸ್ಮೃತಿಗಳನ್ನು ಮೌಖಿಕ ಪರಂಪರೆಯ ಮೂಲಕ ಜತನ ಮಾಡಲಾಗುತ್ತಿತ್ತು.

ಹರಪ್ಪಾ ಸಂಸ್ಕೃತಿಯಲ್ಲಿ ದೊರೆತ ಪ್ರಾಚೀನ ಲೇಖಗಳ ಆಧಾರದಿಂದ ಭಾರತದಲ್ಲಿ ಲೇಖನ ಕಲೆಯು ಕ್ರಿಸ್ತಶಕ ಪೂರ್ವ ಮೂರನೆಯ ಸಹಸ್ರಾಬ್ದದಿಂದ ಅಥವಾ ಅದಕ್ಕೂ ಮೊದಲಿನಿಂದ ಅಸ್ತಿತ್ವದಲ್ಲಿ ಇತ್ತೆಂಬುದು ಕಂಡುಬರುತ್ತದೆ. ಆದರೆ ಹರಪ್ಪಾ ಸಂಸ್ಕೃತಿಯ ಲಿಪಿಯನ್ನು ಓದುವುದರಲ್ಲಿ ಇನ್ನೂ ಯಶಸ್ಸು ಲಭಿಸಿಲ್ಲ.

ಭಾರತದಲ್ಲಿಯ ಐತಿಹಾಸಿಕ ಸ್ವರೂಪದ ಹೆಚ್ಚಿನ ಪ್ರಾಚೀನ ಲಿಖಿತ ಸಾಹಿತ್ಯವು ಕೊರೆದ ಲೇಖಗಳ ಸ್ವರೂಪದಲ್ಲಿದೆ. ಅದರ ಆರಂಭವು ಮೌರ್ಯ ಸಾಮ್ರಾಟ ಅಶೋಕನ ಕಾಲದಿಂದ ಅಂದರೆ ಕ್ರಿಸ್ತಶಕ ಪೂರ್ವ ಮೂರನೆಯ ಶತಮಾನದಿಂದ ಆಗುತ್ತದೆ. ಸಾಮ್ರಾಟ ಅಶೋಕನ ಕೊರೆದ ಲೇಖನಗಳು ಬಂಡೆಗಲ್ಲುಗಳ ಮೇಲೆ ಮತ್ತು ಕಲ್ಲಿನ ಸ್ತಂಭಗಳ ಮೇಲೆ ಕೊರೆಯಲ್ಪಟ್ಟಿವೆ.

ಕ್ರಿಸ್ತಶಕ ಮೊದಲನೆಯ ಶತಮಾನದಿಂದ ಲೋಹದ ನಾಣ್ಯಗಳು, ಮೂರ್ತಿ ಮತ್ತು ಶಿಲ್ಪಗಳು, ತಾಮ್ರಪಟ ಇತ್ಯಾದಿಗಳ ಮೇಲಿನ ಕೊರೆದ ಲೇಖಗಳು ಲಭ್ಯವಾಗತೊಡಗುತ್ತವೆ. ಇವುಗಳ ಮೂಲಕ ಮಹತ್ವದ ಐತಿಹಾಸಿಕ ಮಾಹಿತಿ ದೊರೆಯುತ್ತದೆ. ಸರ್ವಪ್ರಕಾರದ ಈ ಕೊರೆದ ಲೇಖಗಳಿಂದ ಸಂಬಂಧಿತ ರಾಜರುಗಳ ಕಾಲ, ವಂಶಾವಳಿ, ರಾಜ್ಯವಿಸ್ತಾರ, ಆ ಕಾಲದ ಆಡಳಿತ ವ್ಯವಸ್ಥೆ, ಮಹತ್ವದ ರಾಜಕೀಯ ಘಟನೆಗಳು, ಆ ಕಾಲದ ಸಾಮಾಜಿಕ ರಚನೆ, ಹವಾಮಾನ, ಬರಗಾಲ ಮುಂತಾದ ಮಹತ್ವದ ಮಾಹಿತಿ ದೊರೆಯುತ್ತದೆ.

**ಇದನ್ನು ಅರಿತುಕೊಳ್ಳಿರಿ.**



**ಸೋಹಗೌಡಾ ತಾಮ್ರಪಟ :** ಈ ತಾಮ್ರಪಟವು ಸೋಹಗೌಡಾ (ಜಿಲ್ಲಾ-ಗೋರಖಪೂರ, ಉತ್ತರಪ್ರದೇಶ) ಎಂಬಲ್ಲಿ ದೊರೆಯಿತು. ಈ ತಾಮ್ರಪಟವು ಮೌರ್ಯ ಕಾಲದಲ್ಲಿಯದಾಗಿರಬಹುದು ಎಂದು ತಿಳಿಯಲಾಗುತ್ತದೆ. ತಾಮ್ರಪಟದ ಮೇಲಿನ ಕೊರೆದ ಲೇಖವು ಬ್ರಾಹ್ಮೀ ಲಿಪಿಯಲ್ಲಿದೆ. ಲೇಖದ ಆರಂಭದಲ್ಲಿ ಯಾವ ಚಿಹ್ನೆಗಳಿವೆಯೋ ಅವುಗಳಲ್ಲಿಯ ಸುತ್ತಲಿನ ಕಟ್ಟೆಯನ್ನೊಳಗೊಂಡ ವೃಕ್ಷ ಹಾಗೂ ಪರ್ವತ (ಒಂದರ ಮೇಲೊಂದು ಇರುವ ಮೂರು ಕಮಾನುಗಳು) ಈ ಚಿಹ್ನೆಗಳು ಪ್ರಾಚೀನ ಆಹತ ನಾಣ್ಯಗಳ ಮೇಲೂ ಕಂಡುಬರುತ್ತವೆ. ನಾಲ್ಕು ಕಂಬಗಳ ಮೇಲೆನಿಂತ ಎರಡಂತಸ್ತಿನ ಕಟ್ಟಡದಂತೆ ಕಾಣುವ ಚಿಹ್ನೆಯು ಉಗ್ರಾಣಗಳ ನಿದರ್ಶಕವಾಗಿರಬಹುದು ಎಂಬುದು ಅಭ್ಯಾಸಕರ ಅಭಿಪ್ರಾಯವಾಗಿದೆ. ಈ ಉಗ್ರಾಣಗಳಲ್ಲಿಯ ಧಾನ್ಯವನ್ನು ಜಾಗರೂಕತೆಯಿಂದ ಉಪಯೋಗಿಸಬೇಕು ಎಂಬ ಆದೇಶವನ್ನು ಆ ಲೇಖದಲ್ಲಿ ನೀಡಲಾಗಿದೆ. ಬರಗಾಲ ಪರಿಸ್ಥಿತಿಯ ನಿವಾರಣೆ ಮಾಡುವ ಸಲುವಾಗಿ ಯಾವ ಜಾಗರೂಕತೆ ವಹಿಸಬೇಕು ಎಂಬುದನ್ನು ಕುರಿತು ಈ ಆದೇಶವಿರಬಹುದು ಎಂದು ಊಹಿಸಲಾಗುತ್ತದೆ.

ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ರಾಮಾಯಣ, ಮಹಾಭಾರತ ಈ ಮಹಾಕಾವ್ಯಗಳು, ಪುರಾಣಗಳು, ಜೈನ ಮತ್ತು ಬೌದ್ಧಗ್ರಂಥಗಳು, ಧರ್ಮಗ್ರಂಥಗಳಲ್ಲದೆ ಭಾರತೀಯ ಗ್ರಂಥಕರ್ತರು ಬರೆದ ಐತಿಹಾಸಿಕ ಸ್ವರೂಪದ ಸಾಹಿತ್ಯ ಆದರಂತೆ ಪರಕೀಯ ಪ್ರವಾಸಿಗಳ ಪ್ರವಾಸವರ್ಣನೆ - ಇವುಗಳನ್ನು ಇತಿಹಾಸಲೇಖನದ ಮಹತ್ವದ ಸಾಧನಗಳೆಂದು ತಿಳಿಯಲಾಗುತ್ತದೆ.

ಪ್ರಾಚೀನ ಕಾಲದಲ್ಲಿಯ ರಾಜರುಗಳ ಚರಿತ್ರೆಗಳು ಆದರಂತೆ ರಾಜಮನೆತನಗಳ ಇತಿಹಾಸವನ್ನು ತಿಳಿಸುವ ಲೇಖನಗಳು - ಇವು ಭಾರತೀಯ ಇತಿಹಾಸಲೇಖನದ ಪ್ರಗತಿಯಲ್ಲಿಯ ಮಹತ್ವದ ಹಂತಗಳಾಗಿವೆ. ಕ್ರಿಸ್ತಶಕ ಏಳನೆಯ ಶತಮಾನದಲ್ಲಿ ಬಾಣಭಟ್ಟ ಕವಿಯು ಬರೆದ 'ಹರ್ಷಚರಿತ' ಎಂಬ ಸಂಸ್ಕೃತ ಕಾವ್ಯವು ಐತಿಹಾಸಿಕ ಚರಿತ್ರಗ್ರಂಥದ ಸ್ವರೂಪದ್ದಾಗಿದೆ. ಅದರಲ್ಲಿ ಆ ಕಾಲದ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನದ ವಾಸ್ತವ ವರ್ಣನೆಯನ್ನು ಮಾಡಲಾಗಿದೆ.

**ಮಧ್ಯಯುಗದಲ್ಲಿಯ ಇತಿಹಾಸಲೇಖನ :** ಕ್ರಿಸ್ತಶಕ 12ನೇ ಶತಮಾನದಲ್ಲಿ ಕಲ್ಹಣ ಇವನು ಬರೆದ 'ರಾಜತರಂಗಿಣಿ' ಎಂಬ ಗ್ರಂಥವು ಕಾಶ್ಮೀರದ ಇತಿಹಾಸದ ಮೇಲಿನ ಗ್ರಂಥವಾಗಿದೆ. ಇತಿಹಾಸಲೇಖನವು ಶಾಸ್ತ್ರಶುದ್ಧವಾಗಿ ಹೇಗೆ ಇರಬೇಕೆಂಬ ಆಧುನಿಕ ಕಲ್ಪನೆಗೆ ಈ ಗ್ರಂಥವು ಹತ್ತಿರದ ಸಂಬಂಧವನ್ನು ತಿಳಿಸುತ್ತದೆ. ಅದರಲ್ಲಿ ಅನೇಕ ಕೊರೆದ ಲೇಖಗಳು, ನಾಣ್ಯಗಳು, ಪ್ರಾಚೀನ ಕಟ್ಟಡಗಳ ಅವಶೇಷಗಳು, ರಾಜಮನೆತನಗಳ ಅಧಿಕೃತ ದಾಖಲೆಗಳು ಹಾಗೂ ಸ್ಥಾನಿಕ ಪರಂಪರೆ ಮುಂತಾದ ಅನೇಕ ಸಾಧನಗಳ ಚಿಕಿತ್ಸಕ ಅಭ್ಯಾಸ ಮಾಡಿ ತಾನು ಈ ಗ್ರಂಥವನ್ನು ಬರೆದೆನೆಂಬ ಉಲ್ಲೇಖವನ್ನು ಕಲ್ಹಣನು ಮಾಡಿದ್ದಾನೆ.

ಮಧ್ಯಯುಗೀನ ಭಾರತದಲ್ಲಿ ಮುಸ್ಲಿಮ ರಾಜರ ಆಸ್ಥಾನದಲ್ಲಿಯ ಇತಿಹಾಸಕಾರರ ಬರವಣಿಗೆಯ ಮೇಲೆ ಅರಬಿ ಮತ್ತು ಫಾರಸಿ ಇತಿಹಾಸಲೇಖನದ ಪರಂಪರೆಯ ಪ್ರಭಾವವಿದ್ದುದು ಕಂಡುಬರುತ್ತದೆ. ಮಧ್ಯಯುಗದ ಮುಸ್ಲಿಮ ಇತಿಹಾಸಕಾರರಲ್ಲಿ ಝಿಯಾಉದ್ದೀನ ಬರನಿಯು ಒಬ್ಬ ಮುಖ್ಯ ಇತಿಹಾಸಕಾರನಾಗಿದ್ದನು. 'ತಾರೀಖ-ಇ-ಫಿರೂಜಶಾಹೀ' ಎಂಬ ತನ್ನ ಗ್ರಂಥದಲ್ಲಿ ಅವನು ಇತಿಹಾಸಲೇಖನದ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾನೆ. ಅವನ ಅಭಿಪ್ರಾಯದಂತೆ ಕೇವಲ ರಾಜರ ಪರಾಕ್ರಮದ ಮತ್ತು ಜನಹಿತದ ಧೋರಣೆಗಳ ವರ್ಣನೆ ಮಾಡಿದರೆ ಇತಿಹಾಸಕರನ ಕರ್ತವ್ಯ ಪೂರ್ಣವಾಗಲಾರದು ಆದರೆ ಅವರ ದೋಷಗಳ ಮತ್ತು ತಪ್ಪು ಧೋರಣೆಗಳ ಚಿಕಿತ್ಸಕ ವಿವೇಚನೆಯನ್ನು ಅವನು ಮಾಡಬೇಕು. ಇಷ್ಟೇ ಅಲ್ಲದೆ ಸಂಬಂಧಿತ ಕಾಲದಲ್ಲಿಯ ವಿದ್ವಾಂಸರ, ಅಭ್ಯಾಸಕರ, ಸಾಹಿತಿಗಳ ಮತ್ತು ಸಂತರ ಸಾಂಸ್ಕೃತಿಕ ಜೀವನದಲ್ಲಿಯ ಪ್ರಭಾವವನ್ನೂ ಗಮನದಲ್ಲಿರಿಸಬೇಕು. ಬರನಿಯ ಈ ವಿಚಾರಸರಣಿಯಿಂದಾಗಿ ಇತಿಹಾಸಲೇಖನದ ವ್ಯಾಪ್ತಿಯು ಹೆಚ್ಚು ವಿಸ್ತಾರಹೊಂದಿತು.

ಮುಘಲ ಬಾದಶಹರ ದರಬಾರಿನಲ್ಲಿಯ ಇತಿಹಾಸಕಾರರ ಲೇಖನದಲ್ಲಿ ರಾಜರ ಸ್ತುತಿ ಮತ್ತು ಅವರ ವಿಷಯವಾಗಿ ಇರುವ ನಿಷ್ಠೆ ಈ ಆಯಾಮಗಳಿಗೆ ವಿಶೇಷ ಮಹತ್ವ ಪ್ರಾಪ್ತವಾಯಿತು. ಅದಲ್ಲದೆ ಅವರ ವರ್ಣನೆಯಲ್ಲಿ ಸಮರ್ಪಕ ಪದ್ಯ ಪರಿಚ್ಛೇದ ಹಾಗೂ ಸುಂದರ ಚಿತ್ರಗಳನ್ನು ಸಮಾವೇಶಗೊಳಿಸುವ ಪದ್ಧತಿಯೂ ಆರಂಭವಾದುದು ಕಂಡುಬರುತ್ತದೆ. ಮುಘಲ ಸಾಮ್ರಾಜ್ಯದ ಸಂಸ್ಥಾಪಕನಾದ ಬಾಬರ ಇವನ ಆತ್ಮಚರಿತ್ರೆ 'ತುರುಕ-ಇ-ಬಾಬರಿ'ಯಲ್ಲಿ



**ಗೊತ್ತಿದೆಯೇ ನಿಮಗೆ?**

ಅಲ್ಬೇರುನಿಯು ವಿವಿಧ ಜ್ಞಾನಶಾಖೆಗಳಲ್ಲಿ ಭಾರತೀಯರು ಮಾಡಿದ ಕಾರ್ಯ ಮತ್ತು ಭಾರತದಲ್ಲಿಯ ಸಮಾಜ ಜೀವನಗಳನ್ನು ಕುರಿತ ಮಾಹಿತಿಯನ್ನು ಅರೇಬಿಕ್ ಭಾಷೆಯಲ್ಲಿ ಬರೆದಿಟ್ಟಿದ್ದಾನೆ. ನಂತರದ ಕಾಲದಲ್ಲಿ ಅನೇಕ ವಿದೇಶಿ ಇತಿಹಾಸಕಾರರು ಭಾರತಕ್ಕೆ ಸಂಬಂಧಿತ ಮಾಹಿತಿಯನ್ನು ನೀಡುವ ಗ್ರಂಥಗಳನ್ನು ಬರೆದರು. ಅವುಗಳಲ್ಲಿ ಹಸನ ನಿಝಾಮಿ ಇವನ 'ತಾಜುಲ-ಮಾಸಿರ', ಮಿನ್ಹಾಜ-ಇ ಸಿರಾಜ ಎಂಬ ಇತಿಹಾಸಕಾರನ 'ತಬಾಕತ-ಇ-ನಾಸಿರಿ', ಅಮೀರ ಖುಸ್ರೋನ ವ್ಯಾಪಕ ಲೇಖನ, 'ತುಜುಕ-ಇ-ತಿಮೂರಿ' ಎಂಬ ತೈಮೂರಲಂಗನ ಆತ್ಮಕತೆಯು, ಯಾಹ್ಯಾಬಿನ್ ಅಹಮದ ಸರಹಿಂದೀ ಬರೆದ 'ತಾರೀಖ-ಇ-ಮುಬಾರಕಶಾಹೀ' - ಈ ಗ್ರಂಥಗಳು ಮಹತ್ವದ್ದಾಗಿವೆ. ಅವರ ಲೇಖನಗಳಲ್ಲಿ ನಮಗೆ ಭಾರತದಲ್ಲಿಯ ಮಧ್ಯಯುಗೀನ ಕಾಲಖಂಡಕ್ಕೆ ಸಂಬಂಧಿತ ಮಹತ್ವದ ಮಾಹಿತಿ ದೊರೆಯುತ್ತದೆ.

ವಿದೇಶಿ ಪ್ರವಾಸಿಗಳು ಬರೆದಿಟ್ಟ ವೃತ್ತಾಂತಗಳು ಕೂಡ ಭಾರತದ ಇತಿಹಾಸದ ಮಹತ್ವದ ಸಾಧನಗಳಾಗಿವೆ. ಅವರಲ್ಲಿ ಇಬ್ನ ಬತೂತಾ, ಅಬ್ದುಲ್ ರಜಾಕ, ಮಾರ್ಕೊಪೋಲೊ ನಿಕೋಲೊ ಕಾಂಟಿ, ಬಾರ್ಬೊಸಾ ಮತ್ತು ಡೋಮಿಂಗೊಸ ಪೇಸ ಮುಂತಾದವರು ಇದ್ದರು. ಅವರ ಲೇಖನಗಳಿಂದ ಮಧ್ಯಯುಗೀನ ಭಾರತದ ಐತಿಹಾಸಿಕ ಮಾಹಿತಿ ದೊರೆಯುತ್ತದೆ. ಈಶ್ವರದಾಸ ನಾಗರ, ಭೀಮಸೇನ ಸಕ್ಸೇನಾ, ಖಾಫೀಖಾನ ಹಾಗೂ ನಿಕೋಲಾಯ ಮನುಚಿ ಈ ಬಾದಶಹರು ಔರಂಗಜೇಬನ ಕಾಲದಲ್ಲಿಯ ಮಹತ್ವದ ಇತಿಹಾಸಕಾರರಾಗಿದ್ದರು. ಮುಘಲ ಕಾಲದಲ್ಲಿಯ ಇತಿಹಾಸವನ್ನು ತಿಳಿದುಕೊಳ್ಳುವ ಸಲುವಾಗಿ ಅವರ ಲೇಖನಗಳು ಅತ್ಯಂತ ಮಹತ್ವದ್ದಾಗಿವೆ.

ಅವನು ಮಾಡಬೇಕಾದ ಯುದ್ಧಗಳ ವರ್ಣನೆಯಿದೆ. ಅದರ ಜೊತೆಗೆ ಅವನು ಪ್ರವಾಸ ಮಾಡಿದ ಪ್ರದೇಶಗಳ ಮತ್ತು ಪಟ್ಟಣಗಳ ವರ್ಣನೆ, ಅಲ್ಲಿಯ ಸ್ಥಾನಿಕ ಅರ್ಥವ್ಯವಸ್ಥೆ ಮತ್ತು ರೂಢಿ-ಸಂಪ್ರದಾಯಗಳು, ವನಸ್ಪತಿ ಸೃಷ್ಟಿ ಇವುಗಳ ಬಗ್ಗೆ ಸೂಕ್ಷ್ಮವಾಗಿ ಮಾಡಿದ ನಿರೀಕ್ಷಣೆಗಳ ಸಮಾವೇಶವೂ ಇದೆ.

ಇತಿಹಾಸಲೇಖನದ ಚಿಕಿತ್ಸಕ ಪದ್ಧತಿಯ ದೃಷ್ಟಿಯಿಂದ ಅಬುಲ್‌ಫಜಲ ಇವನು ಬರೆದ 'ಅಕಬರನಾಮಾ' ಗ್ರಂಥವು ವಿಶೇಷ ಮಹತ್ವದ್ದಾಗಿದೆ. ಅಧಿಕೃತ ದಾಖಲೆಗಳ ಆಧಾರದಿಂದ ಜಾಗರೂಕತೆಯಿಂದ ಮಾಡಿದ ಐತಿಹಾಸಿಕ ಕಾಗದ ಪತ್ರಗಳ ಸಂಕಲನೆ ಹಾಗೂ ಅದರಲ್ಲಿಯ ಮಾಹಿತಿಯ ವಿಶ್ವಾಸಾರ್ಹತೆಯ ಆಮೂಲಾಗ್ರವಾಗಿ ಮಾಡಿದ ಪರೀಕ್ಷೆ ಅಬುಲ ಫಜಲನು ಬಳಸಿದ ಈ ಸಂಶೋಧನೆಯ ಪದ್ಧತಿಯು ಪೂರ್ವಗ್ರಹವಿರಹಿತ ಮತ್ತು ವಾಸ್ತವವಾದಿಯಾಗಿತ್ತೆಂದು ತಿಳಿಯಲಾಗುತ್ತದೆ.


'ಬಖರ' ಇದು ಐತಿಹಾಸಿಕ ಸಾಹಿತ್ಯದಲ್ಲಿಯ ಒಂದು ಮಹತ್ವದ ಪ್ರಕಾರವಾಗಿದೆ. ವೀರಯೋಧರ ಸ್ತುತಿ, ಐಸಿಹಾಸಿಕ ಘಟನೆಗಳು, ಯುದ್ಧಗಳು, ಮಹಾನ್ ವ್ಯಕ್ತಿಗಳ ಚರಿತ್ರೆಗಳು ಇತ್ಯಾದಿ ವಿಷಯಗಳ ಲೇಖನವು ನಮಗೆ ಬಖರಗಳಲ್ಲಿ ಓದಲು ಸಿಗುತ್ತದೆ.

ಮರಾಠಿ ಭಾಷೆಯಲ್ಲಿ ವಿವಿಧ ಪ್ರಕಾರದ ಬಖರುಗಳು ಇವೆ. 'ಸಭಾಸದ ಬಖರ' ಇದು ಅವುಗಳಲ್ಲಿ ಒಂದು ಮಹತ್ವದ ಬಖರ ಆಗಿದೆ. ಛತ್ರಪತಿ ರಾಜಾರಾಮ ಮಹಾರಾಜರ ಕಾಲದಲ್ಲಿ ಕೃಷ್ಣಾಜಿ ಅನಂತ ಸಭಾಸದ ಇವರು ಈ ಬಖರ ಬರೆದರು. ಇದರಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಆಡಳಿತದ ಮಾಹಿತಿ ದೊರೆಯುತ್ತದೆ.

'ಭಾವೂಸಾಹೇಬಾಂಚಿ ಬಖರ' ಎಂಬ ಬಖರಿನಲ್ಲಿ ಪಾಣಿಪತ ಯುದ್ಧದ ವರ್ಣನೆ ಇದೆ. ಇದೇ ವಿಷಯದ ಮೇಲೆ ಆಧಾರಿತವಾದ 'ಪಾಣಿಪತಚಿ ಬಖರ' ಎಂಬ ಸ್ವತಂತ್ರ ಬಖರ ಇದೆ. 'ಹೋಳಕರಾಂಚಿ ಕೈಫಿಯತ' ಎಂಬ ಬಖರಿನಿಂದ ನಮಗೆ ಹೋಳಕರರ ಮನೆತನ ಮತ್ತು ಅವರ ಕೊಡುಗೆ ತಿಳಿಯುತ್ತವೆ.

ಬಖರಿನಲ್ಲಿ ಚರಿತ್ರಾತ್ಮಕ, ವಂಶಾನುಚರಿತ್ರಾತ್ಮಕ, ಪ್ರಸಂಗ ವರ್ಣನಾತ್ಮಕ, ಪಂಥೀಯ, ಆತ್ಮಚರಿತ್ರಪರ, ಕೈಫಿಯತ, ಪೌರಾಣಿಕ ಮತ್ತು ರಾಜನೀತಿಪರ ಎಂಬ ಪ್ರಕಾರಗಳಿವೆ.

**ಆಧುನಿಕ ಕಾಲದಲ್ಲಿಯ ಇತಿಹಾಸಲೇಖನ ಮತ್ತು ಬ್ರಿಟಿಷ ಇತಿಹಾಸಕಾಲ :** ಇಪ್ಪತ್ತನೆಯ ಶತಮಾನದಲ್ಲಿ ಬ್ರಿಟಿಷರ ಆಡಳಿತಕಾಲದಲ್ಲಿ ಭಾರತೀಯ ಪುರಾತತ್ವದ ಅಭ್ಯಾಸವು ಆರಂಭವಾಯಿತು. ಭಾರತೀಯ ಪುರಾತತ್ವ ಸರ್ವೇಕ್ಷಣೆ ವಿಭಾಗದ ಪ್ರಥಮ ಮುಖ್ಯಸಂಚಾಲಕರಾದ ಅಲೆಕ್ಝಾಂಡರ



ಅಲೆಕ್ಝಾಂಡರ ಕನಿಂಗಹ್ಯಾಮರ



ಜಾನ ಮಾರ್ಶಲ

ಕನಿಂಗಹ್ಯಾಮರ ಮಾರ್ಗದರ್ಶನದಲ್ಲಿ ಅನೇಕ ಪ್ರಾಚೀನ ಸ್ಥಳಗಳ ಉತ್ಖನನ ಮಾಡಲಾಯಿತು. ಅದಕ್ಕಾಗಿ ಅವರು ಪ್ರಾಮುಖ್ಯವಾಗಿ ಬೌದ್ಧಗ್ರಂಥಗಳಲ್ಲಿ ಉಲ್ಲೇಖಿಸಲಾದ ಸ್ಥಳಗಳ ಮೇಲೆ ಲಕ್ಷವನ್ನು ಕೇಂದ್ರಿಕರಿಸಿದರು. ನಂತರ ಜಾನ ಮಾರ್ಶಲ್ಲರ ಆಡಳಿತ ಕಾಲದಲ್ಲಿ ಹರಪ್ಪಾ ಸಂಸ್ಕೃತಿಯ ಶೋಧವಾಯಿತು ಹಾಗೂ ಭಾರತೀಯ ಸಂಸ್ಕೃತಿಯ ಇತಿಹಾಸವು ಕ್ರಿಸ್ತಶಕ ಪೂರ್ವ ಮೂರನೆಯ ಸಹಸ್ರಾಬ್ಧದ ವರೆಗಿನ ಅಥವಾ ಅದಕ್ಕಿಂತಲೂ ಹಿಂದಿನದಾಗಿರಬಹುದು ಎಂಬುದು ಸಿದ್ಧವಾಯಿತು.

ಭಾರತಕ್ಕೆ ಬಂದ ಅನೇಕ ಬ್ರಿಟಿಷ ಅಧಿಕಾರಿಗಳು ಭಾರತೀಯ ಇತಿಹಾಸವನ್ನು ಕುರಿತು ಲೇಖನ ಮಾಡಿದ್ದಾರೆ. ಅವರು ಮಾಡಿದ ಲೇಖನದ ಮೇಲೆ ಬ್ರಿಟಿಷರ ವಸಾಹತುವಾದಿ ಧೋರಣೆಯ ಪ್ರಭಾವವಿದ್ದುದು ಕಂಡುಬರುತ್ತದೆ.



ಜೇಮ್ಸ ಮಿಲ್

ಜೇಮ್ಸ ಮಿಲ್ ಇವನು ಬರೆದ 'ದ ಹಿಸ್ಟರಿ ಆಫ್ ಬ್ರಿಟಿಷ ಇಂಡಿಯಾ' ಗ್ರಂಥದ ಮೂರು ಸಂಪುಟಗಳು 1817ನೇ ಇಸ್ವಿಯಲ್ಲಿ ಪ್ರಸಿದ್ಧವಾದವು. ಇದು ಬ್ರಿಟಿಷ ಇತಿಹಾಸಕಾರನು ಭಾರತೀಯ ಇತಿಹಾಸವನ್ನು ಕುರಿತು ಬರೆದ ಪ್ರಥಮ ಗ್ರಂಥವಾಗಿದೆ. ಅವನ ಲೇಖನದಲ್ಲಿ ವಸ್ತುನಿಷ್ಠ ದೃಷ್ಟಿಕೋನದ ಅಭಾವ ಮತ್ತು ಭಾರತೀಯ ಸಂಸ್ಕೃತಿಯ ವಿವಿಧ ಆಯಾಮಗಳ ವಿಷಯವಾಗಿ ಪೂರ್ವಗ್ರಹದೂಷಿತ ದೃಷ್ಟಿಕೋನವು ಸ್ಪಷ್ಟವಾಗಿ ಮೂಡಿದ್ದು ಕಂಡುಬರುತ್ತದೆ.

ಕ್ರಿಸ್ತಶಕ 1841ರಲ್ಲಿ ಮೌಂಟ ಸ್ಟುವರ್ಟ ಎಲ್ಫಿನ್‌ಸ್ಟನ ಇವರು 'ದ ಹಿಸ್ಟರಿ ಆಫ್ ಇಂಡಿಯಾ' ಎಂಬ ಗ್ರಂಥವನ್ನು ಬರೆದರು. ಮೌಂಟ ಸ್ಟುವರ್ಟ ಎಲ್ಫಿನ್‌ಸ್ಟನ ಇವರು ಮುಂಬಯಿಯ ಗವ್ಹರ್ನರ (ಕ್ರಿ.ಶ.1819-1827) ಆಗಿದ್ದರು.

ಭಾರತದ ಇತಿಹಾಸದಲ್ಲಿ ಮರಾಠಿ ಸಾಮ್ರಾಜ್ಯದ ಕಾಲಖಂಡದ ಸ್ಥಾನವು ಅತ್ಯಂತ ಮಹತ್ವದ್ದಾಗಿದೆ. ಮರಾಠಿ ಸಾಮ್ರಾಜ್ಯದ ಇತಿಹಾಸವನ್ನು ಬರೆಯುವ ಬ್ರಿಟಿಷ ಅಧಿಕಾರಿಗಳಲ್ಲಿ ಜೇಮ್ಸ ಗ್ರ್ಯಾಂಟ ಡಫ್ ಇವನ ಹೆಸರು ಮಹತ್ವದ್ದಾಗಿದೆ. ಅವನು 'ಎ ಹಿಸ್ಟರಿ ಆಫ ದ ಮರಾಠಾಜ್' ಎಂಬ ಗ್ರಂಥವನ್ನು ಬರೆದನು. ಈ ಗ್ರಂಥದ ಮೂರು ಸಂಪುಟಗಳಿವೆ. ಭಾರತೀಯ ಸಂಸ್ಕೃತಿ ಮತ್ತು ಇತಿಹಾಸವನ್ನು ಕಡಿಮೆ ದರ್ಜೆಯದೆಂದು ತಿಳಿಯುವ ಬ್ರಿಟಿಷ ಅಧಿಕಾರಿಗಳ ಪ್ರವೃತ್ತಿಯು ಗ್ರ್ಯಾಂಟ ಡಫ್ ಇವನ ಲೇಖನದಲ್ಲಿಯೂ ಕಂಡು ಬರುತ್ತದೆ. ಇಂತಹದೇ ಪ್ರವೃತ್ತಿಯು ರಾಜಸ್ಥಾನದ ಇತಿಹಾಸ ಬರೆಯುವಾಗ ಕರ್ನಲ ಟಾಡ್‌ರಂತಹ ಅಧಿಕಾರಿಯ ಲೇಖನದಲ್ಲಿ ಕಂಡುಬರುತ್ತದೆ. ವಿಲ್ಯಮ್ ವಿಲ್ಸನ್ ಹಂಟರ ಇವನು ಹಿಂದುಸ್ಥಾನದ ದ್ವಿಖಂಡಾತ್ಮಕ ಇತಿಹಾಸವನ್ನು ಬರೆದನು. ಅದರಲ್ಲಿ ಅವನ ನಿಷ್ಪಕ್ಷಪಾತ ಪ್ರವೃತ್ತಿ ಕಾಣುತ್ತದೆ.


ಹತ್ತೊಂಬತ್ತನೆಯ ಶತಮಾನದಲ್ಲಿ ನೀಲಕಂಠ ಜನಾರ್ದನ ಕೀರ್ತನೆ ಮತ್ತು ವಿ.ಕಾ. ರಾಜವಾಡೆ ಇವರು ಡಫ್ ಇವನ ಇತಿಹಾಸಲೇಖನದ ಮಿತಿಯನ್ನು ತೋರಿಸಿಕೊಟ್ಟರು.

## 2.2 ಭಾರತೀಯ ಇತಿಹಾಸಲೇಖನ : ವಿವಿಧ ತಾತ್ವಿಕ ಪ್ರಣಾಲಿಗಳು

**ವಸಾಹತುವಾದಿ ಇತಿಹಾಸಲೇಖನ :** ಭಾರತೀಯ ಇತಿಹಾಸದ ಅಭ್ಯಾಸ ಮತ್ತು ಲೇಖನ ಮಾಡುವ ಆರಂಭದ ಇತಿಹಾಸಕಾರರಲ್ಲಿ ಪ್ರಾಮುಖ್ಯವಾಗಿ ಬ್ರಿಟಿಷ ಅಧಿಕಾರಿಗಳ ಹಾಗೂ ಖ್ರಿಶ್ಚನ್ ಧರ್ಮ ಪ್ರಸಾರಕರ ಸಮಾವೇಶವಾಗಿತ್ತು. ಭಾರತೀಯ ಸಂಸ್ಕೃತಿಯು ಕಡಿಮೆ ದರ್ಜೆಯದಾಗಿದೆ ಎಂಬ ಅವರ ಪೂರ್ವಗ್ರಹದ ಪ್ರತಿಬಿಂಬವು ಅವರಲ್ಲಿಯ ಕೆಲವರ ಲೇಖನದಲ್ಲಿ ಸ್ಪಷ್ಟವಾಗಿ ಮೂಡಿದ್ದು ಕಂಡುಬರುತ್ತದೆ. ವಸಾಹತುವಾದಿ ಬ್ರಿಟಿಷ ಆಡಳಿತದ ಸಮರ್ಥನೆಗಾಗಿ ಅವರ ಇತಿಹಾಸಲೇಖನವನ್ನು ಉಪಯೋಗಿಸಲಾಯಿತು. ಕ್ರಿ.ಶ.1922ರಿಂದ 1937ರ ಮಧ್ಯದಲ್ಲಿ ಪ್ರಕಾಶಿತವಾದ 'ಕ್ಯಾಂಬ್ರಿಜ್ ಹಿಸ್ಟರಿ ಆಫ್ ಇಂಡಿಯಾ' ಎಂಬ ಗ್ರಂಥದ ಐದು ಸಂಪುಟಗಳು - ಇದು ವಸಾಹತುವಾದಿ ಇತಿಹಾಸಲೇಖನದ ಉತ್ತಮ ಉದಾಹರಣೆಯಾಗಿದೆ.

**ಪೌರ್ವಾತ್ಯ ಇತಿಹಾಸಲೇಖನ :** ಯುರೋಪಿನಲ್ಲಿಯ ಅಭ್ಯಾಸಕರಲ್ಲಿ ಪೌರ್ವಾತ್ಯ ಸಂಸ್ಕೃತಿ ಮತ್ತು ದೇಶಗಳ ವಿಷಯವಾಗಿ ಕುತೂಹಲ ಜಾಗೃತವಾಗಿತ್ತು. ಅವುಗಳ ಬಗ್ಗೆ ಆದರ ಮತ್ತು ಉತ್ಸುಕತೆಯಿರುವ ಕೆಲವು ಅಭ್ಯಾಸಕರು ಅವರಲ್ಲಿದ್ದರು. ಅವರಿಗೆ ಪೌರ್ವಾತ್ಯರು ಎಂದು ಕರೆಯಲಾಗುತ್ತದೆ.

ಪೌರ್ವಾತ್ಯ ಅಭ್ಯಾಸಕರು ಸಂಸ್ಕೃತ ಮತ್ತು ಯುರೋಪಿಯನ್ ಭಾಷೆಗಳಲ್ಲಿಯ ಗುಣ ಸಮಾನತೆಯ ಅಭ್ಯಾಸ ಮಾಡಿದರು. ಪೌರ್ವಾತ್ಯ ವಿದ್ವಾಂಸರು ವೈದಿಕ



ವಿಲ್ಯಮ್ ಜೋನ್ಸ

ವಾಙ್ಮಯ ಮತ್ತು ಸಂಸ್ಕೃತ ಸಾಹಿತ್ಯದ ಅಭ್ಯಾಸ ಮಾಡುವುದಕ್ಕೆ ಮಹತ್ವ ನೀಡಿದರು. ಇದರಿಂದ ಈ ಭಾಷೆಗಳ ಜನನಿಯಾಗಿರುವ ಒಂದು ಪ್ರಾಚೀನ ಇಂಡೋ-ಯುರೋಪಿಯನ್ ಭಾಷೆ ಅಸ್ತಿತ್ವದಲ್ಲಿತ್ತು ಎಂಬ ಕಲ್ಪನೆಯನ್ನು ಮಂಡಿಸಲಾಯಿತು.

ಕ್ರಿಸ್ತಶಕ 1784ರಲ್ಲಿ ಸರ ವಿಲ್ಯಮ್ ಜೋನ್ಸ್ ಇವರು ಕೋಲಕಾತಾ ಎಂಬಲ್ಲಿ ಏಶಿಯಾಟಿಕ್ ಸೊಸೈಟಿಯ ಸ್ಥಾಪನೆ ಮಾಡಿದರು. ಅದರ ಮುಖಾಂತರ ಪ್ರಾಚೀನ ಭಾರತೀಯ ವಾಙ್ಮಯ ಮತ್ತು ಇತಿಹಾಸಗಳ ಅಭ್ಯಾಸಕ್ಕೆ ಚಾಲನೆದೊರೆಯಿತು.

ಪೌರ್ವಾತ್ಯ ಅಭ್ಯಾಸಕರಲ್ಲಿ ಪ್ರಾಮುಖ್ಯವಾಗಿ ಜರ್ಮನಿಯ ಅಭ್ಯಾಸಕನಾದ ಮ್ಯಾಕ್ಸಮ್ಯುಲರನ ಉಲ್ಲೇಖ ಮಾಡಬೇಕಾಗುತ್ತದೆ. ಅವನ ದೃಷ್ಟಿಯಲ್ಲಿ ಸಂಸ್ಕೃತ ಭಾಷೆಯು ಇಂಡೋ- ಯುರೋಪಿಯನ್ ಭಾಷಾ ಗುಂಪಿನಲ್ಲಿಯ ಅತ್ಯಂತ ಪ್ರಾಚೀನ ಶಾಖೆಯಾಗಿತ್ತು. ಸಂಸ್ಕೃತ ಸಾಹಿತ್ಯದಲ್ಲಿ ಅವನಿಗೆ ವಿಶೇಷ ಆಸಕ್ತಿಯಿತ್ತು. ಅವನು 'ಹಿತೋಪದೇಶ' ಎಂಬ ಸಂಸ್ಕೃತ ಗ್ರಂಥವನ್ನು ಜರ್ಮನ್ ಭಾಷೆಯಲ್ಲಿ ಅನುವಾದ ಮಾಡಿದನು. ಅದರಂತೆ 'ದ ಸ್ಯಾಕ್ರೆಡ್ ಬುಕ್ಸ ಆಫ ದ ಈಸ್ಟ' ಎಂಬ ಹೆಸರಿನಿಂದ 50 ಸಂಪುಟಗಳನ್ನು ಸಂಪಾದಿಸಿದನು. ಅವನು ಋಗ್ವೇದದ ಸಂಕಲನೆ ಮಾಡುವ ಕಾರ್ಯವನ್ನು ಮಾಡಿದನು. ಅದು ಆರು ಸಂಪುಟಗಳಲ್ಲಿ ಪ್ರಕಾಶಿತವಾಗಿದೆ. ಅವನು ಋಗ್ವೇದವನ್ನು ಜರ್ಮನ್ ಭಾಷೆಯಲ್ಲಿ ಅನುವಾದ ಮಾಡಿದ್ದನು.



ಫ್ರೆಡರಿಕ್ ಮ್ಯಾಕ್ಸಮ್ಯುಲರ

ಇತ್ತೀಚಿನ ಕಾಲದಲ್ಲಿ ಪ್ರಾಚ್ಯವಿದ್ಯಾವಂತರ ಲೇಖನದ ಹಿಂದೆ ಅಡಗಿದ ಸಾಮ್ರಾಜ್ಯವಾದಿ ಹಿತಸಂಬಂಧವನ್ನು ಬೆಳಕಿಗೆ ತರುವ ಕಾರ್ಯವನ್ನು ಎಡವರ್ಡ ಸೈದ ಎಂಬ ವಿದ್ವಾಂಸನು ಮಾಡಿದನು.

**ರಾಷ್ಟ್ರವಾದಿ ಇತಿಹಾಸಲೇಖನ :** ಹತ್ತೊಂಬತ್ತನೆಯ ಮತ್ತು ಇಪ್ಪತ್ತನೆಯ ಶತಮಾನಗಳಲ್ಲಿ ಇಂಗ್ಲೀಷ ಶಿಕ್ಷಣ ಪದ್ಧತಿಯಲ್ಲಿ ಕಲಿತು ಮುಂದೆ ಬಂದ ಭಾರತೀಯ ಇತಿಹಾಸಕಾರರ ಲೇಖನಗಳಲ್ಲಿ ಭಾರತದ ಪ್ರಾಚೀನ ವೈಭವದ ಅಭಿಮಾನ ಮತ್ತು ಭಾರತೀಯರ ಆತ್ಮಪ್ರಜ್ಞೆಯನ್ನು ಜಾಗೃತಗೊಳಿಸುವುದರ ಕಡೆಗೆ ಇರುವ ಒಲವು ಕಾಣಿಸುತ್ತದೆ. ಅವರ ಲೇಖನಗಳಿಗೆ ರಾಷ್ಟ್ರವಾದಿ ಇತಿಹಾಸಲೇಖನ ಎಂದು

ಕರೆಯಲಾಗುತ್ತದೆ. ಮಹಾರಾಷ್ಟ್ರದಲ್ಲಿಯ ರಾಷ್ಟ್ರವಾದಿ ಇತಿಹಾಸಲೇಖನಕ್ಕೆ ವಿಷ್ಣುಶಾಸ್ತ್ರಿ ಚಿಪಳೂಣಕರರಿಂದ ಪ್ರೇರಣೆ ದೊರೆಯಿತು. ಬ್ರಿಟಿಷ ಅಧಿಕಾರಿಗಳು ಬರೆದ ಪ್ರಾಚೀನ ಭಾರತದ ಪೂರ್ವಗ್ರಹದೂಷಿತ ಇತಿಹಾಸವನ್ನು ಅವರು ವಿರೋಧಿಸಿದರು. ಈ ರೀತಿ ರಾಷ್ಟ್ರವಾದಿ ಲೇಖನವನ್ನು ಮಾಡುವ ಇತಿಹಾಸಕಾರರು ಭಾರತದ ಇತಿಹಾಸದಲ್ಲಿಯ ಸುವರ್ಣಯುಗವನ್ನು ಶೋಧಿಸುವ ಪ್ರಯತ್ನ ಮಾಡಿದರು. ಹೀಗೆ ಮಾಡುತ್ತಿರುವಾಗ ಕೆಲವೊಮ್ಮೆ ಐತಿಹಾಸಿಕ ವಾಸ್ತವದ ಚಿಕಿತ್ಸಕ ಪರೀಕ್ಷಣೆ ಮಾಡುವುದರ ಕಡೆಗೆ ದುರ್ಲಕ್ಷ ಮಾಡಲಾಯಿತು ಎಂಬ ಆಕ್ಷೇಪಣೆಯನ್ನು ಅವರ ಮೇಲೆ ಮಾಡಲಾಗುತ್ತದೆ. ಮಹಾದೇವ ಗೋವಿಂದ ರಾನಡೆ, ರಾಮಕೃಷ್ಣ ಗೋಪಾಳ ಭಾಂಡಾರಕರ, ವಿನಾಯಕ ದಾಮೋದರ ಸಾವರಕರ, ರಾಜೇಂದ್ರಲಾಲ ಮಿಶ್ರ, ರಮೇಶಚಂದ್ರ ಮುಜುಮದಾರ, ಕಾಶೀಪ್ರಸಾದ ಜಯಸ್ವಾಲ, ರಾಧಾಕುಮುದ ಮುಖರ್ಜಿ, ಭಗವಾನಲಾಲ ಇಂದ್ರಜಿ, ವಾಸುದೇವ ವಿಷ್ಣು ಮಿರಾಶಿ, ಅನಂತ ಸದಾಶಿವ ಆಳತೇಕರ ಮುಂತಾದ ರಾಷ್ಟ್ರವಾದಿ ಇತಿಹಾಸಕಾರರ ಹೆಸರುಗಳನ್ನು ಉದಾಹರಣೆಗಾಗಿ ಕೊಡಬಹುದು.

**ಗೊತ್ತಿದೆಯೇ ನಿಮಗೆ?**

'ದ ರೈಜ ಆಫ ದ ಮರಾಠಾ ಪಾವರ' ಎಂಬ ಗ್ರಂಥದಲ್ಲಿ ನ್ಯಾ. ಮಹಾದೇವ ಗೋವಿಂದ ರಾನಡೆಯವರು ಮರಾಠಾ ಆಡಳಿತದ ಉದಯದ ಹಿನ್ನೆಲೆಯನ್ನು ವಿಸ್ತಾರವಾಗಿ ಮಂಡಿಸಿದರು. ಮರಾಠಿ ಆಡಳಿತದ ಉದಯವೆಂದರೆ ಅಕಸ್ಮಾತ್ತಾಗಿ ಹೊತ್ತಿಕೊಂಡ ದಳ್ಳುರಿಯಾಗಿರದೆ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿಯ ಅದರ ಸಿದ್ಧತೆ ಸಾಕಷ್ಟು ಕಾಲ ಮಹಾರಾಷ್ಟ್ರದಲ್ಲಿ ನಡೆದಿತ್ತು ಎಂಬದನ್ನು ಅವರು ಪ್ರತಿಪಾದಿಸಿದರು.

ಇತಿಹಾಸಲೇಖನ, ಭಾಷಾಶಾಸ್ತ್ರ, ವ್ಯುತ್ಪತ್ತಿ, ವ್ಯಾಕರಣ ಇತ್ಯಾದಿ ಅನೇಕ ವಿಷಯಗಳ ಮೇಲೆ ಮೂಲಭೂತ ಸಂಶೋಧನೆ ಮಾಡುವ ಮತ್ತು ಮರಾಠಿ ಭಾಷೆಯಲ್ಲಿ ಲೇಖನ ಮಾಡುವ ಇತಿಹಾಸಕಾರರೆಂದು ರಾಜವಾಡೆ ಪರಿಚಿತರಾಗಿದ್ದಾರೆ. ನಮ್ಮ ಇತಿಹಾಸವನ್ನು ನಾವು ಬರೆಯಬೇಕು ಎಂಬುದನ್ನು ಅವರು ಸಮರ್ಥಿಸಿದರು. 'ಮರಾಠರ ಇತಿಹಾಸದ ಸಾಧನಗಳು' ಎಂಬ ಶೀರ್ಷಕವಿರುವ ಗ್ರಂಥದ 22 ಸಂಪುಟಗಳನ್ನು ಅವರು ಸಂಪಾದಿಸಿದರು. ಅದರಲ್ಲಿಯ ಅವರ ಪ್ರಸ್ತಾವನೆಗಳು ಅತ್ಯಂತ ಅಭ್ಯಾಸಪೂರ್ಣವಾಗಿವೆ. ''ಇತಿಹಾಸವೆಂದರೆ ಭೂತಕಾಲೀನ ಸಮಾಜದ ಸರ್ವಾಂಗೀಣ ಸಮಗ್ರ ಜೀವನದರ್ಶನ. ಕೇವಲ ರಾಜಕೀಯ ಸ್ಥಿತ್ಯಂತರಗಳು, ಅಧಿಕಾರ ಪಡೆಯಲು ಮಾಡುವ ಕಾರಸ್ಥಾನಗಳು ಹಾಗೂ ಯುದ್ಧಗಳ ವೃತ್ತಾಂತವಲ್ಲ'', ಎಂಬುದು ಅವರ ಅಭಿಪ್ರಾಯವಾಗಿತ್ತು. ಕೇವಲ ವಿಶ್ವಾಸಾರ್ಹ ಕಾಗದ ಪತ್ರಗಳ ಆಧಾರದಿಂದ ಇತಿಹಾಸವನ್ನು ಬರೆಯಬೇಕು, ಎಂಬುದು ಅವರ ಆಗ್ರಹವಾಗಿತ್ತು.



ವಿ. ಕಾ. ರಾಜವಾಡೆ

**ಗೊತ್ತಿದೆಯೇ ನಿಮಗೆ?**

ಇತಿಹಾಸ ಸಂಶೋಧನೆಯ ಕಾರ್ಯಕ್ಕಾಗಿ ವಿ.ಕಾ. ರಾಜವಾಡೆಯವರು ಪುಣೆಯಲ್ಲಿ 7 ಜುಲೈ 1910ರಂದು ಭಾರತ ಇತಿಹಾಸ ಸಂಶೋಧಕ ಮಂಡಳದ ಸ್ಥಾಪನೆ ಮಾಡಿದರು.

''ಮಾನವನ ಇತಿಹಾಸವು ಕಾಲ ಮತ್ತು ಸ್ಥಳಗಳಿಂದ ಬದ್ಧವಾಗಿರುತ್ತದೆ. ಯಾವುದೇ ಪ್ರಸಂಗದ ವರ್ಣನೆಯನ್ನು ಮಾಡುವುದೆಂದರೆ ಆ ಪ್ರಸಂಗದ ಅಂತಿಮ ವರ್ಣನೆಯನ್ನು ವಿಶಿಷ್ಟಕಾಲ ಮತ್ತು ವಿಶಿಷ್ಟ ಸ್ಥಳಗಳಲ್ಲಿ ಹರಡಿ ತೋರಿಸಬೇಕು.

ಕಾಲ, ಸ್ಥಳ ಮತ್ತು ವ್ಯಕ್ತಿ ಈ ತ್ರಿಕೂಟಗಳ ಹೊಂದಾಣಿಕೆಗೆ ಪ್ರಸಂಗ ಇಲ್ಲವೆ ಐತಿಹಾಸಿಕ ಪ್ರಸಂಗ ಎಂಬ ಸಂಜ್ಞೆಯನ್ನು ನೀಡಬಹುದು.

*(ಅಂತಿಮ ಚಿತ್ರಣ) — **ವಿ.ಕಾ. ರಾಜವಾಡೆ**

ಭಾರತೀಯರು ಬ್ರಿಟಿಷರ ವಿರುದ್ಧ ಮಾಡಿದ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ ನೀಡುವ ಸಲುವಾಗಿ ರಾಷ್ಟ್ರವಾದಿ ಇತಿಹಾಸಲೇಖನದ ಉಪಯೋಗವಾಯಿತು. ಅದರಲ್ಲಿ ಸ್ವಾತಂತ್ರವೀರ ವಿ. ದಾ. ಸಾವರಕರರು ಬರೆದ 'ದ ಇಂಡಿಯನ್ ವಾರ ಆಫ ಇಂಡಿಪೆಂಡನ್ಸ 1857' (1857 ಚೆ 'ಸ್ವಾತಂತ್ರ್ಯ ಸಮರ') ಪುಸ್ತಕವು ವಿಶೇಷ ಮಹತ್ವದ್ದಾಗಿದೆ.




ಸ್ವಾತಂತ್ರ್ಯವೀರ ಸಾವರಕರ

ರಾಷ್ಟ್ರವಾದಿ ಇತಿಹಾಸಲೇಖನದ ಪ್ರಭಾವದಿಂದಾಗಿ ಪ್ರಾದೇಶಿಕ ಇತಿಹಾಸಲೇಖನಕ್ಕೂ ಚಾಲನೆ ದೊರೆಯಿತು. ದಕ್ಷಿಣ ಭಾರತದ ಭೌಗೋಲಿಕ ವೈಶಿಷ್ಟ್ಯಗಳ ಕಡೆಗೆ ಮತ್ತು ಇತಿಹಾಸದ ಕಡೆಗೆ ಸ್ವತಂತ್ರವಾಗಿ ಇತಿಹಾಸಕಾರರ ಗಮನ ಸೆಳೆಯಲಾಯಿತು.

**ಸ್ವಾತಂತ್ರ್ಯೋತ್ತರ ಕಾಲದಲ್ಲಿಯ ಇತಿಹಾಸಲೇಖನ :** ಒಂದೆಡೆ ರಾಜಮನೆತನಗಳ ಇತಿಹಾಸಕ್ಕೆ ಮಹತ್ವ ನೀಡುವ ಇತಿಹಾಸಲೇಖನವನ್ನು ಮಾಡುತ್ತಿರುವಾಗಲೇ ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಇತಿಹಾಸವನ್ನು ಬರೆಯಲು ಆರಂಭ ಮಾಡಲಾಗಿತ್ತು. ವಿಚಾರವಂತರಿಗೆ ಸ್ವಾತಂತ್ರ್ಯೋತ್ತರ ಕಾಲದಲ್ಲಿಯ ಸಮಾಜ, ವಿಜ್ಞಾನ, ಅರ್ಥವ್ಯವಸ್ಥೆ, ರಾಜಕೀಯ ಪ್ರಣಾಲಿ, ಧಾರ್ಮಿಕ ವಿಚಾರ ಸರಣಿ, ಸಾಂಸ್ಕೃತಿಕ ಆಯಾಮ ಇವುಗಳ ಇತಿಹಾಸವನ್ನು ಅಭ್ಯಸಿಸುವ ಅವಶ್ಯಕತೆ ಅನಿಸತೊಡಗಿತು. ಈ ಕಾಲದಲ್ಲಿಯ ಇತಿಹಾಸಲೇಖನದಲ್ಲಿ ಪ್ರಾಮುಖ್ಯವಾಗಿ (1) ಮಾರ್ಕ್ಸವಾದಿ ಇತಿಹಾಸ (2) ವಂಚಿತರ (ಸಬಾಲ್ಟರ್ನ) ಇತಿಹಾಸ ಮತ್ತು (3) ಸ್ತ್ರೀವಾದಿ ಇತಿಹಾಸ ಎಂಬ ಮೂರು ಹೊಸ ವೈಚಾರಿಕ ಪ್ರವಾಹಗಳು ಕಂಡುಬರುತ್ತವೆ.

**ಮಾರ್ಕ್ಸವಾದಿ ಇತಿಹಾಸ :** ಮಾರ್ಕ್ಸವಾದಿ ಇತಿಹಾಸಕಾರರ ಲೇಖನಗಳಲ್ಲಿ ಅರ್ಥವ್ಯವಸ್ಥೆಯಲ್ಲಿಯ ಉತ್ಪಾದನೆಯ ಸಾಧನಗಳು, ಪದ್ಧತಿ ಮತ್ತು ಉತ್ಪಾದನೆಯ ಪ್ರಕ್ರಿಯೆಯಲ್ಲಿಯ ಮಾನವೀ ಸಂಬಂಧ ಇವುಗಳ ವಿಚಾರವು ಕೇಂದ್ರಸ್ಥಾನದಲ್ಲಿತ್ತು. ಸರ್ವಸಾಮಾನ್ಯ ಜನತೆಯ ಮೇಲೆ ಪ್ರತಿಯೊಂದು ಸಾಮಾಜಿಕ ಘಟನೆಯು ಯಾವ ಪರಿಣಾಮ ಬೀರುತ್ತದೆಯೆಂಬುದರ ವಿಶ್ಲೇಷಣೆ ಮಾಡುವುದು ಮಾರ್ಕ್ಸವಾದಿ ಇತಿಹಾಸಲೇಖನದ ಮಹತ್ವದ ಸೂತ್ರವಾಗಿತ್ತು.


ದಾಮೋದರ ಕೋಸಂಬಿ

ಮಾರ್ಕ್ಸವಾದಿ ಇತಿಹಾಸಕಾರರು ಜಾತಿವ್ಯವಸ್ಥೆಯಲ್ಲಿ ಆಗುತ್ತ ಹೋದ ಬದಲಾವಣೆಗಳ ಅಭ್ಯಾಸ ಮಾಡಿದರು. ಭಾರತದಲ್ಲಿ ಮಾರ್ಕ್ಸವಾದಿ ಇತಿಹಾಸಲೇಖನ ಪದ್ಧತಿಯ ಬಳಕೆಯನ್ನು ಪ್ರಭಾವಶೀಲ ರೀತಿಯಿಂದ ಮಾಡಿದ ಇತಿಹಾಸಕಾರರಲ್ಲಿ ದಾಮೋದರ ಧರ್ಮಾನಂದ ಕೋಸಂಬಿ, ಕಾಮ್ರೇಡ ಶ್ರೀಪಾದ ಅಮೃತ ಡಾಂಗೆ, ರಾಮಶರಣ ಶರ್ಮಾ, ಕಾಮ್ರೇಡ ಶರದ ಪಾಟೀಲ ಮುಂತಾದವರ ಕೊಡುಗೆಯು ಮಹತ್ವದ್ದಾಗಿವೆ. ಡಾಂಗೆ ಇವರು ಭಾರತೀಯ ಕಮ್ಯುನಿಸ್ಟ ಪಕ್ಷದ ಸಂಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದರು. ಅವರ 'ಪ್ರಿಮಿಟಿವ್ಹ ಕಮ್ಯುನಿಝುಮ್ ಟು ಸ್ಲೇವ್ಹರಿ' ಎಂಬ ಪುಸ್ತಕವು ಮಾರ್ಕ್ಸವಾದಿ ಇತಿಹಾಸಲೇಖನದ ಉದಾಹರಣೆಯಾಗಿದೆ.

**ವಂಚಿತರ (ಸಬಾಲ್ಟರ್ನ) ಇತಿಹಾಸ :** ವಂಚಿತ ಸಮೂಹಗಳ ಇತಿಹಾಸಲೇಖನದ ಆರಂಭವು ಮಾರ್ಕ್ಸವಾದಿ ಇತಿಹಾಸಲೇಖನದ ಪರಂಪರೆಯೊಳಗಿಂದಲೇ ಆಯಿತೆಂದು ಹೇಳಬಹುದು. ಇತಿಹಾಸಲೇಖನದ ಆರಂಭವನ್ನು ಸಮಾಜದ ಕೆಳಭಾಗದಲ್ಲಿರುವ ಸರ್ವಸಾಮಾನ್ಯ ಜನತೆಯ ಸ್ತರದಿಂದ ಮಾಡಬೇಕು- ಎಂಬ ಕಲ್ಪನೆಯನ್ನು ಮಂಡಿಸುವುದರಲ್ಲಿ ಆ್ಯಂಟೋನಿಯೊ ಗ್ರಾಮಚಿ ಎಂಬ ಇಟಾಲಿಯನ್ ತತ್ವಜ್ಞಾನಿಯ ಸ್ಥಾನ ಮಹತ್ವದ್ದಾಗಿದೆ.

ವಂಚಿತರ ಇತಿಹಾಸವನ್ನು ಬರೆಯುವ ಸಲುವಾಗಿ ಜನಪರಂಪರೆಯನ್ನು ಒಂದು ಮಹತ್ವದ ಸಾಧನವೆಂದು ತಿಳಿಯಲಾಗಿದೆ. ವಂಚಿತರ ಇತಿಹಾಸಕ್ಕೆ ಒಂದು ಮಹತ್ವದ ವಿಚಾರಧಾರೆಯೆಂಬ ಸ್ಥಾನವನ್ನು ದೊರಕಿಸಿಕೊಡುವ ಮಹತ್ವದ ಕಾರ್ಯವನ್ನು ರಣಜಿತ ಗುಹಾ ಎಂಬ ಭಾರತೀಯ ಇತಿಹಾಸಕಾರನು ಮಾಡಿದನು. ಆದರೆ ಅದಕ್ಕೆ ಮೊದಲೇ ಭಾರತದಲ್ಲಿ ವಂಚಿತರ ಇತಿಹಾಸದ ವಿಚಾರವು ಮಹಾತ್ಮಾ ಜ್ಯೋತಿರಾವ ಫುಲೆ ಮತ್ತು ಡಾ. ಬಾಬಾಸಾಹೇಬ ಅಂಬೇಡಕರ ಇವರ ಲೇಖನಗಳಲ್ಲಿ ಉಲ್ಲೇಖ ಕಾಣುತ್ತದೆ.

ಮಹಾತ್ಮಾ ಫುಲೆಯವರು 'ಗುಲಾಮಗಿರಿ' ಎಂಬ ಪುಸ್ತಕದಲ್ಲಿ ಶೂದ್ರಾತಿಶೂದ್ರರ ಇತಿಹಾಸವನ್ನು ಹೊಸದಾಗಿ ಬಿಡಿಸಿ ತೋರಿಸಿದರು. ಧರ್ಮದ ಹೆಸರಿನಲ್ಲಿ ಮಹಿಳೆಯರ, ಶೂದ್ರರ ಮತ್ತು ಅತಿ ಶೂದ್ರರ ಮೇಲಾಗುವ ಶೋಷಣೆಯ ಕಡೆಗೆ ಗಮನ ಸೆಳೆದರು.


ಮಹಾತ್ಮಾ ಜ್ಯೋತಿರಾವ ಫುಲೆ

ಭಾರತದ ಸಾಂಸ್ಕೃತಿಕ ಮತ್ತು ರಾಜಕೀಯ ನಿರ್ಮಾಣದಲ್ಲಿ ದಲಿತ ವರ್ಗದ ಪಾಲು ತುಂಬಾ ದೊಡ್ಡದಾಗಿದೆ. ಭಾರತದ ವಸಾಹತುವಾದಿ ಮತ್ತು ರಾಷ್ಟ್ರವಾದಿ ಇತಿಹಾಸಲೇಖನದಲ್ಲಿ ಅದರ ಕಡೆಗೆ ದುರ್ಲಕ್ಷ ಮಾಡಲಾಯಿತು. ಡಾ. ಬಾಬಾಸಾಹೇಬ ಅಂಬೇಡಕರ ಇವರು ಈ ಸಂಗತಿಯನ್ನು ಕೇಂದ್ರಸ್ಥಾನದಲ್ಲಿಟ್ಟು ಸತತವಾಗಿ ಲೇಖನ ಮಾಡಿದರು. ಅವರು ಮಾಡಿದ ವಿಪುಲ ಲೇಖನಗಳಲ್ಲಿ 'ಹೂ ವೇರ ದ ಶೂದ್ರಜ' ಮತ್ತು 'ದ ಅನ್‌ಟಚೇಬಲ್ಸ್' ಎಂಬ ಗ್ರಂಥಗಳು ವಂಚಿತರ ಇತಿಹಾಸದ ಉದಾಹರಣೆಗಳೆಂದು ಹೇಳಬಹುದು.


ಡಾ. ಬಾಬಾಸಾಹೇಬ ಅಂಬೇಡಕರ

**ಸ್ತ್ರೀವಾದಿ ಇತಿಹಾಸ :** ಭಾರತೀಯ ಇತಿಹಾಸಲೇಖನದ ಕ್ಷೇತ್ರದಲ್ಲಿ ಆರಂಭಕಾಲದಲ್ಲಿ ಪ್ರಾಮುಖ್ಯವಾಗಿ ಪುರುಷ ಅಭ್ಯಾಸಕರು ಕಾರ್ಯನಿರತರಾಗಿರುವುದರಿಂದ ಭಾರತೀಯ ಇತಿಹಾಸದಲ್ಲಿಯ ಸ್ತ್ರೀಯರ ಸ್ಥಾನ ಮತ್ತು ಅವರ ಕಾರ್ಯ ಈ ವಿಷಯವು ತುಲನೆಯಲ್ಲಿ ದುರ್ಲಕ್ಷಿತವಾಗಿತ್ತು. ಅದರ ಮೇಲೆ ಅಧಿಕ ಬೆಳಕು ಚೆಲ್ಲುವುದು ಸ್ತ್ರೀವಾದಿ ಇತಿಹಾಸಕಾರರ ಮುಂದಿನ ಪ್ರಥಮ ಆಹ್ವಾನವಾಗಿತ್ತು. ಅದೇ ರೀತಿ ಸ್ತ್ರೀಯರು ನಿರ್ಮಿಸಿದ ಸಾಹಿತ್ಯದ ಸಂಶೋಧನೆ ಮತ್ತು ಸಂಕಲನೆ ಮಾಡುವುದು ಅವಶ್ಯಕವಾಗಿತ್ತು. ಇತಿಹಾಸದಲ್ಲಿಯ ಸ್ತ್ರೀಯರ

ಸ್ಥಾನಮಾನದ ವಿಚಾರವನ್ನು ಹೊಸದಾಗಿ ಮಾಡುವುದು ಅವಶ್ಯಕವಾಗಿತ್ತು.

ಹತ್ತೊಂಬತ್ತನೆಯ ಶತಮಾನದಲ್ಲಿ ಸ್ತ್ರೀಯರನ್ನು ಕುರಿತು



ತಾರಾಬಾಯಿ ಶಿಂದೆ

ಲೇಖನ ಮಾಡುವ ಲೇಖಕಿಯರಲ್ಲಿ ತಾರಾಬಾಯಿ ಶಿಂದೆಯವರ ಹೆಸರು ಅಗ್ರಭಾಗದಲ್ಲಿದೆ. ಅವರು ಪುರುಷ ಪ್ರಧಾನ ವ್ಯವಸ್ಥೆ ಮತ್ತು ಜಾತಿ ವ್ಯವಸ್ಥೆಗಳನ್ನು ವಿರೋಧಿಸುವ ಲೇಖನ ಮಾಡಿದರು. ಕ್ರಿಸ್ತಶಕ 1882ರಲ್ಲಿ ಪ್ರಕಾಶಿತವಾದ 'ಸ್ತ್ರಿಪುರುಷ ತುಲನಾ' ಎಂಬ ಅವರ ಪುಸ್ತಕವನ್ನು ಭಾರತದಲ್ಲಿಯ ಪ್ರಥಮ ಸ್ತ್ರೀವಾದಿ ಲೇಖನವೆಂದು ತಿಳಿಯಲಾಗುತ್ತದೆ. ಕ್ರಿಸ್ತಶಕ 1888ರಲ್ಲಿ ಪಂಡಿತಾ ರಮಾಬಾಯಿಯವರ 'ದ ಹಾಯ್ ಕಾಸ್ಟ ಹಿಂದೂ ವುಮನ' ಎಂಬ ಪುಸ್ತಕವು ಪ್ರಕಾಶಿತವಾಯಿತು.

ಸ್ವಾತಂತ್ರ್ಯೋತ್ತರ ಕಾಲದಲ್ಲಾದ ಲೇಖನವು ಮನೆಯಲ್ಲಿ ಮತ್ತು ಕೆಲಸ ಮಾಡುವ ಸ್ಥಳಗಳಲ್ಲಿ ಸ್ತ್ರೀಯರನ್ನು ನಡೆಸಿಕೊಳ್ಳುವ ರೀತಿ, ಅವರ ರಾಜಕೀಯ ಸಮಾನತೆಯ ಹಕ್ಕು ಇತ್ಯಾದಿ ವಿಷಯಗಳ ಮೇಲೆ ಕೇಂದ್ರಿತವಾದದ್ದು ಕಂಡು ಬರುತ್ತದೆ. ಇತ್ತೀಚಿನ ಕಾಲದಲ್ಲಿ ಪ್ರಸಿದ್ಧವಾದ ಸ್ತ್ರೀವಾದಿ ಲೇಖನದಲ್ಲಿ ಮೀರಾ ಕೋಸಂಬಿಯವರ 'ಕ್ರಾಸಿಂಗ ಥ್ರೆಶೋಲ್ಡ್ಸ : ಫೆಮಿನಿಸ್ಟ ಎಸ್ಸೇಜ ಇನ್ ಸೋಶಲ ಹಿಸ್ಟರಿ' ಎಂಬ ಪುಸ್ತಕದ ಉಲ್ಲೇಖ ಮಾಡಬಹುದು. ಅದರಲ್ಲಿ ಮಹಾರಾಷ್ಟ್ರದಲ್ಲಿಯ ಪಂಡಿತಾ ರಮಾಬಾಯಿ, ಭಾರತದಲ್ಲಿಯ ಪ್ರಥಮ ಕಾರ್ಯನಿರತ ಸ್ತ್ರೀ ಡಾಕ್ಟರರಾದ ರಖಮಾಬಾಯಿ ಮುಂತಾದ ಸ್ತ್ರೀಯರ ಜೀವನದ ಮೇಲಿನ ನಿಬಂಧಗಳಿವೆ. ಮಹಾರಾಷ್ಟ್ರದಲ್ಲಿ ದಲಿತ ಸ್ತ್ರೀಯರ ದೃಷ್ಟಿಕೋನದಲ್ಲಿ ಸಾಮಾಜಿಕ ವರ್ಗ, ಜಾತಿ ಇತ್ಯಾದಿ ವಿಷಯಗಳನ್ನು ಕುರಿತು ಲೇಖನ ಮಾಡಲಾಯಿತು. ಅವುಗಳಲ್ಲಿ ಶರ್ಮಿಲಾ ರೇಗೆಯವರ ಲೇಖನ ಮಹತ್ವದ್ದಾಗಿದೆ. 'ರೈಟಿಂಗ ಕಾಸ್ಟ, ರೈಟಿಂಗ ಜೆಂಡರ : ರೀಡಿಂಗ ದಲಿತ ವುಮೆನ್ಸ ಟೆಸ್ಟಿಮೋನೀಜ' ಇದರಲ್ಲಿ ದಲಿತ ಮಹಿಳೆಯರ ಆತ್ಮಚರಿತ್ರೆಯನ್ನು ಕುರಿತು ಅವರು ಬರೆದ ನಿಬಂಧಗಳ ಸಂಕಲನೆಯಿದೆ.

ವಿಶಿಷ್ಟ ವಿಚಾರ ಪ್ರಣಾಲಿಯ ಆಶ್ರಯ ಪಡೆಯದೆ ಇತಿಹಾಸ ಬರೆಯುವವರಲ್ಲಿ ಸರ ಯದುನಾಥ ಸರಕಾರ, ಸುರೇಂದ್ರನಾಥ ಸೇನ, ರಿಯಾಸತಕಾರರಾದ ಗೋ. ಸ. ಸರದೇಸಾಯಿ, ತ್ರ್ಯಂಬಕ ಶಂಕರ ಶೇಜವಲಕರ – ಇವರ ಉಲ್ಲೇಖ ಮಾಡಬೇಕಾಗುತ್ತದೆ.



**ಗೊತ್ತಿದೆಯೇ ನಿಮಗೆ?**

ಗೋವಿದ ಸಖಾರಾಮ ಸರದೇಸಾಯಿಯವರು 'ಮರಾಠಿ ರಿಯಾಸತ' ಪ್ರಕಟಿಸಿ ಮರಾಠಿ ಇತಿಹಾಸಲೇಖನ ಕ್ಷೇತ್ರದಲ್ಲಿ ಮಹಾನ್ ಕಾರ್ಯವನ್ನು ಮಾಡಿದರು. ಅವರ ಈ ಕಾರ್ಯವು ಎಷ್ಟು ಜನಪ್ರಿಯವಾಯಿತೆಂದರೆ ಸಮಾಜವು ಅವರನ್ನು 'ರಿಯಾಸತಕಾರ' ಎಂಬ ಹೆಸರಿನಿಂದ ಗುರುತಿಸತೊಡಗಿತು. ಅವರು ಮರಾಠರ ಸಮಗ್ರ ಇತಿಹಾಸವನ್ನು ಅನೇಕ ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ.

ಇತ್ತೀಚಿನ ಕಾಲದಲ್ಲಿ ಯ.ದಿ. ಫಡಕೆ, ರಾಮಚಂದ್ರ ಗುಹಾ ಮುಂತಾದ ಸಂಶೋಧಕರು ಆಧುನಿಕ ಇತಿಹಾಸಲೇಖನದಲ್ಲಿ ಮಹತ್ವದ ಕಾರ್ಯವನ್ನು ಮಾಡಿದ್ದಾರೆ.

ಭಾರತೀಯ ಇತಿಹಾಸಲೇಖನದ ಮೇಲೆ ಭಾರತದಲ್ಲಿ ಉದಯವಾದ ಸಾಮಾಜಿಕ ಮತ್ತು ರಾಜಕೀಯ ಚಳವಳಿಗಳ ಪ್ರಭಾವವಿತ್ತು. ಅವುಗಳ ಜೊತೆಯಲ್ಲಿಯೇ ಭಾರತೀಯ ಇತಿಹಾಲೇಖನದ ಪರಂಪರೆಯು ಸ್ವತಂತ್ರವಾಗಿ ಮತ್ತು ಸಮೃದ್ಧ ರೀತಿಯಿಂದ ವಿಕಸಿತವಾಗುತ್ತ ಹೋದದ್ದು ಕಂಡುಬರುತ್ತದೆ.



## ಅಭ್ಯಾಸ

1 **(ಅ) ಕೊಟ್ಟ ಪರ್ಯಾಯಗಳಲ್ಲಿ ಯೋಗ್ಯ ಪರ್ಯಾಯವನ್ನು ಆಯ್ದು ವಿಧಾನಗಳನ್ನು ಪೂರ್ಣ ಮಾಡಿರಿ.**

(1) .......... ಇವರು ಭಾರತೀಯ ಪುರಾತತ್ವ ಸರ್ವೇಕ್ಷಣ ವಿಭಾಗದ ಪ್ರಥಮ ಮುಖ್ಯ ಸಂಚಾಲಕರಾಗಿದ್ದರು.

(ಅ) ಅಲೆಕ್ಝಾಂಡರ ಕನಿಂಗ್ಹ್ಯಾಮ
(ಬ) ವಿಲ್ಯಮ ಜೋನ್ಸ
(ಕ) ಜಾನ ಮಾರ್ಶಲ
(ಡ) ಫ್ರೆಡರಿಕ್ ಮ್ಯಾಕ್ಸಮ್ಯುಲರ

(2) .......... ಇವನು ಹಿತೋಪದೇಶ ಎಂಬ ಸಂಸ್ಕೃತ ಗ್ರಂಥವನ್ನು ಜರ್ಮನ್ ಭಾಷೆಯಲ್ಲಿ ಅನುವಾದ ಮಾಡಿದನು.

(ಅ) ಜೇಮ್ಸ ಮಿಲ
(ಬ) ಫ್ರೆಡರಿಕ್ ಮ್ಯಾಕ್ಸಮ್ಯುಲರ
(ಕ) ಮೌಂಟ ಸ್ಟುವರ್ಟ್ ಎಲ್ಫಿನ್‌ಸ್ಟನ್
(ಡ) ಜಾನ ಮಾರ್ಶಲ

(ಬ) ಕೆಳಗಿನವುಗಳಲ್ಲಿ ತಪ್ಪಾದ ಜೊತೆಯನ್ನು ಗುರುತಿಸಿ ಬರೆಯಿರಿ.

(1) ಹೂ ವೇರ ದ ಶೂದ್ರಾಜ - ವಂಚಿತರ ಇತಿಹಾಸ

(2) ಸ್ತ್ರೀ-ಪುರುಷ ತುಲನಾ - ಸ್ತ್ರೀವಾದಿ ಲೇಖನ

(3) ದ ಇಂಡಿಯನ್ ವಾರ ಆಫ ಇಂಡಿಪೆಂಡನ್ಸ 1857 ಮಾರ್ಕ್ಸವಾದಿ ಇತಿಹಾಸ

(4) ಗ್ರ್ಯಾಂಟ ಡಫ್ - ವಸಾಹತುವಾದಿ ಇತಿಹಾಸ

2. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.

(1) ಪ್ರಾದೇಶಿಕ ಇತಿಹಾಸಲೇಖನಕ್ಕೆ ಚಾಲನೆ ದೊರೆಯಿತು

(2) ಬಖರ ಇದು ಐತಿಹಾಸಿಕ ಸಾಹಿತ್ಯದಲ್ಲಿಯ ಒಂದು ಮಹತ್ವದ ಪ್ರಕಾರವಾಗಿದೆ.

3. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರ ಉತ್ತರ ಬರೆಯಿರಿ.


(1) ಮಾರ್ಕ್ಸವಾದಿ ಇತಿಹಾಸಲೇಖನ ಎಂದರೇನು?

(2) ಇತಿಹಾಸಾಚಾರ್ಯ ವಿ.ಕಾ. ರಾಜವಾಡೆಯವರ ಇತಿಹಾಸಲೇಖನದಲ್ಲಿಯ ಕೊಡುಗೆಯನ್ನು ಸ್ಪಷ್ಟಪಡಿಸಿರಿ.

4. (ಅ) ಕೆಳಗಿನ ಕೋಷ್ಟಕವನ್ನು ಪೂರ್ಣಮಾಡಿರಿ.

| | |
|---|---|
| ಜೇಮ್ಸ ಮಿಲ್ | ದ ಬ್ರಿಟಿಷ ಹಿಸ್ಟರಿ ಆಫ ಇಂಡಿಯಾ |
| ಜೇಮ್ಸ ಗ್ರ್ಯಾಂಟ್ ಡಫ್ | ............................. |
| ................. | ದ ಹಿಸ್ಟರಿ ಆಫ ಇಂಡಿಯಾ |
| ಶ್ರೀ ಅ. ಡಾಂಗೆ | ............................. |
| ................. | ಹೂ ವೇರ ದ ಶೂದ್ರಾಜ |

(ಬ) ಕೆಳಗಿನ ಕಲ್ಪನಾಚಿತ್ರವನ್ನು ಪೂರ್ಣಮಾಡಿರಿ.




5. ಟಿಪ್ಪಣಿ ಬರೆಯಿರಿ.

(1) ಪೌರ್ವಾತ್ಯ ಇತಿಹಾಸಲೇಖನ.

(2) ರಾಷ್ಟ್ರವಾದಿ ಇತಿಹಾಸಲೇಖನ.

(3) ವಂಚಿತರ ಇತಿಹಾಸ.

**ಉಪಕ್ರಮ**

ಪಾಠದಲ್ಲಿ ಉಲ್ಲೇಖಿಸಲಾದ ವಿವಿಧ ಇತಿಹಾಸಕಾರರ ಕಾರ್ಯಗಳ ಮಾಹಿತಿಯನ್ನು ನೀಡುವ ಸಚಿತ್ರ ಹಸ್ತಲಿಖಿತವನ್ನು ಇಂಟರ್ನೆಟ್ ಸಹಾಯದಿಂದ ತಯಾರಿಸಿರಿ.

4GH7JN

# 3. ಅನ್ವಯಿಕ ಇತಿಹಾಸ

3.1 ಅನ್ವಯಿಕ ಇತಿಹಾಸ ಎಂದರೇನು?
3.2 ಅನ್ವಯಿಕ ಇತಿಹಾಸ ಮತ್ತು ವಿವಿಧ ವಿಷಯಗಳಲ್ಲಿಯ ಸಂಶೋಧನೆ
3.3. ಅನ್ವಯಿಕ ಇತಿಹಾಸ ಮತ್ತು ವರ್ತಮಾನ ಕಾಲ
3.4 ಸಾಂಸ್ಕೃತಿಕ ಹಾಗೂ ನೈಸರ್ಗಿಕ ವಿಶ್ವಪರಂಪರೆಯ ವ್ಯವಸ್ಥಾಪನೆ.
3.5 ಸಂಬಂಧಿತ ವ್ಯಾವಸಾಯಿಕ ಕ್ಷೇತ್ರಗಳು.

## 3.1 ಅನ್ವಯಿಕ ಇತಿಹಾಸ ಎಂದರೇನು?

ಅನ್ವಯಿಕ ಇತಿಹಾಸ ಈ ಸಂಜ್ಞೆಗಾಗಿ 'ಜನರಿಗಾಗಿ ಇತಿಹಾಸ' (ಪಬ್ಲಿಕ್ ಹಿಸ್ಟರಿ) ಎಂಬ ಪರ್ಯಾಯಿ ಶಬ್ದ ಪ್ರಯೋಗವು ಪ್ರಚಾರದಲ್ಲಿದೆ. ಇತಿಹಾಸದ ಮೂಲಕ ಭೂತಕಾಲದಲ್ಲಿಯ ಘಟನೆಗಳ ವಿಷಯದ ಜ್ಞಾನದ ಉಪಯೋಗವು ವರ್ತಮಾನ ಮತ್ತು ಭವಿಷತ್ಕಾಲಗಳಲ್ಲಿ ಸರ್ವ ಜನರಿಗೆ ಹೇಗೆ ಆಗಬಹುದು. ಎಂಬುದರ ವಿಚಾರವನ್ನು ಅನ್ವಯಿಕ ಇತಿಹಾಸ ಈ ವಿಷಯದ ಮೂಲಕ ಮಾಡಲಾಗುತ್ತದೆ. ವರ್ತಮಾನದಲ್ಲಿಯ ಸಾಮಾಜಿಕ ಆಹ್ವಾನಗಳ ಮೇಲೆ ಉಪಾಯಯೋಜನೆ ಮಾಡುವದು, ಸಾಮಾಜಿಕ ಉಪಯುಕ್ತತೆಯ ನಿರ್ಣಯಗಳನ್ನು ಕೈಗೊಳ್ಳುವುದು ಇತ್ಯಾದಿ ಸಂಗತಿಗಳಿಗಾಗಿ ಹಿಂದೆ ಆಗಿ ಹೋದ ಘಟನೆಗಳ ವಿಶ್ಲೇಷಣೆಯು ದಿಶಾದರ್ಶಕವಾಗುತ್ತದೆ. ಅದಕ್ಕಾಗಿ ಇತಿಹಾಸದ ಜ್ಞಾನ ಅವಶ್ಯಕವಾಗಿರುತ್ತದೆ.

**ಅರಿತು ಕೊಳ್ಳಿರಿ**

**ಜನರಿಗಾಗಿ ಇತಿಹಾಸ:** ಇತಿಹಾಸ ವಿಷಯವನ್ನು ಕುರಿತು ಜನರ ಮನದಲ್ಲಿ ಅನೇಕ ತಪ್ಪು ತಿಳುವಳಿಕೆ ಗಳಿರುತ್ತವೆ. ಉದಾ. ಇತಿಹಾಸ ವಿಷಯವು ಕೇವಲ ಇತಿಹಾಸಕಾರರ ಸಲುವಾಗಿ ಮತ್ತು ಇತಿಹಾಸ ವಿಷಯದ ಅಭ್ಯಾಸ ಮಾಡಲಿಚ್ಛಿಸುವ ವಿದ್ಯಾರ್ಥಿಗಳಿಗಾಗಿ ಇರುತ್ತದೆ. ದೈನಂದಿನ ಜೀವನದಲ್ಲಿ ಇತಿಹಾಸದಂತಹ ವಿಷಯಗಳ ಉಪಯೋಗವೇನೂ ಇರುವುದಿಲ್ಲ, ಇತಿಹಾಸದಂತಹ ವಿಷಯವನ್ನು ಆರ್ಥಿಕ ದೃಷ್ಟಿಯಿಂದ ಉತ್ಪಾದಕ ಕ್ಷೇತ್ರಗಳೊಂದಿಗೆ ಜೋಡಿಸಲಾಗುವುದಿಲ್ಲ, ಇತ್ಯಾದಿ.

ಇಂಥ ತಪ್ಪು ತಿಳುವಳಿಕೆಗಳನ್ನು ಖಂಡಿಸಿ ಇತಿಹಾಸವನ್ನು ಜನತೆಯ ವರ್ತಮಾನದಲ್ಲಿಯ ಬದುಕಿನೊಂದಿಗೆ ಜೋಡಿಸುವ ಕ್ಷೇತ್ರವೆಂದರೆ 'ಜನರಿಗಾಗಿ ಇತಿಹಾಸ'

ವಿದೇಶಗಳಲ್ಲಿಯ ಅನೇಕ ವಿಶ್ವವಿದ್ಯಾಲಯಗಳಲ್ಲಿ 'ಜನರಿಗಾಗಿ ಇತಿಹಾಸ-ಈ ವಿಷಯದಲ್ಲಿಯ-ಅಭ್ಯಾಸ ಕ್ರಮವನ್ನು ಕಲಿಸಲಾಗುತ್ತದೆ. ಭಾರತದ ಬೆಂಗಳೂರಿನಲ್ಲಿ 'ಸೃಷ್ಟಿ ಇನ್‌ಸ್ಟಿಟ್ಯೂಟ್ ಆಫ್ ಆರ್ಟ ಡಿಝೈನ ಆ್ಯಂಡ ಟೆಕ್ನಾಲಾಜಿ' ಎಂಬ ಸಂಸ್ಥೆಯಲ್ಲಿ 'ಸೆಂಟರ ಫಾರ ಪಬ್ಲಿಕ್ ಹಿಸ್ಟರಿ' ಎಂಬ ಸ್ವತಂತ್ರ ವಿಭಾಗವಿದೆ. ಅಲ್ಲಿ ಈ ವಿಷಯದಲ್ಲಿಯ ಪ್ರಾಜೆಕ್ಟ ಮತ್ತು ಸಂಶೋಧನೆಯ ಕಾರ್ಯ ನಡೆಯುತ್ತದೆ.

ಅನ್ವಯಿಕ ಇತಿಹಾಸದ ಕ್ಷೇತ್ರದಲ್ಲಿ ಕೇವಲ ತಜ್ಞ ವ್ಯಕ್ತಿಗಳದ್ದಷ್ಟೇ ಅಲ್ಲ, ಅನೇಕ ರೀತಿಯಿಂದ ಸರ್ವಸಾಮಾನ್ಯ ಜನರ ಸಹಭಾಗವಿರಬಲ್ಲದು. ಸಂಗ್ರಹಾಲಯಗಳು ಮತ್ತು ಪ್ರಾಚೀನ ಸ್ಥಳಗಳಿಗೆ ಭೇಟಿ ನೀಡುವ ಪ್ರವಾಸಿಕ ಎಂಬ ಅರ್ಥದಲ್ಲಿ ಅವರ ಸಹಭಾಗಿತ್ವವು ಮಹತ್ವದ್ದಾಗಿರುತ್ತದೆ. ಪರ್ಯಟನದಿಂದಾಗಿ ಜನರಲ್ಲಿ ಇತಿಹಾಸ ವಿಷಯದ ಅಭಿರುಚಿ ಹೆಚ್ಚುತ್ತ ಹೋಗುತ್ತದೆ. ಸಮಾಜ ಮನದಲ್ಲಿ ಇತಿಹಾಸದ ಅರಿವು ನಿರ್ಮಾಣವಾಗುತ್ತದೆ. ಅದರಂತೆ ಅವರು ತಮ್ಮ ಪಟ್ಟಣಗಳಲ್ಲಿ ಅಥವಾ ಹಳ್ಳಿಗಳಲ್ಲಿರುವ ಪ್ರಾಚೀನ ಸ್ಥಳಗಳ ಸಂರಕ್ಷಣೆ ಮತ್ತು ಸಂವರ್ಧನೆಯ ಯೋಜನೆಗಳಲ್ಲಿಯೂ ಭಾಗವಹಿಸಬಲ್ಲರು.

## 3.2 ಅನ್ವಯಿಕ ಇತಿಹಾಸ ಮತ್ತು ವಿವಿಧ ವಿಷಯಗಳಲ್ಲಿಯ ಸಂಶೋಧನೆ:

ಇತಿಹಾಸವು ಭೂತಕಾಲದಲ್ಲಿ ಸಂಭವಿಸಿದ ಘಟನೆಗಳಿಗೆ ಸಂಬಂಧಿತವಾಗಿರುತ್ತದೆ. ವರ್ತಮಾನದಲ್ಲಿ ಕಂಡುಬರುವ ಮಾನವೀ ಜೀವನದಲ್ಲಿಯ ಬದಲಾವಣೆಯು ಈ ಘಟನೆಗಳ ಮೇಲೆಯೇ ಅವಲಂಬಿಸಿರುತ್ತದೆ. ಈ ಘಟನೆಗಳು ರಾಜಕಾರಣ ಸಾಮಾಜಿಕ-ಧಾರ್ಮಿಕ ಸಂಘಟನೆ, ತತ್ವಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಸಂಭವಿಸಿರುತ್ತವೆ. ಪ್ರತಿಯೊಂದು ಕ್ಷೇತ್ರದಲ್ಲಿಯ ಜ್ಞಾನ ಸಮೂಹಕ್ಕೆ ಸ್ವತಂತ್ರ ಇತಿಹಾಸವಿರುತ್ತದೆ. ಆಯಾ ಕ್ಷೇತ್ರಗಳಲ್ಲಿಯ ಮುಂದಿನ ಪ್ರಗತಿಯ ದಿಶೆಯು ಈ ಜ್ಞಾನ ಸಮೂಹದ ಸ್ಥಿತಿಯ ಮೇಲೆ ಅವಲಂಬಿಸಿರುತ್ತದೆ. ಈ ರೀತಿ ಅನೇಕ ವಿಷಯಗಳ ಸಂಶೋಧನೆಯಲ್ಲಿ ಇತಿಹಾಸದ ಸಂಶೋಧನ ಪದ್ಧತಿಯು ಉಪಯುಕ್ತವಾಗುತ್ತದೆ. ಉದಾಹರಣೆಗಾಗಿ,

**1. ತತ್ವಜ್ಞಾನ :** ವಿವಿಧ ವಿಚಾರಧಾರೆಯ ಉಗಮ, ಅದರ ಹಿಂದಿನ ವೈಚಾರಿಕ ಪರಂಪರೆ ಮತ್ತು ಆ ವಿಚಾರ ಧಾರೆಯ ಪ್ರಗತಿಯ ಇತಿಹಾಸವನ್ನು ತಿಳಿದುಕೊಳ್ಳುವುದಕ್ಕಾಗಿ ತತ್ವಜ್ಞಾನದ ಇತಿಹಾಸವನ್ನು ಅಭ್ಯಸಿಸಬೇಕಾಗುತ್ತದೆ. ತತ್ವ

ಜ್ಞಾನವನ್ನು ತಿಳಿದುಕೊಳ್ಳುವಾಗ ಆ ತತ್ವಜ್ಞಾನವು ಯಾವ ಭಾಷೆಯಲ್ಲಿ ವ್ಯಕ್ತವಾಗಿದೆಯೋ ಆ ಭಾಷೆಯ ಇತಿಹಾಸದ ಉಪಯೋಗವೂ ಆಗುತ್ತದೆ.

**2. ವಿಜ್ಞಾನ:** ವೈಜ್ಞಾನಿಕ ಶೋಧ ಹಾಗೂ ಸಿದ್ಧಾಂತ ಇವುಗಳ ಕಾಲಕ್ರಮ ಮತ್ತು ಆ ಶೋಧನೆಯ ಹಿಂದಿನ ಕಾರಣ ಪರಂಪರೆಯ ಸರಪಳಿಯನ್ನು ತಿಳಿದುಕೊಳ್ಳುವದು. ಅದರ ಸಲುವಾಗಿ ವಿಜ್ಞಾನದ ಇತಿಹಾಸವನ್ನು ಅಭ್ಯಸಿಸಬೇಕಾಗುತ್ತದೆ. ಅವಶ್ಯಕತೆಯು ಶೋಧನೆಯ ಜನನಿಯಾಗಿದೆ ಎಂದು ಹೇಳಲಾಗುತ್ತದೆ. ಅನೇಕಸಲ ವೈಜ್ಞಾನಿಕ ಶೋಧವು ಮಾನವೀ ಅವಶ್ಯಕತೆಯನ್ನು ಪೂರೈಸುವ ಹಾಗೂ ಜಿಜ್ಞಾಸೆಯನ್ನು ಈಡೇರಿಸುವ ಪ್ರಯತ್ನ ದೊಳಗಿಂದ ಆಗಿರುತ್ತದೆ. ಅದರ ಸಲುವಾಗಿ ಮೊದಲು ಅಸ್ತಿತ್ವದಲ್ಲಿದ್ದ ವೈಜ್ಞಾನಿಕ ಜ್ಞಾನದ ಉಪಯೋಗ ಮಾಡಲಾಗುತ್ತದೆ. ಈ ಶೋಧನೆಯ ಹಿಂದಿನ ಕಾರಣ ಪರಂಪರೆ, ಮತ್ತು ಕಾಲಕ್ರಮವನ್ನು ತಿಳಿದುಕೊಳ್ಳುವ ಸಲುವಾಗಿ ವಿಜ್ಞಾನದ ಇತಿಹಾಸದ ಜ್ಞಾನವು ಉಪಯುಕ್ತವಾಗುತ್ತದೆ.

**3. ತಂತ್ರಜ್ಞಾನ:** ಕೃಷಿ ಉತ್ಪಾದನೆ, ವಸ್ತುಗಳ ಉತ್ಪಾದನೆ, ವಾಸ್ತುಶಿಲ್ಪ, ಯಂತ್ರವಿದ್ಯೆ, ಮುಂತಾದವುಗಳಲ್ಲಿ ಆಗುತ್ತಹೋದ ಬದಲಾವಣೆಗಳು ಮತ್ತು ಅದರ ಹಿಂದಿನ ಕಾರಣ ಪರಂಪರೆಯ ಸರಪಳಿಯನ್ನು ತಿಳಿದುಕೊಳ್ಳುವುದು. ಅದರ ಸಲುವಾಗಿ ತಂತ್ರಜ್ಞಾನದ ಇತಿಹಾಸವನ್ನು ಅಭ್ಯಸಿಸಬೇಕಾಗುತ್ತದೆ. ವೈಜ್ಞಾನಿಕ ಸಂಶೋಧನೆ ಹಾಗೂ ತಂತ್ರಜ್ಞಾನದಲ್ಲಿಯ ಪ್ರಗತಿ ಪರಸ್ಪರಾವಲಂಬಿಯಾಗಿರುತ್ತವೆ. ಮಾನವನ ಉತ್ಕ್ರಾಂತಿಯ ಪ್ರಗತಿಯಲ್ಲಿ ಕಲ್ಲಿನ ಆಯುಧಗಳನ್ನು ತಯಾರಿಸುವುದರಿಂದ ಹಿಡಿದು ಕೃಷಿ ಉತ್ಪಾದನೆಯ ವಿಕಾಸದವರೆಗೆ ಅವನಿಗೆ ತಿಳಿದ ವಿಜ್ಞಾನ ಮತ್ತು ಅದರ ಮೇಲೆ ಆಧಾರಿತವಾದ ತಂತ್ರ ಜ್ಞಾನಗಳು ಅತ್ಯಂತ ಮಹತ್ವದ್ದಾಗಿದ್ದವು. ನಂತರ ವಿಜ್ಞಾನದ ಪ್ರಗತಿಯಿಂದಾಗಿ ಉತ್ಪಾದನೆಯ ಪ್ರಕ್ರಿಯೆಗಳ ಯಾಂತ್ರಿಕೀ ಕರಣವಾಗುತ್ತ ಹೋಯಿತು. ಅದು ಹೇಗೆ ಆಗುತ್ತ ಹೋಯಿತು, ವಿಜ್ಞಾನ ಮತ್ತು ತಂತ್ರಜ್ಞಾನಗಳು ಹೇಗೆ ಯಾವಾಗಲೂ ಪರಸ್ಪರಾವಲಂಬಿಯಾಗಿರುತ್ತವೆ ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ತಂತ್ರಜ್ಞಾನದ ಇತಿಹಾಸವನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿರುತ್ತದೆ.

**4. ಉದ್ಯೋಗಧಂದೆ ಹಾಗೂ ವ್ಯಾಪಾರ:** ಉದ್ಯೋಗಧಂದೆ ಮತ್ತು ವ್ಯಾಪಾರಗಳಿಂದಾಗಿ ಮಾನವೀ ಸಮಾಜದಲ್ಲಿಯ ಪರಸ್ಪರ ವ್ಯವಹಾರದ ಕ್ಷೇತ್ರವು ವಿಸ್ತಾರಹೊಂದುತ್ತದೆ. ಅದರಿಂದಾಗಿ ಸಾಂಸ್ಕೃತಿಕ ಸಂಬಂಧಗಳ ಜಾಲವೂ ಸತತವಾಗಿ ವಿಕಸಿತವಾಗುತ್ತಿರುತ್ತದೆ. ಇದು ಉದ್ಯೋಗಧಂದೆ ಮತ್ತು ವ್ಯಾಪಾರಗಳ ವ್ಯವಸ್ಥಾಪನೆಯ ಒಂದು ಭಾಗವಾಗಿರುತ್ತದೆ ಅವುಗಳ ಇತಿಹಾಸವನ್ನು ತಿಳಿದುಕೊಳ್ಳುವುದು ಮಹತ್ವದ್ದಾಗಿರುತ್ತದೆ. ಬಜಾರ ಮತ್ತು ವ್ಯಾಪಾರ ಇವುಗಳ ಸ್ವರೂಪವು ಬದಲಾಗುತ್ತ ಹೋಯಿತು. ಇವೆಲ್ಲವುಗಳ ಹಿಂದಿನ ಮಾನವೀ ಸಂಬಂಧಗಳ ಸ್ವರೂಪ ಮತ್ತು ಸಮಾಜರಚನೆ ಬದಲಾಗುತ್ತ ಹೋದವು. ಇದೆಲ್ಲ ಪ್ರವಾಸವು ತಿಳಿಯಬೇಕಾದರೆ ಸಾಂಸ್ಕೃತಿಕ ನಿರ್ಮಾಣ, ಸಾಮಾಜಿಕ ರಚನೆ, ಆರ್ಥಿಕ ವ್ಯವಸ್ಥೆ ಇತ್ಯಾದಿಗಳ ಇತಿಹಾಸವನ್ನು ಅಭ್ಯಸಿಸಬೇಕಾಗುತ್ತದೆ.

**5. ವ್ಯವಸ್ಥಾಪನಾಶಾಸ್ತ್ರ:** ಉತ್ಪಾದನೆಯ ಸಾಧನಗಳು, ಮಾನವ ಸಂಪನ್ಮೂಲ ಮತ್ತು ಉತ್ಪಾದನೆಯ ವಿವಿಧ ಪ್ರಕ್ರಿಯೆಗಳು, ಮಾರುಕಟ್ಟೆ ಮತ್ತು ಮಾರಾಟ ಇವುಗಳ ವ್ಯವಸ್ಥಾಪನೆಯ ಸರಪಳಿಯಲ್ಲಿ ಅವುಗಳಿಗೆ ಸಂಬಂಧಿತ ಭೂತಕಾಲದಲ್ಲಿಯ ಪದ್ಧತಿ ಹೇಗಿತ್ತು ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿರುತ್ತದೆ. ಈ ಸರಪಳಿಯಲ್ಲಿ ತೊಡಗಿದ ವಿವಿಧ ಸ್ತರಗಳಲ್ಲಿಯ ಜನರ ಪರಂಪರಾಗತ ಮಾನಸಿಕತೆಯನ್ನು ತಿಳಿದುಕೊಳ್ಳುವ ಸಲುವಾಗಿ ಇವೆಲ್ಲವುಗಳು ಯಾವ ಬೇರೆ ಬೇರೆ ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆಗಳ ಸಂಘಟನೆಯ ಮೇಲೆ ಅವಲಂಬಿಸಿರುತ್ತವೆಯೋ, ಅವುಗಳ ಇತಿಹಾಸ ತಿಳಿದರೆ ವರ್ತಮಾನದಲ್ಲಿ ವಿವಿಧ ಮಟ್ಟಗಳಲ್ಲಿಯ ವ್ಯವಸ್ಥಾಪನೆ ಮಾಡುವುದು ಸುಲಭವಾಗುತ್ತದೆ.

**6. ಕಲೆ:** ವಿವಿಧ ಕಲಾಕ್ಷೇತ್ರಗಳಲ್ಲಿಯ ಅಭಿವ್ಯಕ್ತಿ ಮತ್ತು ಅದರ ಹಿಂದಿನ ವೈಚಾರಿಕ=ಭಾವನಿಕ-ಸಾಂಸ್ಕೃತಿಕ ಪರಂಪರೆಗಳ ಆಧಾರದಿಂದ ಉಂಟಾದ ಕಲೆಗಳ ವಿಕಾಸವನ್ನು ತಿಳಿದುಕೊಳ್ಳುವುದು ಮಹತ್ವದ್ದಾಗಿರುತ್ತದೆ. ಯಾವುದೇ ಕಲಾವಿಷ್ಕರಣದ ಮರ್ಮವು ಕಲಾಕೃತಿಯ ನಿರ್ಮಾಪಕನ ಮಾನಸಿಕತೆ, ಮತ್ತು ವಿಶಿಷ್ಟ ಕಲಾಶೈಲಿಯ ವಿಕಾಸಕ್ರಮಗಳು ಸಾಂಸ್ಕೃತಿಕ ಇತಿಹಾಸದ ಅಭ್ಯಾಸದ ಮೂಲಕ ತಿಳಿಯಬಹುದು.

**7. ಮಾನವನ ಜ್ಞಾನಶಾಖೆಗಳು:** ಇತಿಹಾಸ, ಪುರಾತತ್ವ, ಸಮಾಜಶಾಸ್ತ್ರ, ಮಾನವಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರಗಳಂತಹ ಜ್ಞಾನಶಾಖೆಗಳ ಉಗಮ ಮತ್ತು ವಿಕಾಸ ಇವುಗಳ ಇತಿಹಾಸವನ್ನು ತಿಳಿದುಕೊಳ್ಳುವುದು ಈ ಜ್ಞಾನಶಾಖೆಯ ಅಭ್ಯಾಸದ ಅವಶ್ಯಕ ಭಾಗವಾಗಿದೆ. ತತ್ವಜ್ಞಾನವನ್ನು ವಿಜ್ಞಾನ ಮತ್ತು ಇತರ ಎಲ್ಲಾ ಜ್ಞಾನಶಾಖೆಗಳ ಜನನಿಯೆಂದು ತಿಳಿಯಲಾಗುತ್ತದೆ. ವಿಶಾಲವಾದ ವಿಶ್ವದ ವಿಸ್ತಾರ ಹಾಗೂ ಅದರಲ್ಲಿಯ ಮಾನವನ ಅಸ್ತಿತ್ವ ಇವುಗಳಲ್ಲಿಯ ಪರಸ್ಪರ ಸಂಬಂಧವನ್ನು ತಿಳಿದುಕೊಳ್ಳುವ ಜಿಜ್ಞಾಸೆಯಿಂದ ಇಡೀ ಜಗತ್ತಿನಲ್ಲಿಯ ಮಾನವೀ ಸಮಾಜಗಳಲ್ಲಿ ಜನರು ಆ ಸಂಬಂಧದ ಊಹೆಗಳನ್ನು ಮಾಡತೊಡಗಿದರು. ಅದರಿಂದ ಜಗತ್ತಿನ ಉತ್ಪತ್ತಿ ವಿಷಯದ ಕಥೆಗಳು, ಸೃಷ್ಟಿಚಕ್ರ ಹಾಗೂ ಮಾನವೀ ಜೀವನಕ್ಕೆ ಸಂಬಂಧಿಸಿದ ಮಿಥಕಗಳು, ದೇವ-ದೇವತೆಗಳನ್ನು ಕುರಿತ ಕಲ್ಪನೆಗಳು ಹಾಗೂ ಆ ದೇವತೆಗಳನ್ನು ಪ್ರಸನ್ನಗೊಳಿಸುವ ಸಲುವಾಗಿ ಮಾಡಿದ

ವಿಧಿಗಳು, ಆ ವಿಷಯದ ತಾತ್ವಿಕ ವಿವೇಚನೆ ಇತ್ಯಾದಿಗಳ ವಿಕಾಸವಾಯಿತು. ಪ್ರಾಚೀನ ಕಾಲದಲ್ಲಿಯ ಜನರು ಮಾಡಿದ ಈ ಸಂಗತಿಗಳಿಗೆ ಸಂಬಂಧಿತ ವಿಚಾರದಲ್ಲಿ ತತ್ವಜ್ಞಾನದ ಬೀಜಗಳಿವೆ. ಇಲ್ಲಿ ಉಲ್ಲೇಖಿಸಲಾದ ಮಾನವನ ಜ್ಞಾನಶಾಖೆಯಲ್ಲಿಯ ವಿವಿಧ ಶಾಖೆಗಳ ವಿಕಾಸಕ್ಕೆ ತತ್ವಜ್ಞಾನದಲ್ಲಿಯ ಸಿದ್ಧಾಂತಗಳ ಅಡಿಪಾಯವಿದೆ. ಇತಿಹಾಸದ ಆಧಾರದಿಂದ ಈ ಪ್ರಗತಿಯ ಆಕಲನವಾಗಬಲ್ಲದು.

### 3.3 ಅನ್ವಯಿಕ ಇತಿಹಾಸ ಮತ್ತು ವರ್ತಮಾನಕಾಲ:

ದೈನಂದಿನ ವ್ಯವಹಾರದಲ್ಲಿ ಇತಿಹಾಸದ ಉಪಯೋಗವೇನು, ಎಂಬ ಪ್ರಶ್ನೆಯನ್ನು ಯಾವಾಗಲೂ ಕೇಳಲಾಗುತ್ತದೆ. ಅನ್ವಯಿಕ ಇತಿಹಾಸವೆಂದರೇನು ಎಂಬ ಪ್ರಶ್ನೆಯ ಉತ್ತರದಲ್ಲಿ ಮೇಲಿನ ಪ್ರಶ್ನೆಯ ಉತ್ತರವು ತನ್ನಿಂದ ತಾನೇ ದೊರೆಯುತ್ತದೆ. ಭೂತಕಾಲದ ಮೂರ್ತ ಹಾಗೂ ಅಮೂರ್ತ ಸ್ವರೂಪದಲ್ಲಿಯ ಅನೇಕ ಅವಶೇಷಗಳು ವರ್ತಮಾನ ಕಾಲದಲ್ಲಿ ಅಸ್ತಿತ್ವದಲ್ಲಿರುತ್ತವೆ. ಅವುಗಳನ್ನು ಕುರಿತು ನಮ್ಮ ಮನಸ್ಸಿನಲ್ಲಿ ಕುತೂಹಲವಿರುತ್ತದೆ, ಆತ್ಮೀಯತೆ ಇರುತ್ತದೆ. ಅವರ ಅಸ್ತಿತ್ವದ ಇತಿಹಾಸವನ್ನು ನಮಗೆ ತಿಳಿದುಕೊಳ್ಳಬೇಕೆನಿಸುತ್ತದೆ. ಏಕೆಂದರೆ ಅವು ನಮ್ಮ ಪೂರ್ವಜರು ನಿರ್ಮಿಸಿದ ಕಲಾಕೃತಿಗಳ ಮತ್ತು ಪರಂಪರೆಗಳ ಅವಶೇಷಗಳಿರುತ್ತವೆ. ಅದು ನಮ್ಮ ಸಾಂಸ್ಕೃತಿಕ ವಿಶ್ವಪರಂಪರೆ ಇರುತ್ತದೆ. ಅದು ನಮ್ಮ ಗುರುತು ಇರುತ್ತದೆ. ಅದರ ಇತಿಹಾಸದ ಜ್ಞಾನವು ನಮ್ಮನ್ನು ನಮ್ಮ ಉಗಮದ ಕಡೆಗೆ ಕರೆದೊಯ್ಯುವುದಾಗಿರುತ್ತದೆ. ಅದರಿಂದಾಗಿ ಆ ಸಾಂಸ್ಕೃತಿಕ ವಿಶ್ವಪರಂಪರೆಯನ್ನು ನಮ್ಮ ಹಾಗೂ ನಮ್ಮ ಮುಂದಿನ ತಲೆಮಾರಿನ ಹಿತಕ್ಕಾಗಿ ದೀರ್ಘಕಾಲದ ವರೆಗೆ ರಕ್ಷಿಸುವ ಮತ್ತು ಅದರ ಸಂವರ್ಧನೆ ಮಾಡುವ ಅವಶ್ಯಕತೆ ನಿರ್ಮಾಣವಾಗುತ್ತದೆ. ಅನ್ವಯಿಕ ಇತಿಹಾಸದ ಆಧಾರದಿಂದ ಮೂರ್ತ ಮತ್ತು ಅಮೂರ್ತ ಸ್ವರೂಪದಲ್ಲಿಯ ಸಾಂಸ್ಕೃತಿಕ ವಿಶ್ವಪರಂಪರೆಯ ರಕ್ಷಣೆ ಮತ್ತು ಸಂವರ್ಧನ ಮಾಡಲು ಬರುತ್ತದೆ. ಅದರಿಂದಾಗಿ ಅನೇಕ ಉದ್ಯೋಗಾವಕಾಶಗಳು ನಿರ್ಮಾಣವಾಗುತ್ತವೆ. ಸ್ವಲ್ಪದರಲ್ಲಿ ಹೇಳುವುದಾದರೆ ಇತಿಹಾಸದ ಆಧಾರದಿಂದ ವರ್ತಮಾನಕಾಲದ ಯಥೋಚಿತ ಆಕಲನ ಮತ್ತು ಭವಿಷತ್ಕಾಲಕ್ಕಾಗಿ ದಿಗ್ದರ್ಶನ-ಹೀಗೆ ಅನ್ವಯಿಕ ಇತಿಹಾಸವನ್ನು ವರ್ಣಿಸಬಹುದು.

### 3.4 ಸಾಂಸ್ಕೃತಿಕ ಮತ್ತು ನೈಸರ್ಗಿಕ ವಿಶ್ವಪರಂಪರೆಯ ವ್ಯವಸ್ಥಾಪನೆ

**(ಅ) ಸಾಂಸ್ಕೃತಿಕ ವಿಶ್ವಪರಂಪರೆ:** ಇದು ಮಾನವ ನಿರ್ಮಿತವಾಗಿರುತ್ತದೆ. ಇದು ಮೂರ್ತ ಮತ್ತು ಅಮೂರ್ತ ಎಂಬ ಎರಡು ಪ್ರಕಾರದ್ದಿರುತ್ತದೆ.

**1. ಮೂರ್ತ ಸಾಂಸ್ಕೃತಿಕ ವಿಶ್ವಪರಂಪರೆ:** ಈ ಪ್ರಕಾರದಲ್ಲಿ ಪ್ರಾಚೀನ ಸ್ಥಳಗಳು, ಕಟ್ಟಡಗಳು, ವಸ್ತುಗಳು, ಹಸ್ತಲಿಖಿತಗಳು, ಶಿಲ್ಪಗಳು, ಚಿತ್ರಗಳು ಮುಂತಾದವುಗಳ ಸಮಾವೇಶವಾಗುತ್ತದೆ.

**2. ಅಮೂರ್ತ ಸಾಂಸ್ಕೃತಿಕ ವಿಶ್ವಪರಂಪರೆ:** ಈ ಪ್ರಕಾರದಲ್ಲಿ ಕೆಳಗಿನ ಸಂಗತಿಗಳ ಸಮಾವೇಶವಾಗುತ್ತದೆ.

- ಮೌಖಿಕ ಪರಂಪರೆ ಮತ್ತು ಅದಕ್ಕಾಗಿ ಬಳಸಲಾಗುವ ಭಾಷೆ.
- ಪರಂಪರಾಗತ ಜ್ಞಾನ.
- ಹಬ್ಬ-ಹರಿದಿನಗಳನ್ನು ಆಚರಿಸುವ ಸಾಮಾಜಿಕ ಪದ್ಧತಿಗಳು ಹಾಗೂ ಧಾರ್ಮಿಕ ವಿಧಿಗಳು.
- ಕಲೆಯನ್ನು ಸಾದರಪಡಿಸುವ ಪದ್ಧತಿಗಳು.
- ವಿಶಿಷ್ಟ ಪರಂಪರಾಗತ ಕೌಶಲ್ಯಗಳು
- ಇಂಥ ಪರಂಪರೆ, ಪದ್ಧತಿ, ಕೌಶಲ್ಯ ಇತ್ಯಾದಿಗಳ ಪ್ರಾತಿನಿಧ್ಯ ಮಾಡುವ ಸಮೂಹ, ಗುಂಪು.

**(ಬ) ನೈಸರ್ಗಿಕ ವಿಶ್ವಪರಂಪರೆ:** ನಿಸರ್ಗದಲ್ಲಿಯ ಜೀವವೈವಿಧ್ಯತೆಯ ವಿಚಾರವನ್ನು ನೈಸರ್ಗಿಕ ವಿಶ್ವಪರಂಪರೆಯ ಕಲ್ಪನೆಯಲ್ಲಿ ಮಾಡಲಾಗಿದೆ. ಅದರಲ್ಲಿ ಕೆಳಗಿನ ಸಂಗತಿಗಳ ಸಮಾವೇಶವಾಗುತ್ತದೆ.

(1) ಪ್ರಾಣಿಗಳು (2) ವನಸ್ಪತಿಸೃಷ್ಟಿ (3) ಅವುಗಳ ಅಸ್ತಿತ್ವಕ್ಕಾಗಿ ಅವವ್ಯಕವಾಗಿರುವ ಪರಿಸರ ಸಂಬಂಧಿಸಿದ ಸಂಸ್ಥೆಗಳು ಹಾಗೂ ಭೂರಚನಾತ್ಮಕ ವೈಶಿಷ್ಟ್ಯಗಳು

ಮುಂದಿನ ಮಾನವೀ ತಲೆಮಾರುಗಳ ಹಿತಕ್ಕಾಗಿ ನಮ್ಮ ಪರಂಪರೆಯ ಸಂರಕ್ಷಣೆಯಾಗುವುದು ಅವಶ್ಯಕವಾಗಿದೆ. ನಾಮಶೇಷವಾಗುವ ಮಾರ್ಗದಲ್ಲಿರುವ ಸಾಂಸ್ಕೃತಿಕ ಮತ್ತು ನೈಸರ್ಗಿಕ ವಿಶ್ವಪರಂಪರೆಯ ರಕ್ಷಣೆ ಮತ್ತು ಸಂವರ್ಧನೆಯಾಗಬೇಕು ಎಂಬ ಉದ್ದೇಶದಿಂದ ಯುನೆಸ್ಕೊ ಈ ಜಾಗತಿಕ ಸಂಘಟನೆಯು ಕೆಲವು ದಿಶಾದರ್ಶಕ ತತ್ವಗಳನ್ನು ಜಾಹೀರು ಮಾಡಿದೆ. ಆ ದಿಶಾದರ್ಶಕ ತತ್ವಗಳ ಆಧಾರದಿಂದ ಜಾಗತಿಕ ವಿಶ್ವಪರಂಪರೆಯ ಸ್ಥಾನಕ್ಕೆ ಪಾತ್ರವಾಗುವ ಸ್ಥಳಗಳು, ಪರಂಪರೆ ಇವುಗಳ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ.



**ಒಂದು ನೋಟದಲ್ಲಿ**

**ಭಾರತದಲ್ಲಿಯ ಜಾಗತಿಕ ಮೌಖಿಕ ಹಾಗೂ ಅಮೂರ್ತ ವಿಶ್ವ ಪರಂಪರೆಯ ಪಟ್ಟಿಯಲ್ಲಿ ಸಮಾವೇಶವಾದ ಪರಂಪರೆಗಳು:**

2001: 'ಕುಟಿಯಟ್ಟಮ್' ಇದು ಕೇರಳದಲ್ಲಿಯ ಸಂಸ್ಕೃತ ನಾಟ್ಯ ಪರಂಪರೆ.

2003: ವೈದಿಕ ಪಠಣ ಪರಂಪರೆ.

2005: ಉತ್ತರ ಭಾರತದಲ್ಲಿಯ 'ರಾಮಲೀಲಾ' ಸಾದರೀಕರಣ.

2009: ಗಢವಾಲ (ಉತ್ತರಾಖಂಡ)ದಲ್ಲಿಯ 'ರಮ್ಮನ' ಎಂಬ ಧಾರ್ಮಿಕ ಉತ್ಸವ ಹಾಗೂ ವಿಧಿನಾಟ್ಯ.

2010: ರಾಜಸ್ಥಾನದ ಕಾಲಬೇಲಿಯಾ ಜಾನಪದ ಸಂಗೀತ ಹಾಗೂ ಜಾನಪದ ನೃತ್ಯ.

2010: ಪಶ್ಚಿಮ ಬಂಗಾಲ, ಝಾರಖಂಡ, ಹಾಗೂ ಓಡಿಶಾಗಳಲ್ಲಿಯ ಛಾವೂ ನೃತ್ಯ

2010: ಕೇರಳದಲ್ಲಿಯ 'ಮುಡಿಯೆಟ್ಟೂ' ವಿಧಿನಾಟ್ಯ ಹಾಗೂ ನೃತ್ಯನಾಟ್ಯ.

2012: ಲಡಾಖ, ಜಮ್ಮು ಮತ್ತು ಕಾಶ್ಮೀರಗಳಲ್ಲಿಯ ಬೌದ್ಧ ಮಂತ್ರಪಠಣದ ಪರಂಪರೆ

2013: ಮಣಿಪೂರದಲ್ಲಿಯ 'ಸಂಕೀರ್ತನ' ಪರಂಪರೆ.

2014: ಪಂಜಾಬದಲ್ಲಿಯ ಠಠೇರಾ ಪಂಗಡದ ತಾಮ್ರದ ಮತ್ತು ಹಿತ್ತಾಳೆಯ ಪಾತ್ರೆಗಳನ್ನು ತಯಾರಿಸುವ ಕಲಾಪರಂಪರೆ.

2016: ನವರೋಜ

2016: ಯೋಗ

**ಭಾರತದಲ್ಲಿ ಜಾಗತಿಕ ವಿಶ್ವಪರಂಪರೆಯ ಸ್ಥಳಗಳು**

**ಸಾಂಸ್ಕೃತಿಕ**

1983 : ಆಗ್ರಾದ ಕೋಟೆ.

1983 : ಅಜಂತಾದ ಗುಹೆಗಳು.

1983 : ಎಲ್ಲೂರಿನ ಗುಹೆಗಳು.

1983 : ತಾಜಮಹಲ.

1984 : ಮಹಾಬಲಿಪುರಮ್‌ದಲ್ಲಿಯ ಮಂದಿರಗಳು.

1984 : ಕೋಣಾರ್ಕ ಸೂರ್ಯಮಂದಿರ

1986 : ಗೋವಾದಲ್ಲಿಯ ಚರ್ಚುಗಳು ಮತ್ತು ಕಾನ್ವೆಂಟಗಳು

1986 : ಫತ್ತೇಪೂರ ಸಿಕ್ರಿ

1986 : ಹಂಪಿಯಲ್ಲಿಯ ಕಟ್ಟಡಗಳು

1986 : ಖಜುರಾಹೊದಲ್ಲಿಯ ಮಂದಿರಗಳು

1987 : ಘಾರಾಪುರಿ (ಎಲೆಫಂಟಾ) ಗುಹೆಗಳು.

1987 : ಚೋಳ ಮಂದಿರಗಳು-ತಂಜಾವರದ ಬೃಹದೀಶ್ವರ ಮಂದಿರ,

2004 : ಗಂಗೈಕೊಂಡಚೋಳೀಶ್ವರಮ್‌ದ ಬೃಹದೀಶ್ವರ ಮಂದಿರ ಹಾಗೂ ದಾರಾಸುರಮ್‌ದ ಐರಾವತೇಶ್ವರ ಮಂದಿರ.

1987 : ಪಟ್ಟದಕಲ್ಲಿನಲ್ಲಿಯ ಮಂದಿರಗಳು.

1989 : ಸಾಂಚಿಯ ಸ್ತೂಪ.

1993 : ಹುಮಾಯೂನನ ಗೋರಿ.

1993 : ಕುತುಬಮಿನಾರ ಮತ್ತು ಪರಿಸರದಲ್ಲಿಯ ಕಟ್ಟಡಗಳು.

1999: (1) ದಾರ್ಜಿಲಿಂಗ ಹಿಮಾಲಯನ್ ರೇಲ್ವೆ (2) ನೀಲಗಿರಿ ಮೌಂಟನ ರೇಲ್ವೆ (3) ದ ಕಾಲ್ಕಾ ಶಿಮಲಾ ರೇಲ್ವೆ

2002 : ಬೋಧಗಯಾದಲ್ಲಿಯ ಮಹಾಬೋಧಿ ಮಂದಿರ ಮತ್ತು ಪರಿಸರ

2003 : ಭೀಮಬೇಟಕಾ ಎಂಬಲ್ಲಿಯ ಶೈಲಾಶ್ರಯ

2004 : ಚಂಪಾನೇರ-ಪಾವಾಗಢ ಪುರಾತತ್ವದ ಸ್ಥಳ.

2004 : ಛತ್ರಪತಿ ಶಿವಾಜಿ ಮಹಾರಾಜ ಟರ್ಮಿನಸ್, ಮುಂಬಯಿ.

2007 : ಕೆಂಪುಕೋಟೆ, ದಿಲ್ಲಿ.

2010 : ಜಂತರ ಮಂತರ ಜಯಪೂರ.

2013 : ರಾಜಸ್ಥಾನದಲ್ಲಿಯ ಪರ್ವತದ ಮೇಲಿನ ಕೋಟೆಗಳು.

2014 : ಗುಜರಾತದ ಪಾಟಣ ಎಂಬಲ್ಲಿಯ 'ರಾನೀ-ಕಿ-ಬಾವ'.

2016 : ಚಂಡೀಗಡದಲ್ಲಿಯ ಕ್ಯಾಪಿಟಲ ಕಾಂಪ್ಲೆಕ್ಸ್.

2016 : ನಾಲಂದಾ ಮಹಾವಿಹಾರ ಪುರಾತತ್ವದ ಸ್ಥಳ.

2017 : ಅಹಮದಾಬಾದ-ಐತಿಹಾಸಿಕ ಪಟ್ಟಣ.

**ಭಾರತದಲ್ಲಿಯ ಜಾಗತಿಕ ವಿಶ್ವಪರಂಪರೆಯ ಸ್ಥಳಗಳು**

**ನೈಸರ್ಗಿಕ**

1985 : ಕಾಝಿರಂಗಾ ರಾಷ್ಟ್ರೀಯ ಉದ್ಯಾನ.

1985 : ಕೇವಲದೇವ ರಾಷ್ಟ್ರೀಯ ಉದ್ಯಾನ.

1985 : ಮಾನಸ ವನ್ಯಜೀವ ಅಭಯಾರಣ್ಯ.

1987 : ಸುಂದರಬನ ರಾಷ್ಟ್ರೀಯ ಉದ್ಯಾನ.

1988 : ನಂದಾದೇವಿ ಹಾಗೂ ವ್ಯಾಲ್ಲಿ ಆಫ್ ಫ್ಲಾವರ್ಸ್

2005 : ರಾಷ್ಟ್ರೀಯ ಉದ್ಯಾನಗಳು.

2012 : ಪಶ್ಚಿಮ ಘಟ್ಟ.

2014 : ಗ್ರೇಟ ಹಿಮಾಲಯನ್ ಪಾರ್ಕ.

**ಭಾರತದಲ್ಲಿಯ ಮಿಶ್ರಸ್ವರೂಪದ ಜಾಗತಿಕ ವಿಶ್ವಪರಂಪರೆಯ ಸ್ಥಳಗಳು**

2016 : ಕಾಂಚನಗಂಗಾ ರಾಷ್ಟ್ರೀಯ ಉದ್ಯಾನ.

ಯುನೆಸ್ಕೋದ ಜಾಗತಿಕ ನೈಸರ್ಗಿಕ ವಿಶ್ವಪರಂಪರೆಯ ಯಾದಿಯಲ್ಲಿ ಪಶ್ಚಿಮ ಘಟ್ಟದ ಸಮಾವೇಶವನ್ನು 2012ರಲ್ಲಿ ಮಾಡಲಾಗಿದೆ. ಸಾತಾರಾ ಜಿಲ್ಲೆಯಲ್ಲಿಯ ಕಾಸ ಪಠಾರ ಇದು



ಕೈಲಾಸ ಮಂದಿರ, ಎಲ್ಲೋರಾ

ಪಶ್ಚಿಮ ಘಟ್ಟಗಳ ಶ್ರೇಣಿಯಲ್ಲಿಯೇ ಇದೆ. ಸಾಂಸ್ಕೃತಿಕ ಮತ್ತು ನೈಸರ್ಗಿಕ ವಿಶ್ವಪರಂಪರೆಯ ವ್ಯವಸ್ಥಾಪನೆಯು ಅನ್ವಯಿಕ ಇತಿಹಾಸದ ಪ್ರಮುಖ ಅಂಗವಾಗಿದೆ. ಈ ಪರಂಪರೆಯ ರಕ್ಷಣೆ ಮತ್ತು ಸಂವರ್ಧನೆ ಮಾಡುವ ಬಹುಮಟ್ಟಿಗಿನ ಕಾರ್ಯವನ್ನು ಭಾರತ ಸರಕಾರದ ಪುರಾತತ್ವ ಇಲಾಖೆ ಮತ್ತು ಭಾರತದಲ್ಲಿಯ ಪ್ರತಿಯೊಂದು ರಾಜ್ಯಸರಕಾರದ ಪುರಾತತ್ವ ಇಲಾಖೆಗಳು ಮಾಡುತ್ತಿರುತ್ತವೆ. ಇನಟ್ಯಾಕ್ (ಇಂಡಿಯನ್ ನ್ಯಾಶನಲ್ ಟ್ರಸ್ಟ ಫಾರ ಆರ್ಟ ಆ್ಯಂಡ ಕಲ್ಚರಲ್ ಹೆರಿಟೇಜ) ಈ ಸ್ವಯಂ ಸೇವಾ ಸಂಸ್ಥೆಯು 1984ರಿಂದ ಈ ಕ್ಷೇತ್ರದಲ್ಲಿ ಕಾರ್ಯನಿರತವಾಗಿದೆ. ಸಾಂಸ್ಕೃತಿಕ ಮತ್ತು ನೈಸರ್ಗಿಕ ವಿಶ್ವಪರಂಪರೆಯ ಸ್ಥಳಗಳ ರಕ್ಷಣೆ ಮತ್ತು ಸಂವರ್ಧನೆಯ ಯೋಜನೆಗಳಲ್ಲಿ ಅನೇಕ ವಿಷಯ ತಜ್ಞರ ಸಹಭಾಗಿತ್ವವು ಅವಶ್ಯಕವಾಗಿರುತ್ತದೆ. ಅವರೆಲ್ಲರಲ್ಲಿ ಸಂಬಂಧಿತ ಸ್ಥಳದ ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಇತಿಹಾಸದ ಬಗ್ಗೆ ಅರಿವನ್ನು ನಿರ್ಮಾಣಮಾಡುವ ಕಾರ್ಯವನ್ನು ಅನ್ವಯಿಕ ಇತಿಹಾಸದ ಮುಖಾಂತರ ಮಾಡಲು ಬರುತ್ತದೆ. ಅದರಿಂದಾಗಿ

(1) ಯೋಜನೆಗಳ ಅಂತರ್ಗತವಾಗಿ ವಿಶ್ವಪರಂಪರೆಯ ಸ್ಥಳದ ಮೂಲರೂಪವನ್ನು ಬದಲಾಯಿಸಲಾರದೆ ಅದರ ರಕ್ಷಣೆ ಮತ್ತು ಸಂವರ್ಧನೆಯ ಕಾರ್ಯ ಮಾಡುವುದು ಸಾಧ್ಯವಾಗುತ್ತದೆ.

(2) ಸ್ಥಾನಿಕ ಸಮಾಜದ ನಿರ್ಮಾಣ ಮತ್ತು ಮಾನಸಿಕತೆ, ಅವರ ಮುಂದಿರುವ ವರ್ತಮಾನದಲ್ಲಿಯ ವಿವಿಧ ಆಹ್ವಾನಗಳು, ಸ್ಥಳೀಯ ಜನರ ಅಪೇಕ್ಷೆ ಇವುಗಳ ಪರಿಶೀಲನೆ ಮಾಡಲು ಬರುತ್ತದೆ.

(3) ಸಾಂಸ್ಕೃತಿಕ ವಿಶ್ವಪರಂಪರೆಯ ಸ್ಥಳಗಳ ರಕ್ಷಣೆ ಮತ್ತು ಸಂವರ್ಧನೆ ಮಾಡುತ್ತಿರುವಾಗ ಸ್ಥಳೀಯ ಜನರ ಭಾವನೆಗಳು ನೋಯಿಸಲ್ಪಡಬಾರದೆನ್ನುವ ಸಲುವಾಗಿ ಮಾಡಬೇಕಾದ ಉಪಾಯಯೋಜನೆಗಳ ಹಂಚಿಕೆ ಮಾಡಲು ಬರುತ್ತದೆ.

(4) ಸ್ಥಳೀಯ ಜನರನ್ನು ಆ ಯೋಜನೆಯಲ್ಲಿ ಸೇರ್ಪಡೆ ಮಾಡಿಕೊಳ್ಳಲು ಬರುತ್ತದೆ.

(5) ಸ್ಥಳೀಯ ಜನರ ಪರಂಪರಾಗತ ಕೌಶಲ್ಯಗಳಿಗೆ ಪ್ರೋತ್ಸಾಹ ನೀಡುವಂತಹ ಉದ್ಯೋಗ-ವ್ಯವಸಾಯಗಳಿಗೆ ಚಾಲನೆ ದೊರೆಯುವ ಸಲುವಾಗಿ ಸುವ್ಯವಸ್ಥಿತ ಹಂಚಿಕೆ ಮಾಡಲು ಸಾಧ್ಯವಾಗುತ್ತದೆ.

### 3.5 ಸಂಬಂಧಿತ ವ್ಯಾವಸಾಯಿಕ ಕ್ಷೇತ್ರಗಳು

ಕೆಳಗೆ ಉಲ್ಲೇಖಿಸಲಾದ ಕ್ಷೇತ್ರಗಳಿಗೆ ಸಂಬಂಧಿಸಿದ ಕಾನೂನುಬದ್ಧ ನಿಯಮ ಮತ್ತು ಸಾರ್ವಜನಿಕ ನೀತಿಗಳನ್ನು ನಿರ್ಧರಿಸುವುದಕ್ಕಾಗಿ ಇತಿಹಾಸದ ಜ್ಞಾನವು ಪೂರಕವಾಗುತ್ತದೆ.

1. ಸಂಗ್ರಹಾಲಯಗಳು ಮತ್ತು ಅಭಿಲೇಖಾಗಾರಗಳು.
2. ಐತಿಹಾಸಿಕ ಸ್ಥಳಗಳ ರಕ್ಷಣೆ ಮತ್ತು ಸಂವರ್ಧನೆ.
3. ಪರ್ಯಟನ ಮತ್ತು ಆತಿಥ್ಯ.
4. ಮನರಂಜನೆ ಮತ್ತು ಸಂಪರ್ಕದ ಮಾಧ್ಯಮಗಳು.

**ಗೊತ್ತಿದೆಯೇ ನಿಮಗೆ?**



ಪುರಾತನ ವಸ್ತುಗಳ ವರ್ಣನೆ ಮಾಡುವ ಮಣ್ಣಿನ ಹಲಿಗೆ

ಜಗತ್ತಿನಲ್ಲಿಯ ಅತ್ಯಂತ ಪ್ರಾಚೀನವೆಂದು ತಿಳಿಯಲ್ಪಡುವ (ಕ್ರಿ.ಶ.ಪೂ. 6ನೇ ಶತಮಾನ) ಸಂಗ್ರಹಾಲಯವು ಮೆಸೊಪೊಟೇಮಿಯಾದ 'ಉರ' ಎಂಬ ಪ್ರಾಚೀನ ನಗರದ ಉತ್ಖನನ ಮಾಡುವಾಗ ದೊರಕಿತು. ಈ ಉತ್ಖನನವನ್ನು ಬ್ರಿಟಿಷ ಪುರಾತತ್ವಜ್ಞರಾದ ಸರಲಿಯೋನಾರ್ಡ ವೂಲಿ ಇವರು 1922ರಿಂದ 1934ರ ಕಾಲಾವಧಿಯಲ್ಲಿ ಮಾಡಿದ್ದರು. ಎನಿಗಾಲ್ಡೀ ಎಂಬ ಹೆಸರಿನ ಮೆಸೊಪೊಟೇಮಿಯಾದ ರಾಜಕುಮಾರಿಯು ಕಟ್ಟಿಸಿದ್ದಳು. ಅವಳು ಸ್ವತ: ಆ ಸಂಗ್ರಹಾಲಯದ ನಿರ್ವಾಹಕಳೆಂದು ಕಾರ್ಯ ನಿರ್ವಹಿಸುತ್ತಿದ್ದಳು.

ಈ ಸಂಗ್ರಹಾಲಯದಲ್ಲಿ ದೊರೆತ ಪ್ರಾಚೀನ ವಸ್ತುಗಳ ಜೊತೆಗೆ ಆ ವಸ್ತುಗಳ ಸವಿಸ್ತಾರ ವರ್ಣನೆಯನ್ನು ಮಾಡುವ ಮಣ್ಣಿನ ಹಲಿಗೆ (ವಟಿಕಾ)ಗಳು (clay tablets) ಇದ್ದವು.

**ಗೊತ್ತಿದೆಯೇ ನಿಮಗೆ?**



ಇಂಡಿಯನ ಮ್ಯೂಝಿಯಮ್ ಕೋಲಕಾತಾ

ಕೋಲಕಾತಾದಲ್ಲಿರುವ 'ಇಂಡಿಯನ ಮ್ಯೂಝಿಯಮ್'ದ ಸ್ಥಾಪನೆಯು ಏಶಿಯಾಟಿಕ್ ಸೊಸೈಟಿಯ ವತಿಯಿಂದ ಕ್ರಿ.ಶ. 1814ರಲ್ಲಿ ಆಯಿತು. ಡ್ಯಾನಿಶ್ ವನಸ್ಪತಿ ಶಾಸ್ತ್ರಜ್ಞರಾದ ನ್ಯಾಥಾನಿಯಲ್ ವಾಲಿಕ್ ಇವರು ಅದರ ಸಂಸ್ಥಾಪಕರೂ ಹಾಗೂ ಪ್ರಥಮ ನಿರ್ವಾಹಕರು ಆಗಿದ್ದರು. ಇಲ್ಲಿ ಕೊಡಲಾದ ಸಂಗ್ರಹಾಲಯದ ಛಾಯಾಚಿತ್ರವು 1905ರಲ್ಲಿಯದಿದೆ. ಸಂಗ್ರಹಾಲಯದಲ್ಲಿ ಕಲೆ, ಪುರಾತತ್ವ ಹಾಗೂ ಮಾನವಶಾಸ್ತ್ರ ಎಂಬ ಮೂರು ಪ್ರಮುಖ ವಿಭಾಗಗಳಿದ್ದು ಅವುಗಳೊಡನೆ ಸಂಲಗ್ನ ವಾಗಿರುವ ರಕ್ಷಣೆ, ಪ್ರಕಾಶನ, ಛಾಯಾಚಿತ್ರಗ್ರಹಣ, ಪ್ರದರ್ಶನ-ಸಾದರೀಕರಣ, ಪ್ರತಿಕೃತಿ ನಿರ್ಮಿತಿ, ತರಬೇತಿ, ಗ್ರಂಥಾಲಯ, ಸುರಕ್ಷತೆ ಎಂಬ ವಿಭಾಗಗಳಿವೆ.

ಇದರಲ್ಲಿಯ ಪ್ರತಿಯೊಂದು ಕ್ಷೇತ್ರದ ವ್ಯವಸ್ಥಾಪನೆಗಾಗಿ ವಿಶೇಷ ಕೌಶಲ್ಯಗಳನ್ನು ಹೊಂದಿದ ಮನುಷ್ಯಶಕ್ತಿಯ ಅವಶ್ಯಕತೆ ಇರುತ್ತದೆ. ಉದಾಹರಣೆಗಾಗಿ ವಾಸ್ತುಶಿಲ್ಪಿ, ಅಭಿಯಂತ, ಇತಿಹಾಸಕಾರ, ಪುರಾತತ್ವಶಾಸ್ತ್ರಜ್ಞ, ಸಂಗ್ರಹಾಲಯ ನಿರ್ವಾಹಕ, ಸಮಾಜಶಾಸ್ತ್ರಜ್ಞ ಅಭಿಲೇಖಾಗಾರ ವ್ಯವಸ್ಥಾಪಕ, ಕಾನೂನುತಜ್ಞ, ಛಾಯಾಚಿತ್ರಕಾರ ಇತ್ಯಾದಿ. ಈ ಪಟ್ಟಿಯು ಇಲ್ಲಿಯೇ ಮುಗಿಯುವದಿಲ್ಲ, ಪ್ರಾಚೀನ ಸ್ಥಳಗಳು, ಕಟ್ಟಡಗಳು ಮತ್ತು ವಸ್ತುಗಳ ಐತಿಹಾಸಿಕ ಹಿನ್ನೆಲೆಯ ಸಾಕಷ್ಟು ಜ್ಞಾನವಿರುವುದು ಅವಶ್ಯಕವಾಗಿರುತ್ತದೆ. ಅನ್ವಯಿಕ ಇತಿಹಾಸದ ಕ್ಷೇತ್ರದಲ್ಲಿಯ ಯೋಜನೆಗಳಿಂದಾಗಿ ಮೇಲೆ ಉಲ್ಲೇಖಿಸಲಾದ ಕ್ಷೇತ್ರಗಳಲ್ಲಿ ಅನೇಕ ಉದ್ಯೋಗಾವಕಾಶಗಳು ಲಭ್ಯವಾಗಬಲ್ಲವು.

**ತಿಳಿದುಕೊಳ್ಳಿ.**

ಅಭಿಲೇಖಾಗಾರಗಳಲ್ಲಿ ಮಹತ್ವದ ಹಳೆಯ ಕಾಗದಪತ್ರಗಳು, ದಪ್ತರಗಳು, ಹಳೆಯ ಚಲನಚಿತ್ರಗಳು, ಮುಂತಾದವುಗಳನ್ನು ರಕ್ಷಣೆಮಾಡಿ ಇಡಲಾಗುತ್ತದೆ.

ಭಾರತದ ರಾಷ್ಟ್ರೀಯ ಅಭಿಲೇಖಾಗಾರವು ನವೀ ದಿಲ್ಲಿಯಲ್ಲಿದೆ. ಭಾರತದಲ್ಲಿಯ ಪ್ರತಿಯೊಂದು ರಾಜ್ಯದಲ್ಲಿ ಸ್ವತಂತ್ರ ಅಭಿಲೇಖಾಗಾರಗಳಿವೆ.

**ವೈಶಿಷ್ಟ್ಯಪೂರ್ಣ ಅಭಿಲೇಖಾಗಾರ**

ಪುಣೆಯಲ್ಲಿ 'ನ್ಯಾಶನಲ್ ಫಿಲ್ಮ ಅರ್ಕೈವ್ಹ' (ರಾಷ್ಟ್ರೀಯ ಫಿಲ್ಮ ಸಂಗ್ರಹಾಲಯ) ಈ ಸಂಸ್ಥೆಯ ಮುಖ್ಯ ಕಚೇರಿ ಇದೆ. ಭಾರತ ಸರಕಾರದ ವಾರ್ತಾ ಮತ್ತು ಪ್ರಸಾರಣ ಇಲಾಖೆಯ ಮಾಧ್ಯಮ ವಿಭಾಗವೆಂದು ಕ್ರಿ.ಶ. 1964ರಲ್ಲಿ ಅದರ ಸ್ಥಾಪನೆಯಾಯಿತು. ಅದರ ಹಿಂದೆ ಮೂರು ಪ್ರಮುಖ ಉದ್ದೇಶಗಳಿದ್ದವು.

- ಭವಿಷ್ಯದಲ್ಲಿಯ ಪೀಳಿಗೆಗಳಿಗಾಗಿ ದುರ್ಲಭ ಭಾರತೀಯ ಚಲನಚಿತ್ರಗಳನ್ನು ಶೋಧಿಸುವುದು. ಅವುಗಳನ್ನು ಪಡೆಯುವುದು ಹಾಗೂ ಚಲನಚಿತ್ರಗಳ ಆ ಪರಂಪರೆಯನ್ನು ರಕ್ಷಣೆಮಾಡುವುದು.
- ಚಲನಚಿತ್ರಗಳಿಗೆ ಸಂಬಂಧಿತ ವಿಷಯಗಳ ವರ್ಗೀಕರಣ ಮಾಡುವುದು, ಶಾಶ್ವತವಾಗಿ ಅವುಗಳನ್ನು ಬರೆದಿಡುವುದು ಹಾಗೂ ಸಂಶೋಧನೆ ಮಾಡುವುದು.
- ಚಲನಚಿತ್ರ ಸಂಸ್ಕೃತಿಯನ್ನು ಪ್ರಸಾರ ಮಾಡುವ ಕೇಂದ್ರವನ್ನು ಸ್ಥಾಪಿಸುವುದು.

'ಅನ್ವಯಿಕ ಇತಿಹಾಸ' ಈ ಕಾರ್ಯಕ್ಷೇತ್ರವು ಜನತೆಯಲ್ಲಿ ಇತಿಹಾಸಕ್ಕೆ ಸಂಬಂಧಿತ ಜ್ಞಾನವನ್ನು ಹೇಗೆ ನೀಡಬಲ್ಲದು, ನಮ್ಮ ಸಾಂಸ್ಕೃತಿಕ ಮತ್ತು ನೈಸರ್ಗಿಕ ಪರಂಪರೆಯ ರಕ್ಷಣೆ ಮತ್ತು ಸಂವರ್ಧನೆ ಮಾಡುವ ಸಲುವಾಗಿ ಸಮಾಜದಲ್ಲಿ ಜಾಗೃತಿಯನ್ನು ಹೇಗೆ ನಿರ್ಮಾಣ ಮಾಡಬಹುದು, ಅದರ ಸಲುವಾಗಿ ಇತಿಹಾಸದ ಜ್ಞಾನದ ಉಪಯೋಗವನ್ನು ಹೇಗೆ ಮಾಡಬಹುದು, ಆ ಸಂಬಂಧದಲ್ಲಿ ವ್ಯಾವಸಾಯಿಕ ಕೌಶಲ್ಯಗಳಲ್ಲಿ ಹಾಗೂ ಉದ್ಯೋಗ ವ್ಯವಸಾಯಗಳ ಕ್ಷೇತ್ರದಲ್ಲಿ ಹೇಗೆ ಅಭಿವೃದ್ಧಿ ಮಾಡಬಹುದು, ಇತ್ಯಾದಿ ಸಂಗತಿಗಳ ವಿಚಾರ ಮತ್ತು ಹಂಚಿಕೆಯನ್ನು ಮಾಡುವ ಕಾರ್ಯವನ್ನು ಅನ್ವಯಿಕ ಇತಿಹಾಸದಲ್ಲಿ ಮಾಡಲಾಗುತ್ತದೆ. ಎಂಬುದನ್ನು

ನಾವು ಈ ಪಾಠದಲ್ಲಿ ನೋಡಿದೆವು. ಐತಿಹಾಸಿಕ ಮತ್ತು ಸಾರ್ವಜನಿಕ ಸ್ಥಳಗಳು ವಿರೂಪಗೊಳ್ಳಬಾರದು, ಮುಂದಿನ ಪೀಳಿಗೆಗಳ ಹಿತಕ್ಕಾಗಿ ಯೋಗ್ಯ ರೀತಿಯಲ್ಲಿ ಅವುಗಳ ರಕ್ಷಣೆ ಮತ್ತು ಸಂವರ್ಧನೆಯಾಗಬೇಕಾದುದು ಅವಶ್ಯಕವಾಗಿದೆ.



## ಅಭ್ಯಾಸ

**1. (ಅ) ಕೆಳಗೆಕೊಟ್ಟ ಪರ್ಯಾಯಗಳಲ್ಲಿ ಯೋಗ್ಯ ಪರ್ಯಾಯವನ್ನು ಆಯ್ದುಕೊಂಡು ವಿಧಾನಗಳನ್ನು ಪೂರ್ಣಮಾಡಿರಿ.**

(1) ಜಗತ್ತಿನಲ್ಲಿನ ಅತ್ಯಂತ ಪ್ರಾಚೀನ ಸಂಗ್ರಹಾಲಯವು .......... ಎಂಬ ಪ್ರಾಚೀನ ನಗರದ ಉತ್ಖನನ ಮಾಡುವಾಗ ದೊರಕಿತು.

(ಅ) ನವೀ ದಿಲ್ಲಿ (ಬ) ಹರಪ್ಪಾ
(ಕ) ಉರ (ಡ) ಕೋಲಕಾತಾ

(2) ಭಾರತದ ರಾಷ್ಟ್ರೀಯ ಅಭಿಲೇಖಾಗಾರವು ......ಯಲ್ಲಿದೆ.

(ಅ) ದಿಲ್ಲಿ (ಬ) ಕೋಲಕಾತಾ
(ಕ) ಮುಂಬಯಿ (ಡ) ಚೆನ್ನೈ

**(ಬ) ಕೆಳಗಿನವುಗಳಲ್ಲಿ ತಪ್ಪಾದ ಜೋಡಿಯನ್ನು ಗುರುತಿಸಿ ಬರೆಯಿರಿ.**

(1) ಕುಟಿಯಟ್ಟಮ್- ಕೇರಳದಲ್ಲಿಯ ಸಂಸ್ಕೃತ ನಾಟ್ಯ ಪರಂಪರೆ
(2) ರಮ್ಮನ - ಪಶ್ಚಿಮ ಬಂಗಾಲದಲ್ಲಿಯ ನೃತ್ಯ
(3) ರಾಮಲೀಲಾ - ಉತ್ತರಭಾರತದಲ್ಲಿಯ ಸಾದರೀಕರಣ
(4) ಕಾಲಬೇಲಿಯಾ - ರಾಜಸ್ಥಾನದ ಜಾನಪದ ಸಂಗೀತ ಮತ್ತು ಜಾನಪದ ನೃತ್ಯ

**2. ಟಿಪ್ಪಣಿ ಬರೆಯಿರಿ.**

(1) ಅನ್ವಯಿಕ ಇತಿಹಾಸ
(2) ಅಭಿಲೇಖಾಗಾರ

**3. ಕೆಳಗಿನ ಕಲ್ಪನಾಚಿತ್ರವನ್ನು ಪೂರ್ಣಮಾಡಿರಿ.**

ಸಾಂಸ್ಕೃತಿಕ ವಿಶ್ವ ಪರಂಪರೆ
→ ಮೂರ್ತ: ............ / ............ / ............
→ ಅಮೂರ್ತ: ............ / ............ / ............

**4. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ತಂತ್ರಜ್ಞಾನದ ಇತಿಹಾಸವನ್ನು ಅಭ್ಯಸಿಸಬೇಕಾಗುತ್ತದೆ.
(2) ಜಾಗತಿಕ ವಿಶ್ವಪರಂಪರೆಯ ಸ್ಥಾನಕ್ಕೆ ಪಾತ್ರವಾಗುವ ಸ್ಥಳ (ತಾಣ)ಗಳು, ಪರಂಪರೆ ಇವುಗಳ ಪಟ್ಟಿಯನ್ನು ಯುನೆಸ್ಕೋದ ಮುಖಾಂತರ ಪ್ರಕಟಿಸಲಾಗುತ್ತದೆ.

**5. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರವಾಗಿ ಉತ್ತರ ಬರೆಯಿರಿ.**

(1) ಕೆಳಗಿನ ವಿಷಯಗಳ ಸಂಶೋಧನೆಯಲ್ಲಿ ಇತಿಹಾಸದ ಸಂಶೋಧನೆಯ ಪದ್ಧತಿಯು ಹೇಗೆ ಉಪಯುಕ್ತವಾಗಲಿದೆಯೆಂಬುದನ್ನು ಸ್ಪಷ್ಟಪಡಿಸಿರಿ.

(ಅ) ವಿಜ್ಞಾನ (ಬ) ಕಲೆ
(ಕ) ವ್ಯವಸ್ಥಾಪನಶಾಸ್ತ್ರ

(2) ಅನ್ವಯಿಕ ಇತಿಹಾಸದ ಸಂಬಂಧವು ವರ್ತಮಾನಕಾಲದ ಜೊತೆ ಹೇಗೆ ಇರುತ್ತದೆ?
(3) ಇತಿಹಾಸದ ಸಾಧನಗಳ ರಕ್ಷಣೆಯಾಗುವ ಸಲುವಾಗಿ ಕನಿಷ್ಠ 10 ಉಪಾಯಗಳನ್ನು ಸೂಚಿಸಿರಿ.
(4) ನೈಸರ್ಗಿಕ ಮತ್ತು ಸಾಂಸ್ಕೃತಿಕ ವಿಶ್ವಪರಂಪರೆಯ ರಕ್ಷಣೆಮಾಡುವ ಯೋಜನೆಯಿಂದ ಯಾವ ಸಂಗತಿಗಳು ಸಾಧ್ಯವಾಗುತ್ತವೆ?

**ಉಪಕ್ರಮ**

ಭಾರತದ ನಕಾಶೆಯಲ್ಲಿ ಜಾಗತಿಕ ಪರಂಪರೆಯ ಸ್ಥಳಗಳನ್ನು ತೋರಿಸಿರಿ.

4TAG18

# 4. ಭಾರತೀಯ ಕಲೆಗಳ ಇತಿಹಾಸ

4.1 ಕಲೆ ಎಂದರೇನು?
4.2 ಭಾರತದಲ್ಲಿಯ ದೃಶ್ಯ ಕಲಾ ಪರಂಪರೆ.
4.3 ಭಾರತದಲ್ಲಿಯ ಲಲಿತ/ಆಂಗಿಕ ಕಲಾ ಪರಂಪರೆ.
4.4 ಕಲೆ, ಅನ್ವಯಿಕ ಕಲೆ, ಮತ್ತು ಉದ್ಯೋಗಾವಕಾಶಗಳು

## 4.1 ಕಲೆ ಎಂದರೇನು?

ಸ್ವಂತದ ಅನುಭವಗಳು ಹಾಗೂ ಅವುಗಳಿಂದ ಉಂಟಾದ ಜ್ಞಾನ ಮತ್ತು ಮನಸ್ಸಿನಲ್ಲಿಯ ಭಾವಭಾವನೆಗಳನ್ನು ಇತರರ ವರೆಗೆ ತಲುಪಿಸಬೇಕು ಎಂಬುದು ಪ್ರತಿಯೊಬ್ಬ ವ್ಯಕ್ತಿಯ ಸಹಜ ಪ್ರವೃತ್ತಿಯಿರುತ್ತದೆ. ಈ ಸಹಜ ಪ್ರವೃತ್ತಿಯ ಪ್ರೇರಣೆಯಿಂದ ಯಾವಾಗ ಒಂದು ಸೌಂದರ್ಯಪೂರ್ಣ ನಿರ್ಮಿತಿ ಮಾಡಲಾಗುತ್ತದೆಯೋ, ಆಗ ಅದಕ್ಕೆ ಕಲೆ ಎಂದು ಕರೆಯಲಾಗುತ್ತದೆ. ಕಲಾನಿರ್ಮಿತಿಯ ಮೂಲದಲ್ಲಿ ಕಲಾವಿದನ ಸೃಜನಶೀಲತೆ, ಸಂವೇದನಶೀಲತೆ, ಭಾವನಾತ್ಮಕತೆ ಮತ್ತು ಕೌಶಲ್ಯ ಈ ಘಟಕಗಳು ಅತ್ಯಂತ ಮಹತ್ವದ್ದಾಗಿರುತ್ತವೆ.

**ದೃಶ್ಯಕಲೆ ಮತ್ತು ಲಲಿತಕಲೆ :** ದೃಶ್ಯಕಲೆ ಮತ್ತು ಲಲಿತಕಲೆ ಎಂದು ಕಲಾ ಪ್ರಕಾರಗಳ ವರ್ಗೀಕರಣ ಮಾಡಲಾಗುತ್ತದೆ. ಲಲಿತ ಕಲೆಗಳಿಗೆ ಆಂಗಿಕ ಕಲೆ ಎಂದೂ ಕರೆಯಲಾಗುತ್ತದೆ. ದೃಶ್ಯಕಲೆಗಳ ಉಗಮವು ಪ್ರಾಗೈತಿಹಾಸಿಕ ಕಾಲದಲ್ಲಿಯೇ ಆಯಿತೆಂಬುದನ್ನು ತೋರಿಸುವ ಅನೇಕ ಕಲಾ ನಮೂನೆಗಳು ಇಡೀ ಜಗತ್ತಿನಲ್ಲಿಯ ಶಿಲಾಯುಗೀನ ಗುಹೆಗಳಿಂದ ದೊರಕಿವೆ.

**ಜಾನಪದ ಕಲೆ ಮತ್ತು ಅಭಿಜಾತ ಕಲೆ :** ಕಲೆಯಲ್ಲಿ 'ಜಾನಪದಕಲೆ' ಮತ್ತು 'ಅಭಿಜಾತ ಕಲೆ' ಎಂಬ ಎರಡು ಪರಂಪರೆಗಳಿವೆಯೆಂದು ತಿಳಿಯಲಾಗುತ್ತದೆ. 'ಜಾನಪದ ಕಲೆ'ಯು ಶಿಲಾಯುಗದ ಕಾಲದಿಂದ ನಿರಂತರವಾಗಿ ನಡೆದುಬಂದ ಪರಂಪರೆಯಾಗಿದೆ. ಅದರ ಆವಿಷ್ಕರಣವು ಜನರ ದಿನನಿತ್ಯದ ಬದುಕಿನ ಭಾಗವಾಗಿರುತ್ತದೆ. ಅದರಿಂದಾಗಿ ಈ ಪರಂಪರೆಯಲ್ಲಿಯ ಅಭಿವ್ಯಕ್ತಿಯು ಅಧಿಕ ಸ್ವಯಂ ಪ್ರೇರಿತವಾಗಿರುತ್ತದೆ. ಸಮೂಹದಲ್ಲಿಯ ಜನರ ಪ್ರತ್ಯಕ್ಷ ಸಹಭಾಗಿತ್ವದಿಂದ ಜಾನಪದಕಲೆಯ ನಿರ್ಮಿತಿಯಾಗುತ್ತದೆ. 'ಅಭಿಜಾತ ಕಲೆ'ಯು ಪ್ರಮಾಣೀಕರಿಸಿದ ನಿಯಮಗಳ ಚೌಕಟ್ಟಿನಲ್ಲಿ ರಚಿಸಲ್ಪಟ್ಟಿರುತ್ತದೆ. ಅದನ್ನು ಕರಗತ ಮಾಡಿಕೊಳ್ಳಲು ದೀರ್ಘಕಾಲದ ತರಬೇತಿಯ ಅವಶ್ಯಕತೆ ಇರುತ್ತದೆ.

**ಕಲಾಶೈಲಿ :** ಪ್ರತಿಯೊಬ್ಬ ಕಲಾಕಾರನ ಕಲಾನಿರ್ಮಿತಿಯ ಸ್ವತಂತ್ರ ಪದ್ಧತಿ ಅಂದರೆ ಶೈಲಿ ಇರುತ್ತದೆ. ಯಾವುದೊಂದು ಪದ್ಧತಿಯು ಯಾವಾಗ ಪರಂಪರೆಯ ರೂಪವನ್ನು ಧರಿಸುತ್ತದೆಯೋ ಆಗ ಆ ಪದ್ಧತಿಯು ವಿಶಿಷ್ಟ ಕಲಾಶೈಲಿಯೆಂದು ಗುರುತಿಸಲ್ಪಡತೊಡಗುತ್ತದೆ. ಪ್ರತಿಯೊಂದು ಸಂಸ್ಕೃತಿಯಲ್ಲಿ ವಿವಿಧ ಕಾಲಖಂಡಗಳಿಗೆ ಮತ್ತು ಪ್ರದೇಶಗಳಿಗೆ ಸಂಬಂಧಿತವಾದ ವೈಶಿಷ್ಟ್ಯಪೂರ್ಣ ಕಲಾಶೈಲಿಗಳು ವಿಕಸಿತವಾಗುತ್ತವೆ. ಆ ಶೈಲಿಗಳ ಆಧಾರದಿಂದ ಆಯಾ ಸಂಸ್ಕೃತಿಗಳಲ್ಲಿಯ ಕಲೆಯ ಇತಿಹಾಸದ ಅಭ್ಯಾಸ ಮಾಡಲು ಬರುತ್ತದೆ.



**ಮರಾಠಾ ಚಿತ್ರಶೈಲಿ :** ಕಲಾಶೈಲಿಯ ಉದಾಹರಣೆಯೆಂದು ಮರಾಠಾ ಚಿತ್ರಶೈಲಿಯ ವಿಚಾರ ಮಾಡಬಹುದು. ಸಾಮಾನ್ಯವಾಗಿ ಕ್ರಿಸ್ತಶಕದ ಹದಿನೇಳನೆಯ ಶತಮಾನದ ಉತ್ತರಾರ್ಧದಲ್ಲಿ ಮರಾಠಾ ಚಿತ್ರಶೈಲಿಯು ವಿಕಸಿತವಾಗಲು ಆರಂಭವಾಯಿತು. ಈ ಶೈಲಿಯಲ್ಲಿಯ ಚಿತ್ರಗಳು ಬಣ್ಣಬಣ್ಣದ್ದಾಗಿದ್ದು ಅವು ಭಿತ್ತಿಚಿತ್ರ ಹಾಗೂ ಹಸ್ತಲಿಖಿತಗಳಲ್ಲಿಯ ಲಘುಚಿತ್ರಗಳ ರೂಪದಲ್ಲಿವೆ. ವಾಯೀ, ಮೇಣವಲಿ, ಸಾತಾರಾ ಮುಂತಾದ ಸ್ಥಳಗಳಲ್ಲಿ ಹಳೆಯ ಮಹಲುಗಳಲ್ಲಿ ಮರಾಠಾ ಚಿತ್ರಶೈಲಿಯಲ್ಲಿಯ ಕೆಲವು ಭಿತ್ತಿಚಿತ್ರಗಳು ಕಾಣಸಿಗುತ್ತವೆ. ಮರಾಠಾ ಚಿತ್ರಶೈಲಿಯ ಮೇಲೆ ರಾಜಪೂತ ಚಿತ್ರಶೈಲಿಯ ಮತ್ತು ಯುರೋಪಿಯನ್ ಚಿತ್ರಶೈಲಿಯ ಪ್ರಭಾವ ಕಂಡುಬರುತ್ತದೆ.

ಯಾವುದೊಂದು ವಿಶಿಷ್ಟ ಚಿತ್ರಶೈಲಿಯು ಯಾವ ಕಾಲದಲ್ಲಿ ವಿಕಸಿತವಾಗಿದೆಯೋ, ಆ ಕಾಲದಲ್ಲಿಯ ಜೀವನ ಮಟ್ಟ, ವೇಷಭೂಷಣ, ರೀತಿನೀತಿ ಇತ್ಯಾದಿ ಸಂಗತಿಗಳ ಅಭ್ಯಾಸವನ್ನು ಆ ಶೈಲಿಯಲ್ಲಿಯ ಚಿತ್ರಗಳ ಆಧಾರದಿಂದ ಮಾಡಲು ಬರುತ್ತದೆ.

## 4.2 ಭಾರತದಲ್ಲಿಯ ದೃಶ್ಯಕಲಾ ಪರಂಪರೆ



ಭಿತ್ತಿಚಿತ್ರ : ಬೋಧಿಸತ್ವ ಪದ್ಮಪಾಣಿ

ದೃಶ್ಯಕಲೆಗಳಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಗಳ ಸಮಾವೇಶವಾಗುತ್ತದೆ.

**ಚಿತ್ರಕಲೆ :** ಚಿತ್ರಕಲೆಯು ದ್ವಿ-ಮಿತೀಯದಾಗಿರುತ್ತದೆ. ಉದಾ., ನಿಸರ್ಗಚಿತ್ರ, ವಸ್ತುಚಿತ್ರ, ವ್ಯಕ್ತಿಚಿತ್ರ, ಕಟ್ಟಡಗಳ ರೂಪರೇಖೆ ಇತ್ಯಾದಿ ಚಿತ್ರಗಳನ್ನು ಬರೆಯಲಾಗುತ್ತದೆ. ಅದರ ಸಲುವಾಗಿ ಕಲ್ಲಿನ ತುಂಡು, ಗೋಡೆ, ಕಾಗದ, ನೂಲಿನ ಇಲ್ಲವೆ ರೇಶ್ಮೆ ಬಟ್ಟೆಯ ಹಲಗೆ, ಮಣ್ಣಿನ ಪಾತ್ರೆ ಇತ್ಯಾದಿ ಮಾಧ್ಯಮಗಳ ಉಪಯೋಗ ಮಾಡಲಾಗುತ್ತದೆ. ಉದಾ., ಅಜಂತಾ ಗುಹೆಯಲ್ಲಿಯ ಬೋಧಿಸತ್ವ ಪದ್ಮಪಾಣಿಯ ಭಿತ್ತಿಚಿತ್ರ.

**ಜಾನಪದ ಚಿತ್ರಕಲಾ ಶೈಲಿ :** ಶಿಲಾಯುಗದ ಕಾಲದಲ್ಲಿಯ ಗುಹಾಚಿತ್ರಗಳು ಅನೇಕ ದೇಶಗಳಲ್ಲಿ ಕಂಡು ಬರುತ್ತವೆ.

ಭಾರತದಲ್ಲಿ ಮಧ್ಯಪ್ರದೇಶ, ಉತ್ತರ ಪ್ರದೇಶ, ಬಿಹಾರ, ಉತ್ತರಾಖಂಡ, ಕರ್ನಾಟಕ, ಆಂಧ್ರಪ್ರದೇಶ ಮತ್ತು ತೇಲಂಗಣಾ ರಾಜ್ಯಗಳಲ್ಲಿ ಗುಹಾಚಿತ್ರಗಳಿರುವ ಸ್ಥಳಗಳಿವೆ. ಮಧ್ಯಪ್ರದೇಶದ ಭೀಮಬೇಟಕಾ ಎಂಬಲ್ಲಿಯ ಗುಹಾಚಿತ್ರಗಳು ಪ್ರಸಿದ್ಧವಾಗಿವೆ. ಭೀಮಬೇಟಕಾದ ಸಮಾವೇಶವನ್ನು ಜಾಗತಿಕ ಸಾಂಸ್ಕೃತಿಕ ವಿಶ್ವಪರಂಪರೆಯ ಸ್ಥಳಗಳಲ್ಲಿ ಮಾಡಲಾಗಿದೆ.

ಗುಹಾಚಿತ್ರಗಳಲ್ಲಿ ಮನುಷ್ಯಾಕೃತಿ, ಪ್ರಾಣಿ ಹಾಗೂ ಕೆಲವು ಜ್ಯಾಮಿತಿಯ ಆಕೃತಿಗಳ ಸಮಾವೇಶವಿರುತ್ತದೆ. ಪುರಾತನ ಶಿಲಾಯುಗದಿಂದ ಹಿಡಿದು ಬೇಸಾಯದ ಆರಂಭವಾಗುವವರೆಗಿನ ಕಾಲದ ವರೆಗೆ ಈ ಚಿತ್ರಗಳ ಶೈಲಿ, ಅವುಗಳ ವಿಷಯ ಇವುಗಳಲ್ಲಿ ಬದಲಾವಣೆಯಾಗುತ್ತ ಹೋದದ್ದು ಕಂಡುಬರುತ್ತದೆ. ಚಿತ್ರಗಳಲ್ಲಿ ಹೊಸ ಪ್ರಾಣಿ ಹಾಗೂ ವನಸ್ಪತಿಗಳ ಸಮಾವೇಶವಾದದ್ದು ಕಾಣುತ್ತದೆ, ಅದರಂತೆ ಮನುಷ್ಯಾಕೃತಿಯ ಚಿತ್ರ ಬರೆಯುವ ಪದ್ಧತಿಯಲ್ಲಿ ಹಾಗೂ ಬಳಸಿದ ಬಣ್ಣಗಳಲ್ಲಿ ಕೂಡ ವ್ಯತ್ಯಾಸವಾಗುತ್ತ ಹೋಗುತ್ತದೆ. ಈ ಚಿತ್ರಗಳಲ್ಲಿ ಕಪ್ಪು, ಕೆಂಪು, ಬಿಳಿ ಮುಂತಾದ ನೈಸರ್ಗಿಕ ದ್ರವ್ಯಗಳಿಂದ ತಯಾರಿಸಿದ ಬಣ್ಣಗಳನ್ನು ಬಳಸಲಾಗಿರುತ್ತದೆ. ಆಯಾ ಕಾಲದಲ್ಲಿಯ ಜನರ, ತಮ್ಮ ಪರಿಸರ ವಿಷಯದ ಜ್ಞಾನ ಮತ್ತು ನೈಸರ್ಗಿಕ ಮೂಲಗಳನ್ನು ಬಳಸಿಕೊಳ್ಳುವ ತಂತ್ರಜ್ಞಾನ - ಇವುಗಳ ವಿಕಾಸ ಯಾವ ರೀತಿ ಆಗುತ್ತ ಹೋಯಿತೆಂಬುದರ ಕಲ್ಪನೆಯನ್ನು ಈ ಚಿತ್ರಗಳ ಮೂಲಕ ಮಾಡಬಹುದು.

ಜಾನಪದ ಚಿತ್ರಕಲೆಯ ಪರಂಪರೆಯು ಗುಹಾಚಿತ್ರಗಳ ಪರಂಪರೆಯೊಡನೆ ಸಂಬಂಧವನ್ನು ತಿಳಿಸುವಂತಹದಾಗಿದೆ. ಮನೆಯಲ್ಲಿಯ ಮದುವೆ ಸಮಾರಂಭಗಳಲ್ಲಿ, ಹಬ್ಬ -

**ಗೊತ್ತಿದೆಯೇ ನಿಮಗೆ?**



ಮಹಾರಾಷ್ಟ್ರದಲ್ಲಿಯ ವಾರಲಿ ಚಿತ್ರಪರಂಪರೆ ಮತ್ತು ಪಿಂಗುಳ ಇಲ್ಲವೆ ಚಿತ್ರಕಥೀ ಪರಂಪರೆ ಇವು ಜಾನಪದ ಕಲಾಶೈಲಿಯ ಆಯ್ದ ಉದಾಹರಣೆಯಾಗಿವೆ. ವಾರಲಿ ಚಿತ್ರಕಲೆಯನ್ನು ಜನಪ್ರಿಯಗೊಳಿಸುವುದರಲ್ಲಿ ಠಾಣೆ ಜಿಲ್ಲೆಯಲ್ಲಿಯ ಜಿವ್ಯಾ ಸೋಮ್ಯಾ ಮಶೆ ಇವರದು ಸಿಂಹಪಾಲು. ಅವರಿಗೆ ಅವರ ವಾರಲಿ ಚಿತ್ರಗಳಿಗಾಗಿ ಭಾರತೀಯ ಹಾಗೂ ಜಾಗತಿಕ ಮಟ್ಟದ ಅನೇಕ ಪ್ರಶಸ್ತಿಗಳು ದೊರೆತಿವೆ. ಕ್ರಿ.ಶ.2011ರಲ್ಲಿ ಅವರಿಗೆ ಪದ್ಮಶ್ರೀ ಪ್ರಶಸ್ತಿ ದೊರೆತಿದೆ.

**ಇದನ್ನು ಅರಿತುಕೊಳ್ಳಿರಿ.**



ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿಯ ಸೋಮೇಶ್ವರ ಎಂಬ ಚಾಲುಕ್ಯರಾಜನು ಬರೆದ 'ಮಾನಸೋಲ್ಲಾಸ' ಅಥವಾ 'ಅಭಿಲಷಿತಾರ್ಥ ಚಿಂತಾಮಣಿ' ಗ್ರಂಥದಲ್ಲಿ ಚಿತ್ರಕಥೀ ಪರಂಪರೆಯ ವರ್ಣನೆ ಮಾಡಿದ್ದು ಕಂಡುಬರುತ್ತದೆ. ಅದರ ಮೇಲಿಂದ ಈ ಪರಂಪರೆಯ ಪ್ರಾಚೀನತೆಯ ಕಲ್ಪನೆ ಬರುತ್ತದೆ. ಸೂತ್ರದ ಗೊಂಬೆಗಳ ಇಲ್ಲವೆ ಚಿತ್ರಗಳ ಮುಖಾಂತರ

ರಾಮಾಯಣ, ಮಹಾಭಾರತಗಳಲ್ಲಿಯ ಕಥೆಗಳನ್ನು ಹೇಳುವ ಪರಂಪರೆಯೆಂದರೆ ಚಿತ್ರಕಥೀ ಪರಂಪರೆ. ಈ ಪರಂಪರೆಯಲ್ಲಿಯ ಚಿತ್ರಗಳನ್ನು ಕಾಗದದ ಮೇಲೆ ತೆಗೆದು ಅವುಗಳಿಗೆ ನೈಸರ್ಗಿಕ ಬಣ್ಣಗಳನ್ನು ಕೊಡಲಾಗಿರುತ್ತದೆ. ಒಂದು ಕಥೆಗಾಗಿ ಸುಮಾರು 30ರಿಂದ 50 ಚಿತ್ರಗಳನ್ನು ಬಳಸಲಾಗುತ್ತದೆ. ಬೇರೆ ಬೇರೆ ಕಥೆಗಳನ್ನು ಹೇಳುವ ಸಲುವಾಗಿ ತಲೆತಲಾಂತರವಾಗಿ ನಡೆದು ಬಂದ ಇಂಥ ಚಿತ್ರಗಳ ಗ್ರಂಥಗಳನ್ನು ಚಿತ್ರಕಥೀ ಪರಂಪರೆಗಳಲ್ಲಿ ಸಂರಕ್ಷಿಸಿ ಇಡಲಾಗಿರುತ್ತದೆ. ನಷ್ಟವಾಗುವುದರಲ್ಲಿದ್ದ ಈ ಪರಂಪರೆಯ ಪುನರುಜ್ಜೀವನ ಮಾಡುವ ಪ್ರಯತ್ನವನ್ನು ಸರಕಾರ ಮತ್ತು ಕಲಾವಿದರ ವತಿಯಿಂದ ಮಾಡಲಾಗುತ್ತಿದೆ.

ಹರಿದಿನಗಳಲ್ಲಿ ಗೋಡೆಗಳ ಮೇಲೆ ಚಿತ್ರ ತೆಗೆಯುವುದು, ಅಂಗಳದಲ್ಲಿ ರಂಗೋಲಿ ತೆಗೆಯುವುದು ಅದರಂತೆ ಚಿತ್ರಗಳ ಸಹಾಯದಿಂದ ಆಖ್ಯಾನಗಳನ್ನು ಹೇಳುವುದು – ಇವುಗಳಿಂದ ಪ್ರಾದೇಶಿಕ ಜಾನಪದ ಕಲೆಗಳ ಪರಂಪರೆಯಲ್ಲಿಯ ವಿವಿಧ ಚಿತ್ರಶೈಲಿಗಳು ವಿಕಸಿತವಾದವು.

**ಅಭಿಜಾತ ಚಿತ್ರಕಲೆ :** ಪ್ರಾಚೀನ ಭಾರತೀಯ ವಾಙ್ಮಯದಲ್ಲಿ ವಿವಿಧ ಕಲೆಗಳ ವಿಷಯವಾಗಿ ಸವಿಸ್ತಾರ ವಿಚಾರವಾದಂತೆ ಕಾಣುತ್ತದೆ. ಅದರಲ್ಲಿ ಒಟ್ಟು 64 ಕಲೆಗಳ ಉಲ್ಲೇಖವಿದೆ. ಅದರಲ್ಲಿ ಚಿತ್ರಕಲೆಯ ಉಲ್ಲೇಖವನ್ನು 'ಆಲೇಖ್ಯಮ್' ಇಲ್ಲವೆ 'ಆಲೇಖ್ಯ ವಿದ್ಯಾ' ಎಂಬ ಹೆಸರಿನಿಂದ ಮಾಡಲಾಗಿದೆ. ಆಲೇಖ್ಯ ವಿದ್ಯೆಯಲ್ಲಿ 'ಷಡಾಂಗಗಳು' ಎಂದರೆ ಆರು ಮಹತ್ವದ ಆಯಾಮಗಳಿವೆ. ಅವುಗಳ ವಿಚಾರವನ್ನು ಪ್ರಾಚೀನ ಭಾರತೀಯರು ಅತ್ಯಂತ ಸೂಕ್ಷ್ಮವಾಗಿ ಮಾಡಿದ್ದರು. ಅವುಗಳಲ್ಲಿ ರೂಪಭೇದ (ವಿವಿಧ ಆಕಾರ), ಪ್ರಮಾಣ (ಪ್ರಮಾಣಬದ್ಧ ರಚನೆ ಮತ್ತು ಅಳತೆ), ಭಾವ (ಭಾವ ಪ್ರದರ್ಶನ), ಲಾವಣ್ಯಯೋಜನೆ (ಸೌಂದರ್ಯ ಸ್ಪರ್ಶ), ಸಾದೃಶ್ಯತೆ (ವಾಸ್ತವದ ಸಮೀಪದ ಚಿತ್ರ) ಹಾಗೂ ವರ್ಣಿಕಾ ಭಂಗ (ಬಣ್ಣಗಳ ಯೋಜನೆ) ಇವುಗಳ ಸಮಾವೇಶವಿದೆ.

ವಿವಿಧ ಧಾರ್ಮಿಕ ಪಂಥಗಳ ಆಗಮಗ್ರಂಥ, ಪುರಾಣಗಳು ಮತ್ತು ವಾಸ್ತುಕಲೆಯ ಮೇಲಿನ ಗ್ರಂಥಗಳಲ್ಲಿ ಚಿತ್ರಕಲೆ, ಶಿಲ್ಪಕಲೆ ಇವುಗಳನ್ನು ಕುರಿತ ವಿಚಾರವನ್ನು ಮಂದಿರಗಳ ಕಟ್ಟಡದ ಸಂದರ್ಭದಲ್ಲಿ ಮಾಡಿದಂತೆ ಕಾಣುತ್ತದೆ.

**ಹಸ್ತಲಿಖಿತಗಳಲ್ಲಿಯ ಲಘುಚಿತ್ರಗಳು :** ಹಸ್ತಲಿಖಿತಗಳಲ್ಲಿಯ ಲಘು ಚಿತ್ರಗಳ ಮೇಲೆ ಆರಂಭದಲ್ಲಿ ಪರ್ಶಿಯನ್ ಶೈಲಿಯ ಪ್ರಭಾವವಿತ್ತು. ದಕ್ಷಿಣದ ಕಡೆಯ ಮುಸ್ಲಿಮ ರಾಜರ ಆಶ್ರಯದಲ್ಲಿ ದಖ್ಖನಿ ಲಘುಚಿತ್ರಶೈಲಿಯು ವಿಕಸಿತವಾಯಿತು. ಮುಘಲ ಸಾಮ್ರಾಟನಾದ ಅಕಬರನ ಆಳ್ವಿಕೆಯಲ್ಲಿ ಪರ್ಶಿಯನ್ ಮತ್ತು ಭಾರತೀಯ ಚಿತ್ರಕಾರರ ಶೈಲಿಯೊಳಗಿಂದ ಮುಘಲ ಲಘು ಚಿತ್ರಶೈಲಿಯ ಉದಯವಾಯಿತು.


ಮುಘಲ ಶೈಲಿ

**ಯುರೋಪಿಯನ್ ಚಿತ್ರಶೈಲಿ :** ಬ್ರಿಟಿಷ ಆಡಳಿತದಲ್ಲಿ ಪಾಶ್ಚಾತ್ಯ ಚಿತ್ರಶೈಲಿಯ ಪ್ರಭಾವವು ಭಾರತೀಯ ಚಿತ್ರಶೈಲಿಯ ಮೇಲೆ ಉಂಟಾದದ್ದು ಕಂಡುಬರುತ್ತದೆ. ಪುಣೆಯ ಶನಿವಾರ ವಾಡಾದಲ್ಲಿ ಸವಾಯಿ ಮಾಧವರಾವ ಪೇಶವೆಯವರ ಕಾಲದಲ್ಲಿ ಜೇಮ್ಸ ವೆಲ್ಸ ಎಂಬ ಸ್ಕಾಟಿಶ್ ಚಿತ್ರಕಾರನ ನೇತೃತ್ವದಲ್ಲಿ ಒಂದು ಕಲಾಶಾಲೆಯನ್ನು ಸ್ಥಾಪನೆ ಮಾಡಲಾಗಿತ್ತು. ಅವನು ಸವಾಯಿ ಮಾಧವರಾವ ಮತ್ತು ನಾನಾ ಫಡಣವೀಸ ಇವರ ಚಿತ್ರಗಳನ್ನು ತೆಗೆದಿದ್ದನು. ವೆಲ್ಸನ ಜೊತೆಯಲ್ಲಿ ಕೆಲಸ ಮಾಡುವ


ಸವಾಯಿ ಮಾಧವರಾವ ಮತ್ತು ನಾನಾ ಫಡಣವೀಸ


ತಮ್ಮ ಗುರುಗಳ ಜೊತೆ ತೆಗೆದ ಗಂಗಾರಾಮ ತಾಂಬಟ ಇವರ ಸ್ವ-ಚಿತ್ರ

ಒಬ್ಬ ಮರಾಠಿ ಚಿತ್ರಕಾರರಾದ ಗಂಗಾರಾಮ ತಾಂಬಟ ಇವರ ವಿಶೇಷ ಉಲ್ಲೇಖವನ್ನು ಇಲ್ಲಿ ಮಾಡಬೇಕಾಗುತ್ತದೆ. ಅವರು ಎಲ್ಲೋರಾ ಮತ್ತು ಕಾರ್ಲೆಯಲ್ಲಿಯ ಗುಹೆಗಳ ಚಿತ್ರಗಳನ್ನು ತೆಗೆದಿದ್ದರು. ಅವರ ಕೆಲವು ಚಿತ್ರಗಳನ್ನು ಅಮೇರಿಕೆಯ ಯೇಲ ವಿಶ್ವವಿದ್ಯಾಲಯದಲ್ಲಿರುವ 'ಯೇಲ ಸೆಂಟರ ಆಫ ಬ್ರಿಟಿಷ ಆರ್ಟ'ದಲ್ಲಿ ಕಾಯ್ದಿಡಲಾಗಿದೆ.

ವಸ್ತುಗಳ ಜೀವಂತ ಚಿತ್ರಣ ಮಾಡುವುದು ಪಾಶ್ಚಾತ್ಯ ಚಿತ್ರಶೈಲಿಯ ವಿಶೇಷ ವೈಶಿಷ್ಟ್ಯವೆಂದು ತಿಳಿಯಲಾಗುತ್ತದೆ. ಮುಂಬಯಿಯಲ್ಲಿ ಕ್ರಿ.ಶ. 1857ರಲ್ಲಿ ಸ್ಥಾಪನೆಯಾದ ಜೆ.ಜೆ. ಸ್ಕೂಲ ಆಫ ಆರ್ಟ ಆ್ಯಂಡ ಇಂಡಸ್ಟ್ರಿ ಈ ಪಾಶ್ಚಾತ್ಯ ಕಲಾಶೈಲಿಯ ಶಿಕ್ಷಣ ನೀಡುವ ಕಲಾಶಾಲೆಯಲ್ಲಿ ಕಲಿತ ಅನೇಕ ನಿಪುಣ ಚಿತ್ರಕಾರರು ಪ್ರಸಿದ್ಧರಾದರು. ಅವರಲ್ಲಿಯ ಪೆಸ್ತನಜಿ ಬೋಮನಜಿಯವರು ಅಜಂತಾದ ಗುಹೆಗಳಲ್ಲಿಯ ಚಿತ್ರಗಳ ಪ್ರತಿ ಕೃತಿಗಳನ್ನು ತಯಾರಿಸುವ ಕಾರ್ಯಮಾಡಿದರು.


ಅಶೋಕ ಸ್ತಂಭ

**ಶಿಲ್ಪಕಲೆ :** ಶಿಲ್ಪಕಲೆಯು ತ್ರಿಮಿತೀಯದಾಗಿರುತ್ತದೆ. ಉದಾ., ಮೂರ್ತಿ, ಪ್ರತಿಮೆ, ಕಲಾ ಕುಸುರಿನ ಪಾತ್ರೆಗಳು ಹಾಗೂ ವಸ್ತುಗಳು. ಶಿಲ್ಪಗಳನ್ನು ಕೊರೆಯಲಾಗುತ್ತದೆ ಇಲ್ಲವೆ ಆಕಾರ ಕೊಡಲಾಗುತ್ತದೆ. ಅದರ ಸಲುವಾಗಿ ಕಲ್ಲು, ಲೋಹ ಮತ್ತು ಮಣ್ಣಿನ ಉಪಯೋಗ ಮಾಡಲಾಗುತ್ತದೆ. ಎಲ್ಲೋರಾದ ಕೈಲಾಸ ಗುಹೆಗಳು ಅಖಂಡ ಕಲ್ಲಿನಲ್ಲಿ ಕೊರೆದ ಅದ್ವಿತೀಯ ಶಿಲ್ಪಗಳಾಗಿವೆ. ಸಾರನಾಥದಲ್ಲಿಯ ಅಶೋಕಸ್ತಂಭದ ಶೀರ್ಷದ ಮೇಲಿನ ನಾಲ್ಕು ಸಿಂಹಗಳ ಶಿಲ್ಪದ ಮೇಲೆ ಆಧಾರಿತವಾದ ಚಿತ್ರವು ಭಾರತದ ರಾಷ್ಟ್ರೀಯ ಲಾಂಛನವಾಗಿದೆ.

**ಜಾನಪದ ಶಿಲ್ಪಕಲಾ ಶೈಲಿ :** ಚಿತ್ರಕಲೆಯಂತೆ ಶಿಲ್ಪಕಲೆಯೂ ಕೂಡ ಶಿಲಾಯುಗದ ಕಾಲದಷ್ಟೇ ಪ್ರಾಚೀನವಾಗಿದೆ. ಕಲ್ಲಿನ ಆಯುಧಗಳನ್ನು ತಯಾರಿಸುವುದೆಂದರೆ ಒಂದು ಪ್ರಕಾರದ ಶಿಲ್ಪಕಲೆಯ ಆರಂಭವೇ ಆಗಿತ್ತು ಎಂದು ಹೇಳಬಹುದು. ಭಾರತದಲ್ಲಿ ಧಾರ್ಮಿಕ ಪ್ರಸಂಗಗಳಲ್ಲಿ ಮಣ್ಣಿನ ಮೂರ್ತಿಗಳನ್ನು ತಯಾರಿಸಿ ಅವುಗಳ ಪೂಜೆ ಮಾಡುವ ಇಲ್ಲವೆ ಅವುಗಳನ್ನು ಅರ್ಪಣೆ ಮಾಡುವ ರೂಢಿಯು ಹರಪ್ಪಾ ಸಂಸ್ಕೃತಿಯ ಕಾಲದಿಂದಲೂ ಇತ್ತು. ಅದು ಇಂದಿನವರೆಗೂ ಬಂಗಾಲ, ಬಿಹಾರ, ಗುಜರಾತ, ರಾಜಸ್ಥಾನ ಇತ್ಯಾದಿ ಅನೇಕ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿದ್ದುದು ಕಂಡುಬರುತ್ತದೆ. ಮಹಾರಾಷ್ಟ್ರದಲ್ಲಿ ತಯಾರಿಸಲಾಗುವ ಗಣೇಶ ಮೂರ್ತಿಗಳು, ಗೌರಿಯ ಮುಖವಾಡಗಳು, 'ಬೈಲಪೋಳಾ'ದ ಸಲುವಾಗಿ ತಯಾರಿಸಲಾಗುವ ಮಣ್ಣಿನ ಎತ್ತುಗಳು, ಪೂರ್ವಜರ ಸ್ಮರಣೆಗಾಗಿ ನಿಲ್ಲಿಸಿದ ಕಟ್ಟಿಗೆಯ ಮುಖವಾಡದ ಕಂಬಗಳು, ವೀರಗಲ್ಲುಗಳು, ಆದಿವಾಸಿ ಮನೆಗಳಲ್ಲಿಯ ಶೇಖರಣೆ ಮಾಡಲು ಇರುವ ಮಣ್ಣಿನ ಕಣಜ (ಉಗ್ರಾಣ)ಗಳು, ಮುಂತಾದ ಸಂಗತಿಗಳು ಜಾನಪದ ಶಿಲ್ಪಕಲಾ ಪರಂಪರೆಯ ಸಾಕ್ಷಿಯನ್ನು ನೀಡುತ್ತವೆ.

**ಅಭಿಜಾತ ಶಿಲ್ಪಕಲಾ ಶೈಲಿ :** ಹರಪ್ಪಾ ಸಂಸ್ಕೃತಿಯಲ್ಲಿಯ ಮುದ್ರೆಗಳು, ಕಲ್ಲಿನ ಮತ್ತು ಕಂಚಿನ ಪ್ರತಿಮೆಗಳು ಐದು ಸಾವಿರ ವರ್ಷ ಇಲ್ಲವೆ ಅದಕ್ಕೂ ಹೆಚ್ಚು ಪ್ರಾಚೀನವಾದ ಭಾರತೀಯ ಶಿಲ್ಪಕಲೆಯ ಪರಂಪರೆಯ ಸಾಕ್ಷಿ ನೀಡುತ್ತವೆ. ಮೌರ್ಯ ಸಾಮ್ರಾಟ ಅಶೋಕನ ಕಾಲದಲ್ಲಿಯ ಕಲ್ಲಿನ ಸ್ತಂಭದಿಂದ ಭಾರತದಲ್ಲಿಯ ಕಲ್ಲನ್ನು ಕೊರೆದು ಶಿಲ್ಪನಿರ್ಮಿತಿ ಮಾಡಲು ನಿಜವಾದ ಅರ್ಥದಲ್ಲಿ ಆರಂಭವಾಯಿತೆಂದು ಹೇಳಲಾಗುತ್ತದೆ.

ಮಧ್ಯ ಪ್ರದೇಶದಲ್ಲಿಯ ಸಾಂಚಿಯಲ್ಲಿಯ ಸ್ತೂಪವು ಪ್ರಥಮವಾಗಿ ಸಾಮ್ರಾಟ ಅಶೋಕನ ಕಾಲದಲ್ಲಿ ಸ್ಥಾಪಿಸಲ್ಪಟ್ಟಿತು. ಅದರ ಮೇಲಿನ ಸುಂದರ ಶಿಲ್ಪಗಳ ಅಲಂಕಾರವನ್ನು ಮಾತ್ರ ನಂತರದ ಕಾಲದಲ್ಲಿ ಮಾಡಲಾಗಿರಬಹುದೆಂದು ತಿಳಿಯಲಾಗುತ್ತದೆ. ಭಾರತದ ಶಿಲ್ಪಕಲೆಯ ವಿಕಾಸವು ನಂತರದ ಕಾಲದಲ್ಲಿ ಆಗತೊಡಗಿತು. ಭಾರಹೂತದಲ್ಲಿಯ ಸ್ತೂಪದ ಮೇಲಿನ ಶಿಲ್ಪಗಳು ನಮಗೆ ಇದರ ಸಾಕ್ಷಿಯನ್ನು ನೀಡುತ್ತವೆ. ಬೌದ್ಧಧರ್ಮದ ಪ್ರಸಾರವು ಭಾರತದ ಹೊರಗಡೆ ದೂರದ ವರೆಗೆ ಆಯಿತು. ಅದರಿಂದ ಆ ದೇಶಗಳಲ್ಲಿ ಸ್ತೂಪಗಳನ್ನು ನಿಲ್ಲಿಸುವ ಪರಂಪರೆ ಆರಂಭವಾಯಿತು. ಇಂಡೋನೇಶಿಯಾದಲ್ಲಿಯ ಬೋರೊಬುದುರ ಎಂಬಲ್ಲಿಯ ಸ್ತೂಪವು ಜಗತ್ತಿನಲ್ಲಿಯ ಅತ್ಯಂತ ದೊಡ್ಡ ಸ್ತೂಪವಾಗಿದೆ. ಅದು ಕ್ರಿಸ್ತಶಕ ಎಂಟನೆಯ – ಒಂಬತ್ತನೆಯ ಶತಮಾನದಲ್ಲಿ ಕಟ್ಟಲ್ಪಟ್ಟಿತು. ಕ್ರಿಸ್ತಶಕ 1991ರಲ್ಲಿ ಯುನೆಸ್ಕೊ ಬೋರೊಬುದುರವನ್ನು ಜಾಗತಿಕ ವಿಶ್ವಪರಂಪರೆಯ ಸ್ಥಳವೆಂದು ಘೋಷಣೆ ಮಾಡಿತು.


ಭಾರಹೂತ ಸ್ತೂಪ : ಶಿಲ್ಪ


ಬೋರೊಬುದುರ ಸ್ತೂಪ

**ಭಾರತೀಯ ಮೂರ್ತಿವಿಜ್ಞಾನ :** ಅಫಗಾಣಿಸ್ತಾನ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಕ್ರಿಸ್ತಶಕ ಪೂರ್ವ ಎರಡನೆಯ ಶತಮಾನದಲ್ಲಿ ಗ್ರೀಕ ಮತ್ತು ಪರ್ಶಿಯನ್ ಪ್ರಭಾವವನ್ನು ತೋರಿಸುವ ಗಾಂಧಾರ ಶಿಲ್ಪಕಲಾಶೈಲಿಯು ಉದಯವಾಯಿತು.

ಕ್ರಿಸ್ತಶಕ ಒಂದರಿಂದ ಮೂರನೆಯ ಶತಮಾನಗಳಲ್ಲಿ ಅಂದರೆ ಕುಶಾಣರ ಕಾಲದಲ್ಲಿ ಮಥುರಾ ಶಿಲ್ಪಶೈಲಿಯ ಉದಯವಾಯಿತು. ಈ ಶೈಲಿಯು ಭಾರತೀಯ ಮೂರ್ತಿವಿಜ್ಞಾನಕ್ಕೆ ಅಡಿಪಾಯ ಹಾಕಿತು.



ನಟರಾಜ

ದೇವರ ಪ್ರತಿಮೆಗಳ ಉಪಯೋಗ ಮಾಡುವ ಕಲ್ಪನೆಯನ್ನು ಕುಶಾಣ ನಾಣ್ಯಗಳ ಮೇಲೆ ಪ್ರಥಮವಾಗಿ ಕಾಣಬಹುದು. ಗುಪ್ತ ಸಾಮ್ರಾಜ್ಯದ ಕಾಲದಲ್ಲಿ ಭಾರತೀಯ ಮೂರ್ತಿ ವಿಜ್ಞಾನದ ನಿಯಮಗಳು ಸಿದ್ಧವಾಗಿ ಶಿಲ್ಪಕಲೆಯ ಅಳತೆಗೋಲು (ಒರೆಗಲ್ಲು) ನಿರ್ಮಾಣವಾಯಿತು. ಕ್ರಿಸ್ತಶಕ ಒಂಬತ್ತರಿಂದ ಹದಿಮೂರನೆಯ ಶತಮಾನಗಳಲ್ಲಿ ಚೋಳ ರಾಜರುಗಳ ಅಧಿಪತ್ಯದಲ್ಲಿ ದಕ್ಷಿಣ ಭಾರತದಲ್ಲಿ ಕಂಚಿನ ಮೂರ್ತಿಗಳನ್ನು ತಯಾರಿಸುವ ಕಲೆ ವಿಕಸಿತವಾಯಿತು. ಅವುಗಳಲ್ಲಿ ಶಿವ-ಪಾರ್ವತಿ, ನಟರಾಜ, ಲಕ್ಷ್ಮೀ, ವಿಷ್ಣು ಮುಂತಾದ ದೇವತೆಗಳ ಮೂರ್ತಿಗಳು ನಿರ್ಮಾಣವಾಗತೊಡಗಿದವು.

**ವಾಸ್ತುಶಿಲ್ಪ ಮತ್ತು ಶಿಲ್ಪಕಲೆ :** ಭಾರತದಲ್ಲಿ ಅನೇಕ ಕೊರೆದ ಗುಹೆಗಳಿವೆ. ಕೊರೆದ ಗುಹೆಗಳ ಪರಂಪರೆಯು ಭಾರತದಲ್ಲಿ ಕ್ರಿಸ್ತಶಕಪೂರ್ವ ಮೂರನೆಯ ಶತಮಾನದಲ್ಲಿ ಆರಂಭವಾಯಿತು. ತಾಂತ್ರಿಕ ದೃಷ್ಟಿಯಿಂದ ಸಂಪೂರ್ಣ ಗುಹೆಯು ವಾಸ್ತುಶಿಲ್ಪ ಮತ್ತು ಕೊರೆದ ಶಿಲ್ಪಗಳ ಸಾಮೂಹಿಕ ಉದಾಹರಣೆಯಾಗಿರುತ್ತದೆ. ಪ್ರವೇಶದ್ವಾರಗಳು, ಒಳಗಿನ ಕಂಬಗಳು ಹಾಗೂ ಮೂರ್ತಿ ಇವು ಶಿಲ್ಪಕಲೆಯ ಉತ್ತಮ ನಮೂನೆಯಾಗಿರುತ್ತವೆ. ಗೋಡೆ ಹಾಗೂ ಚಪ್ಪರಗಳ ಮೇಲೆ ಕೊರೆದ ಉತ್ತಮ ಚಿತ್ರಗಳು ಕೆಲವು ಗುಹೆಗಳಲ್ಲಿ ಇನ್ನೂವರೆಗೆ ಕೆಲವು ಪ್ರಮಾಣದಲ್ಲಿ ಉಳಿದುಕೊಂಡಿವೆ. ಮಹಾರಾಷ್ಟ್ರದಲ್ಲಿಯ ಅಜಂತಾ ಮತ್ತು ಎಲ್ಲೋರಾಗಳಲ್ಲಿಯ ಗುಹೆಗಳಿಗೆ ಕ್ರಿಸ್ತಶಕ 1983ರಲ್ಲಿ ಜಾಗತಿಕ ವಿಶ್ವಪರಂಪರೆಯ ದರ್ಜೆಯನ್ನು ನೀಡಲಾಯಿತು.

ಭಾರತದಲ್ಲಿ ಮಂದಿರ ವಾಸ್ತುಶಿಲ್ಪದ ಆರಂಭವು ಸಾಮಾನ್ಯವಾಗಿ ಕ್ರಿಸ್ತಶಕ ನಾಲ್ಕನೆಯ ಶತಮಾನದಲ್ಲಿ ಗುಪ್ತಸಾಮ್ರಾಜ್ಯದ ಕಾಲದಲ್ಲಿ ಆಯಿತು. ಗುಪ್ತಕಾಲದ ಆರಂಭದಲ್ಲಿ ಗರ್ಭಗೃಹ ಮತ್ತು ಅದರ ಹೊರಗಿನ ನಾಲ್ಕು ಸ್ತಂಭಗಳಿದ್ದ ಮುಖ ಮಂಟಪ ಇಷ್ಟೇ ಮಂದಿರದ ಸ್ವರೂಪವಿತ್ತು.



ನಾಗರ ಶೈಲಿಯ ಶಿಖರ

ಕ್ರಿಸ್ತಶಕ ಎಂಟನೆಯ ಶತಮಾನದ ವರೆಗೆ ಭಾರತದಲ್ಲಿಯ ಮಂದಿರ ವಾಸ್ತುಶಿಲ್ಪವು ಸಂಪೂರ್ಣವಾಗಿ ವಿಕಸಿತವಾಗಿತ್ತು ಎಂಬುದು ಎಲ್ಲೋರಾದಲ್ಲಿಯ ಕೈಲಾಸ ಮಂದಿರದ ಭವ್ಯ ರಚನೆಯ ಮೇಲಿಂದ ಸಹಜವಾಗಿ ಗಮನಕ್ಕೆ ಬರುತ್ತದೆ. ಮಧ್ಯಯುಗದ ಕಾಲದ ವರೆಗೆ ಭಾರತೀಯ ಮಂದಿರ ವಾಸ್ತುಶಿಲ್ಪದ ಅನೇಕ ಶೈಲಿಗಳು ವಿಕಸಿತವಾದವು. ಶಿಖರಗಳ ರಚನೆಯ ವೈಶಿಷ್ಟ್ಯಕ್ಕನುಸಾರವಾಗಿ ಈ ಶೈಲಿಗಳು ನಿರ್ಧರಿಸಲ್ಪಡುತ್ತವೆ. ಅವುಗಳಲ್ಲಿ ಉತ್ತರ ಭಾರತದಲ್ಲಿಯ 'ನಾಗರ' ಮತ್ತು ದಕ್ಷಿಣ ಭಾರತದಲ್ಲಿಯ 'ದ್ರಾವಿಡ' ಎಂಬ ಎರಡು ಶೈಲಿಗಳು ಮುಖ್ಯ ಶೈಲಿಗಳೆಂದು ತಿಳಿಯಲಾಗುತ್ತದೆ. ಈ ಎರಡೂ ಶೈಲಿಗಳೊಳಗಿಂದ ವಿಕಸಿತವಾದ ಮಿಶ್ರ ಶೈಲಿಗೆ 'ವೇಸರ' ಎಂದು ಕರೆಯಲಾಗುತ್ತದೆ. ಮಧ್ಯಪ್ರದೇಶ ಹಾಗೂ ಮಹಾರಾಷ್ಟ್ರದಲ್ಲಿ ಕಂಡುಬರುವ 'ಭೂಮಿಜ' ಮಂದಿರ ಶೈಲಿ ಮತ್ತು 'ನಾಗರ' ಮಂದಿರ ಶೈಲಿ ಇವುಗಳಲ್ಲಿ ರಚನೆಯ ದೃಷ್ಟಿಯಿಂದ ಸಾಮ್ಯ ಕಂಡುಬರುತ್ತದೆ. ಭೂಮಿಜ ಶೈಲಿಯಲ್ಲಿ ಕ್ರಮವಾಗಿ ಚಿಕ್ಕದಾಗುತ್ತ ಹೋಗುವ ಶಿಖರಗಳ ಪ್ರತಿಕೃತಿಗಳನ್ನು ಮೇಲ್ಭಾಗದ ವರೆಗೆ ರಚಿಸಲಾಗಿರುತ್ತದೆ.



ಅಜಂತಾ ಗುಹೆಗಳು - 19ನೇ ಕ್ರಮಾಂಕದ ಪ್ರವೇಶದ್ವಾರ



ದ್ರಾವಿಡ ಶೈಲಿಯ ಗೋಪುರ


**ಇದನ್ನು ತಿಳಿದುಕೊಳ್ಳಿರಿ**

ಮಹಾರಾಷ್ಟ್ರದಲ್ಲಿಯ ಹನ್ನೆರಡನೆಯ ಮತ್ತು ಹದಿಮೂರನೆಯ ಶತಮಾನಗಳಲ್ಲಿಯ ಮಂದಿರಗಳಿಗೆ 'ಹೇಮಾಡಪಂತಿ' ಮಂದಿರಗಳು ಎನ್ನುತ್ತಾರೆ. ಹೇಮಾಡಪಂತಿ ಮಂದಿರದ ಹೊರಗಿನ ಗೋಡೆಗಳು ಅನೇಕ ಸಲ ತಾರಾಕೃತಿ (ನಕ್ಷತ್ರಾಕೃತಿ)ಯದಾಗಿರುತ್ತವೆ. ತಾರಾಕೃತಿ (ನಕ್ಷತ್ರಾಕೃತಿಯ) ಮಂದಿರದ ರಚನೆಯಲ್ಲಿ ಮಂದಿರದ ಹೊರಗಿನ ಗೋಡೆಯು ಅನೇಕ ಕೋನಗಳಲ್ಲಿ ವಿಭಾಗಿಸಲ್ಪಟ್ಟಿರುತ್ತದೆ. ಅದರಿಂದಾಗಿ ಆ ಗೋಡೆಗಳು ಹಾಗೂ ಅವುಗಳ ಮೇಲಿನ ಶಿಲ್ಪಗಳ ಮೇಲೆ ಛಾಯಾ ಪ್ರಕಾಶದ ಸುಂದರ ಪರಿಣಾಮವು ಕಾಣಸಿಗುತ್ತದೆ. ಹೇಮಾಡಪಂತಿ ಮಂದಿರಗಳ ಮಹತ್ವದ ವೈಶಿಷ್ಟ್ಯವೆಂದರೆ ಗೋಡೆಯ ಕಲ್ಲುಗಳನ್ನು ಜೋಡಿಸಲು ನಡುವೆ ಸುಣ್ಣವನ್ನು ಬಳಸಿರುವುದಿಲ್ಲ. ಒಂದು ಕಲ್ಲನ್ನು ಕೆತ್ತಿ ಅದರಲ್ಲಿ ವೆಜ್ಜ (ರಂಧ್ರ) ಮಾಡಿ ಆ ವೆಜ್ಜದಲ್ಲಿ ಮತ್ತೊಂದು ಕಲ್ಲಿನ ಕೆತ್ತಿದ ಚೂಪಾದ ಭಾಗವನ್ನು ಸರಿಯಾಗಿ ಕೂಡಿಸಲಾಗುತ್ತಿತ್ತು. ಈ ರೀತಿ ಕಲ್ಲುಗಳನ್ನು ಒಂದರಲ್ಲೊಂದು ಗಟ್ಟಿಯಾಗಿ ಕೂಡಿಸಿ ಅವುಗಳ ಆಧಾರದಿಂದ ಗೋಡೆಗಳನ್ನು ನಿರ್ಮಿಸಲಾಗುತ್ತಿತ್ತು. ಮುಂಬಯಿಹತ್ತಿರದ ಅಂಬರನಾಥದಲ್ಲಿಯ ಅಂಬ್ರೇಶ್ವರ, ನಾಸಿಕಹತ್ತಿರದ ಸಿನ್ನರದಲ್ಲಿಯ ಗೋಂದೇಶ್ವರ, ಹಿಂಗೋಲಿ ಜಿಲ್ಲೆಯಲ್ಲಿಯ ಔಂಢಾ ನಾಗನಾಥ. ಇವು ಹೇಮಾಡಪಂತಿ ಮಂದಿರದ ಉತ್ತಮ ಉದಾಹರಣೆಯಾಗಿವೆ. ಅವುಗಳ ರಚನೆಯು ತಾರಾಕೃತಿ (ನಕ್ಷತ್ರಾಕೃತಿ) ಪ್ರಕಾರದ್ದಾಗಿದೆ. ಅದಲ್ಲದೆ ಮಹಾರಾಷ್ಟ್ರದಲ್ಲಿ ಅನೇಕ ಸ್ಥಳಗಳಲ್ಲಿ ಹೇಮಾಡಪಂತಿ ಮಂದಿರಗಳು ಕಂಡುಬರುತ್ತವೆ.



ಗೋಂದೇಶ್ವರ ಮಂದಿರ - ಸಿನ್ನರ

ಮಧ್ಯಯುಗೀನ ಭಾರತದಲ್ಲಿ ಮುಸ್ಲಿಮ ರಾಜರುಗಳ ಆಶ್ರಯದಲ್ಲಿ ಪರ್ಶಿಯನ್, ಮಧ್ಯ ಏಶಿಯಾದ, ಅರಬಿ ಮತ್ತು ಇಸ್ಲಾಮಪೂರ್ವ ಭಾರತೀಯ ಇತ್ಯಾದಿ ವಾಸ್ತು ಶಿಲ್ಪಶೈಲಿಯ ಅನೇಕ ಪ್ರವಾಹಗಳು ಒಂದೆಡೆ ಬಂದವು. ಅದರೊಳಗಿಂದ ಭಾರತದಲ್ಲಿಯ ಮುಸ್ಲಿಮ ವಾಸ್ತುಶಿಲ್ಪ ವಿಕಸಿತವಾಯಿತು. ಅನೇಕ ಸುಂದರ ಕಟ್ಟಡಗಳ ನಿರ್ಮಾಣ ಮಾಡಲಾಯಿತು. ದಿಲ್ಲಿ ಹತ್ತಿರದ ಮೆಹರೌಲಿ ಎಂಬಲ್ಲಿಯ ಕುತುಬಮಿನಾರ, ಆಗ್ರಾದಲ್ಲಿಯ ತಾಜಮಹಲ ಹಾಗೂ ವಿಜಾಪೂರದಲ್ಲಿಯ ಗೋಲಗುಮ್ಮಟ - ಈ ಕಟ್ಟಡಗಳು ಮುಸ್ಲಿಮ ವಾಸ್ತುಶಿಲ್ಪ ಶೈಲಿಯ ಜಗತ್ಪ್ರಸಿದ್ಧ ಉದಾಹರಣೆಗಳಾಗಿವೆ. ಕುತುಬುದ್ದೀನ ಐಬಕ (ಕ್ರಿ.ಶ. ಹನ್ನೆರಡನೇ ಶತಮಾನ) ಇವನ ಕಾಲದಲ್ಲಿ ಕುತುಬಮಿನಾರ ಕಟ್ಟುವುದಕ್ಕೆ ಆರಂಭವಾಯಿತು ಹಾಗೂ ಅಲ್ತಮಶ (ಕ್ರಿ.ಶ. ಹದಿಮೂರನೇ ಶತಮಾನ) ಇವನ ಆಳ್ವಿಕೆಯಲ್ಲಿ ಕುತುಬಮಿನಾರದ ನಾಲ್ಕು ಮಜಲುಗಳ ಕಟ್ಟಡ ಫಿರೋಜ ತುಘಲಕನ ಆಳ್ವಿಕೆಯಲ್ಲಿ ಕುತುಬಮಿನಾರದ ಕೆಲಸವು ಪೂರ್ಣವಾಯಿತು. ಕುತುಬಮಿನಾರ ಇದು ಜಗತ್ತಿನಲ್ಲಿಯ ಅತ್ಯಂತ ಎತ್ತರವಾದ ಮಿನಾರ ಇದೆ. ಅದರ ಉದ್ದಳತೆಯು 73 ಮೀಟರ (240 ಫೂಟ) ಇದೆ. ಕುತುಬಮಿನಾರವು ಯಾವ ಕಟ್ಟಡ-ಸಂಕುಲದ ಭಾಗವಾಗಿದೆಯೋ ಈ ಕುತುಬ ಕಟ್ಟಡಸಂಕುಲವನ್ನು ಯುನೆಸ್ಕೊ ಜಾಗತಿಕ ವಿಶ್ವಪರಂಪರೆಯ ಸ್ಥಳವೆಂದು ಘೋಷಣೆ ಮಾಡಿದೆ.



ಕುತುಬಮಿನಾರ

ಮುಘಲ ಸಾಮ್ರಾಟನಾದ ಶಹಾಜಹಾನ ಇವನು ತನ್ನ ಬೇಗಮ್ ಮುಮತಾಜಮಹಲಳ ಸ್ಮರಣಾರ್ಥವಾಗಿ ತಾಜಮಹಲ ನಿರ್ಮಿಸಿದನು. ತಾಜಮಹಲ ಇದನ್ನು ಮುಸ್ಲಿಮ ವಾಸ್ತು ಶಿಲ್ಪದ ಸೌಂದರ್ಯದ ಅಗ್ರಗಣ್ಯ



ತಾಜಮಹಲ

ಉದಾಹರಣೆಯೆಂದು ತಿಳಿಯಲಾಗುತ್ತದೆ. ಜಗತ್ಪ್ರಸಿದ್ಧವಾದ ಈ ಕಟ್ಟಡವನ್ನು ಜಾಗತಿಕ ವಿಶ್ವಪರಂಪರೆಯ ಸ್ಥಳವೆಂದು ಯುನೆಸ್ಕೊ ಜಾಹೀರು ಮಾಡಿದೆ.

ಕ್ರಿಸ್ತಶಕ ಹದಿನೇಳನೆಯ ಶತಮಾನದಲ್ಲಿ ನಿರ್ಮಿಸಲಾದ ವಿಜಾಪೂರದ ಗೋಲಗುಮ್ಮಟ ಈ ಅತ್ಯಂತ ಭವ್ಯ ಕಟ್ಟಡದಲ್ಲಿ ಮೊಹಮ್ಮದ ಆದಿಲಶಹಾ ಈತನ ಸಮಾಧಿ ಇದೆ. ಈ ಕಟ್ಟಡಕ್ಕೆ ಗೋಲಗುಮ್ಮಟ ಎಂಬ ಹೆಸರು ಯಾವುದರಿಂದ ದೊರಕಿದೆಯೋ ಆ ಗುಮ್ಮಟದ ಒಳಗಿನ ಸುತ್ತಳತೆಯ ಬದಿಗೆ ದುಂಡನೆಯ ಕೈಸಾಲೆಯಿದೆ. ಈ ಕೈಸಾಲೆಯಲ್ಲಿ ನಿಂತು ಗೊಣಗುಟ್ಟಿದರೂ ಆ ಧ್ವನಿಯು ಎಲ್ಲೆಡೆ ಕೇಳಿಬರುತ್ತದೆ. ಜೋರಾಗಿ ಚಪ್ಪಾಳೆ ತಟ್ಟಿದರೆ ಅನೇಕ ಸಲ ಅದರ ಪ್ರತಿಧ್ವನಿಯಾಗುತ್ತದೆ.



ಗೋಲಗುಮ್ಮಟ

ಭಾರತದಲ್ಲಿ ಬ್ರಿಟಿಷ ಆಡಳಿತದ ಸ್ಥಾಪನೆಯಾದನಂತರ ಒಂದು ಹೊಸ ವಾಸ್ತುಶಿಲ್ಪಶೈಲಿ ಉದಯಕ್ಕೆ ಬಂದಿತು. ಅದಕ್ಕೆ ಇಂಡೋ-ಗೋಥಿಕ್ ವಾಸ್ತುಶಿಲ್ಪಶೈಲಿ ಎಂದು ಕರೆಯಲಾಗುತ್ತದೆ. ಬ್ರಿಟಿಷ ಆಡಳಿತದ ಕಾಲದಲ್ಲಿ ನಿರ್ಮಿಸಲಾದ ಚರ್ಚುಗಳು, ಸರಕಾರಿ ಕಚೇರಿಗಳು, ಹಿರಿಯ ಅಧಿಕಾರಿಗಳ ನಿವಾಸಸ್ಥಾನಗಳು, ರೇಲ್ವೆ ನಿಲ್ದಾಣಗಳು ಇತ್ಯಾದಿ ಕಟ್ಟಡಗಳಲ್ಲಿ ಈ ಶೈಲಿಯು ಕಾಣಸಿಗುತ್ತದೆ. ಮುಂಬಯಿಯ 'ಛತ್ರಪತಿ ಶಿವಾಜಿ ಮಹಾರಾಜ ರೇಲ್ವೆ ಟರ್ಮಿನಸ್' ಈ ಕಟ್ಟಡವು ಈ ಶೈಲಿಯ ಉತ್ತಮ ಉದಾಹರಣೆಯಾಗಿದ್ದು ಅದು ಯುನೆಸ್ಕೊದ ಜಾಗತಿಕ ವಿಶ್ವಪರಂಪರೆಯ ಸ್ಥಳಗಳ ಪಟ್ಟಿಯಲ್ಲಿ ಸಮಾವೇಶಗೊಂಡಿದೆ.



ಛತ್ರಪತಿ ಶಿವಾಜಿ ಮಹಾರಾಜ ರೇಲ್ವೆ ಟರ್ಮಿನಸ್

## 4.3 ಭಾರತದಲ್ಲಿಯ ಲಲಿತ/ಆಂಗಿಕ ಕಲಾ ಪರಂಪರೆ


**ಜಾನಪದ ಕಲೆಯ ಪರಂಪರೆ :** ಭಾರತದ ಪ್ರತಿಯೊಂದು ಪ್ರದೇಶದಲ್ಲಿ ವೈವಿಧ್ಯಪೂರ್ಣ ಜಾನಪದಗೀತೆ, ಜಾನಪದ ವಾದ್ಯ, ಜಾನಪದ ನೃತ್ಯ ಹಾಗೂ ಜಾನಪದ ನಾಟ್ಯ ಪರಂಪರೆಗಳಿವೆ. ಮಹಾರಾಷ್ಟ್ರದಲ್ಲಿಯೂ ಜಾನಪದ ಕಲೆಯ ಅನೇಕ ಪರಂಪರೆಗಳು ಅಸ್ತಿತ್ವದಲ್ಲಿವೆ. ಧಾರ್ಮಿಕ ಉತ್ಸವ ಮತ್ತು ಸಾಮಾಜಿಕ ಜೀವನದ ಒಂದು ಅವಿಭಾಜ್ಯ ಅಂಗಗಳಾಗಿ ಈ ಜಾನಪದ ಕಲೆಗಳು ವಿಕಸಿತವಾದವು. ಕೋಳೀನೃತ್ಯ (ಮೀನುಗಾರರ ನೃತ್ಯ), ತಾರಪಾ ನೃತ್ಯ, ಕೊಂಕಣದಲ್ಲಿಯ ದಶಾವತಾರ, ಲಾವಣಿ, ಕೀರ್ತನೆ, ಜಾಗರ - ಗೋಂಧಳ (ಗೊಂದಲ) ಇವು ಅವುಗಳಲ್ಲಿಯ ಕೆಲವು ಪ್ರಮುಖ ಉದಾಹರಣೆಯಾಗಿವೆ.

**ಅಭಿಜಾತ ಕಲೆಯ ಪರಂಪರೆ :** ಭಾರತದಲ್ಲಿ ಜಾನಪದಕಲೆಗಳಂತೆ ಅಭಿಜಾತ ಕಲೆಗಳ ಸಮೃದ್ಧ ಪರಂಪರೆ ಲಭಿಸಿದೆ. ಭರತಮುನಿಗಳು ಬರೆದ 'ನಾಟ್ಯಶಾಸ್ತ್ರ' ಇದನ್ನು ಗಾಯನ, ವಾದನ, ನರ್ತನೆ, ನಾಟ್ಯ ಮುಂತಾದ ಕಲೆಗಳ ಸವಿಸ್ತಾರ ಊಹಾಪೋಹ ಮಾಡುವ ಅತ್ಯಂತ ಪ್ರಾಚೀನ ಗ್ರಂಥವೆಂದು ತಿಳಿಯಲಾಗುತ್ತದೆ. ಶೃಂಗಾರ, ಹಾಸ್ಯ, ಭೀಭತ್ಸ, ರೌದ್ರ, ಕರುಣ, ವೀರ, ಭಯಾನಕ, ಅದ್ಭುತ ಮತ್ತು ಶಾಂತ ಈ ನವರಸಗಳನ್ನು ಭಾರತೀಯ ಲಲಿತ ಕಲೆಗಳ ಸಾದರೀಕರಣದಲ್ಲಿ ಮೂಲಭೂತವೆಂದು ತಿಳಿಯಲಾಗಿದೆ.

ಹೊರದೇಶಗಳ ಜನರೊಡನೆ ಭಾರತೀಯರ ಸಂಪರ್ಕ ಬೆಳೆಯುತ್ತ ಹೋಯಿತು ಹಾಗೂ ಅದರ ಮೂಲಕ ಆ ಕಲೆಗಳ ಸಾದರೀಕರಣದಲ್ಲಿ ಅನೇಕ ಪ್ರವಾಹಗಳು ಬೆರೆಯುತ್ತ ಹೋದವು. ಅದರಿಂದಾಗಿ ಅವು ಅಧಿಕಾಧಿಕ ಸಮೃದ್ಧವಾಗುತ್ತ ಹೋದವು. ಶಾಸ್ತ್ರೀಯ ಗಾಯನ, ವಾದನ, ನೃತ್ಯ ಇವುಗಳ ವಿವಿಧ ಶೈಲಿಗಳು ಹಾಗೂ ಆ ಶೈಲಿಗಳನ್ನು ಉಳಿಸಿಕೊಂಡು ಬರುವ ಮನೆತನಗಳು ನಿರ್ಮಾಣವಾದವು.

ಭಾರತದಲ್ಲಿಯ ಶಾಸ್ತ್ರೀಯ ಗಾಯನದಲ್ಲಿ 'ಹಿಂದುಸ್ಥಾನಿ ಸಂಗೀತ' ಮತ್ತು 'ಕರ್ನಾಟಕ ಸಂಗೀತ' ಎಂಬ ಎರಡು ಪ್ರಮುಖ ಶಾಖೆಗಳಿವೆ. ಅದರಂತೆ ಶಾಸ್ತ್ರೀಯ ಮತ್ತು ಉಪಶಾಸ್ತ್ರೀಯ ಎಂಬ ಎರಡು ಭೇದಗಳಿವೆ. ಉಪಶಾಸ್ತ್ರೀಯ ಗಾಯನದಲ್ಲಿ ಅನೇಕ ಜಾನಪದ ಗೀತೆಗಳ ಶೈಲಿಗಳ ಸಮಾವೇಶವಾದುದು ಕಂಡುಬರುತ್ತದೆ.

## ಗೊತ್ತಿದೆಯೇ ನಿಮಗೆ?


نورس سور جگ جگ جوتی انپ سروکی
یوست سرستی ماتا ابراہیم پرساد بھئی دونی
دز مقام بھیر و نورس

ವಿಜಾಪೂರದ ಸುಲ್ತಾನನಾದ ಎರಡನೆಯ ಇಬ್ರಾಹಿಮ ಆದಿಲಶಾಹನು ದಕ್ಖ್ನಿ ಉರ್ದು ಭಾಷೆಯಲ್ಲಿ 'ಕಿತಾಬ-ಎ-ನವರಸ' ಎಂಬ ಗ್ರಂಥವನ್ನು ಬರೆದನು. ಈ ಗ್ರಂಥವು ಸಂಗೀತ ಶಾಸ್ತ್ರಕ್ಕೆ ಸಂಬಂಧಿತವಾಗಿದ್ದು, ಹಾಡಲು ಅನುಕೂಲವಾದ ಗೀತೆಗಳಿರುವ, ಧೃಪದ ಹಾಡುಗಾರಿಕೆಯನ್ನು ಮುಂದಿಟ್ಟು ಗೀತೆಗಳನ್ನು ಸಾಕಾರಗೊಳಿಸುವ, ಉತ್ತಮ ದರ್ಜೆಯ ಕಾವ್ಯಗ್ರಂಥದ ಅನುಭೂತಿಯನ್ನು ರಸಿಕರಿಗೆ ನೀಡುವ ಗ್ರಂಥವಾಗಿದೆ.

ಈ ಗ್ರಂಥದ ಮರಾಠಿ ಅನುವಾದ ಡಾ. ಸಯ್ಯದ ಯಾಹ್ಯಾ ನಶೀತ ಇವರು ಮಾಡಿದ್ದು ಅದರ ಮರಾಠಿ ಸಂಸ್ಕರಣ ಡಾ. ಅರುಣ ಪ್ರಭುಣೆ ಇವರು ಮಾಡಿದ್ದಾರೆ. ಈ ಗ್ರಂಥದ ಮುಖಪುಟದ ಮೇಲಿನ ದೊಹರಾದ ಅನುವಾದವು ಕೆಳಗಿನಂತಿದೆ.

''ಮಾತೆ ಸರಸ್ವತಿಯೇ ನೀನು ಜಗಜ್ಯೋತಿ ಹಾಗೂ ಅತ್ಯಂತ ಗುಣಿಯಾಗಿರುವಿ. ಇಬ್ರಾಹಿಮನ ಮೇಲೆ ನಿನ್ನ ಕೃಪೆಯಾದರೆ (ನಿನ್ನ ಆಶೀರ್ವಾದದಿಂದ) ನವರಸದ ಗೀತೆಗಳು ಯುಗ-ಯುಗಗಳಲ್ಲಿ ಜೀವಂತವಾಗಿ ಉಳಿಯುವವು.''

ಉತ್ತರ ಭಾರತದಲ್ಲಿ ಕಥಕ, ಮಹಾರಾಷ್ಟ್ರದಲ್ಲಿಯ ಲಾವಣಿ, ಓಡಿಶಾದ ಓಡಿಸೀ, ತಮಿಳುನಾಡುವಿನ ಭರತನಾಟ್ಯಂ, ಆಂಧ್ರದ ಕುಚಿಪುಡಿ, ಕೇರಳದ ಕಥಕಲಿ ಹಾಗೂ ಮೋಹಿನಿ ಅಟ್ಟಮ್ ಈ ನೃತ್ಯಶೈಲಿಗಳ ಸಾದರೀಕರಣದಲ್ಲಿ ಶಾಸ್ತ್ರೀಯ ಗಾಯನ, ವಾದನ ಮತ್ತು ನೃತ್ಯ ಇವುಗಳ ಸುಂದರ ಮೇಳವು ಕಾಣಸಿಗುತ್ತದೆ.

ಸ್ವತಂತ್ರ ಭಾರತದಲ್ಲಿ ಶಾಸ್ತ್ರೀಯ ಸಂಗೀತ ಮತ್ತು ನೃತ್ಯಗಳು ಸರ್ವಸಾಮಾನ್ಯ ರಸಿಕರ ವರೆಗೆ ತಲುಪಬೇಕೆಂಬ ದೃಷ್ಟಿಯಿಂದ ವಿವಿಧ ಸ್ಥಳಗಳಲ್ಲಿ ಸಂಗೀತ-ನೃತ್ಯ ಮಹೋತ್ಸವಗಳನ್ನು ಆಚರಿಸಲಾಗುತ್ತದೆ. ಅವುಗಳ ಆಸ್ವಾದ ಪಡೆಯಲು ಕೇವಲ ಭಾರತದಿಂದಷ್ಟೆ ಅಲ್ಲ ಪರದೇಶಗಳಿಂದಲೂ ಅನೇಕ ರಸಿಕರು ಬರುತ್ತಾರೆ. ಪುಣೆಯಲ್ಲಿ ಪ್ರತಿವರ್ಷ



ಲಾವಣೀ ನೃತ್ಯ-ಮಹಾರಾಷ್ಟ್ರ



ಕಥಕಲಿ – ಕೇರಳ

ಸವಾಯಿ ಗಂಧರ್ವರ ಹೆಸರಿನಲ್ಲಿ ನಡೆಯುವ ಸಂಗೀತ ಮಹೋತ್ಸವವು ಪ್ರಸಿದ್ಧವಾಗಿದೆ.

ಇತ್ತೀಚಿನ ಕಾಲದಲ್ಲಿ ಭಾರತೀಯ ಸಂಗೀತ ಕ್ಷೇತ್ರದಲ್ಲಿ ವಿಶಿಷ್ಟ ಶೈಲಿ ಇಲ್ಲವೆ ವಿಶಿಷ್ಟ ಮನೆತನ ಇವುಗಳ ಸೀಮೆಯನ್ನು ದಾಟಿ ಅಭಿನವ ಪ್ರಯೋಗಗಳನ್ನು ಮಾಡುವುದರ ಕಡೆಗೆ ಪ್ರವೃತ್ತಿಯಿರುವುದು ಕಂಡುಬರುತ್ತದೆ. ಅದರಲ್ಲಿ ಪಾಶ್ಚಾತ್ಯ ಸಂಗೀತ, ಪಾಶ್ಚಾತ್ಯ ನೃತ್ಯ ಇವುಗಳನ್ನು ಭಾರತೀಯ ಸಂಗೀತದ ಜೊತೆ ಜೋಡಿಸುವ ಪ್ರಯತ್ನವು ಕಾಣುತ್ತದೆ. ಈ ರೀತಿ ಹೊಸ ಶೈಲಿಯನ್ನು ವಿಕಸಿತಗೊಳಿಸುವ ಕಲಾವಿದರಲ್ಲಿ ಪ್ರಾಮುಖ್ಯವಾಗಿ ಉದಯಶಂಕರ ಇವರ ಹೆಸರನ್ನು ತೆಗೆದುಕೊಳ್ಳಬೇಕಾಗುವುದು. ಅವರು ಭಾರತೀಯ ಶಾಸ್ತ್ರೀಯ ನೃತ್ಯ ಹಾಗೂ ಯುರೋಪಿಯನ್ ರಂಗಭೂಮಿಯಲ್ಲಿಯ ನೃತ್ಯನಾಟ್ಯ ಪರಂಪರೆ ಇವುಗಳಲ್ಲಿ ಮೇಳವನ್ನುಂಟು ಮಾಡಿದರು. ಅದರ ಜೊತೆಗೆ ಅವರು ತಮ್ಮ ಶೈಲಿಯಲ್ಲಿ ಜಾನಪದನೃತ್ಯದ ವಿವಿಧ ಶೈಲಿಗಳಿಗೂ ಸ್ಥಾನ ನೀಡಿದರು. ಭಾರತೀಯ ಲಲಿತ ಕಲೆಗಳನ್ನು ಸಾದರಪಡಿಸುವ ಕ್ಷೇತ್ರವು ಈ

ರೀತಿ ವಿಸ್ತರಿಸುತ್ತಿರುವುದು ಕಂಡುಬರುತ್ತದೆ. ಈ ಸಂಗತಿಯು ಭಾರತೀಯ ದೃಶ್ಯಕಲೆಗಳ ಕ್ಷೇತ್ರದಲ್ಲಿಯೂ ಸತತವಾಗಿ ಸಂಭವಿಸುತ್ತಿದೆ.

## 4.4 ಕಲೆ, ಅನ್ವಯಿಕ ಕಲೆ ಮತ್ತು ಉದ್ಯೋಗಾವಕಾಶಗಳು

**ಕಲೆ :** ಕಲೆಯ ಇತಿಹಾಸವು ಒಂದು ಜ್ಞಾನಶಾಖೆಯಿದೆ. ಈ ಕ್ಷೇತ್ರದಲ್ಲಿ ಸಂಶೋಧನೆಯ ಮತ್ತು ಉದ್ಯೋಗದ ಅವಕಾಶಗಳು ಲಭ್ಯವಾಗಬಹುದು :

(1) ಕಲೆಯ ಇತಿಹಾಸದ ಅಭ್ಯಾಸಕರು ಪತ್ರಿಕೋದ್ಯಮದ ಕ್ಷೇತ್ರದಲ್ಲಿಯೂ ಕೆಲಸ ಮಾಡಬಲ್ಲರು.

(2) ಕಲಾ ವಸ್ತುಗಳ ಕ್ರಯ - ವಿಕ್ರಯದ ಒಂದು ಸ್ವತಂತ್ರ ವಿಶ್ವವಿದೆ. ಅಲ್ಲಿ ಕಲಾವಸ್ತುಗಳ ಮೂಲ್ಯವನ್ನು ನಿರ್ಧರಿಸುವ ಸಲುವಾಗಿ ಆ ಕಲಾ ವಸ್ತುವು ನಕಲಿ ಇಲ್ಲವಲ್ಲವೆ ಎಂಬುದನ್ನು ಪರೀಕ್ಷಿಸುವುದು ಅವಶ್ಯಕವಾಗಿರುತ್ತದೆ. ಅದಕ್ಕಾಗಿ ಕಲೆಯ ಇತಿಹಾಸದ ಆಳವಾದ ಅಭ್ಯಾಸ ಮಾಡಿರುವ ತಜ್ಞರ ಅವಶ್ಯಕತೆ ಇರುತ್ತದೆ.

(3) ಸಾಂಸ್ಕೃತಿಕ ಪರಂಪರೆಯ ರಕ್ಷಣೆ ಮತ್ತು ಸಂವರ್ಧನೆ ಹಾಗೂ ಸಾಂಸ್ಕೃತಿಕ ಪರ್ಯಟನೆ ಇವು ಹೊಸದಾಗಿ ವಿಕಸಿತವಾಗುತ್ತಿರುವ ಕ್ಷೇತ್ರಗಳಾಗಿವೆ. ಈ ಕ್ಷೇತ್ರದಲ್ಲಿಯ ಕಲೆಯ ಅಭ್ಯಾಸಕರಿಗೆ ಅನೇಕ ಉದ್ಯೋಗಾವಕಾಶಗಳು ಲಭ್ಯವಾಗಿರುತ್ತವೆ. ಅದರಲ್ಲಿ ಸಂಗ್ರಹಾಲಯ ಮತ್ತು ಅಭಿಲೇಖಾಗಾರ, ಗ್ರಂಥಾಲಯ ಮತ್ತು ವಾರ್ತಾಪ್ರಸಾರಣೆಯ ತಂತ್ರಜ್ಞಾನ, ಪುರಾತತ್ವ ಸಂಶೋಧನೆ ಹಾಗೂ ಭಾರತೀಯ ವಿದ್ಯಾ ಇತ್ಯಾದಿ ಕೆಲವು ಮಹತ್ವದ ಕ್ಷೇತ್ರಗಳಾಗಿವೆ.

**ಅನ್ವಯಿಕ ಕಲೆ :** ದೃಶ್ಯ ಮತ್ತು ಲಲಿತ ಕಲಾ ಕ್ಷೇತ್ರದಲ್ಲಿ ರಸಿಕರು ಕೇವಲ ಕಲೆಯ ರಸಾಸ್ವಾದವನ್ನು ಪಡೆಯಬೇಕೆಂದು ಕಲಾ ನಿರ್ಮಿತಿ ಮಾಡಲಾಗುತ್ತದೆ. ಸರ್ವ ಕಲಾ ಕ್ಷೇತ್ರದಲ್ಲಿಯ ಕಲಾವಿದರ ಪ್ರಾಥಮಿಕ ಉದ್ದೇಶವಾಗಿರುತ್ತದೆ. ಅದಲ್ಲದೆ ಕಲಾತ್ಮಕ ರಚನೆ ಹಾಗೂ ಉಪಯುಕ್ತತೆಗಳಲ್ಲಿ ಹೊಂದಾಣಿಕೆಯನ್ನು ಮಾಡಿ ಅನೇಕ ಪ್ರಕಾರದ ನಿರ್ಮಿತಿ ಮಾಡಲಾಗುತ್ತದೆ. ಈ ರೀತಿ ಉಪಯುಕ್ತತೆಯ ಉದ್ದೇಶವನ್ನಿಟ್ಟುಕೊಂಡು ಕಲಾ ನಿರ್ಮಿತಿ ಮಾಡುವುದೇ ಅನ್ವಯಿಕ ಕಲೆ.

(1) ಔದ್ಯೋಗಿಕ ಮತ್ತು ಜಾಹೀರಾತು ಕ್ಷೇತ್ರ, ಅದರಂತೆ ಮನೆಯ ಅಲಂಕಾರ ಹಾಗೂ ಅಲಂಕಾರದ ವಸ್ತುಗಳು, ರಂಗಭೂಮಿಯ ಮೇಲಿನ ನೇಪಥ್ಯ, ಚಲನಚಿತ್ರ ಮತ್ತು ದೂರದರ್ಶನದ ಮೇಲಿನ ಕಾರ್ಯಕ್ರಮ - ಇವುಗಳಿಗಾಗಿ ಅವಶ್ಯಕವಿರುವ ಕಲಾದಿಗ್ದರ್ಶನ, ಪ್ರಕಾಶನ ಹಾಗೂ ಮುದ್ರಣ ಕ್ಷೇತ್ರದಲ್ಲಿ ಪುಸ್ತಕಗಳು, ನಿಯತಕಾಲಿಕೆಗಳು, ವರ್ತಮಾನ ಪತ್ರಗಳು ಇತ್ಯಾದಿಗಳ ವ್ಯವಸ್ಥೆ, ಅಲಂಕಾರ ಮತ್ತು ಸುಲೇಖನ, ಗ್ರೀಟಿಂಗ ಕಾರ್ಡುಗಳು, ಆಮಂತ್ರಣ ಪತ್ರಿಕೆಗಳು, ವೈಯಕ್ತಿಕ ಲೇಖನ ಸಾಮಗ್ರಿ, ಕಾಣಿಕೆಗಳು ಮುಂತಾದ ಅನೇಕ ಸಂಗತಿಗಳಿಗಾಗಿ ಅನ್ವಯಿಕ ಕಲಾ ಕ್ಷೇತ್ರದಲ್ಲಿಯ ಬುದ್ಧಿವಂತರ ಅವಶ್ಯಕತೆ ಇರುತ್ತದೆ.

(2) ವಾಸ್ತುಶಿಲ್ಪ ಮತ್ತು ಛಾಯಾ ಚಿತ್ರಗ್ರಹಣ ಈ ಕ್ಷೇತ್ರಗಳೂ ಅನ್ವಯಿಕ ಕಲೆ ಈ ಪ್ರಕಾರದಲ್ಲಿ ಬರುತ್ತವೆ. ಸದ್ಯದ ಕಾಲದಲ್ಲಿ ಗಣಕಯಂತ್ರದ ಮೇಲೆ ತಯಾರಿಸಲಾದ ಸ್ಥಿರ ಮತ್ತು ಚಲತ್‌ಚಿತ್ರ, ನಕ್ಷೆ ಮತ್ತು ರೂಪರೇಖೆಗಳನ್ನು ಬಳಸಲಾಗುತ್ತದೆ. ಅವು ಕೂಡ ಅನ್ವಯಿಕ ಕಲೆಯ ಭಾಗಗಳೇ ಆಗಿವೆ. ಒಡವೆಗಳು, ಅಮೂಲ್ಯ ಲೋಹಗಳ ಕಲಾ ವಸ್ತುಗಳು, ಬಣ್ಣದ ನಕ್ಷಿಯ ಮಣ್ಣಿನ ಪಾತ್ರೆಗಳು, ಬಿದಿರು ಹಾಗೂ ಬೆತ್ತದ ವಸ್ತುಗಳು, ಕಾಜಿನ ಕಲಾಪೂರ್ಣ ವಸ್ತುಗಳು, ಸುಂದರ ಬಟ್ಟೆಗಳು ಹಾಗೂ ವಸ್ತ್ರಗಳು ಮುಂತಾದವುಗಳ ನಿರ್ಮಿತಿ - ಈ ರೀತಿ ಅನ್ವಯಿಕ ಕಲೆಯ ಅತ್ಯಂತ ವಿಸ್ತಾರವಾದ ಪಟ್ಟಿ ಇದೆ.

ಮೇಲಿನ ಪ್ರತಿಯೊಂದು ಕ್ಷೇತ್ರದಲ್ಲಿ ಬೌದ್ಧಿಕ ಮಟ್ಟದಲ್ಲಿ ಯಾವುದೊಂದು ಕಲ್ಪನೆಯನ್ನು ಮಂಡಿಸಿ ಅದು ಪ್ರತ್ಯಕ್ಷದಲ್ಲಿ ಬರುವವರೆಗೆ ನಿರ್ಮಿತಿಯ ಅನೇಕ ಹಂತಗಳಿರುತ್ತವೆ. ಪ್ರತಿಯೊಂದು ಹಂತದಲ್ಲಿ ದೊಡ್ಡ ಪ್ರಮಾಣದಲ್ಲಿ ತರಬೇತಿ ಹೊಂದಿದ ಮತ್ತು ಕುಶಲ ವ್ಯಕ್ತಿಗಳ ಅವಶ್ಯಕತೆ ಇರುತ್ತದೆ. ಕಲಾ ವಸ್ತುಗಳ ಉತ್ಪಾದನೆ ಮಾಡುವಾಗ ಅವುಗಳ ನಿರ್ಮಿತಿಯ ಪ್ರಕ್ರಿಯೆಯು ಕೆಲವು ವಿಶಿಷ್ಟ ಸಾಂಸ್ಕೃತಿಕ ಪರಂಪರೆಗಳಿಂದ ಬದ್ಧವಾಗಿರುತ್ತವೆ. ಈ ಕ್ಷೇತ್ರಗಳಲ್ಲಿಯ ಪ್ರಕ್ರಿಯೆಗಳಿಗೆ ಪ್ರತಿಯೊಂದು ಹಂತದ ವಿಕಾಸದ ಇತಿಹಾಸವಿರುತ್ತದೆ. ತರಬೇತಿಯ ಅಭ್ಯಾಸಕ್ರಮದಲ್ಲಿ ಕಲಾ ವಸ್ತುಗಳ ಉತ್ಪಾದನಾ ಪ್ರಕ್ರಿಯೆಯ ಔದ್ಯೋಗಿಕ, ಸಾಂಸ್ಕೃತಿಕ ಪರಂಪರೆಗಳ ಇತಿಹಾಸದ ಸಮಾವೇಶ ಮಾಡಲಾಗಿರುತ್ತದೆ.

ಮೇಲೆ ಉಲ್ಲೇಖಿಸಲಾದ ಕ್ಷೇತ್ರಗಳಲ್ಲಿ ತಾಂತ್ರಿಕ ಮತ್ತು ವ್ಯಾವಸಾಯಿಕ ಶಿಕ್ಷಣ ನೀಡುವ ಅನೇಕ ಸಂಸ್ಥೆಗಳು ಭಾರತದಲ್ಲಿವೆ. ಗುಜರಾತದಲ್ಲಿಯ ನ್ಯಾಶನಲ ಇನ್‌ಸ್ಟಿಟ್ಯೂಟ ಆಫ ಡಿಝೈನ, ಅಹಮದಾಬಾದ, ಇದು ಇಂಥ ತರಬೇತಿ ನೀಡುವ ಜಗತ್ತಿನ ಅಗ್ರಗಣ್ಯ ಸಂಸ್ಥೆಗಳಲ್ಲಿ ಒಂದಾಗಿದೆ ಎಂದು ತಿಳಿಯಲಾಗುತ್ತದೆ. ಕ್ರಿ.ಶ. 2015ರಲ್ಲಿ ಈ ಸಂಸ್ಥೆಯು ಒಂದು ಆನಲೈನ ಅಭ್ಯಾಸಕ್ರಮವನ್ನು ಆರಂಭಿಸಿದೆ.

ಮುಂದಿನ ಪಾಠದಲ್ಲಿ ನಾವು ಪ್ರಸಾರ ಮಾಧ್ಯಮಗಳು ಮತ್ತು ಇತಿಹಾಸ ಈ ವಿಷಯವನ್ನು ಕುರಿತು ಮಾಹಿತಿ ಪಡೆಯುವವರಿದ್ದೇವೆ.

## ಅಭ್ಯಾಸ

**1. (ಅ) ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ದುಕೊಂಡು ವಿಧಾನಗಳನ್ನು ಪೂರ್ಣಮಾಡಿರಿ.**

(1) ಚಿತ್ರಕಲೆ ಮತ್ತು ಶಿಲ್ಪಕಲೆಗಳು ...........ಯಲ್ಲಿ ಸಮಾವೇಶವಾಗುತ್ತವೆ.

(ಅ) ದೃಶ್ಯಕಲೆ (ಬ) ಲಲಿತ ಕಲೆ

(ಕ) ಜಾನಪದಕಲೆ (ಡ) ಅಭಿಜಾತ ಕಲೆ

(2) ಮಥುರಾ ಶಿಲ್ಪಶೈಲಿಯು ..........ರ ಕಾಲದಲ್ಲಿ ಉದಯವಾಯಿತು.

(ಅ) ಕುಶಾಣ (ಬ) ಗುಪ್ತ

(ಕ) ರಾಷ್ಟ್ರಕೂಟ (ಡ) ಮೌರ್ಯ

**(ಬ) ಕೆಳಗಿನವುಗಳಲ್ಲಿ ತಪ್ಪಾದ ಜೊತೆಯನ್ನು ಗುರುತಿಸಿ ಬರೆಯಿರಿ.**

(1) ಕುತುಬಮಿನಾರ – ಮೆಹರೌಲಿ

(2) ಗೋಲಗುಮ್ಮಟ – ವಿಜಾಪೂರ

(3) ಛತ್ರಪತಿ ಶಿವಾಜಿ ಮಹಾರಾಜ ರೇಲ್ವೆ ಟರ್ಮಿನಸ್ – ದಿಲ್ಲಿ

(4) ತಾಜಮಹಲ – ಆಗ್ರಾ

**2. ಟಿಪ್ಪಣಿ ಬರೆಯಿರಿ.**

(1) ಕಲೆ (2) ಹೇಮಾಡಪಂತಿ ಶೈಲಿ

(3) ಮರಾಠಾ ಚಿತ್ರಶೈಲಿ

**3. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಕಲೆಯ ಇತಿಹಾಸದ ಆಳವಾದ ಅಭ್ಯಾಸವಿರುವ ತಜ್ಞರ ಅವಶ್ಯಕತೆ ಇರುತ್ತದೆ.

(2) ನಷ್ಟವಾಗುವುದರಲ್ಲಿದ್ದ ಚಿತ್ರಕಥೀಯಂತಹ ಪರಂಪರೆಯ ಪುನರುಜ್ಜೀವನ ಮಾಡುವುದು ಅವಶ್ಯಕವಾಗಿದೆ.

**4. ಕೆಳಗಿನ ಕೋಷ್ಟಕವನ್ನು ಪೂರ್ಣಮಾಡಿರಿ.**

| ಮಂದಿರ ವಾಸ್ತುಶಿಲ್ಪ ಶೈಲಿ | ನಾಗರ | ದ್ರಾವಿಡ | ಹೇಮಾಡಪಂತಿ |
|---|---|---|---|
| ವೈಶಿಷ್ಟ್ಯಗಳು | | | |
| ಉದಾಹರಣೆಗಳು | | | |

**5. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರ ಉತ್ತರ ಬರೆಯಿರಿ.**

(1) ಜಾನಪದ ಚಿತ್ರಕಲಾ ಶೈಲಿಯನ್ನು ಕುರಿತು ಸವಿಸ್ತಾರ ಮಾಹಿತಿ ಬರೆಯಿರಿ.

(2) ಭಾರತದಲ್ಲಿಯ ಮುಸ್ಲಿಮ ವಾಸ್ತುಶಿಲ್ಪಶೈಲಿಯ ವೈಶಿಷ್ಟ್ಯಗಳನ್ನು ಉದಾಹರಣೆಯೊಂದಿಗೆ ಸ್ಪಷ್ಟಪಡಿಸಿರಿ.

(3) ಕಲಾಕ್ಷೇತ್ರದಲ್ಲಿ ಉದ್ಯೋಗದ ಯಾವ ಅವಕಾಶಗಳು ಲಭ್ಯವಾಗಿವೆಯೆಂಬುದನ್ನು ಸ್ಪಷ್ಟಪಡಿಸಿರಿ.

(4) 23ನೇ ಪುಟದ ಮೇಲಿನ ಚಿತ್ರವನ್ನು ನಿರೀಕ್ಷಿಸಿ ಕೆಳಗಿನ ಅಂಶಗಳ ಆಧಾರದಿಂದ ವಾರಲೀ ಚಿತ್ರಕಲೆಯ ವಿಷಯವಾಗಿ ಮಾಹಿತಿ ಬರೆಯಿರಿ.

(ಅ) ನಿಸರ್ಗದ ವರ್ಣನೆ (ಬ) ಮಾನವಾಕೃತಿಯ ಚಿತ್ರಣ

(ಕ) ವ್ಯವಸಾಯ (ಡ) ಮನೆಗಳು

**ಉಪಕ್ರಮ**

(1) ಯುನೆಸ್ಕೊ ಜಾಹೀರು ಮಾಡಿದ ಭಾರತದಲ್ಲಿಯ ಜಾಗತಿಕ ವಿಶ್ವಪರಂಪರೆಯ ಸ್ಥಳಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಿರಿ.

(2) ನಿಮ್ಮ ಪರಿಸರದಲ್ಲಿ ಮೂರ್ತಿಗಳನ್ನು ತಯಾರಿಸುವ ಕುಶಲಕರ್ಮಿಗಳ ಕೆಲಸದ ನಿರೀಕ್ಷಣೆ ಮಾಡಿರಿ ಮತ್ತು ಅವರ ಸಂದರ್ಶನ ಪಡೆಯಿರಿ.

4TJC2V

# 5. ಪ್ರಸಾರ ಮಾಧ್ಯಮಗಳು ಮತ್ತು ಇತಿಹಾಸ

**5.1 ಪ್ರಸಾರಮಾಧ್ಯಮಗಳ ಪರಿಚಯ.**
**5.2 ಪ್ರಸಾರಮಾಧ್ಯಮಗಳ ಇತಿಹಾಸ.**
**5.3 ಪ್ರಸಾರಮಾಧ್ಯಮಗಳ ಅವಶ್ಯಕತೆ.**
**5.4 ಪ್ರಸಾರಮಾಧ್ಯಮಗಳ ಮುಖಾಂತರ ದೊರೆಯುವ ಮಾಹಿತಿಯ ಚಿಕಿತ್ಸಕ ಆಕಲನೆ.**
**5.5 ಸಂಬಂಧಿತ ಉದ್ಯೋಗ ನಿರ್ಮಿತಿಯ ಕ್ಷೇತ್ರಗಳು.**

**ಯೋಚಿಸಿರಿ.**

ಮುಘಲರ ಕಾಲದಲ್ಲಿ ಬಿಹಾರದಲ್ಲಿ ಬರಗಾಲ ಬಿದ್ದಾಗ ಅದರ ವಾರ್ತೆಯು ದಿಲ್ಲಿಗೆ ಹೇಗೆ ಮುಟ್ಟುತ್ತಿದ್ದಿರಬಹುದು? ಅದರ ಮೇಲೆ ವಿಚಾರ ವಿನಿಮಯವಾಗಿ ದಿಲ್ಲಿಯ ಸಾಮ್ರಾಟನು ಯಾವ ಉಪಾಯ ಯೋಜನೆಗಳನ್ನು ಮಾಡುತ್ತಿದ್ದನೋ ಅವು ಬಿಹಾರ ತಲುಪಲು ಎಷ್ಟು ಸಮಯ ಹತ್ತುತ್ತಿರಬಹುದು?

## 5.1 ಪ್ರಸಾರಮಾಧ್ಯಮಗಳ ಪರಿಚಯ

'ಪ್ರಸಾರಮಾಧ್ಯಮಗಳು' ಈ ಶಬ್ದದಲ್ಲಿ 'ಪ್ರಸಾರ ಮತ್ತು ಮಾಧ್ಯಮಗಳು' ಎಂಬ ಎರಡು ಶಬ್ದಗಳಿವೆ. ಪ್ರಸಾರ ಇದರ ಅರ್ಥ ದೂರದ ವರೆಗೆ ತಲುಪಿಸುವುದು ಯಾವುದೊಂದು ಮಾಹಿತಿಯನ್ನು ನಾವು ಯಾವುದೊಂದು ಮಾಧ್ಯಮದ ಸಹಾಯದಿಂದ ದೂರದ ವರೆಗೆ ತಲುಪಿಸ ಬಲ್ಲೆವು. ಹಿಂದಿನ ಕಾಲದಲ್ಲಿ ರಾಜನಿಗೆ ಯಾವುದೊಂದು ವಾರ್ತೆಯನ್ನು ಸಂಪೂರ್ಣ ರಾಜ್ಯದಲ್ಲಿ ತಲುಪಿಸುವುದಿದ್ದರೆ ಅದಕ್ಕಾಗಿ ಎಷ್ಟೋ ದಿವಸ ತಗಲುತ್ತಿದ್ದವು. ಮೊದಲು ಊರೂರಲ್ಲಿ ಡಂಗುರ ಹೊಡೆಯಲಾಗುತ್ತಿತ್ತು. ಒಬ್ಬನಿಂದ ಎರಡನೆಯವನಿಗೆ, ಎರಡನೆಯವನಿಂದ ಮೂರನೆಯವನಿಗೆ ಈ ರೀತಿ ವಾರ್ತೆಯ ಪ್ರವಾಸವಾಗುತ್ತಿತ್ತು.

## 5.2 ಪ್ರಸಾರಮಾಧ್ಯಮಗಳ ಇತಿಹಾಸ


ಭಾರತದಲ್ಲಿ ಇಂಗ್ಲೀಷರ ಆಗಮನವಾದ ನಂತರ ಮುದ್ರಣಕಲೆ, ವರ್ತಮಾನಪತ್ರಗಳು ಆರಂಭವಾದವು. ವರ್ತಮಾನಪತ್ರಗಳಿಂದಾಗಿ ಮುದ್ರಿಸಿದ ವಾರ್ತೆಯು ಎಲ್ಲಕಡೆಗೆ ತಲುಪಲು ಸಹಾಯಕವಾಗತೊಡಗಿತು. ವರ್ತಮಾನಪತ್ರವು ಮಾಹಿತಿಯ ಹಾಗೂ ಜ್ಞಾನದ ಪ್ರಸಾರದ ಸಾಧನವಾಯಿತು.

**ವರ್ತಮಾನ ಪತ್ರಗಳು :** ಮುಖ್ಯವಾಗಿ ವಾರ್ತೆಗಳು, ಅಗ್ರಲೇಖ (ಸಂಪಾದಕೀಯ) ಜನರ ಅಭಿಪ್ರಾಯಗಳು, ಜಾಹೀರಾತುಗಳು, ರಂಜಕ ಮತ್ತು ಅನ್ಯಪೂರಕ ವಿಷಯ ಇವುಗಳ ಸಮಾವೇಶವಿರುವ, ನಿರ್ದಿಷ್ಟ ಸಮಯದಲ್ಲಿ ನಿಯಮಿತವಾಗಿ ಮುದ್ರಿಸಿ ವಿತರಣ ಮಾಡಲಾಗುವ ಪ್ರಕಾಶನವೇ 'ವರ್ತಮಾನಪತ್ರ'.

ವರ್ತಮಾನ ಪತ್ರಗಳು ಸ್ಥಾನಿಕ, ದೇಶಾಂತರ್ಗತ ಮತ್ತು ಜಾಗತಿಕ ಸ್ವರೂಪದ ವಿವಿಧ ವಾರ್ತೆಗಳನ್ನು ಪೂರೈಸುವ ಕಾರ್ಯ ಮಾಡುತ್ತವೆ. ವರ್ತಮಾನಪತ್ರಗಳು ಪ್ರಚಲಿತ ವಿದ್ಯಮಾನಗಳನ್ನು ನೋಂದಾಯಿಸುವ ಐತಿಹಾಸಿಕ ದಸ್ತಾವೇಜ ಆಗಿವೆ.

**ವರ್ತಮಾನ ಪತ್ರಗಳ ಪೂರ್ವ ಪೀಠಿಕೆ :** ಇಜಿಪ್ತನಲ್ಲಿ ಕ್ರಿಸ್ತಶಕ ಪೂರ್ವ ಕಾಲದಲ್ಲಿ ಸರಕಾರಿ ಆಜ್ಞೆಗಳನ್ನು ಕೊರೆದ ಲೇಖನಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಇಡಲಾಗುತ್ತಿತ್ತು. ಪ್ರಾಚೀನ ರೋಮನ್ ಸಾಮ್ರಾಜ್ಯದಲ್ಲಿ ಸರಕಾರಿ ಆಜ್ಞೆಗಳನ್ನು ಕಾಗದದ ಮೇಲೆ ಬರೆದು ಆ ಕಾಗದಗಳನ್ನು ಪ್ರಾಂತ-ಪ್ರಾಂತಗಳಲ್ಲಿ ಹಂಚಲಾಗುತ್ತಿತ್ತು. ಅದರಲ್ಲಿ ದೇಶ ಮತ್ತು ರಾಜಧಾನಿಯಲ್ಲಿಯ ಘಟನೆಗಳ ಮಾಹಿತಿ ಇರುತ್ತಿತ್ತು. ಜ್ಯೂಲಿಯಸ್ ಸೀಝರನ ಅಧಿಪತ್ಯದಲ್ಲಿ 'ಆ್ಯಕ್ಟಾ ಡಾಯರ್ನಾ' (ಡೇಲಿ ಆ್ಯಕ್ಟ್-ದೈನಂದಿನ ಘಟನೆಗಳು) ಎಂಬ ಹೆಸರಿನ ವಾರ್ತಾಪತ್ರಗಳನ್ನು, ರೋಮದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಹಚ್ಚುತ್ತಿದ್ದರು. ಇದು ಸರಕಾರಿ ನಿವೇದನೆಗಳನ್ನು ಜನತೆಯವರೆಗೆ ಮುಟ್ಟಿಸುವ ಪ್ರಭಾವಿ ಮಾರ್ಗವಾಗಿತ್ತು. ಏಳನೆಯ ಶತಮಾನದಲ್ಲಿ ಚೀನದಲ್ಲಿ ಸರಕಾರಿ ನಿವೇದನೆಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಹಂಚಲಾಗುತ್ತಿತ್ತು. ಇಂಗ್ಲಂಡಿನಲ್ಲಿ ಯುದ್ಧಗಳ ಇಲ್ಲವೆ ಮಹತ್ವದ ಘಟನೆಗಳ ಪತ್ರಿಕೆಗಳನ್ನು ಆಗಾಗ ಹಂಚಲಾಗುತ್ತಿತ್ತು. ಧರ್ಮಶಾಲೆಗಳಲ್ಲಿ ಇಳಿದುಕೊಳ್ಳುವ ಪ್ರಯಾಣಿಕರು, ಊರೂರು ಅಲೆಯುವವರು ಅಲ್ಲಿಯ ಸ್ಥಳೀಯ ಜನರಿಗೆ ದೂರದ ವಾರ್ತೆಗಳನ್ನು ವರ್ಣನೆ ಮಾಡಿ ಹೇಳುತ್ತಿದ್ದರು. ರಾಜರ ಪ್ರತಿನಿಧಿಗಳು ಬೇರೆ ಬೇರೆ ಸ್ಥಳಗಳಲ್ಲಿ ಇರುತ್ತಿದ್ದರು. ಅವರು ತಾಜಾ ವಾರ್ತೆಗಳನ್ನು ರಾಜದರ್ಬಾರಕ್ಕೆ ಕಳಿಸುತ್ತಿದ್ದರು.

**ಬೆಂಗಾಲ ಗ್ಯಾಝೆಟ್ :** ಭಾರತದಲ್ಲಿಯ ಪ್ರಥಮ ಇಂಗ್ಲೀಷ ವರ್ತಮಾನಪತ್ರವು 29 ಜನೇವರಿ 1780ರಂದು ಆರಂಭವಾಯಿತು. 'ಕಲಕತ್ತಾ ಜನರಲ ಆ್ಯಡ್‌ವ್ಹರ್ಟೈಝರ' ಅಥವಾ 'ಬೆಂಗಾಲ ಗ್ಯಾಝೆಟ್ ಎಂಬ ಹೆಸರಿನಿಂದ ಅದು ಗುರುತಿಸಲ್ಪಡುತ್ತದೆ. ಜೇಮ್ಸ ಆಗಸ್ಟಸ್ ಹಿಕಿ ಎಂಬ ಆಯ್‌ರಿಶ್ ವ್ಯಕ್ತಿಯು ಅದನ್ನು ಆರಂಭಿಸಿದನು.



ಜೇಮ್ಸ ಆಗಸ್ಟಸ್

**ದರ್ಪಣ :** 'ದರ್ಪಣ' ಈ ಪತ್ರವು 1832ರಲ್ಲಿ ಮುಂಬಯಿಯಲ್ಲಿ ಆರಂಭವಾಯಿತು. ಬಾಳಶಾಸ್ತ್ರೀ ಜಾಂಭೇಕರ ಇವರು 'ದರ್ಪಣ'ದ ಸಂಪಾದಕರಾಗಿದ್ದರು.

**ಪಟ್ಟಿಯನ್ನು ತಯಾರಿಸಿರಿ**

ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಕೆಲವು ಪ್ರಮುಖ ನೇತಾರರು ಹಾಗೂ ಅವರು ಆರಂಭಿಸಿದ ವರ್ತಮಾನ ಪತ್ರಗಳು - ಇವುಗಳ ಪಟ್ಟಿಯನ್ನು ತಯಾರಿಸಿರಿ.



ಬಾಳಶಾಸ್ತ್ರಿ ಜಾಂಭೇಕರ

'ದರ್ಪಣ'ದ ಸಂಚಿಕೆಯಲ್ಲಿಯ ವಾರ್ತೆಗಳಿಂದ ನಮಗೆ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸ ದೊರೆಯುತ್ತದೆ. ಉದಾ., (1) 'ಕಂಪನಿ' ಸರಕಾರದ ಮೂರು ಇಲಾಖೆಗಳಲ್ಲಿಯ ಜಮಾಖರ್ಚಿನ ಯಾದಿ (2) ಈ ದೇಶದ ಮೇಲೆ ರಶಿಯನ್ನರ ಆಕ್ರಮಣವಾಗುವ ಭೀತಿ (3) ಪಟ್ಟಣಗಳನ್ನು ಸ್ವಚ್ಛವಾಗಿಡುವ ಸಲುವಾಗಿ ಮಂಡಳಿಯ ನೇಮಕ (4) ಹಿಂದೂ ವಿಧವೆಯರ ಪುನರ್ವಿವಾಹ (5) ಕೋಲಕಾತಾದಲ್ಲಿ ಥಿಯೇಟರ್‌ನ ಆರಂಭ (6) ರಾಜಾರಾಮ ಮೋಹನರಾಯರ ಇಂಗ್ಲಂಡನಲ್ಲಿಯ ಕಾರ್ಯ ಇದರ ಮೇಲಿಂದ ತತ್ಕಾಲೀನ ಪರಿಸ್ಥಿತಿಯ ಮೇಲೆ ಪ್ರಕಾಶ ಬೀಳುತ್ತದೆ.



**ಗೊತ್ತಿದೆಯೇ ನಿಮಗೆ?**

'ದರ್ಪಣ' ಈ ಪ್ರಥಮ ಮರಾಠಿ ಪತ್ರಿಕೆಯ ಸಂಪಾದಕರಾದ ಬಾಳಶಾಸ್ತ್ರಿ ಜಾಂಭೇಕರ ಇವರನ್ನು ಆದ್ಯಸಂಪಾದಕರೆಂದು ಕರೆಯಲಾಗುತ್ತದೆ. 6 ಜನೇವರಿ ಈ ಅವರ ಜನ್ಮದಿನವನ್ನು 'ಪತ್ರಕಾರ ದಿನ'ವೆಂದು ಮಹಾರಾಷ್ಟ್ರದಲ್ಲಿ ಆಚರಿಸಲಾಗುತ್ತದೆ.

**ಪ್ರಭಾಕರ :** ಈ ವರ್ತಮಾನಪತ್ರವನ್ನು ಭಾವೂ ಮಹಾಜನ ಇವರು ಆರಂಭಿಸಿದರು. ಅದರಲ್ಲಿ ಫ್ರೆಂಚರ ಬಂಡಾಯದ ಇತಿಹಾಸ (ಫ್ರೆಂಚ್ ರಾಜ್ಯಕ್ರಾಂತಿ), ಲೋಕಹಿತವಾದಿ (ಗೋಪಾಳ ಹರಿ ದೇಶಮುಖ) ಇವರ ಸಮಾಜ ಬೋಧನೆ ಮಾಡುವ 'ಶತಪತ್ರಗಳು' ಪ್ರಸಿದ್ಧವಾದವು.

**ಜ್ಞಾನೋದಯ :** 'ಜ್ಞಾನೋದಯ' ಪತ್ರಿಕೆಯಲ್ಲಿ 1842ರಲ್ಲಿ ಏಶಿಯಾ ಖಂಡದ ಮತ್ತು 1851ರಲ್ಲಿ 'ಯುರೋಪದ ನಕಾಶ'ವನ್ನು ಮುದ್ರಿಸಲಾಯಿತು. ಮರಾಠಿ ವರ್ತಮಾನಪತ್ರದಲ್ಲಿ ಪ್ರಥಮ ಚಿತ್ರವನ್ನು ಮುದ್ರಿಸುವ ಗೌರವ ಜ್ಞಾನೋದಯಕ್ಕೆ ಸಲುತ್ತದೆ. ವಿದ್ಯುತ್ತಿನ ಸಹಾಯದಿಂದ ವಾರ್ತೆಗಳನ್ನು ತಲುಪಿಸುವ ಯಂತ್ರ ಅಂದರೆ ಟೆಲಿಗ್ರಾಫ 1852ರಿಂದ ಆರಂಭವಾಯಿತೆಂಬ ಮಾಹಿತಿಯು 'ಜ್ಞಾನೋದಯ'ದಿಂದ ದೊರೆಯುತ್ತದೆ. ಭಾರತದಲ್ಲಿ ಪ್ರಥಮ ರೇಲ್ವೆ ಆರಂಭವಾಯಿತೆಂಬ ವಾರ್ತೆಯು ಜ್ಞಾನೋದಯದಲ್ಲಿ 'ಚಾಕ್ಯಾ ಮ್ಹಸೋಬಾ' ಎಂಬ ಶೀರ್ಷಕದೊಂದಿಗೆ ಮುದ್ರಿಸಲ್ಪಟ್ಟಿತು. 1857ರ ಸ್ವಾತಂತ್ರ್ಯಯುದ್ಧದ ವಾರ್ತೆಗಳನ್ನು ಈ ವರ್ತಮಾನಪತ್ರದಲ್ಲಿ ಮುದ್ರಿಸಲಾಗಿತ್ತು.

ವರ್ತಮಾನಪತ್ರಗಳು ಸಮಾಜಬೋಧನೆಯ ಕಾರ್ಯ ಮಾಡುವ ಮಹತ್ವದ ಮಾಧ್ಯಮಗಳಾಗಿದ್ದವು. ಉದಾ., 'ಇಂದೂ ಪ್ರಕಾಶ' ಈ ವರ್ತಮಾನ ಪತ್ರವು ವಿಧವಾ - ವಿವಾಹವನ್ನು ಜೋರಾಗಿ ಸಮರ್ಥನೆ ಮಾಡಿತು. 'ದೀನಬಂಧು' ಇದು ಬಹುಜನ ಸಮಾಜದ ಮುಖ ಪತ್ರ. ಮಹಾತ್ಮಾ ಜ್ಯೋತಿರಾವ ಫುಲೆಯವರ ಸಹಕಾರಿಯಾದ ಕೃಷ್ಣರಾವ ಭಾಲೇಕರ ಇವರು ಈ ಪತ್ರಿಕೆಯನ್ನು ಆರಂಭಿಸಿದರು. ಈ ಪತ್ರಿಕೆಯಿಂದ ನಮಗೆ ಬಹುಜನಸಮಾಜದ ಸಮಕಾಲೀನ ಪರಿಸ್ಥಿತಿ ತಿಳಿಯುತ್ತದೆ.



**ಮಾಡಿ ನೋಡಿರಿ**

ವರ್ಗದಲ್ಲಿಯ ಪ್ರತಿಯೊಬ್ಬ ವಿದ್ಯಾರ್ಥಿಯು ವರ್ತಮಾನ ಪತ್ರದಲ್ಲಿಯ ಒಂದು ವಾರ್ತೆಯನ್ನು ಕತ್ತರಿಸಿ ತಂದು ಅದರ ನೋಟಬುಕ್ ತಯಾರಿಸಿರಿ.

**ಕೇಸರಿ ಮತ್ತು ಮರಾಠಾ :** ಸ್ವಾತಂತ್ರ್ಯಪೂರ್ವ ಕಾಲದಲ್ಲಿಯ ಭಾರತೀಯ ವರ್ತಮಾನ ಪತ್ರಗಳ ಇತಿಹಾಸದಲ್ಲಿಯ ಮಹತ್ವದ ಮೆಟ್ಟಲನ್ನು 'ಕೇಸರಿ' ಮತ್ತು 'ಮರಾಠಾ' ಈ ವರ್ತಮಾನ ಪತ್ರಗಳು ಮುಟ್ಟಿದವು. 1881ರಲ್ಲಿ ಗೋಪಾಳ ಗಣೇಶ ಆಗರಕರ ಮತ್ತು ಬಾಳ ಗಂಗಾಧರ ಟಿಳಕ ಇವರು ಈ ವರ್ತಮಾನ ಪತ್ರಗಳನ್ನು ಆರಂಭಿಸಿದರು. ಈ ಪತ್ರಗಳು ಆ ಕಾಲದ ಸಾಮಾಜಿಕ ಮತ್ತು ರಾಜಕೀಯ ಪ್ರಶ್ನೆಗಳನ್ನು ಬಯಲಿಗೆಳೆದವು. 'ದೇಶದ ಪರಿಸ್ಥಿತಿ', ದೇಶ ಭಾಷೆಯಲ್ಲಿಯ ಗ್ರಂಥ ಹಾಗೂ ವಿದೇಶದಲ್ಲಿಯ ರಾಜಕಾರಣ' ಈ ವಿಷಯಗಳಿಗೆ ಸಂಬಂಧಿತವಾದ ಲೇಖನಗಳನ್ನು ಕೇಸರಿಯು ಆರಂಭಿಸಿತು.

ಇಪ್ಪತ್ತೊಂದನೆಯ ಶತಮಾನದಲ್ಲಿ ವರ್ತಮಾನಪತ್ರಗಳು ಪ್ರಜಾಪ್ರಭುತ್ವದ ನಾಲ್ಕನೆಯ ಸ್ತಂಭ ಎಂಬ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿವೆ.

**ನಿಯತಕಾಲಿಕೆಗಳು :** ನಿರ್ದಿಷ್ಟ ಕಾಲಾವಧಿಯಲ್ಲಿ ಪ್ರಕಾಶಿತವಾಗುವ ಮುದ್ರಿತ ಸಾಹಿತ್ಯವೆಂದರೆ ನಿಯತಕಾಲಿಕೆ ಹೌದು. ಇದರಲ್ಲಿ ಸಾಪ್ತಾಹಿಕ (ವಾರ ಪತ್ರಿಕೆ), ಪಾಕ್ಷಿಕ,

ಮಾಸಿಕ, ದ್ವೈಮಾಸಿಕ, ತ್ರೈಮಾಸಿಕ, ಷಣ್ಮಾಸಿಕ, ವಾರ್ಷಿಕ ಇವುಗಳ ಸಮಾವೇಶವಾಗುತ್ತದೆ. ಇದಲ್ಲದೆ ಅನಿಯತಕಾಲಿಕ ಎಂಬ ಪ್ರಕಾರವು ರೂಢವಾಗಿದೆ. ಅನಿಯತಕಾಲಿಕದ ಪ್ರಕಾಶದ ಕಾಲವು ನಿಶ್ಚಿತವಿರುವುದಿಲ್ಲ.

**ಮಾಡಿ ನೋಡಿರಿ**

ಆಧುನಿಕ ಕಾಲದಲ್ಲಿ ಅನೇಕ ವರ್ತಮಾನಪತ್ರಗಳು ತಂತ್ರಜ್ಞಾನದ ಉಪಯೋಗ ಮಾಡಿಕೊಂಡು ಇ-ಆವೃತ್ತಿಗಳನ್ನು ಆರಂಭಿಸಿವೆ. ಅವುಗಳಿಗೆ ವಾಚಕರಿಂದ ಒಳ್ಳೆಯ ಪ್ರತಿಕ್ರಿಯೆ ದೊರೆಯುತ್ತಿದೆ.

ಇ-ವರ್ತಮಾನಪತ್ರಗಳನ್ನು ಹೇಗೆ ಓದುವುದು ಎಂಬುದನ್ನು ಶಿಕ್ಷಕರ ಸಹಾಯದಿಂದ ತಿಳಿದುಕೊಳ್ಳಿರಿ.

ಬಾಳಶಾಸ್ತ್ರಿ ಜಾಂಭೇಕರ ಇವರು ಮರಾಠಿ ಭಾಷೆಯಲ್ಲಿಯ ಮೊದಲನೆಯ ಮಾಸಪತ್ರಿಕೆ 'ದಿಗ್ದರ್ಶನ'ವನ್ನು ಆರಂಭಿಸಿದರು. ನಿಯತಕಾಲಿಕಗಳ ವಿಚಾರ ಮಾಡಲಾಗಿ 'ಪ್ರಗತಿ' (1929) ಸಾಪ್ತಾಹಿಕವು (ವಾರ ಪತ್ರಿಕೆಯು) ಮಹತ್ವದ್ದಾಗಿದೆ. ತ್ರ್ಯಂಬಕ ಶಂಕರ ಶೇಜವಲಕರ ಇವರು ಅದರ ಸಂಪಾದಕರಾಗಿದ್ದರು. 'ಪ್ರಗತಿ'ಯಲ್ಲಿ ಅವರು ಇತಿಹಾಸಶಾಸ್ತ್ರ, ಮಹಾರಾಷ್ಟ್ರದ ಇತಿಹಾಸ ಮತ್ತು ಸಾಮಾಜಿಕ ಚಳುವಳಿ ಇತ್ಯಾದಿ ವಿವಿಧ ವಿಷಯಗಳ ಮೇಲೆ ವಿಪುಲ ಲೇಖನ ಮಾಡಿದರು.

ಆಧುನಿಕ ಕಾಲದಲ್ಲಿ ಭಾರತೀಯ ಇತಿಹಾಸಕ್ಕೆ ಸಂಬಧಿತವಾದ ಅನೇಕ ನಿಯತಕಾಲಿಕಗಳು ಹೊರಡುತ್ತಿವೆ. ಉದಾ., ಮರಾಠಿ ಭಾಷೆಯಲ್ಲಿಯ 'ಭಾರತೀಯ ಇತಿಹಾಸ ಆಣಿ ಸಂಸ್ಕೃತಿ', 'ಮರಾಠವಾಡಾ ಇತಿಹಾಸ ಪರಿಷದ ಪತ್ರಿಕಾ' ಇತ್ಯಾದಿ.

**ಬನ್ನಿ, ಹುಡುಕೋಣ**

ಮೇಲಿನ ಉದಾಹರಣೆಗಳಲ್ಲದೆ ಮಹಾರಾಷ್ಟ್ರ ಹಾಗೂ ಕೇಂದ್ರ ಮಟ್ಟದಲ್ಲಿ ಇತಿಹಾಸ ಸಂಶೋಧನೆಗೆ ಸಂಬಂಧಿತವಾದ ಸಂಸ್ಥೆಗಳು/ವಿಶ್ವವಿದ್ಯಾಲಯಗಳು ಮರಾಠಿ, ಹಿಂದಿ ಹಾಗೂ ಇಂಗ್ಲೀಷ ಭಾಷೆಗಳಲ್ಲಿ ನಿಯತಕಾಲಿಕಗಳನ್ನು ಪ್ರಕಾಶಿತಗೊಳಿಸುತ್ತವೆ. ಇಂಟರ್ನೆಟ್ ಸಹಾಯದಿಂದ ಅವುಗಳನ್ನು ಹುಡುಕಿರಿ.

**ವೆಬ್ ಪತ್ರಿಕೋದ್ಯಮ :** ಅತ್ಯಾಧುನಿಕ ನಿಯತಕಾಲಿಕಗಳಲ್ಲಿ 'ವೆಬ್ ಪತ್ರಿಕೋದ್ಯಮ' ಪ್ರಕಾರದಲ್ಲಿ ಪ್ರಕಾಶಿತವಾಗುವ ನಿಯತಕಾಲಿಕಗಳ ಸಮಾವೇಶವಾಗುತ್ತದೆ. ಇದರಲ್ಲಿಯೂ 'ಇತಿಹಾಸ' ಇದು ಪ್ರಾಧಾನ್ಯದ ವಿಷಯವಾಗಿರುತ್ತದೆ. ವೆಬ್ ನ್ಯೂಜ ಪೋರ್ಟಲ್ಸ್, ಸೋಶಲ ಮೀಡಿಯಾ, ವೆಬ್ ಚಾನಲ್ಸ, ಯು ಟ್ಯೂಬಗಳಲ್ಲಿ ಇಂಗ್ಲೀಷ ಮತ್ತು ಭಾರತೀಯ ಭಾಷೆಗಳಲ್ಲಿ ವಾಚಕರಿಗಾಗಿ ಮತ್ತು ಪ್ರೇಕ್ಷಕರಿಗಾಗಿ ಮಾಹಿತಿಯನ್ನು ಲಭ್ಯಮಾಡಿ ಕೊಡಲಾಗುತ್ತದೆ.

**ಆಕಾಶವಾಣಿ :** ಸ್ವಾತಂತ್ರ್ಯಪೂರ್ವ ಕಾಲಖಂಡದಲ್ಲಿ 1924ರಲ್ಲಿ 'ಇಂಡಿಯನ್ ಬ್ರಾಡಕಾಸ್ಟಿಂಗ ಕಂಪನಿ' (ಆಯ್ ಬಿಸಿ) ಎಂಬ ಹೆಸರಿನಿಂದ ಪ್ರತಿದಿನ ಕಾರ್ಯಕ್ರಮಗಳ ಪ್ರಸಾರಣೆ ಮಾಡುವ ಒಂದು ಖಾಸಗಿ ರೇಡಿಯೊ ಕೇಂದ್ರವು ಆರಂಭವಾಯಿತು. ನಂತರ ಬ್ರಿಟಿಷ ಸರಕಾರವು ಇದೇ ಕಂಪನಿಗೆ ಇಂಡಿಯನ್ ಸ್ಟೇಟ ಬ್ರಾಡಕಾಸ್ಟಿಂಗ ಸರ್ವೀಸೆಸ್ (ಆಯ್‌ಎಸ್‌ಬಿಎಸ್) ಎಂದು ನಾಮಕರಣ ಮಾಡಿತು. 8 ಜೂನ 1936ರಂದು ಈ ಕಂಪನಿಗೆ 'ಆಲ್ ಇಂಡಿಯಾ ರೇಡಿಯೊ' (ಎಆಯ್‌ಆರ್) ಎಂದು ನಾಮಕರಣವಾಯಿತು.

ಭಾರತವು ಸ್ವತಂತ್ರವಾದ ಮೇಲೆ AIR ಭಾರತ ಸರಕಾರದ ವಾರ್ತಾ ಮತ್ತು ಪ್ರಸಾರ ಇಲಾಖೆಯ ಒಂದು ಭಾಗವಾಯಿತು. ಸರಕಾರದ ಕಾರ್ಯಕ್ರಮ ಮತ್ತು ಉಪಕ್ರಮಗಳ ಮಾಹಿತಿ ನೀಡುವ ಅಧಿಕೃತ ಕೇಂದ್ರ ಎಂಬುದು ಇದರ ಆರಂಭದ ಸ್ವರೂಪವಾಗಿತ್ತು. ಪ್ರಸಿದ್ಧ ಕವಿಗಳಾದ ಪಂಡಿತ ನರೇಂದ್ರ ಶರ್ಮಾ ಇವರ ಸೂಚನೆಯಂತೆ 'ಆಕಾಶವಾಣಿ' ಎಂಬ ಹೆಸರನ್ನು ನೀಡಲಾಯಿತು. ಆಕಾಶವಾಣಿಯ ವತಿಯಿಂದ ವಿವಿಧ ಮನರಂಜನೆಯ, ಬೋಧಪ್ರದ ಮತ್ತು ಸಾಹಿತ್ಯಿಕ ಮೌಲ್ಯವಿರುವ ಕಾರ್ಯಕ್ರಮಗಳನ್ನು ಸಾದರಪಡಿಸಲಾಗುತ್ತದೆ. ಅದೇ ರೀತಿ ರೈತರು, ಕಾರ್ಮಿಕರು, ಯುವಕರು ಮತ್ತು ಮಹಿಳೆಯರ ಸಲುವಾಗಿ ವಿಶೇಷ ಕಾರ್ಯಕ್ರಮಗಳನ್ನು ಪ್ರಸಾರಿತಗೊಳಿಸಲಾಗುತ್ತದೆ. 'ವಿವಿಧ ಭಾರತಿ' ಈ ಜನಪ್ರಿಯ ರೇಡಿಯೋ ಸೇವೆಯ ಮುಖಾಂತರ 24 ಭಾಷೆ ಮತ್ತು 146 ಆಡು ಭಾಷೆಗಳಲ್ಲಿ ಕಾರ್ಯಕ್ರಮಗಳು ಆರಂಭವಾದವು. ಇತ್ತೀಚಿನ ಕಾಲದಲ್ಲಿ ಖಾಸಗಿ ರೇಡಿಯೊ ಸೇವೆಗಳು ಆರಂಭವಾಗಿವೆ. ಉದಾ., ರೇಡಿಯೊ ಮಿರ್ಚಿ.

**ಗೊತ್ತಿದೆಯೇ ನಿಮಗೆ?**

ಭಾರತದಲ್ಲಿಯ ಮೊದಲನೆಯ ಇಂಗ್ಲೀಷ ನ್ಯೂಜ ಬುಲೆಟಿನ್ 23 ಜುಲೈ 1927ರಂದು ಮುಂಬಯಿ ರೇಡಿಯೊ ಕೇಂದ್ರದ ಮೇಲಿಂದ ಪ್ರಸಾರ ಮಾಡಲಾಯಿತು. ಆ ನಂತರ ಕೋಲಕಾತಾ ಕೇಂದ್ರದಿಂದ ಬಂಗಾಲಿ ಭಾಷೆಯಲ್ಲಿ ವಾರ್ತೆಗಳು ಆರಂಭವಾದವು.

**ದೂರದರ್ಶನ :** 15 ಸಪ್ಟಂಬರ 1959 ರಂದು ಭಾರತದ ಪ್ರಥಮ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ ಇವರು 'ದಿಲ್ಲಿ ದೂರದರ್ಶನ ಕೇಂದ್ರದ ಉದ್ಘಾಟನೆ ಮಾಡಿದರು. ಮಹಾರಾಷ್ಟ್ರದಲ್ಲಿ 1 ಮೇ 1972ರಂದು ಮುಂಬಯಿ ಕೇಂದ್ರದ ಕಾರ್ಯಕ್ರಮಗಳು ಆರಂಭವಾದವು. 15 ಅಗಷ್ಟ 1982 ರಂದು ಬಣ್ಣದ ದೂರದರ್ಶನದ ಆಗಮನವಾಯಿತು. 1991ರಲ್ಲಿ ವಿದೇಶಿ ಮತ್ತು ದೇಶಿ ಖಾಸಗಿ ವಾಹಿನಿಗಳಿಗೆ ಕೇಬಲ ತಂತ್ರದ ಮಾಧ್ಯಮದ ಮೂಲಕ ಕಾರ್ಯಕ್ರಮಗಳನ್ನು ಪ್ರಸಾರಿತಗೊಳಿಸಲು ಪರವಾನಿಗೆ ನೀಡಲಾಯಿತು. ಇಂದು ಪ್ರೇಕ್ಷಕರಿಗಾಗಿ 100ಕ್ಕಿಂತ ಹೆಚ್ಚು ವಾಹಿನಿಗಳು ಲಭ್ಯವಾಗಿವೆ.

## 5.3 ಪ್ರಸಾರಮಾಧ್ಯಮಗಳ ಅವಶ್ಯಕತೆ

ಮಾಹಿತಿಯ ಮುಕ್ತ ಪ್ರವಾಹವನ್ನು ಸಮಾಜದಲ್ಲಿ ಹರಡುವ ಸಲುವಾಗಿ ಪ್ರಸಾರಮಾಧ್ಯಮಗಳ ಅವಶ್ಯಕತೆ ಇರುತ್ತದೆ. ಅಗ್ರಲೇಖ (ಸಂಪಾದಕೀಯ), ವಿವಿಧ ಸ್ತಂಭಗಳು, ಪುರವಣಿಗಳು ವರ್ತಮಾನಪತ್ರದ ಅವಿಭಾಜ್ಯ ಅಂಗಗಳಾಗಿರುತ್ತವೆ. ಪತ್ರ ವ್ಯವಹಾರದ ಮಾಧ್ಯಮದಿಂದ ವಾಚಕರು ಕೂಡ ತಮ್ಮ ಹೇಳಿಕೆಗಳನ್ನು ಮಂಡಿಸುತ್ತಿರುತ್ತಾರೆ. ಪ್ರಜಾಪ್ರಭುತ್ವವು ಅಧಿಕ ದೃಢವಾಗಲು ವರ್ತಮಾನಪತ್ರಗಳು ಸಹಾಯ ಮಾಡಬಲ್ಲವು.

ದೂರದರ್ಶನವು ದೃಕ್-ಶ್ರಾವ್ಯ ಮಾಧ್ಯಮವಾಗಿರುವುದರಿಂದ ಅದು ವರ್ತಮಾನಪತ್ರ ಮತ್ತು ಆಕಾಶವಾಣಿಗಳ ಸೀಮೆಯನ್ನು ದಾಟಿ ಜನರಿಗೆ 'ಪ್ರತ್ಯಕ್ಷ ಏನು ಸಂಭವಿಸಿತು' ಎಂಬುದನ್ನು ತೋರಿಸಲು ಆರಂಭಿಸಿತು. ಜನರಿಗೆ ಯಾವುದೊಂದು ಘಟನೆಯ 'ಆಂಖೋ ದೇಖಾ ಹಾಲ' ನೋಡುವ ಸಲುವಾಗಿ ದೂರದರ್ಶನ ಬಿಟ್ಟು ಬೇರೆ ಪರ್ಯಾಯವಿಲ್ಲ.



**ಮಾಡಿ ನೋಡಿರಿ**

ಈಗ ಸದ್ಯದ ವಿವಿಧ ದೂರಚಿತ್ರವಾಣಿಯ ಮೇಲಿನ ವಾಹಿನಿಗಳ ಮಾಹಿತಿಯನ್ನು ನಿಮ್ಮ ಗೆಳೆಯರ ಗುಂಪಿನಲ್ಲಿ 'ಗ್ರುಪ್‌ವರ್ಕ' ಎಂದು ಬರೆದಿಡಿರಿ.


## 5.4 ಪ್ರಸಾರಮಾಧ್ಯಮಗಳ ಮುಖಾಂತರ ದೊರೆಯುವ ಮಾಹಿತಿಯ ಚಿಕಿತ್ಸಕ ಆಕಲನೆ

ಪ್ರಸಾರಮಾಧ್ಯಮಗಳ ಮುಖಾಂತರ ದೊರೆಯುವ ಮಾಹಿತಿಯ ಚಿಕಿತ್ಸಕ ಆಕಲನೆ ಮಾಡಿಕೊಳ್ಳಬೇಕಾಗುತ್ತದೆ. ಪ್ರತಿಸಲ ವರ್ತಮಾನ ಪತ್ರಗಳಿಂದ ನಮ್ಮ ಮುಂದೆ ಬರುವ ಮಾಹಿತಿಯು ವಾಸ್ತವಿಕವಾಗಿದೆಯೆಂದು ಹೇಳಲು ಬರುವುದಿಲ್ಲ. ನಾವು ಅದನ್ನು ಪರೀಕ್ಷಿಸಿಕೊಳ್ಳಬೇಕಾಗುತ್ತದೆ ಅನಧಿಕೃತ ವಾರ್ತೆಯು ಪ್ರಸಿದ್ಧವಾಗುವ ಒಂದು ಜಗತ್ಪ್ರಸಿದ್ಧ ಉದಾಹರಣೆಯಿದೆ. 'ಸ್ಟರ್ನ್' ಎಂಬ ಹೆಸರಿನ ಒಂದು ಜರ್ಮನ್ ವಾರಪತ್ರಿಕೆಯು ಎಡಾಲ್ಫ ಹಿಟ್ಲರನ ಹಸ್ತಾಕ್ಷರದಲ್ಲಿಯ ಅನೇಕ ದಿನಚರಿಗಳನ್ನು ಕೊಂಡುಕೊಂಡಿತು ಹಾಗೂ ಅವುಗಳನ್ನು ಇತರ ಪ್ರಕಾಶಕ ಕಂಪನಿಗಳಿಗೆ ಮಾರಿತು. ಹಿಟ್ಲರನ ಈ ತಥಾಕಥಿತ ಹಸ್ತಲಿಖಿತ ದಿನಚರಿ ದೊರೆತ ವಾರ್ತೆ ಪ್ರಸಿದ್ಧವಾಯಿತು. ನಂತರ ಆ ದಿನಚರಿ ಪುಸ್ತಕಗಳು ನಕಲಿ ಇವೆಯೆಂದು ಸಿದ್ಧವಾಯಿತು. ಇದರಿಂದಾಗಿ ಪ್ರಸಾರಮಾಧ್ಯಮಗಳ ಮುಖಾಂತರ ದೊರೆಯುವ ಮಾಹಿತಿಯನ್ನು ಬಳಸುವಾಗ ಕಾಳಜಿವಹಿಸಬೇಕಾಗುತ್ತದೆ.

## 5.5 ಸಂಬಂಧಿತ ಉದ್ಯೋಗ ನಿರ್ಮಿತಿಯ ಕ್ಷೇತ್ರಗಳು

ವರ್ತಮಾನಪತ್ರಗಳಿಗೆ ಪ್ರತಿದಿನ ತಾಜಾ ವಾರ್ತೆಗಳನ್ನು ವಾಚಕರವರೆಗೆ ತಲುಪಿಸುವುದಿರುತ್ತದೆ. ಈ ಕಾರ್ಯವನ್ನು ಮಾಡುತ್ತಿರುವಾಗ 'ವಾರ್ತೆಗಳ ಹಿಂದಿನ ವಾರ್ತೆ'ಯನ್ನು ಹೇಳಬೇಕಾಗುತ್ತದೆ. ಇಂಥ ಸಮಯದಲ್ಲಿ ವರ್ತಮಾನಪತ್ರಗಳಿಗೆ ಇತಿಹಾಸದ ಅವಶ್ಯಕತೆ ಉಂಟಾಗುತ್ತದೆ. ಯಾವುದೊಂದು ವಾರ್ತೆಯ ಪುನರಾವಲೋಕನ ಮಾಡುವಾಗ ಭೂತಕಾಲದಲ್ಲಿ ಅದೇ ಪ್ರಕಾರದ ಘಟನೆಯು ಬೇರೆ ಕಡೆ ಸಂಭವಿಸಿದ್ದರೆ ವರ್ತಮಾನಪತ್ರಗಳು ಆ ವಾರ್ತೆಯನ್ನು ಚೌಕಟ್ಟು ಹಾಕಿ ಮುದ್ರಿಸುತ್ತವೆ. ಆಗ ವಾಚಕನಿಗೆ ಹೆಚ್ಚಿನ ಮಾಹಿತಿ ದೊರೆಯುತ್ತದೆ ಹಾಗೂ ಘಟನೆಯ ಮೂಲದ ವರೆಗೆ ಹೋಗಲು ಬರುತ್ತದೆ.

ವರ್ತಮಾನಪತ್ರದ ಸ್ತಂಭಗಳಲ್ಲಿ ಐವತ್ತು ವರ್ಷಗಳ ಹಿಂದೆ, ನೂರು ವರ್ಷಗಳ ಹಿಂದೆ ಇತ್ಯಾದಿ ಸ್ತಂಭಗಳಿರುತ್ತವೆ. ಅವು ಇತಿಹಾಸದ ಸಾಧನಗಳು ಹಾಗೂ ಇತಿಹಾಸದ ಮೇಲೆ ಆಧಾರಿತವಾಗಿರುತ್ತವೆ. ಇಂಥ ಸ್ತಂಭಗಳಿಂದ ನಮಗೆ ಭೂತಕಾಲದಲ್ಲಿಯ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಐತಿಹಾಸಿಕ ಘಟನೆಗಳು ತಿಳಿಯುತ್ತವೆ. ಭೂತಕಾಲದ ಹಿನ್ನೆಲೆಯಲ್ಲಿ ವರ್ತಮಾನ ತಿಳಿಯಲು ಸಹಾಯವಾಗುತ್ತದೆ.



ವರ್ತಮಾನಪತ್ರಗಳು ವಿಶೇಷ ಪ್ರಸಂಗಗಳಲ್ಲಿ ಪುರವಣಿ ಇಲ್ಲವೆ ವಿಶೇಷಾಂಕಗಳನ್ನು ತೆಗೆಯಬೇಕಾಗುತ್ತದೆ. ಉದಾ., 1914ರಲ್ಲಿ ಮೊದಲನೆಯ ಮಹಾಯುದ್ಧ ಆರಂಭವಾಯಿತು. ಅದಕ್ಕೆ 2014ರಲ್ಲಿ 100 ವರ್ಷ ಪೂರ್ಣವಾದವು. ಆ ಯುದ್ಧದ ಸಂಪೂರ್ಣ ವಿಮರ್ಶೆಮಾಡುವ ಪುರವಣಿ ತೆಗೆಯುವಾಗ ಆ ಘಟನೆಯ ಇತಿಹಾಸವು ಗೊತ್ತಿರಬೇಕಾಗುತ್ತದೆ. 1942ರ ಚಲೇಜಾವ ಚಳುವಳಿಗೆ 2017ರಲ್ಲಿ 75 ವರ್ಷಗಳು ಪೂರ್ಣವಾದವು. ಇಂಥ ಪ್ರಸಂಗಗಳಲ್ಲಿ ವರ್ತಮಾನಪತ್ರಗಳು ಲೇಖ, ಅಗ್ರಲೇಖ, ದಿನ ವಿಶೇಷ, ವಿಮರ್ಶೆ ಇವುಗಳ ಮುಖಾಂತರ ಆ ಘಟನೆಯನ್ನು ಅವಲೋಕಿಸುತ್ತವೆ. ಆ ಸಮಯದಲ್ಲಿ ಇತಿಹಾಸದ ಅಭ್ಯಾಸವು ಉಪಯೋಗಕ್ಕೆ ಬರುತ್ತದೆ.



**ಮಾಡಿ ನೋಡಿರಿ**

ವರ್ತಮಾನಪತ್ರಗಳು ಒಗಟುಗಳಿಗಾಗಿ ಕೂಡ ಇತಿಹಾಸದ ಆಧಾರ ಪಡೆಯುತ್ತವೆ. ನೀವೂ ಕೂಡ ಬೇರೆ ಬೇರೆ ಪದಬಂಧಗಳನ್ನು ತಯಾರಿಸುವ ಪ್ರಯತ್ನ ಮಾಡಿ ನೋಡಿರಿ. ಉದಾ., ಕೋಟೆಗಳ ಹೆಸರುಗಳನ್ನು ಉಪಯೋಗಿಸಿ ಮಾಡಿದ ಪದಬಂಧಗಳು.

ಆಕಾಶವಾಣಿಯ ಸಲುವಾಗಿ ಕೂಡ ಇತಿಹಾಸವು ಮಹತ್ವದ ವಿಷಯವಾಗಿರುತ್ತದೆ. ಉದಾ., 15 ಅಗಸ್ಟ 1947 ಅಥವಾ ಅದರ ನಂತರದ ಸ್ವಾತಂತ್ರ್ಯದಿನದ ನಿಮಿತ್ತವಾಗಿ ಮಾಡಿದ ಪ್ರಧಾನ ಮಂತ್ರಿಗಳ ಭಾಷಣಗಳು ಆಕಾಶವಾಣಿಯ ಸಂಗ್ರಹದಲ್ಲಿದ್ದು, ಸಮಕಾಲೀನ ಪರಿಸ್ಥಿತಿಯನ್ನು ತಿಳಿದುಕೊಳ್ಳುವ ಸಲುವಾಗಿ ಅದರ ಉಪಯೋಗವಾಗುತ್ತದೆ.

**ಅರಿತುಕೊಳ್ಳಿರಿ.**

1942ರ ಚಳುವಳಿಯಲ್ಲಿ ಭೂಮಿಗತ ರೇಡಿಯೊ ಕೇಂದ್ರಗಳು ನಿರ್ವಹಿಸಿದ ಕಾರ್ಯದ ಮಾಹಿತಿಯನ್ನು ಶಿಕ್ಷಕರ ಸಹಾಯದಿಂದ ಪಡೆಯಿರಿ.

ಆಕಾಶವಾಣಿಗೆ ಕೆಲವು ವಿಶೇಷ ಕಾರ್ಯಕ್ರಮಗಳ ಪ್ರಸಂಗದಲ್ಲಿ ಇತಿಹಾಸದ ಅಭ್ಯಾಸಕರ ಅವಶ್ಯಕತೆ ಉಂಟಾಗುತ್ತದೆ. ರಾಷ್ಟ್ರೀಯ ಧುರೀಣರ ಜಯಂತಿ ಇಲ್ಲವೆ ಪುಣ್ಯತಿಥಿ, ಯಾವುದೊಂದು ಐತಿಹಾಸಿಕ ಘಟನೆಗೆ 1 ವರ್ಷ, 25 ವರ್ಷ, 50 ವರ್ಷ 100 ವರ್ಷ ಅಥವಾ ಅದಕ್ಕಿಂತ ಆ ಪಟ್ಟಿನಲ್ಲಿ ಹೆಚ್ಚು ವರ್ಷಗಳು ಪೂರ್ಣವಾಗುತ್ತಿದ್ದರೆ ಅದರ ಬಗ್ಗೆ ಚರ್ಚೆ ಮಾಡಲು ಆ ಘಟನೆಯ ಮಾಹಿತಿ ಬೇಕಾಗುತ್ತದೆ. ರಾಷ್ಟ್ರೀಯ ಪುರುಷರ ಕಾರ್ಯಗಳನ್ನು ಕುರಿತು ಭಾಷಣಗಳನ್ನು ನೀಡುವ ಸಲುವಾಗಿ ಭಾಷಣಕಾರರಿಗೆ ಇತಿಹಾಸದ ಆಧಾರ ಪಡೆಯಬೇಕಾಗುತ್ತದೆ. ಆಕಾಶವಾಣಿಯ ಮೂಲಕವೂ ದಿನವಿಶೇಷ ಕಾರ್ಯಕ್ರಮವು ಪ್ರಸಾರಿತವಾಗುತ್ತದೆ.

ದೂರದರ್ಶನ ಮತ್ತು ಇತಿಹಾಸಗಳಲ್ಲಿ ನಿಕಟ ಸಂಬಂಧವಿದೆ. ಇತಿಹಾಸದ ಸಂದರ್ಭದಲ್ಲಿ ಆಸಕ್ತಿಯನ್ನು ಹುಟ್ಟಿಸುವ ಹಾಗೂ ಜಾಗೃತಿಯನ್ನುಂಟು ಮಾಡುವ ಮಹತ್ವದ ಕಾರ್ಯವನ್ನು ದೂರದರ್ಶನ ಹಾಗೂ ಇತರ ವಾಹಿನಿಗಳು ಮಾಡುತ್ತವೆ. ದೂರದರ್ಶನದ ಮೇಲಿನ ರಾಮಾಯಣ, ಮಹಾಭಾರತಗಳಂಥ ಪೌರಾಣಿಕ ಧಾರಾವಾಹಿಗಳು ಹಾಗೂ ಭಾರತ ಏಕ ಖೋಜ, ರಾಜಾ ಶಿವಛತ್ರಪತಿ ಈ ಐತಿಹಾಸಿಕ ಧಾರಾವಾಹಿಗಳು ಬಹುದೊಡ್ಡ ಪ್ರಮಾಣದಲ್ಲಿ ಪ್ರೇಕ್ಷಕವರ್ಗವನ್ನು ಆಕರ್ಷಿಸಿದವು. ರಾಮಾಯಣ – ಮಹಾಭಾರತಗಳಂತಹ ಧಾರಾವಾಹಿಗಳ ನಿರ್ಮಿತಿ ಮಾಡುವಾಗ ಆ ಕಾಲದ ವಾತಾವರಣ. ವೇಷಭೂಷಣ, ಶಸ್ತ್ರಾಸ್ತ್ರಗಳು, ಜೀವನಮಟ್ಟ, ಭಾಷೆಗಳಿಗೆ ಸಂಬಂಧಿತ ತಿಳುವಳಿಕೆ ಇದ್ದವರ ಸಹಾಯದ ಅವಶ್ಯಕತೆ ಉಂಟಾಗುತ್ತದೆ. ಅದಕ್ಕಾಗಿ ಸೂಕ್ಷ್ಮವಾಗಿ ಇತಿಹಾಸದ ಅಭ್ಯಾಸ ಮಾಡಬೇಕಾಗುತ್ತದೆ.

ಆಧುನಿಕ ಕಾಲದಲ್ಲಿ ಡಿಸ್ಕವರಿ, ನ್ಯಾಶನಲ್ ಜಿಯಾಗ್ರಫಿ, ಹಿಸ್ಟರಿ ಮುಂತಾದ ಚಾನಲ್ಲುಗಳ ಮೇಲೆ ಪ್ರಸಾರಿತವಾಗುವ ಧಾರಾವಾಹಿಗಳು ಜಗತ್ತಿನಲ್ಲಿಯ ಇತಿಹಾಸದ ಖಜಾನೆಯನ್ನು ಪ್ರೇಕ್ಷಕರಿಗಾಗಿ ತೆರೆದಿಟ್ಟಿವೆ. ಅದರ ಮೂಲಕ ಜನರು ಮನೆಯಲ್ಲಿ ಕುಳಿತು ಜಗತ್ತಿನ ಇತಿಹಾಸ ಮತ್ತು ಭೂಗೋಲಗಳನ್ನು ತಿಳಿದುಕೊಳ್ಳಬಹುದು. ಈ ಧಾರಾವಾಹಿಗಳು ಹೆಚ್ಚು ಮನೋರಂಜಕವಾಗುವ ಸಲುವಾಗಿ ಕೆಲವೊಮ್ಮೆ ಇತಿಹಾಸದಲ್ಲಿಯ ಆಯ್ದ ಭಾಗದ ವ್ಯಕ್ತಿಗಳ ಮುಖಾಂತರ ಸಾದರೀಕರಣ ಮಾಡಲಾಗುತ್ತದೆ. ಉದಾ., ಸಾಮರ್ಥ್ಯಶಾಲಿ ಸ್ತ್ರೀ–ಪುರುಷರು, ಕ್ರೀಡಾಪಟುಗಳು, ಸೇನಾನಿಗಳು ಇತ್ಯಾದಿ. ಅದಲ್ಲದೆ ಕಟ್ಟಡ, ಕೋಟೆ, ಸಾಮ್ರಾಜ್ಯಗಳ ಉದಯ, ಅಸ್ತ ಇಷ್ಟೇ ಅಲ್ಲದೆ ಪಾಕಕಲೆಯ ಇತಿಹಾಸದ ಮೇಲಿನ ಧಾರಾವಾಹಿಗಳನ್ನು ಜನರು ಉತ್ಸುಕತೆಯಿಂದ ನೋಡುತ್ತಾರೆ.

ಮೇಲಿನ ಎಲ್ಲಾ ಕ್ಷೇತ್ರಗಳಿಗಾಗಿ ಇತಿಹಾಸದ ಆಳವಾದ ಅಭ್ಯಾಸದ ಅವಶ್ಯಕತೆಯಿರುತ್ತದೆ.

**ಅರಿತುಕೊಳ್ಳಿರಿ.**

ಭಾರತದ ಪ್ರಾಚೀನದಿಂದ ಅರ್ವಾಚೀನ ಇತಿಹಾಸದ ಸಂದರ್ಭದಲ್ಲಿ ದೂರದರ್ಶನದ ಮೇಲಿಂದ ಪ್ರಸಾರಿತವಾದ 'ಭಾರತ ಏಕ ಖೋಜ' ಈ ಧಾರಾವಾಹಿಯು ಮಹತ್ವದ್ದಾಗಿದೆ. ಇದು ಪಂಡಿತ ಜವಾಹರಲಾಲ ನೆಹರೂ ಇವರ 'ಡಿಸ್ಕವ್ಹರಿ ಆಫ್ ಇಂಡಿಯಾ' ಎಂಬ ಗ್ರಂಥದ ಮೇಲೆ ಆಧಾರಿತವಾದ ಧಾರಾವಾಹಿಯಾಗಿತ್ತು. ಶ್ಯಾಮ ಬೆನೆಗಲರಿಂದ ದಿಗ್ದರ್ಶಿತವಾದ ಈ ಧಾರಾವಾಹಿಯು ಪ್ರಾಚೀನ ಕಾಲದಿಂದ ಹಿಡಿದು ಅರ್ವಾಚೀನ ಕಾಲದ ವರೆಗಿನ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಇತಿಹಾಸವನ್ನು ಮಂಡಿಸಿತು. ಆಳವಾದ ಸಂಶೋಧನೆ ಮತ್ತು ಸಾದರೀಕರಣದ ಮಟ್ಟದಲ್ಲಿ ಈ ಧಾರಾವಾಹಿಯು ಉತ್ತಮ ದರ್ಜೆಯದ್ದಾಗಿತ್ತು.

ಹರಪ್ಪಾ ಸಂಸ್ಕೃತಿ, ವೈದಿಕ ಕಾಲ, ರಾಮಾಯಣ-ಮಹಾಭಾರತಗಳ ಅನ್ವಯಾರ್ಥ, ಮೌರ್ಯ ಕಾಲಖಂಡ, ತುರ್ಕರ, ಅಫಗಾಣರ ಮತ್ತು ಮುಘಲರ ಆಕ್ರಮಣ, ಮುಘಲ ಕಾಲಖಂಡ ಹಾಗೂ ಮುಘಲ ಬಾದಶಹರ ಕೊಡುಗೆ, ಭಕ್ತಿ ಚಳುವಳಿ, ಛತ್ರಪತಿ ಶಿವಾಜಿ ಮಹಾರಾಜರ ಕಾರ್ಯ, ಸಮಾಜ ಸುಧಾರಣಾ ಚಳುವಳಿ ಹಾಗೂ ಸ್ವಾತಂತ್ರ್ಯ ಸಂಗ್ರಾಮ ಮುಂತಾದ ಅನೇಕ ಘಟನೆಗಳನ್ನು ಈ ಧಾರಾವಾಹಿಯು ಮಂಡಿಸಿತು.

ಈ ಧಾರಾವಾಹಿಯಲ್ಲಿ ನಾಟ್ಯ, ಜಾನಪದ ಕಲೆ, ಬೋಧಪ್ರದ ಮಾಹಿತಿ ಇವುಗಳ ಆಧಾರವನ್ನು ಪಡೆಯುತ್ತ ನೆಹರೂರ ರೂಪದಲ್ಲಿಯ ಕಲಾವಿದ ರೋಶನ ಸೇಠ ಇವರು ಪ್ರಸ್ತಾವನೆ ಮತ್ತು ಅನ್ವಯಾರ್ಥವನ್ನು ಹೇಳುತ್ತಿದ್ದರು. ಇತಿಹಾಸದ ಕಡೆಗೆ ನೋಡುವ ನೆಹರೂರ ದೃಷ್ಟಿಕೋನ ಮತ್ತು ಅದರ ಪ್ರಭಾವಿ ಸಾದರೀಕರಣಗಳಿಂದಾಗಿಯೂ ಈ ಧಾರಾವಾಹಿಯು ಭಾರತದ ತುಂಬೆಲ್ಲ ಪ್ರಶಂಸಿಸಲ್ಪಟ್ಟಿತು.



## ಅಭ್ಯಾಸ

**1. (ಅ) ಕೆಳಗೆ ಕೊಟ್ಟ ಪರ್ಯಾಯಗಳಲ್ಲಿ ಯೋಗ್ಯ ಪರ್ಯಾಯವನ್ನು ಆಯ್ದುಕೊಂಡು ವಿಧಾನಗಳನ್ನು ಪೂರ್ಣಮಾಡಿರಿ.**

(1) ಭಾರತದಲ್ಲಿಯ ಪ್ರಥಮ ಇಂಗ್ಲೀಷ ವರ್ತಮಾನಪತ್ರವನ್ನು ........... ಇವರು ಆರಂಭಿಸಿದರು.
(ಅ) ಜೇಮ್ಸ ಆಗಸ್ಟಸ್ ಹಿಕಿ (ಬ) ಸರ ಜಾನ ಮಾರ್ಶಲ
(ಕ) ಆ್ಯಲನ ಹ್ಯೂಮ (ಡ) ಬಾಳಶಾಸ್ತ್ರೀ ಜಾಂಭೇಕರ

(2) ದೂರದರ್ಶನ ಇದು .......... ಮಾಧ್ಯಮವಾಗಿದೆ.
(ಅ) ದೃಕ್ (ಬ) ಶ್ರಾವ್ಯ
(ಕ) ದೃಕ್-ಶ್ರಾವ್ಯ (ಡ) ಸ್ಪರ್ಶಾತ್ಮಕ

**(ಬ) ಕೆಳಗಿನವುಗಳಲ್ಲಿ ತಪ್ಪಾದ ಜೊತೆಯನ್ನು ಗುರುತಿಸಿ ಬರೆಯಿರಿ.**

(1) ಪ್ರಭಾಕರ - ಆಚಾರ್ಯ ಪ್ರ.ಕೆ. ಅತ್ರೆ
(2) ದರ್ಪಣ - ಬಾಳಶಾಸ್ತ್ರಿ ಜಾಂಭೇಕರ
(3) ದೀನಬಂಧು - ಕೃಷ್ಣರಾವ ಭಾಲೇಕರ
(4) ಕೇಸರಿ - ಬಾಲ ಗಂಗಾಧರ ಟಿಳಕ

**(2) ಟಿಪ್ಪಣಿ ಬರೆಯಿರಿ.**

(1) ಸ್ವಾತಂತ್ರ್ಯ ಸಂಗ್ರಾಮದಲ್ಲಿಯ ವರ್ತಮಾನಪತ್ರಗಳ ಕಾರ್ಯ.
(2) ಪ್ರಸಾರಮಾಧ್ಯಗಳ ಅವಶ್ಯಕತೆ.
(3) ಪ್ರಸಾರಮಾಧ್ಯಮಗಳಿಗೆ ಸಂಬಂಧಿತ ಉದ್ಯೋಗ ನಿರ್ಮಿತಿಯ ಕ್ಷೇತ್ರಗಳು

**3. ಕೆಳಗಿನ ವಿಧಾನಗಳನ್ನು ಕಾರಣ ಸಹಿತ ಸ್ಪಷ್ಟಪಡಿಸಿರಿ.**

(1) ಪ್ರಸಾರಮಾಧ್ಯಮಗಳ ಮುಖಾಂತರ ದೊರೆಯುವ ಮಾಹಿತಿಯ ಚಿಕಿತ್ಸಕ ಆಕಲನ ಮಾಡಿಕೊಳ್ಳಬೇಕಾಗುತ್ತದೆ.
(2) ವರ್ತಮಾನ ಪತ್ರಗಳಿಗೆ ಇತಿಹಾಸ ವಿಷಯದ ಅವಶ್ಯಕತೆ ಇರುತ್ತದೆ.
(3) ಎಲ್ಲ ಪ್ರಸಾರ ಮಾಧ್ಯಮಗಳಲ್ಲಿ ದೂರದರ್ಶನವು ಅತ್ಯಂತ ಜನಪ್ರಿಯ ಮಾಧ್ಯಮವಾಗಿದೆ.

**4. ಕೆಳಗಿನ ಪರಿಚ್ಛೇದವನ್ನು ಓದಿ ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**ಆಕಾಶವಾಣಿ :** ಸ್ವಾತಂತ್ರ್ಯಪೂರ್ವ ಕಾಲಖಂಡದಲ್ಲಿ 1924ರಲ್ಲಿ ಇಂಡಿಯನ್ ಬ್ರಾಡಕಾಸ್ಟಿಂಗ ಕಂಪನಿ (ಆಯ್‌ಬಿಸಿ) ಎಂಬ ಹೆಸರಿನಿಂದ ಪ್ರತಿದಿನ ಕಾರ್ಯಕ್ರಮಗಳ ಪ್ರಸಾರಣೆ ಮಾಡುವ ಒಂದು ಖಾಸಗಿ ರೇಡಿಯೊ ಕೇಂದ್ರ ಆರಂಭವಾಯಿತು.

'ಇಂಡಿಯನ ಬ್ರಾಡಕಾಸ್ಟಿಂಗ ಕಂಪನಿ' (ಆಯ್‌ಬಿಸಿ) ನಂತರ ಬ್ರಿಟಿಷ ಸರಕಾರವು ಇದೇ ಕಂಪನಿಗೆ 'ಇಂಡಿಯನ ಸ್ಟೇಟ ಬ್ರಾಡಕಾಸ್ಟಿಂಗ ಸರ್ವಿಸೆಸ್ (ಆಯ್‌ಎಸ್‌ಬಿಎಸ್) ಎಂದು ನಾಮಕರಣ ಮಾಡಿತು. 8 ಜೂನ 1936 ರಂದು ಈ ಕಂಪನಿಗೆ 'ಆಲ್ ಇಂಡಿಯಾ ರೇಡಿಯೊ' (ಎ ಆಯ್ ಆರ್) ಎಂದು ನಾಮಕರಣವಾಯಿತು.

ಭಾರತ ಸ್ವತಂತ್ರವಾದ ಮೇಲೆ AIR ಭಾರತ ಸರಕಾರದ ವಾರ್ತಾ ಮತ್ತು ಪ್ರಸಾರ ಇಲಾಖೆಯ ಒಂದು ಭಾಗವಾಯಿತು. ಸರಕಾರದ ಕಾರ್ಯಕ್ರಮ ಮತ್ತು ಉಪಕ್ರಮಗಳ ಮಾಹಿತಿ ನೀಡುವ ಅಧಿಕೃತ ಕೇಂದ್ರವೆಂಬುದು ಇದರ ಆರಂಭದ ಸ್ವರೂಪವಾಗಿತ್ತು. ಪ್ರಖ್ಯಾತ ಕವಿ ಪಂಡಿತ ನರೇಂದ್ರ ಶರ್ಮಾ ಇವರ ಸೂಚನೆಗೆ ಅನುಸಾರವಾಗಿ 'ಆಕಾಶವಾಣಿ' ಎಂಬ ಹೆಸರನ್ನು ನೀಡಲಾಯಿತು. ಆಕಾಶವಾಣಿಯ ವತಿಯಿಂದ ವಿವಿಧ ಮನರಂಜನೆಯ, ಬೋಧಪ್ರದ ಮತ್ತು ಸಾಹಿತ್ಯಿಕ ಮೌಲ್ಯವಿರುವ ಕಾರ್ಯಕ್ರಮಗಳನ್ನು ಸಾದರಪಡಿಸಲಾಗುತ್ತದೆ. ಅದೇ ರೀತಿ, ರೈತರು, ಕಾರ್ಮಿಕರು, ಯುವಕರು ಹಾಗೂ ಮಹಿಳೆಯರಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಪ್ರಸಾರಿತಗೊಳಿಸಲಾಗುತ್ತದೆ. 'ವಿವಿಧ ಭಾರತಿ' ಈ ಜನಪ್ರಿಯ ರೇಡಿಯೊ ಸೇವೆಯ ಮುಖಾಂತರ 24 ಭಾಷೆ ಹಾಗೂ 146 ಆಡು ಭಾಷೆಗಳಲ್ಲಿ ಕಾರ್ಯಕ್ರಮಗಳು ಆರಂಭವಾದವು. ಇತ್ತೀಚಿನ ಕಾಲದಲ್ಲಿ ಖಾಸಗಿ ರೇಡಿಯೊ ಸೇವೆಗಳು ಆರಂಭವಾಗಿವೆ. ಉದಾ., ರೇಡಿಯೋ ಮಿರ್ಚಿ.

(1) ಆಕಾಶವಾಣಿಯು ಯಾವ ಇಲಾಖೆಯಲ್ಲಿ ಬರುತ್ತದೆ?
(2) IBCಗೆ ಏನೆಂದು ನಾಮಕರಣವಾಯಿತು?
(3) ವಿವಿಧ ಭಾರತೀಯ ಮುಖಾಂತರ ಎಷ್ಟು ಭಾಷೆ ಹಾಗೂ ಆಡುಭಾಷೆಗಳಲ್ಲಿ ಕಾರ್ಯಕ್ರಮಗಳನ್ನು ಸಾದರಪಡಿಸಲಾಗುತ್ತದೆ?
(4) ಆಕಾಶವಾಣಿ ಈ ಹೆಸರು ಹೇಗೆ ಬಂದಿತು?

**5. ಸಂಕಲ್ಪನಾಚಿತ್ರವನ್ನು ತಯಾರಿಸಿರಿ.**

| | ವರ್ತಮಾನ ಪತ್ರಗಳು | ಆಕಾಶವಾಣಿ | ದೂರದರ್ಶನ |
|---|---|---|---|
| ಆರಂಭ/ಹಿನ್ನೆಲೆ | | | |
| ಮಾಹಿತಿಯ/ ಕಾರ್ಯಕ್ರಮದ ಸ್ವರೂಪ | | | |
| ಕಾರ್ಯಗಳು | | | |

**ಉಪಕ್ರಮ**

ನೀವು ನೋಡಿದ ಒಂದು ಐತಿಹಾಸಿಕ ಧಾರಾವಾಹಿಯ ಪರೀಕ್ಷಣೆ ಬರೆಯಿರಿ.

4TT84I

# 6. ಮನರಂಜನೆಯ ಮಾಧ್ಯಮಗಳು ಮತ್ತು ಇತಿಹಾಸ

6.1 ಮನರಂಜನೆಯ ಅವಶ್ಯಕತೆ.
6.2 ಜಾನಪದ ನಾಟ್ಯ.
6.3 ಮರಾಠಿ ರಂಗಭೂಮಿ.
6.4 ಭಾರತೀಯ ಚಲನಚಿತ್ರಸೃಷ್ಟಿ
6.5 ಮನರಂಜನೆಯ ಕ್ಷೇತ್ರದಲ್ಲಿಯ ಉದ್ಯೋಗಾವಕಾಶಗಳು

ಮನಸ್ಸಿಗೆ ಸಮಾಧಾನವನ್ನು ನೀಡುವ ಸಂಗತಿಗಳೆಂದರೆ ಮನರಂಜನೆಯ ಸಾಧನಗಳು. ಬೇರೆ ಬೇರೆ ಹವ್ಯಾಸಗಳು, ಆಟಗಳು, ನಾಟಕ - ಚಲನಚಿತ್ರಗಳಂತಹ ಮನರಂಜನೆಯ ಸಾಧನಗಳು, ಲೇಖನ, ವಾಚನಗಳಂತಹ ರೂಢಿಗಳು ಇತ್ಯಾದಿಗಳ ಸಮಾವೇಶವು ಮನರಂಜನೆಯಲ್ಲಿ ಆಗುತ್ತದೆ.

## 6.1 ಮನರಂಜನೆಯ ಅವಶ್ಯಕತೆ

ಉತ್ತಮ ದರ್ಜೆಯ ಶುದ್ಧ ಮನರಂಜನೆಯು ವ್ಯಕ್ತಿಯ ಆರೋಗ್ಯಕರ ಬೆಳವಣಿಗೆಗಾಗಿ ಮಹತ್ವದ್ದಾಗಿರುತ್ತದೆ. ಯಾಂತ್ರಿಕ ಜೀವನದ ಏಕತಾನತೆಯಿಂದ ಉಂಟಾದ ಬೇಸರವನ್ನು ಹೋಗಲಾಡಿಸಿ ಮನಸ್ಸಿಗೆ ಚೈತನ್ಯ, ಉಲ್ಲಾಸ, ಶರೀರಕ್ಕೆ ಉತ್ಸಾಹ ಮತ್ತು ಕಾರ್ಯಶಕ್ತಿಯನ್ನು ದೊರಕಿಸಿಕೊಡುವ ಕಾರ್ಯವನ್ನು ಮನರಂಜನೆಯು ಮಾಡುತ್ತದೆ. ಹವ್ಯಾಸ ಅಥವಾ ಕ್ರೀಡೆಗಳ (ಆಟಗಳ) ಜೋಪಾಸನೆ ಮಾಡುವುದರಿಂದ ವ್ಯಕ್ತಿತ್ವದ ವಿಕಾಸವಾಗುತ್ತದೆ. ಭಾರತದಲ್ಲಿ ಪ್ರಾಚೀನ ಮತ್ತು ಮಧ್ಯಯುಗದ ಕಾಲದಲ್ಲಿ ಉತ್ಸವ, ಹಬ್ಬ-ಹರಿದಿನ, ಕ್ರೀಡೆ, ನೃತ್ಯ, ಹಾಡು ಇತ್ಯಾದಿ ಮನರಂಜನೆಯ ಸಾಧನಗಳಿದ್ದವು.

ಆಧುನಿಕ ಕಾಲದಲ್ಲಿ ಮನರಂಜನೆಯ ಅನೇಕ ಸಾಧನಗಳು ಲಭ್ಯವಾಗಿವೆ.

**ಯಾದಿಯನ್ನು ಮಾಡೋಣ.**

ಮನರಂಜನೆಯ ವಿವಿಧ ಪ್ರಕಾರಗಳನ್ನು ಹೇಳಿ ಅವುಗಳ ವರ್ಗೀಕರಣ ಮಾಡಿರಿ.

ಮನರಂಜನೆಯ ವರ್ಗೀಕರಣವನ್ನು ಎರಡು ಪ್ರಕಾರಗಳಲ್ಲಿ ಮಾಡಬಹುದು. ಕೃತಿಶೀಲ ಮತ್ತು ಅಕೃತಿಶೀಲ. ಕೃತಿಶೀಲ ಮನರಂಜನೆ ಎಂದರೆ ಯಾವುದೊಂದು ಕ್ರಿಯೆಯಲ್ಲಿ ಆ ವ್ಯಕ್ತಿಯ ಪ್ರತ್ಯಕ್ಷ ಶಾರೀರಿಕ-ಮಾನಸಿಕ ಸಹಭಾಗಿತ್ವವಿರುವುದು. ಹಸ್ತಕೈಗಾರಿಕೆ, ಕ್ರೀಡೆ, ಇವು ಕೃತಿಶೀಲ ಮನರಂಜನೆಯ ಉದಾಹರಣೆಯಾಗಿವೆ.

ಯಾವಾಗ ನಾವು ಆಟದ ಪಂದ್ಯಗಳನ್ನು ನೋಡುತ್ತೇವೆಯೋ, ಸಂಗೀತವನ್ನು ಕೇಳುತ್ತೇವೆಯೋ ಚಲನಚಿತ್ರ ನೋಡುತ್ತೇವೆಯೋ ಆಗ ಆ ಮನರಂಜನೆಯು ಅಕೃತಿಶೀಲ ಮಟ್ಟದಲ್ಲಿರುತ್ತದೆ. ನಾವು ಅದರಲ್ಲಿ ಕೇವಲ ಪ್ರೇಕ್ಷಕರಿರುತ್ತೇವೆ.



**ಮಾಡಿ ನೋಡಿರಿ**

ಇತಿಹಾಸ ವಿಷಯಕ್ಕೆ ಸಂಬಂಧಿತ ಕೃತಿಶೀಲ ಮತ್ತು ಅಕೃತಿಶೀಲ ಮನರಂಜನೆಯ ಕೋಷ್ಟಕವನ್ನು ತಯಾರಿಸಿರಿ.

## 6.2 ಜಾನಪದ ನಾಟ್ಯ.

**ಸೂತ್ರದ ಗೊಂಬೆಗಳ ಪ್ರಯೋಗ :** ಮೊಹೆಂಜೊದಾರೋ, ಹರಪ್ಪಾ, ಗ್ರೀಸ ಮತ್ತು ಇಜಿಪ್ತಗಳಲ್ಲಿಯ ಉತ್ಖನನದಲ್ಲಿ ಮಣ್ಣಿನ ಗೊಂಬೆಗಳ ಅವಶೇಷಗಳು ದೊರಕಿವೆ. ಅವನ್ನು ಸೂತ್ರದ ಗೊಂಬೆಗಳಂತೆ ಉಪಯೋಗಿಸಿರುವ ಸಾಧ್ಯತೆ ಇದೆ.



ಸೂತ್ರದ ಗೊಂಬೆಗಳ ಆಟ

ಇದರ ಮೇಲಿಂದ ಈ ಆಟವು ಪ್ರಾಚೀನವಾಗಿದೆಯೆಂಬುದು ತಿಳಿಯುತ್ತದೆ. ಪಂಚತಂತ್ರ ಹಾಗೂ ಮಹಾಭಾರತಗಳಲ್ಲಿ ಈ ಆಟದ ಉಲ್ಲೇಖವಿದೆ.

ಪ್ರಾಚೀನ ಭಾರತದಲ್ಲಿ ಈ ಗೊಂಬೆಗಳನ್ನು ತಯಾರಿಸುವ ಸಲುವಾಗಿ ಕಟ್ಟಿಗೆ, ಉಣ್ಣೆ, ಚರ್ಮ, ಕೊಂಬುಗಳು ಹಾಗೂ ಹಸ್ತಿದಂತಗಳನ್ನು ಬಳಸುತ್ತಿದ್ದರು. ಈ ಆಟದಲ್ಲಿ ರಾಜಸ್ಥಾನಿ ಮತ್ತು ದಾಕ್ಷಿಣಾತ್ಯ ಎಂಬ ಎರಡು ಪದ್ಧತಿಗಳಿವೆ.

ಉತ್ತರ ಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ, ಆಸಾಮ, ಪಶ್ಚಿಮ ಬಂಗಾಲ, ಆಂಧ್ರ ಪ್ರದೇಶ, ತೆಲಂಗಾಣ, ಕರ್ನಾಟಕ

ಮತ್ತು ಕೇರಳ ಈ ರಾಜ್ಯಗಳಲ್ಲಿ ಸೂತ್ರದ ಗೊಂಬೆಗಳ ಪ್ರಯೋಗ ಮಾಡುವ ಕಲಾವಂತರಿದ್ದಾರೆ. ಸೂತ್ರದ ಗೊಂಬೆಗಳ ಪ್ರಯೋಗವು (ಆಟವು) ಹೆಚ್ಚು ಮನರಂಜಕವಾಗಲು ಸೂತ್ರಧಾರನ ಕೌಶಲ್ಯವು ಅತ್ಯಂತ ಮಹತ್ವದ್ದಾಗಿರುತ್ತದೆ. ಸಣ್ಣ ರಂಗಮಂಚ, ಪ್ರಕಾಶ ಮತ್ತು ಧ್ವನಿ ಇವುಗಳ ಸೂಚಕ ಉಪಯೋಗವನ್ನು ಇದರಲ್ಲಿ ಮಾಡುತ್ತಾರೆ. ಇದರಲ್ಲಿ ಛಾಯಾ-ಗೊಂಬೆ, ಕೈಗೊಂಬೆ, ಬಡಿಗೆ-ಗೊಂಬೆ ಹಾಗೂ ಸೂತ್ರದ ಗೊಂಬೆ ಎಂಬ ಪ್ರಕಾರಗಳಿವೆ.

**ದಶಾವತಾರಿ ನಾಟಕಗಳು :** ದಶಾವತಾರಿ ನಾಟಕ ಇದು ಮಹಾರಾಷ್ಟ್ರದಲ್ಲಿಯ ಜಾನಪದ ನಾಟ್ಯದ ಒಂದು ಪ್ರಕಾರವಾಗಿದೆ. ಸುಗ್ಗಿಯ ನಂತರ ಕೊಂಕಣ ಮತ್ತು ಗೋವಾಗಳಲ್ಲಿ ದಶಾವತಾರಿ ನಾಟಕಗಳ ಪ್ರಯೋಗಗಳಾಗುತ್ತವೆ. ದಶಾವತಾರಿ ನಾಟಕಗಳು ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ ಈ ಹತ್ತು ಅವತಾರಗಳ ಮೇಲೆ ಆಧಾರಿತವಾಗಿರುತ್ತವೆ. ಎಲ್ಲಕ್ಕೂ ಮೊದಲು ಸೂತ್ರಧಾರನು ವಿಘ್ನವಿನಾಶಕನಾದ ಗಣಪತಿಗೆ ಆವಾಹನೆ ಮಾಡುತ್ತಾನೆ.

ದಶಾವತಾರಿ ನಾಟಕದಲ್ಲಿಯ ಪಾತ್ರಗಳ ಅಭಿನಯ, ರಂಗಭೂಷಣ, ವೇಷಭೂಷಣಗಳು ಪರಂಪರಾಗತವಾಗಿರುತ್ತವೆ. ನಾಟಕದಲ್ಲಿಯ ಹೆಚ್ಚಿನ ಭಾಗವು ಪದ್ಯಮಯವಾಗಿರುತ್ತದೆ. ಕೆಲವು ಸಂವಾದಗಳನ್ನು ಪಾತ್ರಗಳು ಸ್ವಯಂಸ್ಫೂರ್ತಿಯಿಂದ ಮಾಡುತ್ತವೆ. ದೇವರುಗಳಿಗಾಗಿ ಕಟ್ಟಿಗೆಯ ಮುಖವಾಡಗಳನ್ನು ಉಪಯೋಗಿಸುತ್ತಾರೆ. ಹಂಡಿಯನ್ನು ಒಡೆದು ದಹಿಕಾಲಾ ಹಂಚುವುದು ಮತ್ತು ಆರತಿ ಮಾಡುವುದರೊಂದಿಗೆ ನಾಟಕದ ಮುಕ್ತಾಯವಾಗುತ್ತದೆ.



ದಶಾವತಾರಿ ನಾಟಕ

18ನೆಯ ಶತಮಾನದಲ್ಲಿ ಶ್ಯಾಮಜಿ ನಾಯಿಕ ಕಾಳೆ ಇವರು ದಶಾವತಾರಿ ಆಟವನ್ನು ತೋರಿಸುವ ಒಂದು ತಂಡವನ್ನು ಸ್ಥಾಪನೆ ಮಾಡಿದ್ದರು. ಆ ತಂಡದ ಕಲಾಕಾರರೊಂದಿಗೆ ಅವರು ಮಹಾರಾಷ್ಟ್ರದ ತುಂಬೆಲ್ಲ ಸಂಚರಿಸುತ್ತಿದ್ದರು.

ವಿಷ್ಣುದಾಸ ಭಾವೆ ಇವರು ದಶಾವತಾರಿ ನಾಟ್ಯ ತಂತ್ರವನ್ನು ಸಂಸ್ಕರಿಸಿ ತಮ್ಮ ಪೌರಾಣಿಕ ನಾಟಕಗಳನ್ನು ಸಾದರಪಡಿಸಿದರು. ಇದರಿಂದಾಗಿ ಮರಾಠಿ ನಾಟಕದ ಹಿನ್ನೆಲೆಯು ದಶಾವತಾರಿ ನಾಟಕದ ವರೆಗೆ ಹೋಗುವುದು.

**ಭಜನೆ :** ತಾಳ, ಮೃದಂಗ ಇಲ್ಲವೆ ಪಖವಾಜ ಇತ್ಯಾದಿ ವಾದ್ಯಗಳೊಂದಿಗೆ ಈಶ್ವರನ ಗುಣವರ್ಣನೆ ಮಾಡುವ ಮತ್ತು ನಾಮಸ್ಮರಣೆ ಮಾಡುವ ಕಾವ್ಯಗಳನ್ನು ಹಾಡುವುದಕ್ಕೆ ಭಜನೆ ಎನ್ನುವರು. ಭಜನೆಯಲ್ಲಿ ಚಕ್ರೀ ಭಜನೆ ಮತ್ತು ಸೋಗಿನ ಭಜನೆ ಎಂಬ ಎರಡು ಪ್ರಕಾರಗಳಿವೆ.

ಚಕ್ರೀ ಭಜನೆ : ನಿಲ್ಲದೆ ಚಕ್ರಾಕಾರವಾಗಿ ತಿರುಗುತ್ತ ಭಜನೆ ಮಾಡುವುದು.

ಸೋಗಿನ ಭಜನೆ : ದೇವ ಭಕ್ತನ ಪಾತ್ರವಹಿಸಿ ಸಂವಾದ ರೂಪದಲ್ಲಿ ಭಜನೆ ಮಾಡುವುದು.

ಇತ್ತೀಚಿನ ಕಾಲದಲ್ಲಿ ಸಂತ ತುಳಸೀದಾಸ ಮಹಾರಾಜರು 'ಖಂಜಿರಿ ಭಜನೆ'ಯನ್ನು ಜನಪ್ರಿಯಗೊಳಿಸಿದರು.

ಉತ್ತರ ಭಾರತದಲ್ಲಿ ಸಂತ ತುಳಸೀದಾಸ, ಮಹಾಕವಿ ಸೂರದಾಸ, ಸಂತ ಮೀರಾಬಾಯಿ ಹಾಗೂ ಸಂತ ಕಬೀರ ಇವರ ಭಜನೆಗಳು ಪ್ರಸಿದ್ಧವಾಗಿವೆ.



**ಮಾಡಿ ನೋಡಿರಿ.**

ತುಳಸಿದಾಸ, ಸೂರದಾಸ, ಮೀರಾಬಾಯಿ ಮತ್ತು ಕಬೀರ ಈ ಸಂತರ ಭಜನೆಗಳನ್ನು ಕೇಳಿರಿ ಹಾಗೂ ಸಂಗೀತ ಶಿಕ್ಷಕರ ಸಹಾಯದಿಂದ ಅಥವಾ ಬಲ್ಲವರ ಸಹಾಯದಿಂದ ಅವುಗಳನ್ನು ತಿಳಿದುಕೊಳ್ಳಿರಿ.

ಕರ್ನಾಟಕದಲ್ಲಿ ಪುರಂದರದಾಸ, ಕನಕದಾಸ, ವಿಜಯದಾಸ, ಬೊಧೇಂದ್ರಗುರು ಸ್ವಾಮಿ, ತ್ಯಾಗರಾಜ ಮುಂತಾದವರ ರಚನೆಗಳನ್ನು ಭಜನೆಗಳಲ್ಲಿ ಹಾಡಲಾಗುತ್ತದೆ.

ಗುಜರಾತದಲ್ಲಿ ಸಂತ ನರಸೀ ಮೆಹತಾ ಇವರು ಭಕ್ತಿ ಸಂಪ್ರದಾಯಕ್ಕೆ ಚಾಲನೆ ನೀಡಿದರು. ಮಹಾರಾಷ್ಟ್ರದಲ್ಲಿ ಸಂತ ನಾಮದೇವ ಇವರು ವಾರಕರಿ ಪಂಥದ ಮುಖಾಂತರ ಭಜನೆ-ಕೀರ್ತನೆಗಳಿಗೆ ಪ್ರೋತ್ಸಾಹ ನೀಡಿದರು. ವಾರಕರಿ ಸಂಪ್ರದಾಯವು ನಾಮಸ್ಮರಣೆಯ ಪ್ರಕಾರವೆಂದು ಭಜನೆಗೆ ವೈಭವವನ್ನು ದೊರಕಿಸಿಕೊಟ್ಟರು.

**ಕೀರ್ತನೆ :** ಪರಂಪರೆಗನುಸಾರ ನಾರದಮುನಿಗಳು ಕೀರ್ತನ ಪರಂಪರೆಯ ಆದ್ಯ ಪ್ರವರ್ತಕರಾಗಿದ್ದರು ಎಂದು ತಿಳಿಯಲಾಗುತ್ತದೆ. ಸಂತ ನಾಮದೇವ ಇವರನ್ನು ಮಹಾರಾಷ್ಟ್ರದ ಆದ್ಯ ಕೀರ್ತನಕಾರರೆಂದು ತಿಳಿಯಲಾಗುತ್ತದೆ. ಅವರ ನಂತರ ಇತರ ಸಂತರು ಈ ಪರಂಪರೆಯ ಪ್ರಸಾರ ಮಾಡಿದರು.

ಕೀರ್ತನಕಾರರಿಗೆ ಹರಿದಾಸರು ಅಥವಾ ಕಥಾಕಾರರು ಎನ್ನುತ್ತಾರೆ. ಕೀರ್ತನೆ ಮಾಡುವವರು ಪೋಷಾಕು, ವಿದ್ವತ್ತು

(ಜ್ಞಾನ), ವಕ್ತೃತ್ವ, ಗಾಯನ, ವಾದನ, ನೃತ್ಯ ವಿನೋದ ಇವುಗಳ ಕಡೆಗೆ ಲಕ್ಷ ಕೊಡಬೇಕಾಗುತ್ತದೆ. ಅವರಲ್ಲಿ ಬಹುಶ್ರುತತ್ವವಿರಬೇಕಾಗುತ್ತದೆ. ಕೀರ್ತನೆಯನ್ನು ಮಂದಿರದಲ್ಲಿ ಅಥವಾ ಮಂದಿರದ ಪರಿಸರದಲ್ಲಿ ಮಾಡಲಾಗುತ್ತದೆ.

**ತಿಳಿದುಕೊಳ್ಳಿರಿ.**

ಕೀರ್ತನೆಯಲ್ಲಿ ನಾರದೀಯ ಅಥವಾ ಹರಿದಾಸಿ ಮತ್ತು ವಾರಕರಿ ಎಂಬ ಎರಡು ಮುಖ್ಯ ಪರಂಪರೆಗಳಿವೆ. ಹರಿದಾಸಿ ಕೀರ್ತನೆಯು ಏಕಪಾತ್ರಾಭಿನಯದಂತಿರುತ್ತದೆ. ಈ ಕೀರ್ತನೆಯಲ್ಲಿ 'ಪೂರ್ವರಂಗ' ಮತ್ತು 'ಉತ್ತರರಂಗ'ಗಳಿರುತ್ತವೆ. ನಮನ, ನಿರೂಪಣೆಯ ಅಭಂಗ ಮತ್ತು ನಿರೂಪಣೆ ಇದಕ್ಕೆ ಪೂರ್ವರಂಗವೆಂದೂ ಹಾಗೂ ಉದಾಹರಣೆಗಾಗಿ ಒಂದು ಆಖ್ಯಾನವನ್ನು ಹೇಳುವುದು ಇದಕ್ಕೆ ಉತ್ತರ ರಂಗವೆಂದೂ ಕರೆಯುತ್ತಾರೆ. ವಾರಕರಿ ಕೀರ್ತನೆಯಲ್ಲಿ ಸಾಮೂಹಿಕತೆಗೆ ಮಹತ್ವವಿರುತ್ತದೆ. ಕೀರ್ತನಕಾರರ ಜೊತೆ ತಾಳ ಬಾರಿಸುವವರ ಸಹಭಾಗಿತ್ವವು ಮಹತ್ವದ್ದಾಗಿರುತ್ತದೆ. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ರಾಷ್ಟ್ರೀಯ ಕೀರ್ತನೆ ಎಂಬ ಹೊಸ ಪ್ರಕಾರವು ಮುಂದೆಬಂದಿತು. ಈ ಕೀರ್ತನೆಯನ್ನು ನಾರದೀಯ ಕೀರ್ತನೆಯಂತೆಯೇ ಸಾದರಪಡಿಸಲಾಗುತ್ತದೆ. ಅದರಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿಯ ನೇತಾರರು, ಶಾಸ್ತ್ರಜ್ಞರು, ಸಮಾಜ ಸುಧಾರಕರು ಮುಂತಾದ ಮಹಾನ್ ವ್ಯಕ್ತಿಗಳ ಚರಿತ್ರೆಯ ಆಧಾರದಿಂದ ಸಮಾಜಬೋಧನೆ ಮಾಡುವುದಕ್ಕೆ ಮಹತ್ವವಿರುತ್ತದೆ. ಇದನ್ನು ವಾಯಿಯ ದತ್ತೋಪಂತ ಪಟವರ್ಧನ ಇವರು ಆರಂಭಿಸಿದರು.

ಇದಲ್ಲದೆ ಮಹಾತ್ಮಾ ಜ್ಯೋತಿರಾವ ಫುಲೆ ಪ್ರಣೀತ ಸತ್ಯಶೋಧಕ ಸಮಾಜವು ಕೂಡ ಕೀರ್ತನೆಯ ಮುಖಾಂತರ ಸಮಾಜ ಜಾಗೃತಿಯ ಕಾರ್ಯ ಮಾಡಿತು. ಸಂತ ಗಾಡಗೆ ಮಹಾರಾಜರ ಕೀರ್ತನೆಗಳು ಸತ್ಯಶೋಧಕ ಸಮಾಜದ ಕೀರ್ತನೆಗಳಂತೆಯೇ ಇದ್ದವು. ಜಾತಿಭೇದ ನಿರ್ಮೂಲನೆ, ಸ್ವಚ್ಛತೆ, ವ್ಯಸನಮುಕ್ತಿ ಇತ್ಯಾದಿ ವಿಷಯಗಳನ್ನು ಕುರಿತು ಅವರು ತಮ್ಮ ಕೀರ್ತನೆಗಳ ಮೂಲಕ ಬೋಧನೆ ಮಾಡುತ್ತಿದ್ದರು.

**ಲಳಿತ :** ಲಳಿತ ಇದು ಮಹಾರಾಷ್ಟ್ರದಲ್ಲಿಯ ಮನರಂಜನೆಯ ಒಂದು ಹಳೆಯ ಪ್ರಕಾರವಾಗಿದೆ. ನಾರದೀಯ ಕೀರ್ತನ ಪರಂಪರೆಯಲ್ಲಿ ಈ ಪ್ರಕಾರದ ಸಮಾವೇಶವಾಗುತ್ತದೆ. ಕೊಂಕಣ ಮತ್ತು ಗೋವಾದ ಭಾಗಗಳಲ್ಲಿ ಇದಕ್ಕೆ ತುಂಬಾ ಮಹತ್ವವಿದೆ.

ಲಳಿತದ ಸಾದರೀಕರಣದಲ್ಲಿ ಧಾರ್ಮಿಕ ಉತ್ಸವ ಪ್ರಸಂಗದಲ್ಲಿ ಉತ್ಸವದೇವತೆಯು ಸಿಂಹಾಸನದ ಮೇಲೆ ಕುಳಿತಿದ್ದಾಳೆ ಎಂದು ತಿಳಿದು ಅವಳ ಮುಂದೆ ಬೇಡಿಕೆ ಮಾಡಲಾಗುತ್ತದೆ. **'ಜ್ಯಾಲಾ ಜೆ ಹವೆ ಅಸೇಲ ತ್ಯಾಲಾ ತೆ ಮಿಳೊ । ಸಗಳಾ ಗಾವ ಆನಂದಾನೆ ಪುಡಚ್ಯಾ ಲಳಿತಾಪರ್ಯಂತ ನಾಂದೊ । ಆಪಾಪಸಾತಲೆ ಕಲಹ ಲಳಿತಾತ ಮಿಟೋತ । ಕೋಣಾಚ್ಯಾಹೀ ಮನಾತ ಕಿಲ್ಮಿಷ ನ ಉರೊ । ನಿಕೋಪ ಮನಾನೆ ವ್ಯವಹಾರ ಚಾಲೋತ । ಸದಾಚರಣಾನೆ ಸಮಾಜ ವಾಗೊ ।'** (ಯಾರಿಗೆ ಏನು ಬೇಕಾಗಿದೆಯೋ ಅದು ಅವರಿಗೆ ಸಿಗಲಿ. ಮುಂದಿನ ಲಳಿತದ ವರೆಗೆ ಸಂಪೂರ್ಣ ಊರು ಆನಂದದಿಂದ ಬದುಕಲಿ. ಪರಸ್ಪರರಲ್ಲಿಯ ಕಲಹಗಳು ಲಳಿತದಲ್ಲಿ ಬಗೆಹರಿಯಲಿ. ಯಾರ ಮನಸ್ಸಿನಲ್ಲಿಯೂ ಅಪರಾಧದ ಭಾವನೆ ಉಳಿಯದಿರಲಿ. ಶುದ್ಧ ಮನಸ್ಸಿನಿಂದ ವ್ಯವಹಾರಗಳು ನಡೆಯಲಿ. ಸಮಾಜವು ಸದಾಚಾರದಿಂದ ವರ್ತಿಸಲಿ). ಈ ಪ್ರಕಾರದ ಬೇಡಿಕೆ ಇರುತ್ತದೆ.

ನಾಟ್ಯಪ್ರವೇಶದಂತೆ ಲಳಿತವನ್ನು ಸಾದರಪಡಿಸಲಾಗುತ್ತದೆ. ಅದರಲ್ಲಿ ಕೃಷ್ಣ ಮತ್ತು ರಾಮ ಇವರ ಕಥೆ ಹಾಗೂ ಭಕ್ತರ ಕಥೆಗಳನ್ನು ಹೇಳುತ್ತಾರೆ. ಕೆಲವು ಲಳಿತಗಳು ಹಿಂದೀ ಭಾಷೆಯಲ್ಲಿಯೂ ಇವೆ. ಆಧುನಿಕ ಮರಾಠಿ ರಂಗಭೂಮಿಗೆ ಲಳಿತದ ಹಿನ್ನೆಲೆ ಇದೆ.

**ಭಾರೂಡ :** ಆಧ್ಯಾತ್ಮಿಕ ಮತ್ತು ನೈತಿಕ ಬೋಧನೆಯನ್ನು ಮಾಡುವ ಮರಾಠಿಯಲ್ಲಿಯ ರೂಪಕಗಳಿಂದ ಕೂಡಿದ (ಗೂಢಾರ್ಥವುಳ್ಳ) ಗೀತೆಯೇ ಭಾರೂಡ. ಬೀದಿನಾಟಕಗಳಂತೆ ಭಾರೂಡ ಪ್ರಯೋಗಶೀಲವಾಗಿರುತ್ತದೆ. ಮಹಾರಾಷ್ಟ್ರದಲ್ಲಿ ಸಂತ ಏಕನಾಥರ ಭಾರೂಡಗಳು ವಿವಿಧತೆ, ನಾಟ್ಯ, ವಿನೋದ ಗೇಯತೆಗಳಿಂದಾಗಿ ಜನಪ್ರಿಯವಾದವು. ಜನತೆಯ ಶಿಕ್ಷಣ ಇದು ಸಂತ ಏಕನಾಥರ ಭಾರೂಡಗಳ ರಚನೆಯ ಉದ್ದೇಶವಾಗಿತ್ತು.

**ತಮಾಶಾ :** 'ತಮಾಶಾ' ಮೂಲತಃ ಪರ್ಶಿಯನ್ ಭಾಷೆಯ ಶಬ್ದವಾಗಿದೆ. ಮನಸ್ಸಿಗೆ ಪ್ರಸನ್ನತೆ ನೀಡುವ ದೃಶ್ಯ ಎಂಬುದು ಇದರ ಅರ್ಥ. ತಮಾಶಾ ಇದು ವಿವಿಧ ಜಾನಪದ ಕಲೆ ಹಾಗೂ ಅಭಿಜಾತ ಕಲೆಗಳ ಪ್ರವಾಹಗಳನ್ನು ಅಳವಡಿಸಿಕೊಂಡು ಹದಿನೆಂಟನೆಯ ಶತಮಾನದವರೆಗೆ ವಿಕಸಿತವಾಯಿತು. ಪರಂಪರಾಗತ ತಮಾಶಾದಲ್ಲಿ ಸಂಗೀತಬಾರಿ ಹಾಗೂ ಢೋಲಕಿತಂಡ ಎಂಬ ಎರಡು ಪ್ರಕಾರಗಳಿವೆ. ಸಂಗೀತ ಬಾರಿಯಲ್ಲಿ ನಾಟ್ಯಕ್ಕಿಂತ ನೃತ್ಯ ಹಾಗೂ ಸಂಗೀತಕ್ಕೆ ಹೆಚ್ಚು ಮಹತ್ವವಿರುತ್ತದೆ. ಹೆಚ್ಚಾಗಿ ನೃತ್ಯ, ಸಂಗೀತಗಳ ಸಮಾವೇಶವಿರುವ ತಮಾಶಾದಲ್ಲಿ ಕಾಲಾಂತರದಲ್ಲಿ 'ವಗ' ಎಂಬ ನಾಟ್ಯರೂಪದ ಸಮಾವೇಶ ಮಾಡಲಾಯಿತು. ಸ್ವಯಂ ಪ್ರೇರಿತ ಹಾಸ್ಯದ ಆಧಾರದಿಂದ 'ವಗ' ಹೆಚ್ಚು ಕುತೂಹಲಕರವಾಗುತ್ತ ಹೋಗುವುದು. ತಮಾಶಾದ ಆರಂಭದಲ್ಲಿ 'ಗಣ' ಎಂದರೆ ಗಣೇಶವಂದನೆಯನ್ನು ಹಾಡಿ

ನಂತರ 'ಗವಳಣ'ಗಳನ್ನು ಸಾದರ ಪಡಿಸಲಾಗುವುದು. ತಮಾಶಾದ ಎರಡನೆಯ ಭಾಗದಲ್ಲಿ ಮುಖ್ಯ ನಾಟಕ ಅಂದರೆ 'ವಗ' ಸಾದರಪಡಿಸಲಾಗುವುದು. 'ವಿಚ್ಛಾ ಮಾಝಿ ಪುರಿಕರಾ' ಅಥವಾ 'ಗಾಢವಾಚೆ ಲಗ್ನ' ಗಳಂತಹ, ಮರಾಠಿ ರಂಗಭೂಮಿಯ ಪ್ರಸಿದ್ಧ ಪ್ರಯೋಗಗಳು ತಮಾಶಾದ ಆಧುನಿಕ ರೂಪವನ್ನು ತೋರಿಸುತ್ತವೆ.

**ಪೋವಾಡಾ :** ಇದು ಗದ್ಯಪದ್ಯಮಿಶ್ರಿತ ಸಾದರೀಕರಣದ ಪ್ರಕಾರವಾಗಿದೆ. ಪೋವಾಡಾದಲ್ಲಿ ಶೂರ ಸ್ತ್ರೀಪುರುಷರ ಪರಾಕ್ರಮದ ವರ್ಣನೆಯನ್ನು ಆವೇಶಪೂರ್ಣ ಮತ್ತು ಸ್ಫೂರ್ತಿದಾಯಕ ಭಾಷೆಯಲ್ಲಿ ಮಾಡಲಾಗುತ್ತದೆ. ಛತ್ರಪತಿ ಶಿವಾಜಿ ಮಹಾರಾಜರ ಕಾಲದಲ್ಲಿ ಅಜ್ಞಾನದಾಸ ಎಂಬ ಕವಿಯು ಅಫಝುಲಖಾನನ ಕೊಲೆಯನ್ನು ಕುರಿತು ರಚಿಸಿದ ಮತ್ತು ತುಳಸೀದಾಸನು ಸಿಂಹಗಡದ ಯುದ್ಧವನ್ನು ಕುರಿತು ರಚಿಸಿದ ಪೋವಾಡಾಗಳು ಪ್ರಸಿದ್ಧವಾಗಿವೆ.

ಬ್ರಿಟಿಷರ ಕಾಲದಲ್ಲಿ ಉಮಾಜಿ ನಾಯಿಕ, ಚಾಪೇಕರ ಬಂಧುಗಳು ಹಾಗೂ ಮಹಾತ್ಮಾಗಾಂಧಿ ಇವರ ಮೇಲೆ ಪೋವಾಡಾಗಳನ್ನು ರಚಿಸಲಾಯಿತು. ಸಂಯುಕ್ತ ಮಹಾರಾಷ್ಟ್ರ ಚಳುವಳಿಯ ಕಾಲದಲ್ಲಿ ಅಮರ ಶೇಖ, ಅಣ್ಣಾಭಾವೂ ಸಾಠೆ ಹಾಗೂ ಗವಾಣಕರ ಈ ಶಾಹೀರರು ರಚಿಸಿದ ಪೋವಾಡಾಗಳಿಂದ ಮಹಾರಾಷ್ಟ್ರದಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆದರು ಹಾಗೂ ಪೋವಾಡಾಗಳ ಮುಖಾಂತರ ಜಾಗೃತಿಯನ್ನುಂಟು ಮಾಡಿದರು.

## 6.3 ಮರಾಠಿ ರಂಗಭೂಮಿ

ವ್ಯಕ್ತಿ ಅಥವಾ ಸಮುದಾಯವು ಲಲಿತಕಲೆಯನ್ನು ಸಾದರಪಡಿಸುವ ಸ್ಥಾನವೆಂದರೆ ರಂಗಭೂಮಿ. ಲಲಿತಕಲೆಯಲ್ಲಿ ಕಲಾವಿದ ಮತ್ತು ಪ್ರೇಕ್ಷಕ ಈ ಇಬ್ಬರ ಸಹಭಾಗಿತ್ವವು ಅವಶ್ಯಕವಾಗಿರುತ್ತದೆ. ನಾಟ್ಯಸಂಹಿತೆ, ನಾಟ್ಯದಿಗ್ದರ್ಶಕ, ಕಲಾವಿದ, ಮೇಕ-ಅಪ್, ಪೋಷಾಕು, ರಂಗಮಂಟಪ, ನೇಪಥ್ಯ, ಪ್ರಕಾಶ ಸಂಯೋಜನೆ, ನಾಟಕದ ಪ್ರೇಕ್ಷಕರು ಹಾಗೂ ಸಮೀಕ್ಷಕರು - ಹೀಗೆ ಅನೇಕ ಘಟಕಗಳು ರಂಗಭೂಮಿಗೆ ಸಂಬಂಧಿತವಾಗಿರುತ್ತವೆ. ನಾಟಕದಲ್ಲಿ ನೃತ್ಯ ಮತ್ತು ಸಂಗೀತಗಳ ಸಮಾವೇಶವೂ ಇರಬಲ್ಲದು. ನಾಟಕವನ್ನು ಹೆಚ್ಚಾಗಿ ಸಂವಾದದ ಮೂಲಕ ಸಾದರ ಪಡಿಸಲಾಗುತ್ತದೆ. ಆದರೆ ಕೆಲವು ನಾಟಕಗಳಲ್ಲಿ ಮೂಕಾಭಿನಯ ಕೂಡ ಇರುತ್ತದೆ. ಈ ಪ್ರಕಾರಕ್ಕೆ ಮೂಕನಾಟ್ಯ ಎಂದು ಕರೆಯುತ್ತಾರೆ.

> ಛತ್ರಪತಿ ಶಿವಾಜಿ ಮಹಾರಾಜ, ಛತ್ರಪತಿ ಸಂಭಾಜಿ ಮಹಾರಾಜ, ಮಹಾತ್ಮಾ ಜ್ಯೋತಿರಾವ ಫುಲೆ, ಲೋಕಮಾನ್ಯ ಟಿಳಕ, ಮಹಾತ್ಮಾ ಗಾಂಧಿ, ಡಾ. ಬಾಬಾಸಾಹೇಬ ಅಂಬೇಡಕರ ಇವರ ಜೀವನಕ್ಕೆ ಸಂಬಂಧಿಸಿದ ನಾಟಕಗಳ ಮಾಹಿತಿಯನ್ನು ಪಡೆಯಿರಿ.

ತಂಜಾವರದ ಭೋಸಲೆ ರಾಜವಂಶವು ಮರಾಠಿ ಮತ್ತು ದಾಕ್ಷಿಣಾತ್ಯ ಭಾಷೆಗಳಲ್ಲಿಯ ನಾಟಕಗಳಿಗೆ ಉತ್ತೇಜನ ನೀಡಿತು. ಆ ರಾಜವಂಶದಲ್ಲಿಯ ರಾಜರು ಸ್ವತಃ ನಾಟಕಗಳನ್ನು ಬರೆದರು ಅಲ್ಲದೆ ಸಂಸ್ಕೃತ ನಾಟಕಗಳ ಭಾಷಾಂತರ ಮಾಡಿದರು.

ಮಹಾರಾಷ್ಟ್ರದಲ್ಲಿಯ ರಂಗಭೂಮಿಯ ವಿಕಾಸದಲ್ಲಿ 19ನೇ ಶತಮಾನದ ಸ್ಥಾನ ಮಹತ್ವದ್ದಾಗಿದೆ. ವಿಷ್ಣುದಾಸ ಭಾವೆಯವರು ಮರಾಠಿ ರಂಗಭೂಮಿಯ ಜನಕರೆಂದು ಗುರುತಿಸಲ್ಪಡುತ್ತಾರೆ. 'ಸೀತಾ ಸ್ವಯಂವರ' ಇದು ಅವರು ರಂಗಭೂಮಿಗೆ ತಂದ ಪ್ರಥಮ ನಾಟಕವಾಗಿದೆ. ವಿಷ್ಣುದಾಸ ಭಾವೆಯವರು ಬರೆದ ನಾಟಕಗಳ ನಂತರ ಮಹಾರಾಷ್ಟ್ರದಲ್ಲಿ ಐತಿಹಾಸಿಕ, ಪೌರಾಣಿಕ ನಾಟಕಗಳ ಜೊತೆಗೆ ಸೌಮ್ಯವಾದ ವಿಡಂಬನಾತ್ಮಕ ಹಾಸ್ಯನಾಟಕಗಳು ರಂಗಭೂಮಿಗೆ ಬಂದವು. ಅವುಗಳಲ್ಲಿ ವಿನೋದಿ ಪದ್ಧತಿಯಿಂದ ಸಾಮಾಜಿಕ ವಿಷಯಗಳನ್ನು ಸಾದರಪಡಿಸಲಾಗುತ್ತಿತ್ತು.

ಆರಂಭದ ನಾಟಕಗಳ ಸಂಹಿತೆಯು ಲಿಖಿತ ರೂಪದಲ್ಲಿ ಇರುತ್ತಿರಲಿಲ್ಲ. ಅನೇಕ ಸಲ ಅದರಲ್ಲಿಯ ಹಾಡುಗಳು ಬರೆಯಲ್ಪಡುತ್ತಿದ್ದರೂ ಗದ್ಯ ಸಂವಾದವು ಸ್ವಯಂ-ಸ್ಫೂರ್ತವಾಗಿರುತ್ತಿತ್ತು. ವಿ.ಜ. ಕೀರ್ತನೆಯವರು 1861ನೇ ಇಸ್ವಿಯಲ್ಲಿ ಬರೆದ 'ಥೋರಲೆ ಮಾಧವರಾವ ಪೇಶವೆ' ಈ ನಾಟಕವು ಮುದ್ರಿತ ಸಂಹಿತೆ ಲಭ್ಯವಿರುವ ಪ್ರಥಮ ನಾಟಕವಾಗಿದೆ. ಈ ನಾಟಕದಿಂದ ಸಂಪೂರ್ಣ ಲಿಖಿತ ಸಂಹಿತೆಯಿರುವ ನಾಟಕಗಳ ಹೊಸ ಪರಂಪರೆ ಆರಂಭವಾಯಿತು.

ಹತ್ತೊಂಬತ್ತನೆಯ ಶತಮಾನದ ಕೊನೆಯ ಪರ್ವದಲ್ಲಿ ಉತ್ತರ ಹಿಂದುಸ್ಥಾನದಲ್ಲಿಯ ಖ್ಯಾಲ ಸಂಗೀತವನ್ನು ಮಹಾರಾಷ್ಟ್ರದಲ್ಲಿ ಆರಂಭಿಸುವ ಕಾರ್ಯವನ್ನು ಬಾಳಕೃಷ್ಣ ಬುವಾ ಇಚಲಕರಂಜಿಕರ ಇವರು ಮಾಡಿದರು. ಅವರ ನಂತರ ಉಸ್ತಾದ ಅಲ್ಲಾದಿಯಾ ಖಾನ, ಉಸ್ತಾದ ಅಬ್ದುಲ ಕರೀಮ ಖಾನ ಹಾಗೂ ಉಸ್ತಾದ ರಹಿಮತ ಖಾನ ಇವರು ಮಹಾರಾಷ್ಟ್ರದಲ್ಲಿಯ ರಸಿಕರಲ್ಲಿ ಸಂಗೀತದ ಬಗ್ಗೆ ಅಭಿರುಚಿಯನ್ನುಂಟು ಮಾಡಿದರು. ಅದರ ಪರಿಣಾಮವಾಗಿ ಸಂಗೀತ ರಂಗಭೂಮಿಯ ಉದಯವಾಯಿತು. ಕಿರ್ಲೋಸ್ಕರ ಮಂಡಳಿ ಎಂಬ ನಾಟಕ ಕಂಪನಿಯ ಸಂಗೀತ ನಾಟಕಗಳು ಜನಪ್ರಿಯವಾದವು. ಅವುಗಳಲ್ಲಿ ಅಣ್ಣಾಸಾಹೇಬ ಕಿರ್ಲೋಸ್ಕರ ಇವರು ಬರೆದ 'ಸಂಗೀತ ಶಾಕುಂತಲ' ಈ ನಾಟಕವು ತುಂಬಾ ಪ್ರಸಿದ್ಧಿಯನ್ನು ಪಡೆಯಿತು. ಸಂಗೀತ ನಾಟಕಗಳಲ್ಲಿ ಗೋವಿಂದ ಬಲ್ಲಾಳ ದೇವಲ ಇವರು ಬರೆದ 'ಸಂಗೀತ ಶಾರದಾ' ಎಂಬ ನಾಟಕವು ಅತ್ಯಂತ ಮಹತ್ವದ್ದಾಗಿದೆ. ಈ ನಾಟಕದಲ್ಲಿ ಜರಠಕುಮಾರಿ ವಿವಾಹ ಈ ತತ್ಕಾಲೀನ ಅನಿಷ್ಟ ರೂಢಿಯ ಮೇಲೆ ವಿನೋದಿ ಪದ್ಧತಿಯಿಂದ ಆದರೆ ಮಾರ್ಮಿಕವಾಗಿ ಟೀಕೆ ಮಾಡಲಾಗಿದೆ. ಇವುಗಳಲ್ಲದೆ ಶ್ರೀಪಾದ ಕೃಷ್ಣ

ಕೊಲ್ಹಟಕರ ಇವರ 'ಮೂಕ ನಾಯಕ', ಕೃಷ್ಣಾಜಿ ಪ್ರಭಾಕರ ಖಾಡಿಲಕರ ಇವರ 'ಸಂಗೀತ ಮಾನಾಪಮಾನ', ರಾಮ ಗಣೇಶ ಗಡಕರಿಯವರ 'ಏಕಚ ಪ್ಯಾಲಾ' ಈ ನಾಟಕಗಳು ರಂಗಭೂಮಿಯ ಇತಿಹಾಸದಲ್ಲಿ ಮಹತ್ವದ್ದಾಗಿವೆ.

**ಗೊತ್ತಿದೆಯೇ ನಿಮಗೆ?**

ಮಹಾಭಾರತ ಈ ಮಹಾಕಾವ್ಯದಲ್ಲಿಯ ಘಟನೆಯನ್ನು ತೆಗೆದುಕೊಂಡು ಆ ಕಾಲದ ಬ್ರಿಟಿಷ ಸಾಮ್ರಾಜ್ಯಶಾಹಿಯ ಮೇಲೆ ಸೂಚಕ ಟೀಕೆಯನ್ನು ಮಾಡುವ 'ಕೀಚಕವಧ' ನಾಟಕವನ್ನು ಖಾಡಿಲಕರ ಇವರು ಬರೆದರು. ಕೀಚಕ ವಧದಲ್ಲಿಯ ದ್ರೌಪದಿಯೆಂದರೆ ಅಸಹಾಯಕಳಾದ ಭಾರತಮಾತೆ, ಯುಧಿಷ್ಠಿರನೆಂದರೆ ಸೌಮ್ಯವಾದಿ ಪಕ್ಷ, ಭೀಮನೆಂದರೆ ಉಗ್ರವಾದಿ ಪಕ್ಷ ಹಾಗೂ ಕೀಚಕನೆಂದರೆ ಅಧಿಕಾರದಲ್ಲಿ ಅಂಧನಾಗಿದ್ದ ವ್ಹಾಯಿಸರಾಯ ಲಾರ್ಡ್ ಕರ್ಝನ- ಈ ರೂಪಕಗಳೊಂದಿಗೆ ಪ್ರೇಕ್ಷಕರು ಈ ನಾಟಕವನ್ನು ನೋಡುತ್ತಿದ್ದರು. ಇದರಿಂದ ಅವರ ಮನಸ್ಸಿನಲ್ಲಿ ಬ್ರಿಟಿಷ ಸಾಮ್ರಾಜ್ಯಶಾಹಿಯ ಬಗ್ಗೆ ರೋಷ ನಿರ್ಮಾಣವಾಗುತ್ತಿತ್ತು.

ಮರಾಠಿ ರಂಗಭೂಮಿಯ ಇಳಿಗಾಲದ ಸಮಯದಲ್ಲಿ ಆಚಾರ್ಯ ಅತ್ರೆಯವರ 'ಸಾಷ್ಟಾಂಗ ನಮಸ್ಕಾರ', 'ಉದ್ಯಾಚಾ ಸಂಸಾರ', 'ಘರಾಬಾಹೇರ' ಇತ್ಯಾದಿ ಜನಪ್ರಿಯ ನಾಟಕಗಳು ರಂಗಭೂಮಿಯನ್ನು ಸುಸ್ಥಿತಿಗೆ ತರಲು ಸಹಾಯ ಮಾಡಿದವು. ಇತ್ತೀಚಿನ ಕಾಲದಲ್ಲಿ ವಸಂತ ಕಾನೇಟಕರ ಇವರ 'ರಾಯಗಡಾಲಾ ಜೆವ್ಹಾ ಜಾಗ ಯೇತೆ', ಇಥೆ ಓಶಾಳಲಾ ಮೃತ್ಯು', ವಿಜಯ ತೆಂಡುಲಕರ ಇವರ 'ಘಾಶೀರಾಮ ಕೋತವಾಲ', ವಿಶ್ರಾಮ ಬೇಡೇಕರ ಇವರ 'ಟಿಳಕ ಆಣಿ ಆಗರಕರ' ಇತ್ಯಾದಿ ಹೊಸ ಬಗೆಯ ನಾಟಕಗಳು ಪ್ರಸಿದ್ಧವಾಗಿವೆ.

ವಿವಿಧ ವಿಷಯಗಳ ಮೇಲಿನ ನಾಟಕಗಳು ಮತ್ತು ನಾಟ್ಯಪ್ರಕಾರಗಳ ಆವಿಷ್ಕರಣದಿಂದಾಗಿ ಮರಾಠಿ ರಂಗಭೂಮಿಯು ಸಮೃದ್ಧವಾಯಿತು. ನಾಟ್ಯಕಲಾವಿದರೆಂದು ಗಣಪತರಾವ ಜೋಶಿ, ಬಾಲಗಂಧರ್ವ ಊರ್ಫ ನಾರಾಯಣರಾವ ರಾಜಹಂಸ, ಕೇಶವರಾವ ಬೋಸಲೆ, ಚಿಂತಾಮಣರಾವ ಕೊಲ್ಹಟಕರ, ಗಣಪತರಾವ ಬೋಡಸ ಮುಂತಾದವರ ಹೆಸರುಗಳನ್ನು ಅಗ್ರಕ್ರಮದಿಂದ ತೆಗೆದುಕೊಳ್ಳಲಾಗುತ್ತದೆ. ಅವರ ಮರಾಠಿ ನಾಟಕಗಳು ಬಯಲು ರಂಗಭೂಮಿಯಲ್ಲಿ ಆಗುತ್ತಿದ್ದವು. ಬ್ರಿಟಿಷರು ಪ್ರಥಮ ಮುಂಬಯಿಯಲ್ಲಿ 'ಪ್ಲೇ ಹೌಸ', 'ರಿಪನ', 'ವ್ಹಿಕ್ಟೋರಿಯಾ' ಈ ನಾಟ್ಯಗೃಹಗಳನ್ನು ಕಟ್ಟಿಸಿದರು. ಅನಂತರ ನಿಧಾನವಾಗಿ ಮರಾಠಿ ನಾಟಕಗಳು ಸುತ್ತ ಆವರಣವಿರುವ ನಾಟ್ಯಗೃಹಗಳಲ್ಲಿ ಆಗ ತೊಡಗಿದವು.

**ಗೊತ್ತಿದೆಯೇ ನಿಮಗೆ?**

ಪ್ರಖ್ಯಾತ ಸಾಹಿತಿ ವಿ.ವಾ. ಶಿರವಾಡಕರ ತಥಾ ಕುಸುಮಾಗ್ರಜ ಇವರು ಶೇಕ್ಸಪಿಯರನ 'ಕಿಂಗ ಲಿಯರ' ಎಂಬ ನಾಟಕವನ್ನು ಹೋಲುವಂತೆ ಬರೆದ 'ನಟ ಸಮ್ರಾಟ' ನಾಟಕವು ತುಂಬಾ ಪ್ರಸಿದ್ಧಿಯನ್ನು ಪಡೆಯಿತು. ಈ ನಾಟಕದಲ್ಲಿಯ ಶೋಕಾಕುಲ ನಾಯಕ ಗಣಪತರಾವ ಬೇಲವಲಕರ ಈ ಪಾತ್ರವನ್ನು ಶಿರವಾಡಕರ ಇವರು ಹಿಂದಿನ ಕಾಲದಲ್ಲಿ ಪ್ರಸಿದ್ಧಿಯನ್ನು ಪಡೆದ ಗಣಪತರಾವ ಜೋಶಿ ಮತ್ತು ನಾನಾಸಾಹೇಬ ಫಾಟಕ ಈ ನಟಶ್ರೇಷ್ಠರ ವ್ಯಕ್ತಿತ್ವದಲ್ಲಿಯ ವೈಶಿಷ್ಟ್ಯಗಳ ಕಲಬೆರಕೆ ಮಾಡಿ ನಿರ್ಮಿಸಿದ್ದರು.

## 6.4 ಭಾರತೀಯ ಚಲನಚಿತ್ರ ಸೃಷ್ಟಿ

**ಚಲನ ಚಿತ್ರ :** ಚಲನ ಚಿತ್ರವು ಕಲಾವಿದನ ಕೌಶಲ್ಯ (ಕಲಾನೈಪುಣ್ಯ) ಮತ್ತು ತಂತ್ರಜ್ಞಾನ ಇವುಗಳ ಸಂಗಮವಿರುವ ಮಾಧ್ಯಮವಾಗಿದೆ. ಚಲತ್‌ಚಿತ್ರ ಶೋಧವಾದ ನಂತರ ಚಲನಚಿತ್ರಕಲೆಯ ಜನ್ಮವಾಯಿತು. ಇದರಿಂದ ಮೂಕ ಚಿತ್ರಗಳ ಯುಗ ನಿರ್ಮಾಣವಾಯಿತು. ಮುಂದೆ ಧ್ವನಿ ಮುದ್ರಣ ಸಾಧ್ಯವಾಯಿತು. ಹಾಗೂ ಮಾತನಾಡುವ ಚಲನ ಚಿತ್ರಗಳ ಯುಗ ಆರಂಭವಾಯಿತು.

**ಗೊತ್ತಿದೆಯೇ ನಿಮಗೆ?**

ಚಲನ ಚಿತ್ರಗಳ ಪ್ರಕಾರಗಳು - ವ್ಯಂಗ ಚಲನಚಿತ್ರ, ವಾರ್ತಾ ಚಿತ್ರ, ಬೋಧಪ್ರದ ಚಲನಚಿತ್ರ, ಪ್ರಸಿದ್ಧಿ ಚಲನಚಿತ್ರ, ಬಾಲ ಚಲನಚಿತ್ರ, ಸೈನಿಕ ಚಲನಚಿತ್ರ, ಶೈಕ್ಷಣಿಕ ಚಲನಚಿತ್ರ, ಕಥಾ ಚಲನಚಿತ್ರ ಇತ್ಯಾದಿ.

ಭಾರತದಲ್ಲಿ ಪ್ರಥಮ ಪೂರ್ಣ ಉದ್ದಳತೆಯ ಚಲನಚಿತ್ರವನ್ನು ತಯಾರಿಸುವ ಮತ್ತು ಅದನ್ನು ಪ್ರದರ್ಶಿತಗೊಳಿಸುವ ಶ್ರೇಯವು ಮಹಾರಾಷ್ಟ್ರಕ್ಕೆ ಸಲ್ಲುತ್ತದೆ. 'ಭಾರತೀಯ ಚಲನಚಿತ್ರಗಳ ಜನನಿ' ಎಂಬ ಖ್ಯಾತಿ ಮಹಾರಾಷ್ಟ್ರಕ್ಕಿದೆ. ಭಾರತೀಯ ಚಲನಚಿತ್ರಗಳ ವಿಕಾಸದಲ್ಲಿ ಮದನರಾವ ಮಾಧವರಾವ ಪಿತಳೆ, ಕಲ್ಯಾಣದ ಪಟವರ್ಧನ ಪರಿವಾರ ಹಾಗೂ ಹರಿಶ್ಚಂದ್ರ ಸಖಾರಾಮ ಭಾಟವಡೆಕರ ಊರ್ಫ ಸಾವೆದಾದಾ ಇವರ ಕೊಡುಗೆಯಿದೆ.

ಮುಂದೆ ದಿಗ್ದರ್ಶಕ ಗೋಪಾಳ ರಾಮಚಂದ್ರ ತಥಾ ದಾದಾಸಾಹೇಬ ತೋರಣೆ, ಅ.ಪ. ಕರಂದೀಕರ, ಎಸ್.ಎನ್. ಪಾಟಣಕರ ಹಾಗೂ ವ್ಹಿ.ಪಿ. ದಿವೇಕರ ಇವರು ವಿದೇಶಿ ತಂತ್ರಜ್ಞರ ಸಹಾಯ ಪಡೆದು 'ಪುಂಡಲೀಕ' ಎಂಬ ಕಥಾ ಚಲನ ಚಿತ್ರವನ್ನು 1912ರಲ್ಲಿ ಮುಂಬಯಿಯಲ್ಲಿ ತೋರಿಸಿದರು. 1913ರಲ್ಲಿ ದಾದಾಸಾಹೇಬ ಫಾಳಕೆ ಇವರು ಸ್ವತಃ ದಿಗ್ದರ್ಶನ



ದಾದಾಸಾಹೇಬ ತೋರಣೆ

ಮಾಡಿದ ಹಾಗೂ ಎಲ್ಲ ಪ್ರಕ್ರಿಯೆಗಳನ್ನು ಭಾರತದಲ್ಲಿ ಪೂರ್ಣ ಮಾಡಿದ 'ರಾಜಾ ಹರಿಶ್ಚಂದ್ರ ಎಂಬ ಚಲನ ಚಿತ್ರವನ್ನು ಮುಂಬಯಿಯಲ್ಲಿ ಪ್ರದರ್ಶಿಸಿದರು. ಅದರ ನಂತರ ದಾದಾಸಾಹೇಬ ಫಾಳಕೆಯವರು ಮೋಹಿನಿ ಭಸ್ಮಾಸುರ, ಸಾವಿತ್ರಿ-ಸತ್ಯವಾನ ಎಂಬ ಮೂಕಪಟ (ಮೂಕ ಚಲನಚಿತ್ರ) ಹಾಗೂ ವೇರೂಳಚಿ ಲೇಣಿ (ಎಲ್ಲೋರಾದ ಗುಹೆಗಳು) ಮತ್ತು ನಾಶಿಕ ಮತ್ತು ತ್ರ್ಯಂಬಕೇಶ್ವರ ಈ ತೀರ್ಥಕ್ಷೇತ್ರಗಳ ಮೇಲೆ ಬೋಧಪ್ರದ ಚಲನಚಿತ್ರಗಳನ್ನು ತಯಾರಿಸಿದರು. ಇಲ್ಲಿಂದ ಮುಂದೆ ಐತಿಹಾಸಿಕ ಮತ್ತು ಪೌರಾಣಿಕ ವಿಷಯಗಳ ಮೇಲಿನ ಚಲನ ಚಿತ್ರಗಳನ್ನು ತಯಾರಿಸುವ ಪರಂಪರೆ ಆರಂಭವಾಯಿತು.



ದಾದಾಸಾಹೇಬ ಫಾಳಕೆ

ನಂತರ ಭಾರತದಲ್ಲಿ ಪ್ರಥಮ ಸಿನೇ-ಕ್ಯಾಮೆರಾವನ್ನು ತಯಾರಿಸುವ ಆನಂದರಾವ ಪೇಂಟರ ಇವರು ಚಲನಚಿತ್ರ ನಿರ್ಮಿತಿಯಲ್ಲಿ ಅಭಿರುಚಿಯನ್ನು ತೋರಿಸಿದರು. ಅವರ ಚಿಕ್ಕಮ್ಮನ ಪುತ್ರರಾದ ಬಾಬೂರಾವ ಪೇಂಟರ ತಥಾ ಮಿಸ್ತ್ರಿ ಇವರು 1918ರಲ್ಲಿ 'ಸೈರಂಧ್ರಿ' ಚಲನಚಿತ್ರವನ್ನು ತೆಗೆದರು. 'ಸಿಂಹಗಡ' ಎಂಬ ಪ್ರಥಮ ಐತಿಹಾಸಿಕ ಮೂಕ ಚಲನಚಿತ್ರ, ಕಲ್ಯಾಣಚಾ ಖಜಿನಾ, ಬಾಜೀಪ್ರಭು ದೇಶಪಾಂಡೆ, ನೇತಾಜಿ ಪಾಲಕರ ಇತ್ಯಾದಿ ಐತಿಹಾಸಿಕ ಚಲನಚಿತ್ರಗಳನ್ನು ಅವರು ತೆಗೆದರು. ಇದಲ್ಲದೆ 'ಸಾವಕಾರಿ ಪಾಶ' ಎಂಬ ಪ್ರಥಮ ವಾಸ್ತವ ಚಲನಚಿತ್ರವನ್ನು ಅವರು ತೆಗೆದರು. 1925ರಲ್ಲಿ 'ಬಾಜೀರಾವ-ಮಸ್ತಾನಿ' ಚಲನಚಿತ್ರವನ್ನು ತೆಗೆಯುವ ಭಾಲಜಿ ಪೆಂಢಾರಕರ ಇವರ ಐತಿಹಾಸಿಕ ಚಲನಚಿತ್ರಗಳಿಂದ ರಾಷ್ಟ್ರೀಯ ವಿಚಾರಸರಣಿಯ ಪ್ರಸಾರವಾಗುತ್ತಿದೆಯೆಂಬುದು ಗಮನಕ್ಕೆ ಬಂದ ಮೇಲೆ ಬ್ರಿಟಿಷರು ಅದರ ಮೇಲೆ ನಿರ್ಬಂಧ ಹಾಕಿದರು.

**ತಿಳಿದುಕೊಳ್ಳಿರಿ.**

ಮೊದಲು ಚಿತ್ರಮಂದಿರಗಳಲ್ಲಿ ಚಲನಚಿತ್ರ ಆರಂಭವಾಗುವ ಮೊದಲು ಬೋಧಪ್ರದ ಪಟ ಮತ್ತು ವೃತ್ತಚಿತ್ರಗಳನ್ನು ತೋರಿಸಲಾಗುತ್ತಿತ್ತು. ಅವುಗಳ ನಿರ್ಮಿತಿಯ ಸಲುವಾಗಿ ಭಾರತ ಸರಕಾರವು 'ಫಿಲ್ಮ್ಸ ಡಿವಿಜನ್'ನ ಸ್ಥಾಪನೆ ಮಾಡಿತು. ಸಮಾಜ ಬೋಧನೆಗಾಗಿ ಈ ಬೋಧಪದ ಚಿತ್ರ ಹಾಗೂ ವೃತ್ತ ಚಿತ್ರಗಳ ಉಪಯೋಗವಾಗುತ್ತಿತ್ತು. ಅದನ್ನು ತಿಳಿದುಕೊಳ್ಳಿರಿ.

ಕಮಲಾಬಾಯಿ ಮಂಗರೂಳಕರ ಇವರು ಮರಾಠಿಯಲ್ಲಿಯ ಪ್ರಥಮ ಸ್ತ್ರೀ ಚಲನಚಿತ್ರ ನಿರ್ಮಾಪಕರು. ಅವರು 'ಸಾವಳ್ಯಾ ತಾಂಡೇಲ' ಮತ್ತು 'ಪನ್ನಾದಾಯಿ' (ಹಿಂದಿ) ಈ ವಾಕ್ಪಟ (ವಾಕ್ಚಿತ್ರ)ಗಳನ್ನು ತಯಾರಿಸಿದರು. 1944ರಲ್ಲಿ ಪ್ರಭಾತ ಕಂಪನಿಯು ತೆಗೆದ 'ರಾಮಶಾಸ್ತ್ರಿ' ಚಲನಚಿತ್ರವು ಪ್ರಸಿದ್ಧಿಪಡೆಯಿತು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಆಚಾರ್ಯ ಅತ್ರೆಯವರು 'ಮಹಾತ್ಮಾ ಫುಲೆ' ಯವರ ಜೀವನದ ಮೇಲೆ, ವಿಶ್ರಾಮ ಬೇಡೆಕರ ಇವರು ವಾಸುದೇವ ಬಳವಂತ ಫಡಕೆಯವರ ಜೀವನದ ಮೇಲೆ ಆಧಾರಿತ ಚಲನಚಿತ್ರವನ್ನು ತೆಗೆದರು. ದಿನಕರ ದ. ಪಾಟೀಲ ಇವರು 'ಧನ್ಯತೇ ಸಂತಾಜಿ ಧನಾಜಿ' ಎಂಬ ಚಲನಚಿತ್ರವನ್ನು ತೆಗೆದರು. ಪ್ರಭಾಕರ ಪೆಂಢಾರಕರ ಇವರು 'ಬಾಲ ಶಿವಾಜಿ' ಎಂಬ ಚಲನಚಿತ್ರವು ಮಹತ್ವದ್ದಾಗಿದೆ.

ಭಾರತೀಯ ಚಲನಚಿತ್ರಗಳಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ಥಾನವನ್ನು ದೊರಕಿಸಿಕೊಡುವ ಪ್ರಥಮ ಚಲನಚಿತ್ರವೆಂದರೆ ಸಂತ ತುಕಾರಾಮ. ಈ ಚಲನಚಿತ್ರವು ಪ್ಯಾರಿಸ್‌ನಲ್ಲಿಯ ಅಂತರರಾಷ್ಟ್ರೀಯ ಚಲನಚಿತ್ರ ಮಹೋತ್ಸವದಲ್ಲಿ ಪ್ರದರ್ಶಿತವಾಯಿತು. ಈ ಚಲನಚಿತ್ರದಲ್ಲಿ ವಿಷ್ಣುಪಂತ ಪಾಗನೀಸ ಇವರು ಸಂತ ತುಕಾರಾಮನ ಪಾತ್ರ ವಹಿಸಿದ್ದರು.

**ಬನ್ನಿ ಹುಡುಕೋಣ.**

ಈ ಪಾಠದಲ್ಲಿ ಉಲ್ಲೇಖವಿರದ ಆದರೆ ಇತಿಹಾಸಕ್ಕೆ ಸಂಬಂಧಿತವಿರುವ ಚಲನಚಿತ್ರಗಳ ಪಟ್ಟಿಯನ್ನು ಇಂಟರ್ನೆಟ್ ಸಹಾಯದಿಂದ ತಯಾರಿಸಿರಿ.

ಯಾವ ರೀತಿ ಮರಾಠಿ ಭಾಷೆಯಲ್ಲಿ ಐತಿಹಾಸಿಕ ಚಲನಚಿತ್ರಗಳನ್ನು ತೆಗೆಯಲಾಯಿತೋ ಅದೇ ರೀತಿ ಹಿಂದೀ ಭಾಷೆಯಲ್ಲಿಯೂ ಅನೇಕ ಐತಿಹಾಸಿಕ ಚಲನಚಿತ್ರಗಳನ್ನು ತೆಗೆಯಲಾಯಿತು. ಸ್ವಾತಂತ್ರ್ಯಪೂರ್ವಕಾಲದಲ್ಲಿ ತಯಾರಿಸಲಾದ ಹಿಂದಿ ಚಲನಚಿತ್ರಗಳಲ್ಲಿ ಸಿಕಂದರ, ತಾನಸೇನ, ಸಮ್ರಾಟ ಚಂದ್ರಗುಪ್ತ, ಪೃಥ್ವಿವಲ್ಲಭ, ಮುಘಲ-ಎ-ಆಝಮ ಇತ್ಯಾದಿ ಚಲನಚಿತ್ರಗಳನ್ನು ಇತಿಹಾಸದ ಆಧಾರವನ್ನು ಪಡೆದು ತಯಾರಿಸಲಾಗಿತ್ತು. ಡಾ. ಕೋಟಣೀಸ ಕೀ ಅಮರ ಕಹಾನಿ' ಈ ಚಲನಚಿತ್ರವು ಸತ್ಯ ಘಟನೆಗಳ ಮೇಲೆ ಆಧಾರಿತವಾಗಿತ್ತು. ಸ್ವಾತಂತ್ರ್ಯ ಚಳುವಳಿಯ ಮೇಲೆ ಆಧಾರಿತವಾದ 'ಆಂದೋಲನ', 'ಝೂಂಸಿ ಕೀ ರಾನಿ' ಈ ಚಲನಚಿತ್ರಗಳು ಮಹತ್ವದ್ದಾಗಿದ್ದವು.

ಬಾಂಬೆ ಟಾಕೀಜ, ಫಿಲ್ಮಿಸ್ತಾನ, ರಾಜಕಮಲ ಪ್ರೊಡಕ್ಶನ್ಸ್, ಆರ್.ಕೆ. ಸ್ಟುಡಿಯೋಜ, ನವಕೇತನ ಇತ್ಯಾದಿ ಕಂಪನಿಗಳು ಚಲನಚಿತ್ರ ನಿರ್ಮಿತಿಯ ಕ್ಷೇತ್ರದಲ್ಲಿ ಗಣನೀಯ ಕಾರ್ಯ ಮಾಡಿದವು.

**ಬನ್ನಿ ಹುಡುಕೋಣ.**

ಇಂಟರ್ನೆಟ್ ಸಹಾಯದಿಂದ 1970ರಿಂದ ಹಿಡಿದು 2015ರ ವರೆಗಿನ ಐತಿಹಾಸಿಕ ವಿಷಯಕ್ಕೆ ಸಂಬಂಧಿಸಿದ ಮರಾಠಿ ಚಲನಚಿತ್ರಗಳನ್ನು ಹುಡುಕಿರಿ.

## 6.5 ಮನರಂಜನೆಯ ಕ್ಷೇತ್ರದಲ್ಲಿಯ ಉದ್ಯೋಗಾವಕಾಶಗಳು

ರಂಗಭೂಮಿ ಮತ್ತು ಚಲನಚಿತ್ರಗಳ ಕ್ಷೇತ್ರಗಳಲ್ಲಿ ಇತಿಹಾಸದ ವಿದ್ಯಾರ್ಥಿಗಳಿಗೆ ಅನೇಕ ಅವಕಾಶಗಳು ಲಭ್ಯವಾಗಿರುತ್ತವೆ.

**ನಾಟಕ :** (1) ನೇಪಥ್ಯ, ವೇಷಭೂಷಣ, ಕೇಶಭೂಷಾ, ರಂಗಭೂಷಣ ಇತ್ಯಾದಿಗಳು ಯೋಗ್ಯವಾಗಿರುವ ಸಲುವಾಗಿ ಸಂಬಂಧಿತ ಐತಿಹಾಸಿಕ ಕಾಲದಲ್ಲಿಯ ಚಿತ್ರಕಲೆ, ಶಿಲ್ಪಕಲೆ, ವಾಸ್ತುಶಿಲ್ಪ ಈ ವಿಷಯಗಳ ಆಳವಾದ ಅಭ್ಯಾಸವಿರುವ ತಜ್ಞರಿಗೆ ಕಲಾದಿಗ್ದರ್ಶನದ ಏರ್ಪಾಟು ಮಾಡಲು ಬರುತ್ತದೆ. ಇಲ್ಲವೆ ಸಲಹೆಗಾರರೆಂದು ಕೆಲಸ ಮಾಡಲು ಬರುತ್ತದೆ.

(2) ಸಂವಾದಲೇಖನದ ಪ್ರಕ್ರಿಯೆಯಲ್ಲಿ ಲೇಖಕ ಮತ್ತು ಲೇಖಕರ ಸಲಹೆಗಾರರೆಂದು ಭಾಷಾ ಮತ್ತು ಸಂಸ್ಕೃತಿಯ ಇತಿಹಾಸದ ತಜ್ಞರ ಅವಶ್ಯಕತೆ ಇರುತ್ತದೆ.

**ಚಲನಚಿತ್ರ :** (1) ಚಲನಚಿತ್ರಗಳಲ್ಲಿ ಕಥೆಗೆ ಸಂಬಂಧಿತ ಕಾಲದ ವಾತಾವರಣ ನಿರ್ಮಿತಿಯ ಅದರಂತೆ ಪಾತ್ರಗಳ ವೇಷಭೂಷಣ, ಕೇಶಭೂಷಾ, ರಂಗಭೂಷಣ ಇತ್ಯಾದಿಗಳ ಏರ್ಪಾಟನ್ನು ಮಾಡುವ ಕಾರ್ಯವನ್ನು ಕಲಾದಿಗ್ದರ್ಶಕರು ಮಾಡುತ್ತಾರೆ.ಈ ಕ್ಷೇತ್ರದಲ್ಲಿಯೂ ಇತಿಹಾಸ ತಜ್ಞರಿಗೆ ಪ್ರತ್ಯಕ್ಷ ಕಲಾದಿಗ್ದರ್ಶಕರೆಂದು ಇಲ್ಲವೆ ಕಲಾದಿಗ್ದರ್ಶನಕ್ಕಾಗಿ ಸಲಹೆಗಾರರೆಂದು ಕೆಲಸ ಮಾಡಲು ಬರುತ್ತದೆ.

(2) ಚಲನಚಿತ್ರಗಳ ಸಂವಾದಲೇಖನಕ್ಕಾಗಿ ಭಾಷಾ ಮತ್ತು ಸಂಸ್ಕೃತಿಯ ತಜ್ಞರ ಅವಶ್ಯಕತೆ ಇರುತ್ತದೆ.



## ಅಭ್ಯಾಸ

**1. (ಅ) ಕೆಳಗೆ ಕೊಟ್ಟ ಪರ್ಯಾಯಗಳಲ್ಲಿ ಯೋಗ್ಯ ಪರ್ಯಾಯವನ್ನು ಆಯ್ದುಕೊಂಡು ವಿಧಾನಗಳನ್ನು ಪೂರ್ಣಮಾಡಿರಿ.**

(1) ........... ಇವರನ್ನು ಮಹಾರಾಷ್ಟ್ರದ ಆದ್ಯ ಕೀರ್ತನಕಾರರೆಂದು ತಿಳಿಯಲಾಗುತ್ತದೆ.
(ಅ) ಸಂತ ಜ್ಞಾನೇಶ್ವರ (ಬ) ಸಂತ ತುಕಾರಾಮ
(ಕ) ಸಂತ ನಾಮದೇವ (ಡ) ಸಂತ ಏಕನಾಥ

(2) ಬಾಬೂರಾವ ಪೇಂಟರ ಇವರು ......... ಈ ಚಲನಚಿತ್ರವನ್ನು ತೆಗೆದರು.
(ಅ) ಪುಂಡಲೀಕ (ಬ) ರಾಜಾ ಹರಿಶ್ಚಂದ್ರ
(ಕ) ಸೈರಂಧ್ರಿ (ಡ) ಬಾಜೀರಾವ ಮಸ್ತಾನಿ

**(ಬ) ಕೆಳಗಿನವುಗಳಲ್ಲಿ ತಪ್ಪಾದ ಜೊತೆಯನ್ನು ಗುರುತಿಸಿ ಬರೆಯಿರಿ.**

(1) ರಾಯಗಡಲಾ ಜೆವ್ಹಾ ಜಾಗ ಯೇತೆ - ವಸಂತ ಕಾನೇಟಕರ
(2) ಟಿಳಕ ಆಣಿ ಆಗರಕರ - ವಿಶ್ರಾಮ ಬೇಡೇಕರ
(3) ಸಾಷ್ಟಾಂಗ ನಮಸ್ಕಾರ - ಆಚಾರ್ಯ ಅತ್ರೆ
(4) ಏಕಚ ಪ್ಯಾಲಾ - ಅಣ್ಣಾಸಾಹೇಬ ಕಿರ್ಲೋಸ್ಕರ

**2. ಕೆಳಗಿನ ಕೋಷ್ಟಕವನ್ನು ಪೂರ್ಣಮಾಡಿರಿ.**

| | ಭಜನೆ | ಕೀರ್ತನೆ | ಲಳಿತ | ಭಾರೂಡ |
|---|---|---|---|---|
| ಗುಣವೈಶಿಷ್ಟ್ಯಗಳು | | | | |
| ಉದಾಹರಣೆಗಳು | | | | |

**3. ಟಿಪ್ಪಣಿ ಬರೆಯಿರಿ.**

(1) ಮನರಂಜನೆಯ ಅವಶ್ಯಕತೆ.
(2) ಮರಾಠಿ ರಂಗಭೂಮಿ.
(3) ರಂಗಭೂಮಿ ಮತ್ತು ಚಲನಚಿತ್ರ ಕ್ಷೇತ್ರಗಳಿಗೆ ಸಂಬಂಧಿತ ಉದ್ಯೋಗ ನಿರ್ಮಿತಿಯ ಕ್ಷೇತ್ರಗಳು.

**4. ಕೆಳಗಿನ ವಿಧಾನಗಳನ್ನು ಕಾರಣ ಸಹಿತ ಸ್ಪಷ್ಟಪಡಿಸಿರಿ.**

(1) ಚಲನಚಿತ್ರ ಮಾಧ್ಯಮದಲ್ಲಿ ಇತಿಹಾಸ ವಿಷಯವು ಮಹತ್ವದ್ದಾಗಿರುತ್ತದೆ.
(2) ಸಂತ ಏಕನಾಥರ ಭಾರೂಡಗಳು ಜನಪ್ರಿಯವಾದವು.

**5. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರ ಉತ್ತರ ಬರೆಯಿರಿ.**

(1) ಭಾರತೀಯ ಚಲನ ಚಿತ್ರಗಳ ಜನನಿ ಎಂಬ ಖ್ಯಾತಿ ಮಹಾರಾಷ್ಟ್ರಕ್ಕಿದೆ. ಏಕೆ?
(2) ಪೋವಾಡಾ ಎಂದರೇನು ಎಂಬುದನ್ನು ಸ್ಪಷ್ಟಪಡಿಸಿರಿ.

**ಉಪಕ್ರಮ**

ಸಂತ ಏಕನಾಥರ ಯಾವುದೇ ಭಾರೂಡವನ್ನು ಪಡೆದು ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅಭಿನಯದೊಂದಿಗೆ ಸಾದರಪಡಿಸಿರಿ.

4U3466

# 7. ಆಟಗಳು ಮತ್ತು ಇತಿಹಾಸ

**7.1 ಆಟಗಳ ಮಹತ್ವ.**
**7.2 ಆಟಗಳ ಪ್ರಕಾರಗಳು.**
**7.3 ಆಟಗಳ ಅಂತರರಾಷ್ಟ್ರೀಕರಣ.**
**7.4 ಆಟಗಳ ಸಾಹಿತ್ಯಗಳು ಮತ್ತು ಆಟಿಗೆಗಳು.**
**7.5 ಆಟಿಗೆಗಳು ಮತ್ತು ಇತಿಹಾಸ.**
**7.6 ಆಟಗಳು ಮತ್ತು ಸಂಬಂಧಿತ ಸಾಹಿತ್ಯ ಹಾಗೂ ಚಲನಚಿತ್ರಗಳು**
**7.7 ಆಟಗಳು ಮತ್ತು ಉದ್ಯೋಗಾವಕಾಶಗಳು.**

ಆಟ ಎಂದರೆ ಮನರಂಜನೆ ಮತ್ತು ಶಾರೀರಿಕ ವ್ಯಾಯಾಮಗಳ ಸಲುವಾಗಿ ಮಾಡಲಾಗುವ ಯಾವುದೇ ಕೃತಿ.

ಕ್ರೀಡೆಗಳ ಇತಿಹಾಸವು ಮಾನವನಷ್ಟೇ ಹಳೆಯದಾಗಿದೆ. ಏಕೆಂದರೆ ಆಡುವುದು ಮನುಷ್ಯನ ನೈಸರ್ಗಿಕ ಪ್ರವೃತ್ತಿಯಾಗಿದೆ. ಮಾನವನ ಆರಂಭದ ಕಾಲದಲ್ಲಿ ವಿವಿಧ ಪ್ರಕಾರದ ಆಟಗಳನ್ನು ಆಡಲಾಗುತ್ತಿತ್ತು. ಬೇಟೆಯು ಹೊಟ್ಟೆ ಹೊರೆಯುವ ಸಾಧನವಾಗಿದ್ದಂತೆ ಅದು ಆಟ ಹಾಗೂ ಮನರಂಜನೆಯ ಒಂದು ಭಾಗವೂ ಆಗಿತ್ತು.



ಕುಸ್ತಿ

**ಗೊತ್ತಿದೆಯೇ ನಿಮಗೆ?**

ವಡೋದರಾದಲ್ಲಿಯ ಪ್ರಸಿದ್ಧ ಜಟ್ಟಿ (ಪೈಲವಾನ) ಜುಮ್ಮಾದಾದಾ ಹಾಗೂ ಮಾಣಿಕರಾವ ಇವರ ವ್ಯಾಯಾಮ ಶಾಲೆ, ಪತಿಯಾಳಾದಲ್ಲಿಯ ಕ್ರೀಡಾ ವಿಶ್ವವಿದ್ಯಾಲಯ, ಗುಜರಾತದಲ್ಲಿಯ 'ಸ್ವರ್ಣಿಮ ಗುಜರಾತ ಸ್ಪೋರ್ಟ್ಸ ವಿಶ್ವ ವಿದ್ಯಾಲಯ, ಗಾಂಧಿನಗರ ಕೊಲ್ಹಾಪೂರ ದಲ್ಲಿಯ ಖಾಸಬಾಗ ಮತ್ತು ಮೋತಿಬಾಗ ಗರಡಿ, ಅಮರಾವತಿಯಲ್ಲಿಯ ಹನುಮಾನ ವ್ಯಾಯಾಮ ಪ್ರಸಾರಕ ಮಂಡಳ, ಪುಣೆಯ ಬಾಲೇವಾಡಿ ಎಂಬಲ್ಲಿಯ ಶ್ರೀ ಶಿವಛತ್ರಪತಿ ಕ್ರೀಡಾಸಂಕುಲ ಇವು ಕುಸ್ತಿ ಮತ್ತು ಇತರ ಆಟಗಳ ತರಬೇತಿಗಾಗಿ ಪ್ರಸಿದ್ಧವಾಗಿವೆ.

ಭಾರತದಲ್ಲಿಯ ಪ್ರಾಚೀನ ಸಾಹಿತ್ಯ ಹಾಗೂ ಮಹಾಕಾವ್ಯಗಳಲ್ಲಿ ಪಗಡೆಯಾಟ, ಕುಸ್ತಿ, ರಥಗಳ ಮತ್ತು ಕುದುರೆಗಳ ಪಂದ್ಯಗಳು ಹಾಗೂ ಚದುರಂಗ ಇವುಗಳ ಉಲ್ಲೇಖ ಬರುತ್ತದೆ.

**ಗೊತ್ತಿದೆಯೇ ನಿಮಗೆ?**



ಆಟ ಮತ್ತು ಗ್ರೀಕ ಜನತೆ ಇವರ ನಡುವೆ ಪ್ರಾಚೀನ ಕಾಲದಿಂದಲೂ ಸಂಬಂಧವಿದೆ. ಆಟಗಳಿಗೆ ನಿಯಮಿತ ಮತ್ತು ಸುಸಂಘಟಿತ ರೂಪವನ್ನು ಗ್ರೀಕರು ನೀಡಿದರು. ಓಟ, ತಟ್ಟೆ ಎಸೆತ, ರಥ ಮತ್ತು ಕುದುರೆಗಳ ಪಂದ್ಯ, ಕುಸ್ತಿ, ಮುಷ್ಟಿಯುದ್ಧ ಇತ್ಯಾದಿಗಳ ಸ್ಪರ್ಧೆಗಳನ್ನು ಅವರು ಆರಂಭಿಸಿದರು. ಪ್ರಾಚೀನ ಒಲಿಂಪಿಕ್ ಕ್ರೀಡಾ ಸ್ಪರ್ಧೆಯನ್ನು ಒಲಿಂಪಿಯಾ ಈ ಗ್ರೀಕ ನಗರದಲ್ಲಿ ನಡೆಸಲಾಗುತ್ತಿತ್ತು. ಈ ಸ್ಪರ್ಧೆಯಲ್ಲಿ ಭಾಗವಹಿಸುವುದು ಮತ್ತು ಜಯಪಡೆಯು ವುದೆಂದರೆ ಗೌರವದ ಸಂಗತಿ ಎಂದು ತಿಳಿಯಲಾಗುತ್ತದೆ.

## 7.1 ಆಟಗಳ ಮಹತ್ವ

ನಮ್ಮ ಜೀವನದಲ್ಲಿ ಆಟಗಳಿಗೆ ಮಹತ್ವದ ಸ್ಥಾನವಿದೆ. ಜೀವನದಲ್ಲಿಯ ವ್ಯಥೆ ಮತ್ತು ಚಿಂತೆಗಳನ್ನು ಮರೆಯುವಂತೆ ಮಾಡುವ ಸಾಮರ್ಥ್ಯವು ಆಟಗಳಲ್ಲಿದೆ. ಮನಸ್ಸಿಗೆ ವಿಶ್ರಾಂತಿಯನ್ನು ನೀಡುವುದು ಹಾಗೂ ಮನಸ್ಸನ್ನು ಪ್ರಫುಲ್ಲಿತಗೊಳಿಸುವ ಕಾರ್ಯವನ್ನು ಆಟಗಳು ಮಾಡುತ್ತವೆ. ಯಾವ ಆಟಗಳಲ್ಲಿ ಸಾಕಷ್ಟು ಶ್ರಮ ಮತ್ತು ಶಾರೀರಿಕ ಚಲನೆ ಮಾಡಬೇಕಾಗುತ್ತದೆಯೋ ಆ ಆಟಗಳಿಂದ ಆಟಗಾರರಿಗೆ ವ್ಯಾಯಾಮವಾಗುತ್ತದೆ. ಶರೀರವನ್ನು ಗಟ್ಟಿಯಾಗಿ ಮತ್ತು ಬಲಿಷ್ಠವಾಗಿ ಮಾಡಲು ಆಟಗಳು ಸಹಾಯಮಾಡುತ್ತವೆ. ಆಟಗಳಿಂದ ಮನೋಧೈರ್ಯ, ದೃಢತೆ, ಕ್ರೀಡಾ ಮನೋಭಾವನೆ, ಇತ್ಯಾದಿ ಗುಣಗಳಲ್ಲಿ ವೃದ್ಧಿಯಾಗುತ್ತದೆ. ಸಾಂಘಿಕ ಆಟಗಳನ್ನು ಆಡುವುದರಿಂದ ಪರಸ್ಪರರಲ್ಲಿ ಸಹಕಾರ, ಸಂಘಭಾವನೆಗಳು

ಬೆಳೆಯುತ್ತವೆ ಹಾಗೂ ನೇತೃತ್ವಗುಣಗಳ ವಿಕಾಸವಾಗುತ್ತದೆ.

## 7.2 ಆಟದ ಪ್ರಕಾರಗಳು

ಆಟಗಳಲ್ಲಿ ಕುಳಿತು ಆಡುವ ಆಟಗಳು ಮತ್ತು ಹೊರಾಂಗಣದ ಆಟಗಳು ಎಂಬ ಎರಡು ಪ್ರಕಾರಗಳಿವೆ.

**ಕುಳಿತು ಆಡುವ ಆಟಗಳು:** ಈ ಆಟಗಳನ್ನು ಕುಳಿತುಕೊಂಡು ಆಡಲಾಗುತ್ತದೆ. ಉದಾ., ಚದುರಂಗ, ಇಸ್ಪೀಟು, ಪಗಡೆ, ಕ್ಯಾರಮ್, ಬಳೆಚೂರು ಮತ್ತು ಕವಡೆಗಳ ಆಟ. ಈ ಆಟಗಳನ್ನು ಎಲ್ಲಿಯೂ ಕುಳಿತು ಆಡಬಹುದು. ಗಜುಗಿನ ಆಟವನ್ನು ಪ್ರಾಮುಖ್ಯವಾಗಿ ಹುಡುಗಿಯರು ಆಡುತ್ತಾರೆ. ಗೊಂಬೆಯಾಟವು ಚಿಕ್ಕ ಹುಡುಗಿಯರ ಆಟವೆಂದು ತಿಳಿಯಲಾಗಿದ್ದರೂ ಅದರಲ್ಲಿ ಮನೆಯಲ್ಲಿಯ ಎಲ್ಲರೂ ಭಾಗವಹಿಸಬಹುದು. ವಿಶೇಷತ: ಗೊಂಬೆಗಳ ಮದುವೆಯು ಕೌಟುಂಬಿಕ ಆನಂದದ ಸಮಾರಂಭವಾಗಿರುತ್ತದೆ.



ಚದುರಂಗ

**ಹೊರಾಂಗಣ ಆಟಗಳು:** ಹೊರಾಂಗಣ ಆಟಗಳಲ್ಲಿ ದೇಶೀ ಆಟಗಳು ಮತ್ತು ವಿದೇಶಿ ಆಟಗಳು ಎಂಬ ಪ್ರಕಾರಗಳಿವೆ. ದೇಶಿ ಆಟಗಳಲ್ಲಿ ಕುಂಟಾಟ, ಕಬಡ್ಡಿ, ಆಟ್ಯಾಪಾಟ್ಯಾ, ಖೋ-ಖೋ ಇತ್ಯಾದಿ ಆಟಗಳ ಸಮಾವೇಶವಾಗುತ್ತದೆ.



ಕಬಡ್ಡಿ

ಹುಡುಗ-ಹುಡುಗಿಯರಲ್ಲಿ ಗೋಲಿಗುಂಡು, ಲಗೋರಿ, ಚಿಣ್ಣಿ-ದಾಂಡು, ಭಿಂಗರಿ, ಬೊಗರೆ, ಪುಗಡಿ, ಝಿಮ್ಮಾ, ಕುಂಟಾಟ ಮುಂತಾದ ಆಟಗಳು ಜನಪ್ರಿಯವಾಗಿವೆ.



ಕುಂಟಾಟ

**ಗೊತ್ತಿದೆಯೇ ನಿಮಗೆ?**

**ಝಾಂಶಿ ರಾಣಿ ಲಕ್ಷ್ಮಿಬಾಯಿಯವರ ದಿನಚರಿ:** ''ಬಾಯಿಸಾಹೇಬಾಸ ಶರೀರಾಚಾ ಶೋಕ ಫಾರ ಹೋತಾ. ಪಹಾಟೇಸ ಉಠೋನ ಮಲ್ಲಖಾಂಬಾಸಿ ಜಾವೂನ ದೋನ ಘಟಕಾ ಕಸರತ ಕರೂನ ನಂತರ ಘೋಡಾ ಮಂಡಳಾವರ ಧರೂನ ಲಾಗಲೀಚ ಹತ್ತಿವರ ಬಸೂನ ಹತ್ತೀಸ ಫೇರಫಟಕಾ ಕರೂನ ಚಾರ ಘಟಕಾ ದಿವಸಾಸ ಖುರಾಖಾಚೆ ಖಾಣೆ ವ ದೂಧ ಪಿಣೆ ಕರೂನ ಸ್ನಾನ ಹೋತ ಅಸೆ.'' (ವಿಷ್ಣು ಭಟ ಗೋಡಸೆಯವರ 'ಮಾಝಾ ಪ್ರವಾಸ' ಈ ಪುಸ್ತಕದಿಂದ)

(ಲಕ್ಷ್ಮಿಬಾಯಿಯವರಿಗೆ ಶರೀರ ಸೌಷ್ಟವದ ಬಗ್ಗೆ ತುಂಬಾ ಪ್ರೀತಿ ಇತ್ತು ನಸುಕಿನಲ್ಲಿ ಎದ್ದು ಮಲ್ಲಕಂಬದ ಕಡೆಗೆ ಹೋಗಿ ಎರಡು ಗಳಿಗೆ ವ್ಯಾಯಾಮ ಮಾಡಿ ನಂತರ ಕುದುರೆ ಸವಾರಿ ಮಾಡಿ ತಕ್ಷಣ ಆನೆಯ ಮೇಲೆ ಕುಳಿತು ಸುತ್ತಾಡಿ ಬರುತ್ತಿದ್ದರು. ನಂತರ ಪೌಷ್ಟಿಕ ತಿಂಡಿಯನ್ನು ತಿಂದು ಹಾಲು ಕುಡಿದು ಸ್ನಾನ ಮಾಡುತ್ತಿದ್ದರು. (ವಿಷ್ಣುಭಟ ಗೋಡಸೆಯವರ 'ಮಾಝಾಪ್ರವಾಸ' ಈ ಪುಸ್ತಕದಿಂದ)

ವಿದೇಶಿ ಹೊರಾಂಗಣ ಆಟಗಳಲ್ಲಿ ಬ್ಯಾಡ್‌ಮಿಂಟನ್, ಟೇಬಲ ಟೆನಿಸ್, ಹಾಕಿ, ಕ್ರಿಕೆಟ್, ಫುಟಬಾಲ್, ಗೋಲ್ಫ, ಪೋಲೊ ಇತ್ಯಾದಿ ಆಟಗಳ ಸಮಾವೇಶವಾಗುತ್ತದೆ.

ಹೊರಾಂಗಣ ಆಟಗಳಲ್ಲಿ ಓಟದ ಪಂದ್ಯಗಳು ಇಡೀ ಜಗತ್ತಿನಲ್ಲಿ ಜನಪ್ರಿಯವಾಗಿವೆ. ಇದರಲ್ಲಿ 100 ಮೀಟರ, 200 ಮೀಟರ, ಮ್ಯಾರೆಥಾನ, ಅಡೆತಡೆಗಳ ಪಂದ್ಯ ಇವುಗಳ ಸಮಾವೇಶವಾಗುತ್ತದೆ.



ಟೇಬಲ-ಟೆನಿಸ್



ಫೂಟ ಬಾಲ್



ಸ್ಕೇಟಿಂಗ

ಶಾರೀರಿಕ ಕೌಶಲ್ಯಗಳ ಮೇಲೆ ಆಧಾರಿತ ಹೊರಾಂಗಣ ಆಟಗಳಲ್ಲಿ ಗುಂಡು ಎಸೆತ, ತಟ್ಟೆ ಎಸೆತ, ಉದ್ದಜಿಗಿತ, ಎತ್ತರ ಜಿಗಿತ, ನೀರಿನಲ್ಲಿಯ ಆಟಗಳಲ್ಲಿ ಈಜಾಟದ ಪಂದ್ಯಗಳು, ವಾಟರ ಪೋಲೊ, ನೌಕಾನಯನ ಅದರಂತೆ ಶಾರೀರಿಕ ಕಸರತ್ತಿನ ಆಟಗಳಲ್ಲಿ ಮಲ್ಲಕಂಬ, ದಾರದ ಮೇಲಿನ ಮಲ್ಲಕಂಬ, ಜಿಮ್ನ್ಯಾಸ್ಟಿಕ್ಸ ಇತ್ಯಾದಿಗಳ ಸಮಾವೇಶವಾಗುತ್ತದೆ.



ಮಲ್ಲಕಂಬ



**ಗೊತ್ತಿದೆಯೇ ನಿಮಗೆ?**

ಶ್ರೀಮತಿ ಮನೀಷಾ ಬಾಠೆಯವರು ಮಾಡಿದ ಸಂಶೋಧನೆಯ ಪ್ರಕಾರ ಕುಸ್ತಿಯ ಸಲುವಾಗಿ ಪೂರಕವಾದ ಮಲ್ಲಕಂಬ ಮತ್ತು ಅದರಲ್ಲಿಯ ಹಿಡಿತ ಇವುಗಳ ನಿರ್ಮಿತಿಯು ಉತ್ತರಪೇಶವಾಯಿಯಲ್ಲಿಯ ಮಲ್ಲವಿದ್ಯಾಗುರು ಬಾಳಂಭಟ ದೇವಧರ ಇವರದಾಗಿದೆ. ಗಿಡದ ಮೇಲಿನ ಮಂಗಗಳ ಕ್ರೀಡೆಯನ್ನು ನೋಡಿ ಬಾಳಂಭಟದಾದಾ ಅವರಿಗೆ ಈ ವ್ಯಾಯಾಮದ ಪ್ರಕಾರವು ಹೊಳೆಯಿತು ಎಂದು ಅವರು ನಮೂದಿಸಿದ್ದಾರೆ.

ಸಾಹಸದ ಆಟಗಳು - ಸ್ಕೇಟಿಂಗ ಮತ್ತು ಸ್ಕಿಯಿಂಗ (ಜಾರುವ ಪಂದ್ಯಗಳು), ಐಸ ಹಾಕಿ ಈ ಆಟಗಳು ಜನಪ್ರಿಯವಾಗಿವೆ.

ಸಾಹಸದ ಮತ್ತು ರೋಮಾಂಚಕ ಆಟಗಳಲ್ಲಿ ಶಿಲಾ ರೋಹಣ, ಗ್ಲಾಯಡಿಂಗ, ಮೋಟಾರಸೈಕಲ, ಮೋಟಾರಕಾರ ಇವುಗಳ ಪಂದ್ಯಗಳ ಸಮಾವೇಶವಾಗುತ್ತದೆ.

**ಬನ್ನಿ ಹುಡುಕೋಣ.**

ಶಿಕ್ಷಕ, ಪಾಲಕ ಹಾಗೂ ಇಂಟರ್ನೆಟ್‌ನ ಸಹಾಯದಿಂದ ಕುಸ್ತಿಪಟು ಖಾಶಾಬಾ ಜಾಧವ, ಮಾರುತಿಮಾನೆ, ಭಾರತರತ್ನ ಸಚಿನ ತೆಂಡುಲಕರ ಇವರ ಜೀವನದ ಬಗ್ಗೆ ಮಾಹಿತಿಯನ್ನು ಪಡೆಯಿರಿ.

**ಆಟಗಳ ಪಂದ್ಯಗಳು:** ಆಟಗಳ ಪಂದ್ಯಗಳಿಗೆ ಜಗತ್ತಿನಲ್ಲೆಲ್ಲ ಮಾನ್ಯತೆ ದೊರಕಿದೆ. ಓಲಿಂಪಿಕ, ಏಶಿಯಾಡ, ವಿಕಲಚೇತನರ ಓಲಿಂಪಿಕ, ಕ್ರಿಕೆಟ್ ವಿಶ್ವಕಪ್ ಪಂದ್ಯ, ಹಾಕಿ, ಕುಸ್ತಿ, ಚದುರಂಗ ಇತ್ಯಾದಿ ಆಟಗಳ ಪಂದ್ಯಗಳು ಜಾಗತಿಕ ಮಟ್ಟದಲ್ಲಿ ನಡೆಯುತ್ತವೆ. ನಮ್ಮ ದೇಶದಲ್ಲಿ ಹಾಕಿ, ಕ್ರಿಕೆಟ್ ಈ ಆಟಗಳು ಜನಪ್ರಿಯವಾಗಿವೆ. ಹಾಕಿ ಇದು ಭಾರತದ ರಾಷ್ಟ್ರೀಯ



ಕ್ರಿಕೆಟ

ಆಟವಾಗಿದೆ. ಸ್ಥಾನಿಕ, ಪಟ್ಟಣದ, ತಾಲೂಕು, ಜಿಲ್ಲಾ, ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಈ ಆಟದ ಪಂದ್ಯಗಳಾಗುತ್ತವೆ. ರಾಷ್ಟ್ರೀಯ-ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಈ ಆಟದ ಪಂದ್ಯಗಳಲ್ಲಿ ಯಶಸ್ಸನ್ನು ಪಡೆಯುವ ಆಟಗಾರರಿಗೆ ಅದೇ ಕ್ಷೇತ್ರದಲ್ಲಿ ಉತ್ತಮ ಕರಿಯರ ಮಾಡಲು ಬರುತ್ತದೆ.

**ಗೊತ್ತಿದೆಯೇ ನಿಮಗೆ?**

ಮೇಜರ ಧ್ಯಾನಚಂದ ಇವರು ಭಾರತದ ಹಾಕಿ ಆಟಗಾರರೂ ಹಾಗೂ ಹಾಕಿ ತಂಡದ ನಾಯಕರೂ ಆಗಿದ್ದರು. ಅವರ ನೇತೃತ್ವದಲ್ಲಿ 1936ರಲ್ಲಿ ಭಾರತೀಯ ಹಾಕಿ ತಂಡವು ಬರ್ಲಿನ್ ಒಲಿಂಪಿಕ್ ಸುವರ್ಣಪದಕವನ್ನು ಗೆದ್ದಿತು. ಇದಕ್ಕೆ ಮೊದಲು 1928 ಹಾಗೂ 1932ರಲ್ಲಿಯೂ ಭಾರತೀಯ ಹಾಕಿ ತಂಡವು ಸುವರ್ಣಪದಕವನ್ನು ಗೆದ್ದುಕೊಂಡಿತ್ತು. ಆಗ ಧ್ಯಾನಚಂದ ಇವರು ಭಾರತೀಯ ತಂಡದ ವತಿಯಿಂದ ಆಡಿದ್ದರು. 29 ಅಗಸ್ಟ ಈ ಅವರ ಜನ್ಮದಿನವನ್ನು 'ರಾಷ್ಟ್ರೀಯ ಕ್ರೀಡಾದಿನ'ವೆಂದು ಆಚರಿಸಲಾಗುತ್ತದೆ. ಅವರಿಗೆ ಹಾಕಿಯ ಮಾಟಗಾರ ಎಂದು ಕರೆಯುತ್ತಾರೆ. ಹಾಕಿಯಲ್ಲಿಯ ಅವರ ಸಾಧನೆಯಿಂದಾಗಿ 1956ರಲ್ಲಿ ಅವರಿಗೆ 'ಪದ್ಮಭೂಷಣ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

## 7.3 ಆಟಗಳ ಅಂತರರಾಷ್ಟ್ರೀಕರಣ

ಇಪ್ಪತ್ತನೆಯ -ಇಪ್ಪತ್ತೊಂದನೆಯ ಶತಮಾನಗಳಲ್ಲಿ ಆಟಗಳ ಅಂತರ ರಾಷ್ಟ್ರೀಕರಣವಾಗಿದೆ. ಒಲಿಂಪಿಕ, ಏಶಿಯಾಡ, ಬ್ರಿಟಿಷ ಕಾಮನ್‌ವೆಲ್ಥ, ವಿಂಬಲ್ಡನಗಳಂತಹ ಪಂದ್ಯಗಳಲ್ಲಿ ಆಡಲಾಗುವ ಕ್ರಿಕೆಟ್, ಫುಟಬಾಲ, ಲಾನಟೆನಿಸ್ ಇತ್ಯಾದಿ ಪಂದ್ಯಗಳ ನೇರ ಪ್ರಸಾರವನ್ನು ದೂರದರ್ಶನ ಮತ್ತು ಇತರ ವಾಹಿನಿಗಳ ಮೇಲಿಂದ ಜಗತ್ತಿನ ತುಂಬೆಲ್ಲ ಏಕಕಾಲಕ್ಕೆ ಮಾಡಲಾಗುತ್ತದೆ. ಆ ಆಟಗಳಲ್ಲಿ ಯಾವ ದೇಶವು ಭಾಗವಹಿಸಿಲ್ಲವೊ ಆ ದೇಶದ ಪ್ರೇಕ್ಷಕರು ಕೂಡ ಆಟಗಳನ್ನು ವೀಕ್ಷಿಸಿ ಆನಂದಪಡುತ್ತಿರುತ್ತಾರೆ. ಉದಾ., ವಿಶ್ವಕಪ ಕ್ರಿಕೆಟ್ ಪಂದ್ಯದಲ್ಲಿ ಭಾರತವು ಅಂತಿಮ ಸುತ್ತಿನಲ್ಲಿ ತಲುಪಿದಾಗ ಇಡೀ ಜಗತ್ತಿನಲ್ಲಿಯ ಪ್ರೇಕ್ಷಕರು ಆ ಪಂದ್ಯವನ್ನು ನೋಡಿದರು. ಜಗತ್ತಿನ ತುಂಬ ಇರುವ ಈ ಪ್ರೇಕ್ಷಕರು ಆಟಗಳ ಅರ್ಥಕಾರಣವನ್ನೇ ಬದಲಾಯಿಸಿಬಿಟ್ಟಿದ್ದಾರೆ. ಹವ್ಯಾಸಿ ಆಟಗಾರರು ಕಲಿಯುವ ಸಲುವಾಗಿ ಪಂದ್ಯಗಳನ್ನು ನೋಡುತ್ತಾರೆ. ಪ್ರೇಕ್ಷಕರು ಮನರಂಜನೆಗಾಗಿ ನೋಡುತ್ತಾರೆ. ಕಂಪನಿಗಳು ಜಾಹೀರಾತುಗಳ ಅವಕಾಶಕ್ಕಾಗಿ ಪಂದ್ಯಗಳ ಕಡೆಗೆ ನೋಡುತ್ತಾರೆ. ಪಂದ್ಯಗಳ ಬಗ್ಗೆ ಪ್ರೇಕ್ಷಕರಿಗೆ ತಿಳಿಸಿಹೇಳಲು ನಿವೃತ್ತ ಆಟಗಾರರು ಬರುತ್ತಾರೆ.

## 7.4 ಆಟಗಳ ಸಾಹಿತ್ಯ ಹಾಗೂ ಆಟಿಗೆಗಳು

ಚಿಕ್ಕ ಮಕ್ಕಳ ಮನರಂಜನೆಗಾಗಿ ಮತ್ತು ಶಿಕ್ಷಣಕ್ಕಾಗಿ ಇರುವ ಬಣ್ಣ ಬಣ್ಣದ ವಿವಿಧ ಸಾಧನಗಳು ಮತ್ತು ಉಪಕರಣಗಳಿಗೆ ಆಟಿಗೆಗಳು ಎನ್ನುತ್ತಾರೆ. ಪ್ರಾಚೀನ ಸ್ಥಳಗಳ ಉತ್ಖನನದಲ್ಲಿ ಮಣ್ಣಿನಿಂದ ತಯಾರಿಸಿದ ಆಟಿಗೆಗಳು ದೊರೆತಿವೆ. ಈ ಆಟಿಗೆಗಳನ್ನು ಕೈಯಿಂದ ಇಲ್ಲವೆ ಪಡಿಯಚ್ಚಿನಲ್ಲಿ ಹಾಕಿ ತಯಾರಿಸಲಾಗುತ್ತಿತ್ತು.

ಪ್ರಾಚೀನ ಕಾಲದಲ್ಲಿಯ ಭಾರತೀಯ ಸಾಹಿತ್ಯದಲ್ಲಿ ಗೊಂಬೆಗಳ ಉಲ್ಲೇಖವಿದೆ. ಶೂದ್ರಕನ ಒಂದು ನಾಟಕದ ಹೆಸರು ಮೃಚ್ಛಕಟಿಕ ಎಂದು ಇದೆ. ಮೃಚ್ಛಕಟಿಕ ಎಂದರೆ ಮಣ್ಣಿನ ಗಾಡಿ.

**ಗೊತ್ತಿದೆಯೇ ನಿಮಗೆ?**

ಕಥಾ ಸರಿತ್ಸಾಗರ ಎಂಬ ಗ್ರಂಥದಲ್ಲಿ ಅನೇಕ ಮನರಂಜಕ ಆಟ ಮತ್ತು ಆಟಿಗೆಗಳ ವರ್ಣನೆ ಬಂದಿದೆ. ಅದರಲ್ಲಿ ಹಾರಾಡುವ ಕಟ್ಟಿಗೆಯ ಗೊಂಬೆಗಳ ವರ್ಣನೆಯಿದೆ. ಚಾವಿಯನ್ನು ಒತ್ತಿದಾಗ ಈ ಗೊಂಬೆಗಳು ಎತ್ತರಕ್ಕೆ ಹಾರುತ್ತಿದ್ದವು. ಕೆಲವು ಕುಣಿಯುತ್ತಿದ್ದವು ಹಾಗೂ ಕೆಲವು ಧ್ವನಿಮಾಡುತ್ತಿದ್ದವು ಎಂಬ ಉಲ್ಲೇಖಗಳಿವೆ.

**ಬನ್ನಿ ಶೋಧಿಸೋಣ.**

ಮೊದಲು ಭಾರತದಲ್ಲಿಯ ಅನೇಕ ಭಾಗಗಳಲ್ಲಿ ಕಟ್ಟಿಗೆಯ ಗೊಂಬೆಗಳನ್ನು ತಯಾರಿಸಲಾಗುತ್ತಿತ್ತು. ಮಹಾರಾಷ್ಟ್ರದಲ್ಲಿ 'ಠಕಿ' ಎಂಬ ಹೆಸರಿನಿಂದ ಗುರುತಿಸಲ್ಪಡುವ ಬಣ್ಣಬಣ್ಣದ ಕಟ್ಟಿಗೆಯ ಗೊಂಬೆಗಳನ್ನು ತಯಾರಿಸಲಾಗುತ್ತಿತ್ತು.

ಈ ರೀತಿಯ ಕಟ್ಟಿಗೆಯ ಗೊಂಬೆಗಳನ್ನು ತಯಾರಿಸುವ ಪರಂಪರೆಯು ಭಾರತದಲ್ಲಿ ಇತರ ಯಾವ ಪ್ರದೇಶಗಳಲ್ಲಿ ಇತ್ತು/ಇದೆ ಎಂಬುದನ್ನು ಶೋಧಿಸೋಣ.

ಆಯಾ ಪ್ರಾಂತಗಳಲ್ಲಿ ಆ ಗೊಂಬೆಗಳ ಹೆಸರುಗಳು ಏನು ಇವೆಯೆಂಬುದನ್ನು ಶೋಧಿಸೋಣ.

## 7.5 ಆಟಿಗೆಗಳು ಮತ್ತು ಇತಿಹಾಸ

ಆಟಿಗೆಗಳಿಂದ ಇತಿಹಾಸ ಮತ್ತು ತಂತ್ರಜ್ಞಾನದ ಪ್ರಗತಿ ಇವುಗಳ ಮೇಲೆ ಬೆಳಕು ಬೀಳುತ್ತದೆ. ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಗಳು ತಿಳಿಯುತ್ತವೆ. ಮಹಾರಾಷ್ಟ್ರದಲ್ಲಿ

ದೀಪಾವಳಿಯಲ್ಲಿ ಕೋಟೆಗಳನ್ನು ಕಟ್ಟುವ ದೊಡ್ಡ ಪರಂಪರೆಯಿದೆ. ಈ ಮಣ್ಣಿನ ಕೋಟೆಗಳ ಮೇಲೆ ಛತ್ರಪತಿ ಶಿವಾಜಿ ಮಹಾರಾಜ ಮತ್ತು ಅವರ ಸಹಕಾರಿಗಳ ಪ್ರತಿಮೆಗಳನ್ನು ಇಡುತ್ತಾರೆ. ಕೋಟೆಗಳ ಸಹಾಯದಿಂದ ಮಹಾರಾಷ್ಟ್ರದಲ್ಲಿ ಆಗಿಹೋದ ಇತಿಹಾಸಕ್ಕೆ ಮೆರುಗು ಕೊಡುವ ಒಂದು ಪ್ರಕಾರ ಇದಾಗಿದೆ.

ಇಟಲಿಯಲ್ಲಿಯ ಪಾಂಪೇಯಿ ನಗರದ ಉತ್ಖನನದಲ್ಲಿ ಭಾರತೀಯ ಹಸ್ತಿದಂತದ ಒಂದು ಗೊಂಬೆ ದೊರೆಯಿತು. ಅದು ಮೊದಲನೆಯ ಶತಮಾನದಲ್ಲಿಯದಾಗಿರಬಹುದು ಎಂಬುದು ಇತಿಹಾಸಕಾರರ ಊಹೆಯಾಗಿದೆ. ಅದರ ಮೇಲಿಂದ ಭಾರತ ಮತ್ತು ರೋಮಗಳೊಳಗಿನ ಪರಸ್ಪರ ಸಂಬಂಧದ ಬಗ್ಗೆ ಊಹೆ ಮಾಡಬಹುದು. ಈ ರೀತಿ ಉತ್ಖನನದಲ್ಲಿ ದೊರೆತ ಆಟಿಗೆಗಳು ಪ್ರಾಚೀನ ಕಾಲದಲ್ಲಿಯ ವಿವಿಧ ದೇಶಗಳಲ್ಲಿಯ ಪರಸ್ಪರ ಸಂಬಂಧದ ಮೇಲೆ ಬೆಳಕು ಚೆಲ್ಲಬಹುದು.

## 7.6 ಆಟಗಳು ಮತ್ತು ಸಂಬಂಧಿತ ಸಾಹಿತ್ಯ ಹಾಗೂ ಚಲನಚಿತ್ರಗಳು

ಆಟಗಳಿಗೆ ಸಂಬಂಧಿತ ಸಾಹಿತ್ಯ ಇದು ಒಂದು ಹೊಸ ಜ್ಞಾನಶಾಖೆಯಾಗಿದೆ. ಆಟಗಳಿಗೆ ಸಂಬಂಧಿತವಾದ ಪುಸ್ತಕಗಳು ಮತ್ತು ಕೋಶಗಳು ಹೊಸದಾಗಿ ಸಿದ್ಧವಾಗುತ್ತಿವೆ. ಮರಾಠಿ ಭಾಷೆಯಲ್ಲಿ ಇದೀಗ ಮಲ್ಲಕಂಬದ ಇತಿಹಾಸ (ಮಲ್ಲಖಾಂಬಾಚಾ ಇತಿಹಾಸ) ಪ್ರಕಾಶಿತವಾಯಿತು. ವ್ಯಾಯಾಮ ಈ ವಿಷಯದ ಮೇಲೆ ಕೋಶವಿದೆ. ಆಟ ಈ ವಿಷಯಕ್ಕೆ ಸಮರ್ಪಿತವಾದ 'ಷಟ್ಕಾರ' ಎಂಬ ಹೆಸರಿನ ನಿಯತಕಾಲಿಕೆಯು ಮೊದಲು ಪ್ರಕಾಶಿತವಾಗುತ್ತಿತ್ತು. ಇಂಗ್ಲೀಷಿನಲ್ಲಿ 'ಆಟ' ಈ ವಿಷಯದ ಮೇಲೆ ವಿಪುಲ ಪ್ರಮಾಣದಲ್ಲಿ ಸಾಹಿತ್ಯ ಲಭ್ಯವಾಗಿದೆ. 'ಆಟ' ಈ ವಿಷಯಕ್ಕೆ ಸಮರ್ಪಿಸಿಕೊಂಡ ದೂರದರ್ಶನ ವಾಹಿನಿಗಳು ಇವೆ.

ಇತ್ತೀಚಿನ ಕಾಲದಲ್ಲಿ 'ಆಟ' ಮತ್ತು ಆಟಗಾರರ ಜೀವನ ಇವುಗಳ ಮೇಲೆ ಕೆಲವು ಹಿಂದಿ ಮತ್ತು ಇಂಗ್ಲೀಷ ಚಲನಚಿತ್ರಗಳು ನಿರ್ಮಾಣವಾಗಿವೆ. ಉದಾ., ಮೇರಿಕೋಮ ಆಣಿ ದಂಗಲ ಈ ಚಲನಚಿತ್ರಗಳು ಮೇರಿಕೋಮ ಈ ಒಲಿಂಪಿಕ್‌ನಲ್ಲಿ ಭಾಗವಹಿಸುವ ಮತ್ತು ಕಂಚಿನ ಪದಕವನ್ನು ಗೆಲ್ಲುವ ಇವಳು ಪ್ರಥಮ ಮಹಿಳಾ ಮುಷ್ಟಿಯೋಧಳ ಮತ್ತು ಫೋಗಟ ಭಗಿನಿ ಈ ಪ್ರಥಮ ಮಹಿಳಾ ಜಟ್ಟಿಯವರ ಜೀವನದ ಮೇಲೆ ಆಧಾರಿತವಾಗಿವೆ.

ಚಲನ ಚಿತ್ರವನ್ನು ನಿರ್ಮಿಸುವಾಗ ಚಲನಚಿತ್ರದ ಕಾಲಖಂಡ, ಆ ಕಾಲದಲ್ಲಿಯ ಭಾಷೆ, ಪೋಷಾಕು ಮತ್ತು ಸಾಮಾನ್ಯ ಜನಜೀವನ ಈ ಎಲ್ಲಾ ಸಂಗತಿಗಳನ್ನು ಕುರಿತು ಆಳವಾದ ಅಭ್ಯಾಸ ಮಾಡಬೇಕಾಗುತ್ತದೆ. ಇತಿಹಾಸದ ವಿದ್ಯಾರ್ಥಿಗಳಿಗೆ ಈ ಎಲ್ಲ ಸಂಗತಿಗಳ ಆಳವಾದ ಅಭ್ಯಾಸ ಮಾಡುವುದು ಸಾಧ್ಯವಿರುತ್ತದೆ. ಕೊಶಾಂತರ್ಗತ ಅಥವಾ ವರ್ತಮಾನ ಪತ್ರಗಳಲ್ಲಿ ಇಲ್ಲವೆ ಬೇರೆಕಡೆ 'ಕ್ರೀಡಾ' ಈ ವಿಷಯದ ಬಗ್ಗೆ ಬರೆಯುವಾಗ ಆಟಗಳ (ಕ್ರೀಡೆಗಳ) ಇತಿಹಾಸ ಗೊತ್ತಿರುವುದು ಅವಶ್ಯಕವಾಗಿರುತ್ತದೆ.

## 7.7 ಆಟಗಳು ಮತ್ತು ಉದ್ಯೋಗಾವಕಾಶಗಳು

ಆಟ ಮತ್ತು ಇತಿಹಾಸ ಈ ಸಂಗತಿಗಳು ಹೊರನೋಟಕ್ಕೆ ಭಿನ್ನವಾಗಿ ಕಾಣಿಸಿದರೂ ಅವೆರಡರಲ್ಲಿ ನಿಕಟವಾದ ಸಂಬಂಧವಿದೆ. ಇತಿಹಾಸದ ವಿದ್ಯಾರ್ಥಿಗಳಿಗೆ 'ಕ್ರೀಡಾ' ಕ್ಷೇತ್ರದಲ್ಲಿ ಅನೇಕ ಅವಕಾಶಗಳಿವೆ. ಒಲಿಂಪಿಕ ಇಲ್ಲವೆ ಏಶಿಯಾಡ ಪಂದ್ಯಗಳ ಅಥವಾ ಯಾವುದೇ ಪ್ರಕಾರದ ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಪಂದ್ಯಗಳ ಸಂದರ್ಭದಲ್ಲಿಯ ಲೇಖನ ಮತ್ತು ಸಮೀಕ್ಷೆ ಮಾಡುವ ಸಲುವಾಗಿ ಇತಿಹಾಸ ವಿಷಯದ ತಜ್ಞರ ಸಹಾಯ ಪಡೆಯಬೇಕಾಗುತ್ತದೆ.

ಆಟಗಳ ಸ್ಪರ್ಧೆಗಳು ನಡೆದಾಗ ಅವುಗಳನ್ನು ಕುರಿತು ಸಮೀಕ್ಷಾಪೂರ್ಣ ನಿವೇದನೆ ಮಾಡುವ ಸಲುವಾಗಿ ತಜ್ಞರ ಅವಶ್ಯಕತೆ ಇರುತ್ತದೆ. ಈ ತಜ್ಞರು ಆಟದ ಇತಿಹಾಸ, ಹಿಂದಿನ ಅಂಕಿ-ಸಂಖ್ಯೆಗಳು, ಆಟದಲ್ಲಿಯ ವಿಕ್ರಮಗಳು, ಪ್ರಸಿದ್ಧ ಆಟಗಾರರು, ಆಟಕ್ಕೆ ಸಂಬಂಧಿತ ಐತಿಹಾಸಿಕ ಸ್ಮರಣೆ ಮುಂತಾದ ಸಂಗತಿಗಳ ಮಾಹಿತಿ ನೀಡುವುದು ಅವಶ್ಯಕವಾಗಿರುತ್ತದೆ. ಅದಕ್ಕಾಗಿ ಇತಿಹಾಸವು ಉಪಯುಕ್ತವೆನಿಸುತ್ತದೆ.

ದೂರದರ್ಶನದ ಮೇಲಿಂದ ಹಾಕಿ, ಕ್ರಿಕೆಟ್, ಫುಟಬಾಲ, ಕಬಡ್ಡಿ, ಚದುರಂಗ ಇತ್ಯಾದಿ ಆಟಗಳ ಪಂದ್ಯಗಳು ಪ್ರತ್ಯಕ್ಷ ನಡೆದಾಗಿನ ಪ್ರಸಾರ (ನೇರ ಪ್ರಸಾರ ಇರುತ್ತದೆ) ನಡೆದಿರುತ್ತದೆ. ವಿವಿಧ ವಾಹಿನಿಗಳಿಂದಾಗಿ ಈ ಆಟಗಳಿಗೆ ಸಂಬಂಧಿತವಾದ ಅಂಕಿ ಅಂಶಗಳನ್ನು ಬರೆದಿಡುವವರಿಗೆ ಮಹತ್ವ ಪ್ರಾಪ್ತವಾಗಿದೆ. ಆಟಗಳಿಗೆ ಸಂಬಂಧಿತ ವಾಹಿನಿಗಳು 24ಗಂಟೆ ಕಾರ್ಯನಿರತ ವಾಗಿರುತ್ತವೆ. ಅದರಿಂದಾಗಿ ಈ ಕ್ಷೇತ್ರದಲ್ಲಿ ಉದ್ಯೋಗದ ಅನೇಕ ಅವಕಾಶಗಳು ಲಭ್ಯವಾಗಿರುತ್ತವೆ.

ಆಟದ ಪಂದ್ಯಗಳಲ್ಲಿ ಅಂಪಾಯರರ ಅವಶ್ಯಕತೆ ಇರುತ್ತದೆ. ಅಂಪಾಯರರಾಗುವ ಅರ್ಹತೆಯನ್ನು ಪಡೆಯುವ ಸಲುವಾಗಿ ಪರೀಕ್ಷೆಗಳು ಇರುತ್ತವೆ. ಈ ಅರ್ಹತೆಗಳನ್ನು ಪಡೆದ ಅಂಪಾಯರರಿಗೆ ಜಿಲ್ಲಾ, ರಾಜ್ಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಕೆಲಸಮಾಡುವ ಅವಕಾಶ ದೊರೆಯುತ್ತದೆ. ಸರಕಾರಿ ಹಾಗೂ ಖಾಸಗಿ ಮಟ್ಟಗಳಲ್ಲಿ ಆಟಗಳಿಗೆ ಉತ್ತೇಜನ ನೀಡುವ ಪ್ರಯತ್ನ ನಡೆದಿವೆ. ಆಟಗಾರರಿಗಾಗಿ ವಿದ್ಯಾರ್ಥಿವೇತನದ ವ್ಯವಸ್ಥೆ ಮಾಡಲಾಗಿದೆ. ಸರಕಾರಿ ಹಾಗೂ ಖಾಸಗಿ ನೌಕರಿಗಳಲ್ಲಿ ಆಟಗಾರರಿಗಾಗಿ ಕೆಲವು ಸ್ಥಾನಗಳನ್ನು ಮೀಸಲಾಗಿರಿಸಲಾಗಿದೆ.

### ಗೊತ್ತಿದೆಯೇ ನಿಮಗೆ?



ಮರಾಠಿ ಭಾಷೆಯಲ್ಲಿ ಕ್ರಿಕೆಟ್ ಪಂದ್ಯದ ಸಮಾಲೋಚನೆಯನ್ನು ಮೊದಲು ಬಾಳ ಜ. ಪಂಡಿತ ಇವರು ಮಾಡುತ್ತಿದ್ದರು. ಆಕಾಶವಾಣಿಯ ಮೇಲಿನ ಅವರ ವೀಕ್ಷಕ ವಿವರಣೆಯನ್ನು ಜನರು ಅತ್ಯಂತ ಲಕ್ಷಪೂರ್ವಕ ಕೇಳುತ್ತಿದ್ದರು. ಈ ಸಮಾಲೋಚನೆ ಯನ್ನು ಮಾಡುತ್ತಿರುವಾಗ ಬಾಳ ಪಂಡಿತ ಇವರು ಆ ಮೈದಾನದ ಇತಿಹಾಸ, ಆಟಗಾರರ ಇತಿಹಾಸ, ಆಟಕ್ಕೆ ಸಂಬಂಧಿತವಿರುವ ನೆನಪುಗಳು ಹಾಗೂ ಹಿಂದಿನ ವಿಕ್ರಮಗಳು ಮುಂತಾದವುಗಳ ಮಾಹಿತಿ ನೀಡುತ್ತಿದ್ದರು. ಅವರಿಗೆ ಆಟದ ಹಾಗೂ ಆಟದ ಇತಿಹಾಸದ ಉತ್ತಮ ಜ್ಞಾನವಿರುವುದರಿಂದ ಅವರ ಸಮಾಲೋಚನೆಯು ರಂಜಕವಾಗಿರುತ್ತಿತ್ತು.

## ಅಭ್ಯಾಸ

**1. (ಅ) ಕೆಳಗೆ ಕೊಟ್ಟ ಪರ್ಯಾಯಗಳಲ್ಲಿ ಯೋಗ್ಯ ಪರ್ಯಾಯವನ್ನು ಆಯ್ದುಕೊಂಡು ವಿಧಾನಗಳನ್ನು ಪೂರ್ಣಮಾಡಿರಿ.**

(1) ಒಲಿಂಪಿಕ್ ಕ್ರೀಡಾ ಸ್ಪರ್ಧೆಗಳ ಪರಂಪರೆ .......... ದಲ್ಲಿ ಆರಂಭವಾಯಿತು.
(ಅ) ಗ್ರೀಸ (ಬ) ರೋಮ
(ಕ) ಭಾರತ (ಡ) ಚೀನ

(2) ಮಹಾರಾಷ್ಟ್ರದಲ್ಲಿ ತಯಾರಿಸಲಾಗುವ ಕಟ್ಟಿಗೆಯ ಗೊಂಬೆಗೆ ........... ಎನ್ನುತ್ತಿದ್ದರು.
(ಅ) ಠಕಿ (ಬ) ಕಾಲಿಚಂಡಿಕಾ
(ಕ) ಗಂಗಾವತಿ (ಡ) ಚಂಪಾವತಿ

**(ಬ) ಕೆಳಗಿನವುಗಳಲ್ಲಿಯ ತಪ್ಪಾದ ಜೊತೆಯನ್ನು ಗುರುತಿಸಿ ಬರೆಯಿರಿ.**

(1) ಮಲ್ಲಕಂಬ - ಶಾರೀರಿಕ ವ್ಯಾಯಾಮದ ಆಟ
(2) ವಾಟರ ಪೋಲೊ - ನೀರಿನಲ್ಲಿಯ ಆಟ
(3) ಸ್ಕೇಟಿಂಗ - ಸಾಹಸದ ಆಟ
(4) ಚದುರಂಗ - ಹೊರಾಂಗಣ ಆಟ

**2. ಟಿಪ್ಪಣಿ ಬರೆಯಿರಿ**

(1) ಆಟಿಗೆ ಮತ್ತು ಉತ್ಸವ
(2) ಆಟ ಮತ್ತು ಚಲನಚಿತ್ರ

**3. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಸದ್ಯದ ಕಾಲದಲ್ಲಿ ಆಟಗಳ ಅರ್ಥಕಾರಣವೇ ಬದಲಾಗಿದೆ.
(2) ಆಟಿಗೆಗಳು ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ.

**4. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರ ಉತ್ತರ ಬರೆಯಿರಿ.**

(1) ಭಾರತದಲ್ಲಿಯ ಆಟಗಳ ಸಾಹಿತ್ಯದ ಇತಿಹಾಸದ ಬಗ್ಗೆ ಮಾಹಿತಿ ಬರೆಯಿರಿ.
(2) ಆಟಗಳು ಮತ್ತು ಇತಿಹಾಸ ಇವುಗಳಲ್ಲಿಯ ಪರಸ್ಪರ ಸಂಬಂಧವನ್ನು ಸ್ಪಷ್ಟಪಡಿಸಿರಿ.
(3) ಹೊರಾಂಗಣದ ಆಟಗಳು ಮತ್ತು ಕುಳಿತು ಆಡುವ ಆಟಗಳಲ್ಲಿಯ ವ್ಯತ್ಯಾಸವನ್ನು ಸ್ಪಷ್ಟಪಡಿಸಿರಿ.

### ಉಪಕ್ರಮ

(1) ನಿಮ್ಮ ಮೆಚ್ಚಿನ ಆಟ ಮತ್ತು ಆಟಕ್ಕೆ ಸಂಬಂಧಿತ ಆಟಗಾರರ ಮಾಹಿತಿಯನ್ನು ದೊರಕಿಸಿರಿ.
(2) ಆಟಗಾರರ ಮೇಲಿನ ಪುಸ್ತಕಗಳು/ಮಾಹಿತಿಪಟ/ ಚಲನಚಿತ್ರ - ಇವುಗಳ ಮೇಲಿಂದ ಆಟಗಾರರಿಗೆ ಆ ಆಟದ ಸಲುವಾಗಿ ಎಷ್ಟು ಕಷ್ಟ ಅನುಭವಿಸಬೇಕಾಗುತ್ತದೆ ಎಂಬುದನ್ನು ಕುರಿತು ಚರ್ಚೆ ಮಾಡಿರಿ.

4UBZ7T

# 8. ಪರ್ಯಟನೆ ಮತ್ತು ಇತಿಹಾಸ

**8.1 ಪರ್ಯಟನೆಯ ಪರಂಪರೆ.**
**8.2 ಪರ್ಯಟನೆಯ ಪ್ರಕಾರಗಳು.**
**8.3 ಪರ್ಯಟನೆಯ ವಿಕಾಸಕ್ಕಾಗಿ**
**8.4 ಐತಿಹಾಸಿಕ ಸ್ಥಳಗಳ ರಕ್ಷಣೆ ಹಾಗೂ ಸಂವರ್ಧನೆ**
**8.5 ಪರ್ಯಟನೆ ಮತ್ತು ಆತಿಥ್ಯ ಕ್ಷೇತ್ರದಲ್ಲಿಯ ಉದ್ಯೋಗಾವಕಾಶಗಳು.**

## 8.1 ಪರ್ಯಟನೆಯ ಪರಂಪರೆ

ನಮ್ಮ ದೇಶದಲ್ಲಿ ಪರ್ಯಟನೆಯ ಪರಂಪರೆಯು ಪ್ರಾಚೀನ ಕಾಲದಿಂದಲೂ ಇದೆ. ತೀರ್ಥಕ್ಷೇತ್ರಗಳಿಗೆ ಭೇಟಿ ನೀಡುವುದು, ಸ್ಥಾನಿಕ ಯಾತ್ರೆಗಳಿಗೆ ಹೋಗುವುದು, ವಿಧ್ಯಾಭ್ಯಾಸಕ್ಕಾಗಿ ದೂರದ ಪ್ರದೇಶಗಳಿಗೆ ಹೋಗುವುದು, ವ್ಯಾಪಾರಕ್ಕಾಗಿ ಹೋಗುವುದು, ಈ ಕಾರಣಗಳಿಗಾಗಿ ಮೊದಲು ಪ್ರವಾಸ ಮಾಡಲಾಗುತ್ತಿತ್ತು. ಸ್ವಲ್ಪದರಲ್ಲಿ ಹೇಳುವುದಾದರೆ ಮಾನವನಿಗೆ ಮೊದಲಿನಿಂದಲೂ ಸಂಚಾರ ಮಾಡುವ ಅಭಿರುಚಿಯಿದೆ.

**ಗೊತ್ತಿದೆಯೇ ನಿಮಗೆ?**

ಜನರಿಗೆ ಉಪದೇಶ ಮಾಡುವ ಸಲುವಾಗಿ ಸ್ವತಃ ಗೌತಮ ಬುದ್ಧ ಇವರು ಭಾರತದಲ್ಲಿಯ ಅನೇಕ ಪ್ರಾಚೀನ ನಗರಗಳಿಗೆ ಭೇಟಿ ನೀಡಿದ ಉಲ್ಲೇಖಗಳು ಬೌದ್ಧ ವಾಙ್ಮಯದಲ್ಲಿವೆ. ಬೌದ್ಧ ಬಿಕ್ಖುಗಳಿಗೆ ಸತತ ಭ್ರಮಣ ಮಾಡುತ್ತ ಇರುವುದು ಅವಶ್ಯಕವಾಗಿರುತ್ತಿತ್ತು. ಅದೇ ರೀತಿ ಜೈನಮುನಿಗಳು ಮತ್ತು ಸಾಧುಗಳು ಕೂಡ ಸತತ ಭ್ರಮಣ ಮಾಡುತ್ತಿದ್ದರು.

ಕ್ರಿ.ಶ. 630ರಲ್ಲಿ ಚೀನಿ ಪ್ರವಾಸಿ ಯುವಾನ ಶ್ವಾಂಗ ಚೀನದಿಂದ ಭಾರತಕ್ಕೆ ಬಂದಿದ್ದನು. ಮಧ್ಯಯುಗದಲ್ಲಿ ಸಂತ ನಾಮದೇವ, ಸಂತ ಏಕನಾಥ, ಗುರುನಾನಕದೇವ, ರಾಮದಾಸ ಸ್ವಾಮಿ ಇವರು ಭಾರತ ಭ್ರಮಣ ಮಾಡುತ್ತಿದ್ದರು.

**ಪರ್ಯಟನೆ :** ವಿಶಿಷ್ಟ ಉದ್ದೇಶದಿಂದ ದೂರದ ಸ್ಥಳಗಳಿಗೆ ಭೇಟಿ ನೀಡುವ ಸಲುವಾಗಿ ಪ್ರವಾಸ ಮಾಡುವುದೆಂದರೆ ಪರ್ಯಟನೆ ಹೌದು.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಥಾಮಸ ಕುಕ್ ಇವನು ಲೀಸ್ಟರದಿಂದ ಲಾಫಬರೋ ವರೆಗೆ 600 ಜನರ

**ಗೊತ್ತಿದೆಯೇ ನಿಮಗೆ?**

ಜಗತ್ತಿನಲ್ಲಿಯ ಪ್ರಥಮ ಯುರೋಪಿಯನ್ ಶೋಧಕ ಪ್ರವಾಸಿಯೆಂದು ಬೆಂಜಾಮಿನ ಟ್ಯುಡೇಲಾ ಪ್ರಸಿದ್ಧನಾಗಿದ್ದಾನೆ. ಸ್ಪೇನದಲ್ಲಿ ಅವನ ಜನನವಾಯಿತು. 1159ರಿಂದ 1173ರ ಮಧ್ಯದಲ್ಲಿ ಅವನು ಫ್ರಾನ್ಸ, ಜರ್ಮನಿ, ಇಟಲಿ, ಗ್ರೀಸ, ಸಿರಿಯಾ, ಅರಬಸ್ಥಾನ, ಇಜಿಪ್ತ, ಇರಾಕ, ಪರ್ಶಿಯಾ (ಇರಾಣ), ಭಾರತ ಮತ್ತು ಚೀನ ದೇಶಗಳಿಗೆ ಭೇಟಿ ನೀಡಿದನು. ಅವನು ತನ್ನ ಪ್ರವಾಸದ ಅನುಭವಗಳನ್ನು ದಿನಚರಿಯಲ್ಲಿ ಬರೆದಿದ್ದಾನೆ. ಈ ದಿನಚರಿಯು ಇತಿಹಾಸದ ಮಹತ್ವದ ದಸ್ತಾವೇಜ ಆಗಿದೆ.

**ಮಾರ್ಕೊ ಪೋಲೊ :** ಹದಿಮೂರನೆಯ ಶತಮಾನದಲ್ಲಿ ಮಾರ್ಕೊಪೋಲೊ ಎಂಬ ಇಟಾಲಿಯನ್ ಪ್ರವಾಸಿಯು ಯುರೋಪಿಗೆ ಏಶಿಯಾ ಖಂಡ ಹಾಗೂ ವಿಶೇಷತಃ ಚೀನ ದೇಶದ ಪರಿಚಯ ಮಾಡಿಕೊಟ್ಟನು. ಅವನು 17 ವರ್ಷ ಚೀನದಲ್ಲಿ ವಾಸಿಸಿದನು. ಏಶಿಯಾದಲ್ಲಿಯ ನಿಸರ್ಗ, ಸಮಾಜ ಜೀವನ, ಸಾಂಸ್ಕೃತಿಕ ಜೀವನ ಮತ್ತು ವ್ಯಾಪಾರ ಇವುಗಳ ಪರಿಚಯವನ್ನು ಅವನು ಜಗತ್ತಿಗೆ ಮಾಡಿಕೊಟ್ಟನು. ಇದರಿಂದಲೇ ಯುರೋಪ ಮತ್ತು ಏಶಿಯಾಗಳ ನಡುವೆ ಸಂವಾದ ಮತ್ತು ವ್ಯಾಪಾರ ಆರಂಭವಾದವು.

**ಇಬ್ನ ಬತೂತಾ :** ಇಸ್ಲಾಮಿ ಜಗತ್ತಿನ ದೀರ್ಘ ಪ್ರವಾಸ ಮಾಡಿದ ಹದಿನಾಲ್ಕನೆಯ ಶತಮಾನದಲ್ಲಿಯ ಪ್ರವಾಸಿಯೇ ಇಬ್ನ ಬತೂತಾ. ಅವನು ಮೂವತ್ತು ವರ್ಷ ಜಗತ್ತಿನ ಸಂಚಾರ ಮಾಡುತ್ತಿದ್ದನು. ಒಂದೇ ರಸ್ತೆಯಿಂದ ಎರಡು ಸಲ ಪ್ರವಾಸ ಮಾಡುವುದಿಲ್ಲ ಎಂಬುದು ಅವನ ಧೋರಣೆಯಾಗಿತ್ತು. ಮಧ್ಯಯುಗದ ಇತಿಹಾಸ ಮತ್ತು ಸಮಾಜ ಜೀವನವನ್ನು ತಿಳಿದುಕೊಳ್ಳಲು ಬತೂತಾನ ಲೇಖನವು ಉಪಯುಕ್ತವಾಗಿದೆ.

**ಗೇರಹಾರ್ಟ ಮರ್ಕೆಟರ :** ಹದಿನಾರನೆಯ ಶತಮಾನದಲ್ಲಿಯ ಗೇರಹಾರ್ಟ ಮರ್ಕೆಟರ ಇವನು ಜಗತ್ತಿನ ನಕಾಶ ಮತ್ತು ಪೃಥ್ವಿಯ ಗೋಳ ತಯಾರಿಸುವ ಆರೇಖಕ (ಡ್ರಾಫ್ಟ್ಸಮನ) ಎಂದು ಪ್ರಸಿದ್ಧನಾಗಿದ್ದಾನೆ. ಅವನಿಂದಾಗಿ ಯುರೋಪನಲ್ಲಿಯ ಶೋಧ ಅಭಿಯಾನಕ್ಕೆ ಗತಿ ಪ್ರಾಪ್ತವಾಯಿತು.

ರೇಲ್ವೆ ಪ್ರವಾಸವನ್ನು ಆಯೋಜಿಸಿದನು. ಪೂರ್ಣ ಯುರೋಪಿನ ಭವ್ಯ ವರ್ತುಳಾಕಾರ ಪ್ರವಾಸವನ್ನು ಯಶಸ್ವಿ ರೀತಿಯಿಂದ ಪೂರ್ಣಮಾಡಿದನು. ಕುಕ್ ಇವನೇ ಪ್ರಯಾಣಿಕರ ತಿಕೀಟುಗಳನ್ನು ಮಾರಾಟ ಮಾಡುವ ಎಜನ್ಸಿ ವ್ಯವಸಾಯವನ್ನು ಆರಂಭಿಸಿದನು. ಇದರಿಂದ ಆಧುನಿಕ ಪರ್ಯಟನ ಯುಗ ಆರಂಭವಾಯಿತು.



**ಗೊತ್ತಿದೆಯೇ ನಿಮಗೆ**

ತೀರ್ಥಯಾತ್ರೆಗಾಗಿ ದೇಶದ ಒಂದು ತುದಿಯಿಂದ ಮತ್ತೊಂದು ತುದಿಯವರೆಗೆ ಕಾಲ್ನಡಿಗೆಯಿಂದ ಪ್ರವಾಸ ಮಾಡುವ ಪರಂಪರೆ ಭಾರತದಲ್ಲಿ ಮೊದಲಿನಿಂದ ಬಳಕೆಯಲ್ಲಿತ್ತು. ಮಹಾರಾಷ್ಟ್ರದಿಂದ ಉತ್ತರದ ಕಡೆಗೆ ಅಯೋಧ್ಯೆಯ ವರೆಗೆ ಮತ್ತು ಅಲ್ಲಿಂದ ಮತ್ತೆ ಮಹಾರಾಷ್ಟ್ರದ ವರೆಗಿನ ಪ್ರವಾಸದ ವರ್ಣನೆಯನ್ನು ವಿಷ್ಣುಭಟ ಗೋಡಸೆಯವರು ಬರೆದಿಟ್ಟಿದ್ದಾರೆ. 'ಮಾಝಾ ಪ್ರವಾಸ' ಇದು ಅವರ ಪ್ರವಾಸವರ್ಣನೆಯ ಪುಸ್ತಕದ ಹೆಸರು. ಈ ಪುಸ್ತಕದ ವೈಶಿಷ್ಟ್ಯವೇನೆಂದರೆ ವಿಷ್ಣುಭಟ ಇವರು ಈ ಪ್ರವಾಸವನ್ನು 1857ರ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಮಾಡಿದರು. ಈ ಸ್ವಾತಂತ್ರ್ಯಸಂಗ್ರಾಮದಲ್ಲಿಯ ಅನೇಕ ಘಟನೆಗಳಿಗೆ ಅವರು ಪ್ರತ್ಯಕ್ಷ ಸಾಕ್ಷಿಯಾಗಿದ್ದರು. ಅದರಿಂದಾಗಿ ಈ ಸ್ವಾತಂತ್ರ್ಯ ಸಂಗ್ರಾಮದ ಹಾಗೂ ವಿಶೇಷತಃ ರಾಣಿ ಲಕ್ಷ್ಮೀಬಾಯಿಯವರ ಜೀವನದ ಬಗೆಗಿನ ಅನೇಕ ವಿವರಗಳು ನಮಗೆ ತಿಳಿಯುತ್ತವೆ. ಇಷ್ಟೇ ಅಲ್ಲದೆ ಹದಿನೆಂಟನೆಯ ಶತಮಾನದಲ್ಲಿಯ ಮರಾಠಿ ಭಾಷೆಯ ಸ್ವರೂಪವೂ ನಮಗೆ ತಿಳಿಯುತ್ತದೆ. ಈ ಪುಸ್ತಕವು ಆ ಕಾಲದ ಇತಿಹಾಸದ ಒಂದು ಮಹತ್ವದ ಸಾಧನವಾಗಿದೆ.

## 8.2 ಪರ್ಯಟನದ ಪ್ರಕಾರಗಳು

ಆಧುನಿಕ ಕಾಲದಲ್ಲಿ ಪರ್ಯಟನೆಯು ಒಂದು ಸ್ವತಂತ್ರವಾದ ಸ್ಥಾನಿಕ, ಅಂತರ ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವ್ಯವಸಾಯವಾಗಿದೆ. ದೇಶದಲ್ಲಿಯ ಮತ್ತು ವಿದೇಶಗಳಲ್ಲಿಯ ಪುರಾತನ ಕಟ್ಟಡಗಳು, ಇತಿಹಾಸ ಪ್ರಸಿದ್ಧ ಹಾಗೂ ನಿಸರ್ಗರಮ್ಯ ಸ್ಥಳಗಳು, ಪ್ರಾಚೀನ ಕಲಾನಿರ್ಮಿತಿ ಕೇಂದ್ರಗಳು, ತೀರ್ಥಕ್ಷೇತ್ರಗಳು, ಔದ್ಯೋಗಿಕ ಮತ್ತು ಇತರ ಯೋಜನೆಗಳು ಮುಂತಾದವುಗಳಿಗೆ ಭೇಟಿ ನೀಡುವುದು ಈ ಪರ್ಯಟನೆಯ ಹಿಂದಿನ ಮುಖ್ಯ ಪ್ರೇರಣೆಯಾಗಿರುತ್ತದೆ. ನಿಸರ್ಗನಿರ್ಮಿತ ಮತ್ತು ಮಾನವ ನಿರ್ಮಿತ ಸಂಗತಿಗಳಲ್ಲಿ ರಮ್ಯತೆ ಮತ್ತು ಭವ್ಯತೆಗಳ ಪ್ರತ್ಯಕ್ಷ ಅನುಭವ ಪಡೆಯುವ ಇಚ್ಛೆ ಜಗದಾದ್ಯಂತ ಪರ್ಯಟಕರಿಗೆ ಇರುತ್ತದೆ. ಅದರಿಂದಾಗಿ ಹಿಮಶಿಖರಗಳು, ಸಮುದ್ರತೀರಗಳು, ದಟ್ಟ ಕಾಡುಗಳು ಇತ್ಯಾದಿ ಕಡೆಗಣಿಸಲ್ಪಟ್ಟ ಪ್ರದೇಶಗಳು ಪರ್ಯಟನೆಯ ಕ್ಷೇತ್ರದಲ್ಲಿ ಬಂದವು. ಅವುಗಳ ಮೇಲೆ ದೃಕ್-ಶ್ರಾವ್ಯ ಮಾಧ್ಯಮಗಳ ಮೂಲಕ ಕಾರ್ಯಕ್ರಮಗಳು ಸಿದ್ಧವಾಗತೊಡಗಿದವು. ಪರ್ಯಟನೆಯಲ್ಲಿ ಸ್ಥೂಲವಾಗಿ ಸ್ಥಾನಿಕ, ಅಂತರ ರಾಜ್ಯಗಳ, ಅಂತರರಾಷ್ಟ್ರೀಯ, ಧಾರ್ಮಿಕ, ಐಸಿಹಾಸಿಕ, ಆರೋಗ್ಯಪೂರಕ, ವಿಜ್ಞಾನ, ಕೃಷಿ, ನೈಮಿತ್ತಿಕ, ಕ್ರೀಡಾ ಪರ್ಯಟನೆ ಇತ್ಯಾದಿ ಪ್ರಕಾರಗಳು ಇರುತ್ತವೆ.

**ಸ್ಥಾನಿಕ ಮತ್ತು ಅಂತರರಾಜ್ಯಗಳ ಪರ್ಯಟನೆ :** ಈ ಪ್ರವಾಸವು ಸುಲಭವಾಗಿರುತ್ತದೆ. ಇದು ದೇಶಾಂತರ್ಗತವಾಗಿರುವುದರಿಂದ ಭಾಷೆ, ಚಲಾವಣೆಯ ಹಣ, ಕಾಗದ ಪತ್ರಗಳು, ಇವುಗಳ ವಿಶೇಷ ಅಡೆತಡೆ ಇರುವುದಿಲ್ಲ. ವಿಶೇಷವೆಂದರೆ ನಮಗೆ ಲಭ್ಯವಾಗಿರುವ ವೇಳೆಯ ಪ್ರಕಾರ ನಾವು ಪ್ರವಾಸದ ಏರ್ಪಾಟು ಮಾಡಬಹುದು.

**ಅಂತರರಾಷ್ಟ್ರೀಯ ಪರ್ಯಟನೆ :** ಹಡಗು, ರೇಲ್ವೆ ಮತ್ತು ವಿಮಾನಗಳಿಂದಾಗಿ ಅಂತರರಾಷ್ಟ್ರೀಯ ಪರ್ಯಟನೆ ಮೊದಲಿಗಿಂತ ಸುಲಭವಾಗಿದೆ. ಹಡಗುಗಳಿಂದ ಸಮುದ್ರತೀರದ ದೇಶಗಳು ಜೋಡಿಸಲ್ಪಟ್ಟವು. ರೇಲ್ವೆ ಹಳಿಗಳಿಂದ ಯುರೋಪ ಜೋಡಿಸಲ್ಪಟ್ಟಿದೆ. ವಿಮಾನಗಳು ಜಗತ್ತನ್ನು ಹತ್ತಿರ ತಂದಿವೆ. ಆರ್ಥಿಕ ಉದಾರೀಕರಣದ ನಂತರ ಭಾರತದಿಂದ ವಿದೇಶಗಳಿಗೆ ಹೋಗುವವರ ಹಾಗೂ ವಿದೇಶಗಳಿಂದ ಭಾರತಕ್ಕೆ ಬರುವವರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ವ್ಯಾಸಂಗ, ನೆಮ್ಮದಿ, ಸ್ಥಳದರ್ಶನ, ವ್ಯಾವಸಾಯಿಕ ಕೆಲಸಗಳು (ಸಭೆ, ಕರಾರು, ಇತ್ಯಾದಿ), ಚಲನಚಿತ್ರಗಳ ಚಿತ್ರೀಕರಣಗಳಂತಹ ಕೆಲಸಗಳಿಗಾಗಿ ದೇಶ-ವಿದೇಶಗಳಲ್ಲಿ ಬರುವ ಹೋಗುವ ಪ್ರಯಾಣಿಕರ ಪ್ರಮಾಣದಲ್ಲಿ ವೃದ್ಧಿಯಾಗಿದೆ.

**ಐತಿಹಾಸಿಕ ಪರ್ಯಟನೆ :** ಇದು ಸಂಪೂರ್ಣ ಜಗತ್ತಿನಲ್ಲಿಯ ಒಂದು ಮಹತ್ವದ ಪರ್ಯಟನ ಪ್ರಕಾರವಾಗಿದೆ. ಜನರಿಗೆ ಇತಿಹಾಸದ ಬಗ್ಗೆ ಇರುವ ಕುತೂಹಲವನ್ನು ಗಮನದಲ್ಲಿರಿಸಿ ಐತಿಹಾಸಿಕ ಪರ್ಯಟನೆಯನ್ನು ಆಯೋಜಿಸಲಾಗುತ್ತದೆ. ಮಹಾರಾಷ್ಟ್ರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರಿಗೆ ಸಂಬಂಧಿತ ಕೋಟೆಗಳಿಗೆ ದುರ್ಗಗಳ (ಕೋಟೆಗಳ) ಅಭ್ಯಾಸಕರಾದ ಗೋಪಾಳ ನೀಲಕಂಠ ದಾಂಡೇಕರ ಇವರು ದುರ್ಗಭ್ರಮಣ ಯಾತ್ರೆಗಳನ್ನು ಆಯೋಜಿಸುತ್ತಿದ್ದರು. ಭಾರತದಲ್ಲಿ ರಾಜಸ್ಥಾನದಲ್ಲಿಯ ಕೋಟೆಗಳು, ಮಹಾತ್ಮಾಗಾಂಧಿ ಮತ್ತು ಆಚಾರ್ಯ ವಿನೋಬಾ ಭಾವೆ ಇವರಿಗೆ ಸಂಬಂಧಿತವಾದ ಆಶ್ರಮಗಳು, 1857ರ ಸ್ವಾತಂತ್ರ್ಯ ಯುದ್ಧಕ್ಕೆ ಸಂಬಂಧಿತ ಸ್ಥಳಗಳು ಇತ್ಯಾದಿ ಐತಿಹಾಸಿಕ ಸ್ಥಳಗಳ ಪ್ರವಾಸಗಳನ್ನು ಆಯೋಜಿಸಲಾಗುತ್ತದೆ.

**ಭೌಗೋಲಿಕ ಪರ್ಯಟನೆ :** ಇದರಲ್ಲಿ ವಿವಿಧ ಭೌಗೋಲಿಕ ವೈಶಿಷ್ಟ್ಯಗಳ ನಿರೀಕ್ಷಣೆಗಾಗಿ ಪರ್ಯಟನೆ

ಮಾಡಲಾಗುತ್ತದೆ. ಅಭಯಾರಣ್ಯಗಳು, ವ್ಯಾಲ್ಲಿ ಆಫ್ ಫ್ಲಾವರ್ಸ (ಉತ್ತರಾಖಂಡ), ಸಮುದ್ರ ತೀರಗಳು, ಭೌಗೋಲಿಕ ವೈಶಿಷ್ಟ್ಯಪೂರ್ಣ ಸ್ಥಳಗಳು (ಉದಾ., ಲೋಣಾರ ಸರೋವರ, ನಿಫೋಜದಲ್ಲಿಯ ಮಡಿಕೆಗುಳಿ, ಇತ್ಯಾದಿ) ಮುಂತಾದವುಗಳ ಸಮಾವೇಶವು ಭೌಗೋಲಿಕ ಪರ್ಯಟನದಲ್ಲಿ ಆಗುತ್ತದೆ. ಇವುಗಳಲ್ಲಿಯ ಅನೇಕ ಸ್ಥಳಗಳಲ್ಲಿಯ ನಿಸರ್ಗದ ಅವಲೋಕನ ಮಾಡಬೇಕೆಂಬ ಇಚ್ಛೆ



ವ್ಯಾಲ್ಲಿ ಆಫ ಫ್ಲಾವರ್ಸ

**ತಿಳಿದುಕೊಳ್ಳಿರಿ.**

ಇಡೀ ಜಗತ್ತಿನಲ್ಲಿಯ ವಿವಿಧ ಸಮಾಜದಲ್ಲಿಯ ಜನರು ಅನೇಕ ಸ್ಥಳಗಳಲ್ಲಿ ಹರಡಿಕೊಂಡಿದ್ದಾರೆ. ಅವರಲ್ಲಿ ಪ್ರಚಲಿತವಿರುವ ಪೌರಾಣಿಕ ಕಥೆಗಳು ಹಾಗೂ ಆ ಪೌರಾಣಿಕ ಕಥೆಗಳೊಡನೆ ಜೋಡಿಸಲ್ಪಟ್ಟ ಭೌಗೋಲಿಕ ಸ್ಥಳಗಳು – ಇವುಗಳಿಂದಾಗಿ ಅವರಲ್ಲಿಯ ಐಕ್ಯತೆಯ ಭಾವನೆಯು ದೃಢವಾಗಿ ಉಳಿಯುತ್ತದೆ. ಆ ಸ್ಥಳಗಳ ಭೇಟಿಗೆ ಮಹತ್ವ ಬರುತ್ತದೆ. ಅದರಿಂದಲೇ ಧಾರ್ಮಿಕ ಪರ್ಯಟನೆ ಆರಂಭವಾಗುತ್ತದೆ. ಉದಾ., ಚಾರಧಾಮ, ಹನ್ನೆರಡು ಜೋತಿರ್ಲಿಂಗಗಳು ಇತ್ಯಾದಿ. ಇವುಗಳಲ್ಲಿಯ ಬಹುಸಂಖ್ಯ ಸ್ಥಳಗಳಲ್ಲಿ ಜನರಿಗೆ ಅನುಕೂಲವಾಗಬೇಕೆಂದು ಪುಣ್ಯಶ್ಲೋಕ ಅಹಿಲ್ಯಾಬಾಯಿ ಹೋಳಕರ ಇವರು ತಮ್ಮ ವೈಯಕ್ತಿಕ ಹಣದಿಂದ ಲೋಕೋಪಯೋಗಿ ಕಾರ್ಯಗಳನ್ನು ಮಾಡಿದ್ದಾರೆ.

ಹಾಗೂ ಕುತೂಹಲದಿಂದ ಅನೇಕ ಪ್ರಯಾಣಿಕರು ಅಲ್ಲಿ ಹೋಗುತ್ತಿರುತ್ತಾರೆ.

**ಆರೋಗ್ಯ ಪರ್ಯಟನೆ :** ಪಾಶ್ಚಾತ್ಯರ ಅಭಿಪ್ರಾಯದಂತೆ ಭಾರತದಲ್ಲಿಯ ವೈದ್ಯಕೀಯ ಸೇವೆ ಮತ್ತು ಸೌಕರ್ಯಗಳು ಅಗ್ಗದ ಮತ್ತು ಉತ್ತಮ ದರ್ಜೆಯದಾಗಿರುತ್ತವೆ. ಈ ಕಾರಣದಿಂದಾಗಿ ವಿದೇಶಿ ಜನರು ಭಾರತಕ್ಕೆ ಬರತೊಡಗಿದ್ದಾರೆ. ಭಾರತದಲ್ಲಿ ವಿಪುಲ ಪ್ರಮಾಣದಲ್ಲಿ ಸೂರ್ಯಪ್ರಕಾಶ ಲಭ್ಯವಿರುತ್ತದೆ. ಅದರ ಲಾಭ ಪಡೆಯುವ ಸಲುವಾಗಿ ಎಷ್ಟೋ ಜನರು ಭಾರತಕ್ಕೆ ಬರುತ್ತಾರೆ. ಯೋಗ ಶಿಕ್ಷಣ ಮತ್ತು ಆಯುರ್ವೇದದ ಉಪಚಾರಕ್ಕಾಗಿ ವಿದೇಶಿ ಪರ್ಯಟಕರು ಭಾರತಕ್ಕೆ ಬರುತ್ತಾರೆ.

**ಕೃಷಿ ಪರ್ಯಟನೆ :** ನಗರದ ಸಂಸ್ಕೃತಿಯಲ್ಲಿ ಬೆಳೆದ ಹಾಗೂ ಕೃಷಿ ಜೀವನದ ಬಗ್ಗೆ ಅನಭಿಜ್ಞರಾಗಿರುವವರ ಸಲುವಾಗಿ ಕೃಷಿ ಪರ್ಯಟನೆಯ ಈ ಪ್ರಕಾರವು ಇತ್ತೀಚಿನ ಕಾಲದಲ್ಲಿ ಕ್ಷಿಪ್ರಗತಿಯಿಂದ ಮುಂದೆ ಬಂದಿದೆ. ಇತ್ತೀಚೆಗೆ ಭಾರತೀಯ ರೈತರು ದೂರ ದೂರದ ಕೃಷಿ ಸಂಶೋಧನೆಯ ಕೇಂದ್ರಗಳು, ಕೃಷಿ ವಿಶ್ವವಿದ್ಯಾಲಯಗಳು, ಕೃಷಿ ಕ್ಷೇತ್ರದಲ್ಲಿ ಅಭಿನವ ಪ್ರಯೋಗಗಳ ಮೂಲಕ ಹೊಸ ತಂತ್ರಜ್ಞಾನವನ್ನು ವಿಕಸಿತಗೊಳಿಸುವ ಇಸ್ರಾಯಿಲಗಳಂತಹ ದೇಶಗಳು ಮುಂತಾದ ಸ್ಥಳಗಳಿಗೆ ಕೃಷಿಯ ಆಧುನಿಕ ತಂತ್ರಜ್ಞಾನದ ಮಾಹಿತಿಯನ್ನು ಪಡೆಯುವ ಸಲುವಾಗಿ ಭೇಟಿ ನೀಡತೊಡಗಿದ್ದಾರೆ.

**ಕ್ರೀಡಾ ಪರ್ಯಟನೆ :** ಕ್ರೀಡಾ ಪರ್ಯಟನೆಯು ಇಪ್ಪತ್ತನೆಯ ಶತಮಾನದಲ್ಲಿ ಉದಯಕ್ಕೆ ಬಂದ ಪ್ರಕಾರವಾಗಿದೆ. ಜಾಗತಿಕ ಮಟ್ಟದಲ್ಲಿ ಒಲಿಂಪಿಕ, ವಿಂಬಲ್ಡನ್ ಹಾಗೂ ಜಾಗತಿಕ ಚದುರಂಗ ಸ್ಪರ್ಧೆ, ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯ ಹಾಗೂ ಭಾರತೀಯ ಮಟ್ಟದಲ್ಲಿ ಹಿಮಾಲಯನ ಕಾರ ರ್‍ಯಾಲಿ ಮತ್ತು ಮಹಾರಾಷ್ಟ್ರ ಮಟ್ಟದಲ್ಲಿ ಮಹಾರಾಷ್ಟ್ರ ಕೇಸರಿ ಕುಸ್ತಿ ಸ್ಪರ್ಧೆ ಮುಂತಾದ ಪ್ರಕಾರಗಳಿವೆ. ಈ ಪಂದ್ಯಗಳನ್ನು ನೋಡಲು ಹೋಗುವುದೇ ಕ್ರೀಡಾ ಪರ್ಯಟನೆ.

**ನೈಮಿತ್ತಿಕ ಪರ್ಯಟನೆ :** ಮನುಷ್ಯನು ಪರ್ಯಟನಕ್ಕಾಗಿ ಕಾರಣಗಳನ್ನು ಶೋಧಿಸುತ್ತಿರುತ್ತಾನೆ. ಇಪ್ಪತ್ತೊಂದನೆಯ ಶತಮಾನದಲ್ಲಿ ಇಂಥ ಅನೇಕ ಅವಕಾಶಗಳು ಲಭ್ಯವಾಗಿವೆ. ಉದಾ., ಜಗತ್ತಿನ ವಿವಿಧ ದೇಶಗಳಲ್ಲಿಯ ಫಿಲ್ಮ ಫೆಸ್ಟಿವಲ್ಸ, ಸಮ್ಮೇಲನಗಳು, ಅಂತರರಾಷ್ಟ್ರೀಯ ಪುಸ್ತಕ ಪ್ರದರ್ಶನಗಳು, ಇತ್ಯಾದಿ ಕಾರಣಗಳಿಗಾಗಿ ಜನರು ಬೇರೆ ಬೇರೆ ಸ್ಥಳಗಳಿಗೆ ಹೋಗುತ್ತಿರುತ್ತಾರೆ. ಮಹಾರಾಷ್ಟ್ರದಲ್ಲಿಯ ಸಾಹಿತ್ಯ ರಸಿಕರು ಕೂಡ ಪ್ರತಿ ವರ್ಷ ಜರುಗುವ ಅಖಿಲ ಭಾರತೀಯ ಮರಾಠಿ ಸಾಹಿತ್ಯ ಸಮ್ಮೇಳನದ ಸಲುವಾಗಿ ಹೋಗುತ್ತಿರುತ್ತಾರೆ.

**ಬನ್ನಿ ಹುಡುಕೋಣ.**

ಮೇಲಿನ ಪ್ರಕಾರಗಳಲ್ಲದೆ ವಿಜ್ಞಾನ ವಿಷಯದ ಪರ್ಯಟನೆ, ನೆಮ್ಮದಿಗಾಗಿ ಪರ್ಯಟನೆ, ಸಾಂಸ್ಕೃತಿಕ ಪರ್ಯಟನೆ ಮತ್ತು ಸಮೂಹ ಪರ್ಯಟನೆ ಈ ಪ್ರಕಾರಗಳ ಮಾಹಿತಿಯನ್ನು ಶಿಕ್ಷಕರ ಮತ್ತು ಇಂಟರ್ನೆಟ್‌ನ ಸಹಾಯದಿಂದ ಹುಡುಕೋಣ.

## 8.3 ಪರ್ಯಟನೆಯ ವಿಕಾಸದ ಸಲುವಾಗಿ

ದೇಶಿ ಹಾಗೂ ವಿದೇಶಿ ಪರ್ಯಟಕರ ಜ್ಞಾನಾರ್ಜನೆ ಅತ್ಯಂತ ಮಹತ್ವದ ಸಂಗತಿಯಾಗಿದೆ.

ಪ್ರಯಾಣಿಕರ ಸಾರಿಗೆ ಮತ್ತು ಸುರಕ್ಷತೆ, ಪ್ರವಾಸದಲ್ಲಿ ಸುಖ ಸೌಕರ್ಯಗಳು, ಉತ್ತಮ ದರ್ಜೆಯ ನಿವಾಸದ ಲಭ್ಯತೆ, ಪ್ರವಾಸದಲ್ಲಿ ಸ್ವಚ್ಛತಾಗೃಹಗಳ ಸೌಕರ್ಯ ಮುಂತಾದ ಸಂಗತಿಗಳಿಗೆ ಪರ್ಯಟನೆಯಲ್ಲಿ ಪ್ರಾಧಾನ್ಯ ನೀಡುವುದು

**ತಿಳಿದುಕೊಳ್ಳಿರಿ.**

ಸ್ವಚ್ಛ ಭಾರತ ಚಳವಳಿಯ ಮಾಹಿತಿ ಪಡೆಯಿರಿ.

ಅವಶ್ಯಕವಾಗಿದೆ. ಇದರಲ್ಲಿ ವಿಕಲಚೇತನ ಪರ್ಯಟಕರ ಅವಶ್ಯಕತೆಗಳ ಕಡೆಗೆ ವಿಶೇಷ ಲಕ್ಷ ನೀಡುವುದು ಅವಶ್ಯಕವಾಗಿದೆ.

ಐತಿಹಾಸಿಕ ಪರಂಪರೆಗಳ ರಕ್ಷಣೆಗಾಗಿ ನಾವು ಕಾಳಜಿವಹಿಸುವುದು ಅವಶ್ಯಕವಾಗಿರುತ್ತದೆ. ಐತಿಹಾಸಿಕ ವಿಶ್ವಪರಂಪರೆಯ ಸ್ಥಳಗಳನ್ನು ವಿರೂಪಗೊಳಿಸುವುದು, ಗೋಡೆಗಳ ಮೇಲೆ ಬರೆಯುವುದು, ಗಿಡಗಳ ಬೊಡ್ಡೆಗಳ ಮೇಲೆ ಕೊರೆಯುವುದು, ಪ್ರಾಚೀನ ಕಟ್ಟಡಗಳಿಗೆ ದಟ್ಟ ಬಣ್ಣ ಕೊಡುವುದು, ಅವುಗಳ ಪರಿಸರದಲ್ಲಿ ಸೌಕರ್ಯಗಳ ಕೊರತೆಯಿರುವುದು ಯಾವುದರಿಂದ ಅಸ್ವಚ್ಛತೆ ಹೆಚ್ಚುತ್ತದೆಯೋ ಇಂಥ ಸಂಗತಿಗಳನ್ನು ವರ್ಜಿಸಬೇಕು.

**ಹೇಳಿ ನೋಡೋಣ**

- ಪರ್ಯಟಕರಿಗಾಗಿ ನಾವು ಯಾವ ಯಾವ ಸೌಕರ್ಯಗಳನ್ನು ಒದಗಿಸಿಕೊಡಬೇಕು?
- ಪರ್ಯಟಕರ ಜೊತೆ ಸ್ಥಾನಿಕ ವ್ಯಕ್ತಿಗಳಾಗಿ ನೀವು ಹೇಗೆ ವರ್ತಿಸುವಿರಿ?

ಜಾಗತಿಕ ಮಟ್ಟದಲ್ಲಿಯ ಮಹತ್ವದ ಭಾಷೆಗಳಲ್ಲಿ ಮಾಹಿತಿ ಪುಸ್ತಕಗಳು, ಮಾರ್ಗದರ್ಶಿಕೆಗಳು, ನಕಾಶಗಳು ಹಾಗೂ ಇತಿಹಾಸ ವಿಷಯದ ಪುಸ್ತಕಗಳನ್ನು ಲಭ್ಯ ಮಾಡಿಕೊಡುವುದು ಅವಶ್ಯಕವಾಗಿದೆ. ಪ್ರಯಾಣಿಕರನ್ನು ವಾಹನಗಳಲ್ಲಿ ತಿರುಗಾಡಲು ಕರೆದುಕೊಂಡು ಹೋಗುವ ವಾಹನ ಚಾಲಕರಿಗೆ ದುಭಾಷೆಯ ತರಬೇತಿ ನೀಡುವುದು, ಅವರು ಮಾರ್ಗದರ್ಶಕರೆಂದು ಕೆಲಸ ಮಾಡುವುದು, ಇತ್ಯಾದಿ ಸಂಗತಿಗಳನ್ನು ಮಾಡಬಹುದು.

## 8.4 ಐತಿಹಾಸಿಕ ಸ್ಥಳಗಳ ರಕ್ಷಣೆ ಮತ್ತು ಸಂವರ್ಧನೆ

ಐತಿಹಾಸಿಕ ಸ್ಥಳಗಳ ರಕ್ಷಣೆ ಮತ್ತು ಸಂವರ್ಧನೆ ಮಾಡುವುದು ಒಂದು ದೊಡ್ಡ ಆಹ್ವಾನವಾಗಿದೆ. ನಮ್ಮ ದೇಶಕ್ಕೆ ಪ್ರಾಚೀನ, ಮಧ್ಯಯುಗೀನ ಮತ್ತು ಅರ್ವಾಚೀನ ಐತಿಹಾಸಿಕ ಸ್ಥಳಗಳ ಪರಂಪರೆ ಲಭಿಸಿದೆ. ಅದರ ಜೊತೆಗೆ ನೈಸರ್ಗಿಕ ಸಮೃದ್ಧಿಯ ಪರಂಪರೆಯೂ ನಮಗೆ ಲಭಿಸಿದೆ. ಇದರಲ್ಲಿ ನೈಸರ್ಗಿಕ ಹಾಗೂ ಮಾನವ ನಿರ್ಮಿತ (ಸಾಂಸ್ಕೃತಿಕ) ಎಂಬ ಎರಡು ಪ್ರಕಾರದ ಪರಂಪರೆಗಳಿರುತ್ತವೆ. ಸಂಪೂರ್ಣ ಜಗತ್ತಿನಲ್ಲಿ ಗೌರವಿಸಲ್ಪಟ್ಟ ಕೆಲವು ಮಹತ್ವದ ಸ್ಥಳಗಳು ಭಾರತದಲ್ಲಿವೆ. ಅವುಗಳಲ್ಲಿ ತಾಜ ಮಹಲ ಹಾಗೂ ಜಂತರ ಮಂತರ ವೀಕ್ಷಣಾಲಯದ ಜೊತೆಗೆ ಮಹಾರಾಷ್ಟ್ರದಲ್ಲಿಯ ಅಜಂತಾ, ಎಲ್ಲೋರಾ ಮತ್ತು ಘಾರಾಪುರಿ (ಎಲಿಫಂಟಾ ಗುಹೆಗಳು), ಛತ್ರಪತಿ ಶಿವಾಜಿ ಮಹಾರಾಜ ರೈಲು ನಿಲ್ದಾಣ, ಪಶ್ಚಿಮ ಘಟ್ಟದಲ್ಲಿಯ ಕಾಸ (ತಪ್ಪಲು) ಪ್ರಸ್ಥಭೂಮಿ ಇತ್ಯಾದಿಗಳ ಸಮಾವೇಶವಿರುತ್ತದೆ.



ಘಾರಾಪುರಿ ಗುಹೆಗಳು

**ಮಾಡಿ ನೋಡಿರಿ**

ಇಂಟರ್ನೆಟ್ ಸಹಾಯದಿಂದ ಭಾರತದಲ್ಲಿಯ ಸಾಂಸ್ಕೃತಿಕ, ನೈಸರ್ಗಿಕ, ಮತ್ತು ಸಂಮ್ಮಿಶ್ರ ಐತಿಹಾಸಿಕ ವಿಶ್ವಪರಂಪರೆಯ ಸ್ಥಳಗಳ ಚಿತ್ರಗಳನ್ನು ಸಂಗ್ರಹಿಸಿರಿ.



ಕಾಸ ಪ್ರಸ್ಥಭೂಮಿ

ಜಾಗತಿಕ ವಿಶ್ವಪರಂರೆಯ ಸ್ಥಳಗಳಿಗೆ ಭೇಟಿ ನೀಡುವ ಇಚ್ಛೆಯು ಜಗತ್ತಿನಲ್ಲಿಯ ಎಲ್ಲ ಕಡೆಯ ಪ್ರಯಾಣಿಕರಿಗೆ ಇರುತ್ತದೆ. ಈ ಪರಂಪರೆಯ ಸ್ಥಳಗಳನ್ನು ನೋಡುವ ಸಲುವಾಗಿ ವಿದೇಶಗಳಿಂದ ಸಾವಿರಾರು ಜನರು ಬರುತ್ತಾರೆ. ಜಾಗತಿಕ ವಿಶ್ವಪರಂಪರೆಯ ಸ್ಥಳಗಳಲ್ಲಿ ಭಾರತದಲ್ಲಿಯ ಯಾವುದೊಂದು ಸ್ಥಳದ ಆಯ್ಕೆಯಾದರೆ ನಮಗೆ ತುಂಬಾ ಅಭಿಮಾನವೆನಿಸುತ್ತದೆ. ಆದರೆ ನಾವು ಯಾವಾಗ ಪ್ರವಾಸದ ನಿಮಿತ್ತವಾಗಿ ಇಂಥ ಸ್ಥಳಗಳನ್ನು ನೋಡಲು ಹೋಗುತ್ತೇವೆಯೋ ಆಗ ನಮಗೆ ಯಾವ ಚಿತ್ರ ಕಾಣಿಸುತ್ತದೆ? ಸ್ಥಳಗಳ ಪರಿಸರದಲ್ಲಿ ಪರ್ಯಟಕರು ಖಡುವಿನಿಂದ, ಇದ್ದಲಿಯಿಂದ ತಮ್ಮ ಹೆಸರುಗಳನ್ನು ಬರೆಯುತ್ತಾರೆ, ಚಿತ್ರಗಳನ್ನು ತೆಗೆಯುತ್ತಾರೆ. ಅದರ ವಿಪರೀತ ಪರಿಣಾಮವು ನಮ್ಮ ದೇಶದ ಪ್ರತಿಮೆಯ ಮೇಲಾಗುತ್ತದೆ. ಪರ್ಯಟನ ಸ್ಥಳಗಳ ರಕ್ಷಣೆಗಾಗಿ ಕೆಳಗಿನಂತೆ ನಿಶ್ಚಯ ಮಾಡುವುದು ಅವಶ್ಯಕವಾಗಿದೆ..

(1) ನಾನು ಪರ್ಯಟನ ಸ್ಥಳದ ಸ್ವಚ್ಛತೆಯನ್ನು ಕಾಪಾಡುವೆನು, ಕಸ ಚೆಲ್ಲುವುದಿಲ್ಲ.

(2) ಯಾವುದೇ ಐತಿಹಾಸಿಕ ಕಟ್ಟಡವನ್ನು ವಿರೂಪ ಗೊಳಿಸುವುದಿಲ್ಲ.

## 8.5 ಪರ್ಯಟನೆ ಮತ್ತು ಆತಿಥ್ಯ ಕ್ಷೇತ್ರದಲ್ಲಿಯ ಉದ್ಯೋಗಾವಕಾಶಗಳು.

ಪರ್ಟಟನೆಯು ಅತ್ಯಧಿಕ ರೋಜಗಾರು ನಿರ್ಮಾಣ ಮಾಡುವ ಉದ್ದಿಮೆಯಾಗಬಲ್ಲದು. ಒಂದು ವೇಳೆ ನಾವು ಅದರ ಕಡೆಗೆ ವ್ಯಾವಸಾಯಿಕ ಪದ್ಧತಿಯಿಂದ ಲಕ್ಷವಹಿಸಿದರೆ ಅದು ಒಂದು ನಿರಂತರ ಉದ್ದಿಮೆಯಾಗುವುದು. ಇದರಲ್ಲಿ ನಾವೀನ್ಯಪೂರ್ಣ ಪ್ರಯೋಗ ಮಾಡಲು ಸಾಕಷ್ಟು ಅವಕಾಶಗಳಿವೆ.

ಪರ್ಯಟನೆಯಿಂದಾಗಿ ಅನೇಕ ಜನರಿಗೆ ರೋಜಗಾರಿನ ಅವಕಾಶಗಳು ನಿರ್ಮಾಣವಾಗುತ್ತವೆ. ವಿದೇಶಿ ಪರ್ಯಟಕನು ವಿಮಾನ ನಿಲ್ದಾಣದಲ್ಲಿ ಕಾಲಿಡುವಕಿಂತ ಮೊದಲಿನಿಂದಲೇ ಅವನು ಭೇಟಿ ನೀಡುವ ದೇಶಕ್ಕೆ ಉತ್ಪನ್ನವನ್ನು ದೊರಕಿಸಿ ಕೊಡಲು ಆರಂಭ ಮಾಡುತ್ತಾನೆ. ಅವನು ಕಟ್ಟಿದ ವ್ಹಿಸಾ ಫೀ ಹಣದಿಂದ ನಮ್ಮ ದೇಶಕ್ಕೆ ಕಂದಾಯ ದೊರೆಯುತ್ತದೆ. ಪ್ರವಾಸ ಖರ್ಚು, ಹೊಟೇಲಿನಲ್ಲಿ ಇರುವುದು, ಊಟ ಮಾಡುವುದು ದುಭಾಷಿಯ ಸಹಾಯ ಪಡೆಯುವುದು, ವರ್ತಮಾನ ಪತ್ರಗಳು ಮತ್ತು ಸಂದರ್ಭ (ಗ್ರಂಥ) ಸಾಹಿತ್ಯ ಕೊಂಡುಕೊಳ್ಳುವುದು. ಬಂದುಹೋದ ನೆನಪಿಗಾಗಿ ಸ್ಥಾನಿಕ ವಸ್ತುಗಳನ್ನು ಕೊಂಡುಕೊಳ್ಳುವುದು, ಇಷ್ಟೆಲ್ಲವನ್ನು ಪರ್ಯಟಕನು ತಾಯ್ನಾಡಿಗೆ ಮರಳಿ ಹೋಗುವ ವರೆಗೆ ಮಾಡುತ್ತಾನೆ.

ಪರ್ಯಟನ ಕೇಂದ್ರಗಳ ಪರಿಸರದಲ್ಲಿ ಮಾರುಕಟ್ಟೆಯ ವಿಸ್ತಾರವಾಗುತ್ತದೆ. ಅಲ್ಲಿಯ ಹಸ್ತಕೈಗಾರಿಕೆ ಹಾಗೂ ಗುಡಿಕೈಗಾರಿಕೆಗಳ ವಿಕಾಸವಾಗುತ್ತದೆ. ಆ ವಸ್ತುಗಳ ಕ್ರಯ-ವಿಕ್ರಯದಲ್ಲಿ ವೃದ್ಧಿಯಾಗುತ್ತದೆ. ಉದಾ., ಸ್ಥಾನಿಕ ಖಾದ್ಯಪದಾರ್ಥಗಳು, ಅಲ್ಲಿಯ ಹಸ್ತಕೌಶಲ್ಯದ ವಸ್ತುಗಳು ಇತ್ಯಾದಿ ವಸ್ತುಗಳನ್ನು ಪರ್ಯಟಕರು ಆಸಕ್ತಿಯಿಂದ ಕೊಂಡುಕೊಳ್ಳುತ್ತಾರೆ. ಆದರಿಂದಾಗಿ ಸ್ಥಳೀಯ ಜನರ ರೋಜಗಾರಿನಲ್ಲಿ ವೃದ್ಧಿಯಾಗುತ್ತದೆ.

**ಪರಂಪರಾ ಮುಶಾಫಿರಿ (ಹೆರಿಟೇಜ ವಾಕ್) :** ಐತಿಹಾಸಿಕ ವಿಶ್ವಪರಂಪರೆಯ ಸ್ಥಳಗಳಿಗೆ ಭೇಟಿ ನೀಡಲು ಹೋಗುವುದಕ್ಕೆ 'ಹೆರಿಟೇಜ ವಾಕ' ಎಂದು ಕರೆಯುತ್ತಾರೆ. ಎಲ್ಲಿ ಇತಿಹಾಸ ನಿರ್ಮಾಣವಾಯಿತೋ (ಸಂಭವಿಸಿತೋ) ಅಲ್ಲಿ ಪ್ರತ್ಯಕ್ಷ ಹೋಗಿ ಇತಿಹಾಸವನ್ನು ತಿಳಿದುಕೊಳ್ಳುವ ಅನುಭೂತಿ ಹೆರಿಟೇಜ ವಾಕ್‌ನಿಂದ ಬರುತ್ತದೆ.

ವಿಶ್ವದಾದ್ಯಂತ ಇಂಥ ಉಪಕ್ರಮಗಳನ್ನು ನಡೆಸಲಾಗುತ್ತದೆ. ಭಾರತಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಭಾರತದಲ್ಲಿಯ ಪ್ರತಿಯೊಂದು ರಾಜ್ಯದಲ್ಲಿ ಐತಿಹಾಸಿಕ ಸ್ಥಳಗಳಿವೆ. ಇವುಗಳಲ್ಲಿ ಪ್ರಾಚೀನ, ಮಧ್ಯಯುಗೀನ ಹಾಗೂ ಆಧುನಿಕ ಸ್ಥಳಗಳ ಸಮಾವೇಶವಾಗುತ್ತದೆ. ಗುಜರಾತದ ಅಹಮದಾಬಾದ ಪಟ್ಟಣದಲ್ಲಿಯ ಹೆರಿಟೇಜ ವಾಕ್ ಪ್ರಸಿದ್ಧವಾಗಿದೆ. ಮಹಾರಾಷ್ಟ್ರದ ಮುಂಬಯಿ - ಪುಣೆ ಇತ್ಯಾದಿ ಪಟ್ಟಣಗಳಲ್ಲಿ ಈ ಉಪಕ್ರಮಗಳನ್ನು ಆಯೋಜಿಸಲಾಗುತ್ತದೆ. ಇದರಿಂದಾಗಿ ಐಸಿಹಾಸಿಕ ಕಟ್ಟಡಗಳ ಸಂರಕ್ಷಣೆ ಮಾಡುವುದು, ಅದರ ಮಾಹಿತಿಯನ್ನು ಸಂಗ್ರಹಿಸುವುದು ಹಾಗೂ ಅದನ್ನು ವಿವಿಧ ಮಾಧ್ಯಮಗಳ ಮುಖಾಂತರ ಜಗತ್ತಿನ ತುಂಬೆಲ್ಲ ತಲುಪಿಸುವುದು ಇತ್ಯಾದಿ ಉಪಕ್ರಮಗಳನ್ನು ನಡೆಸಲಾಗುತ್ತದೆ. ಐತಿಹಾಸಿಕ ವ್ಯಕ್ತಿಗಳ ವಾಸಸ್ಥಾನಗಳು ಕೂಡ ಐತಿಹಾಸಿಕ ಪರಂಪರೆ ಇರುತ್ತವೆ. ಕೆಲವು ಕಡೆ ಇಂಥ ಸ್ಥಳಗಳಿಗೆ ನೀಲ ಹಲಗೆಗಳನ್ನು ಅಂಟಿಸುವ ಪದ್ಧತಿಯಿದೆ.



**ಮಾಡಿ ನೋಡಿರಿ.**

ನಿಮ್ಮ ಪರಿಸರದಲ್ಲಿಯ ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡುವ ಸಲುವಾಗಿ ಶಿಕ್ಷಕರ ಸಹಾಯದಿಂದ ಹೆರಿಟೇಜ ವಾಕ್ ಆಯೋಜಿಸಿರಿ.

**ಮಹಾರಾಷ್ಟ್ರದಲ್ಲಿಯ ಪರ್ಯಟನೆಯ ವಿಕಾಸ :** ಮಹಾರಾಷ್ಟ್ರವು ಪರ್ಯಟನೆಯ ದೃಷ್ಟಿಯಿಂದ ವೈಭವಶಾಲಿ ಪರಂಪರೆ ಲಭಿಸಿದ ರಾಜ್ಯವಾಗಿದೆ. ಅಜಂತಾ, ಎಲ್ಲೋರಾ ಘಾರಾಪುರಿ (ಎಲಿಫಂಟಾ)ಗಳಂತಹ ಜಾಗತಿಕ ಕೀರ್ತಿಯ ಗುಹೆಗಳು ಚಿತ್ರಗಳು ಹಾಗೂ ಶಿಲ್ಪಗಳು. ಪಂಢರಪೂರ,

ಶಿರ್ಡಿ, ಶೇಗಾಂವ, ತುಳಜಾಪೂರ, ಕೊಲ್ಹಾಪೂರ, ನಾಶಿಕ, ಪೈಠಣ ತ್ರ್ಯಂಬಕೇಶ್ವರ, ದೇಹೂ, ಆಳಂದಿ, ಜೇಜೂರಿ ಮುಂತಾದ ಅನೇಕ ದೇವಸ್ಥಾನಗಳು, ಹಾಜೀಮಲಂಗ, ನಾಂದೇಡದಲ್ಲಿಯ ಗುರುದ್ವಾರ, ಮುಂಬಯಿಯ ಮೌಂಟ ಮೇರಿ ಚರ್ಚು, ಮಹಾಬಳೇಶ್ವರ, ಪಾಚಗಣಿ, ಖಂಡಾಳಾ, ಲೋಣಾವಳಾ, ಮಾಥೇರಾನ, ಚಿಖಲದರಾ ಈ ತಂಪು ಹವೆಯ ಸ್ಥಳಗಳು. ಕೊಯನಾ ನಗರ, ಜಾಯಕವಾಡಿ, ಭಾಟಘರ, ಚಾಂದೋಲಿ ಈ ಆಣೆಕಟ್ಟುಗಳು, ದಾಜೀಪೂರ, ಸಾಗರೇಶ್ವರ, ತಾಡೋಬಾ ಈ ಅಭಯಾರಣ್ಯಗಳು, ಈ ಮಹಾರಾಷ್ಟ್ರದಲ್ಲಿಯ ಪರ್ಯಟನ ಸ್ಥಳಗಳು ಮಹತ್ವದ್ದಾಗಿವೆ.

ಕ್ರಿ.ಶ. 1975ರಲ್ಲಿ 'ಮಹಾರಾಷ್ಟ್ರ ಪರ್ಯಟನ ವಿಕಾಸ ಮಹಾಮಂಡಳ'ದ ಸ್ಥಾಪನೆ ಮಾಡಲಾಯಿತು. ಅದರಿಂದಾಗಿ ಪರ್ಯಟನ ವಿಕಾಸಕ್ಕೆ ಚಾಲನೆ ದೊರಕಿದೆ. ಈ ಮಹಾಮಂಡಳದ ವತಿಯಿಂದ ರಾಜ್ಯದಲ್ಲಿ 47 ಸ್ಥಳಗಳಲ್ಲಿ ಪ್ರಯಾಣಿಕರ ನಿವಾಸದ ವ್ಯವಸ್ಥೆ ಮಾಡಲಾಗಿದೆ. ಅವುಗಳಲ್ಲಿ ಸುಮಾರು ನಾಲ್ಕು ಸಾವಿರ ಪ್ರಯಾಣಿಕರ ನಿವಾಸದ ವ್ಯವಸ್ಥೆಯಾಗುತ್ತದೆ. ಅದೇ ರೀತಿ ಅನೇಕ ಖಾಸಗಿ ವ್ಯಾವಸಾಯಿಕರು ಕೂಡ ಈ ವ್ಯವಸಾಯ ಮಾಡುತ್ತಿದ್ದಾರೆ.

**ಗೊತ್ತಿದೆಯೇ ನಿಮಗೆ?**

**ಭಾರತದಲ್ಲಿಯ ಪ್ರಥಮ ವಿಲಕ್ಷಣ 'ಪುಸ್ತಕಗಳ ಊರು'**

ಮಹಾಬಳೇಶ್ವರದ ಹತ್ತಿರದಲ್ಲೇ ಇರುವ ಭಿಲಾರ ಇದು ನಿಸರ್ಗರಮ್ಯ ಮತ್ತು ಸ್ಟ್ರಾಬೆರಿಯ ಮಾಧುರ್ಯವಿರುವ ಊರು. ಈ ಪುಸ್ತಕಗಳ ಊರಲ್ಲಿ ಅನೇಕ ಮನೆಗಳಲ್ಲಿ ಪ್ರಯಾಣಿಕರಿಗಾಗಿಯೇ ಪುಸ್ತಕಗಳಿವೆ. ವಾಚನ ಚಳುವಳಿಯು ಬೆಳೆಯಬೇಕು. ಮರಾಠಿ ಭಾಷೆಯಲ್ಲಿಯ ಹಿಂದಿನ - ಇಂದಿನ ಲೇಖಕರು, ಸಂತ ಸಾಹಿತ್ಯ, ಕಥೆ-ಕಾದಂಬರಿ, ಕವಿತೆ, ಲಲಿತ ಸಾಹಿತ್ಯ, ಚರಿತ್ರೆ, ಆತ್ಮಚರಿತ್ರೆ, ಸ್ತ್ರೀ ಸಾಹಿತ್ಯ, ಕ್ರೀಡೆ, ಬಾಲಸಾಹಿತ್ಯ ಇವುಗಳಿಂದ ಅರಳಿದ ನಿಸರ್ಗರಮ್ಯ ವಿಶ್ವದಲ್ಲಿ ನೀವು 'ವಾಚನದ ಆನಂದ'ವನ್ನು ಪಡೆಯಬೇಕು ಎಂಬುದರ ಸಲುವಾಗಿ ಮಹಾರಾಷ್ಟ್ರ ಸರಕಾರವು ಈ ಉಪಕ್ರಮವನ್ನು ಹಮ್ಮಿಕೊಂಡಿದೆ.

ನೀವು ಪರ್ಯಟನೆಗಾಗಿ ಮಹಾಬಳೇಶ್ವರಕ್ಕೆ ಹೋದರೆ ಭಿಲಾರ ಊರಿಗೆ ಅಂದರೆ ಪುಸ್ತಕಗಳ ಊರಿಗೆ ಅವಶ್ಯ ಭೇಟಿ ನೀಡಿರಿ.

**ಗೊತ್ತಿದೆಯೇ ನಿಮಗೆ?**

ಮಹಾಬಳೇಶ್ವರ ಮತ್ತು ಪಾಚಗಣಿ ಇವು ತಂಪು ಹವೆಯ ಸ್ಥಳಗಳಾಗಿವೆ. ಈ ಸ್ಥಳಗಳಿಗೆ ಸಾವಿರಾರು ಪರ್ಯಟಕರು ಭೇಟಿ ನೀಡುತ್ತಿರುತ್ತಾರೆ. ಅಲ್ಲಿ ಮಾರ್ಗದರ್ಶಕರು ಪರ್ಯಟಕರಿಗೆ ಕೆಲವು ಮಹತ್ವದ ಸ್ಥಳಗಳ ಬಗ್ಗೆ ಮಾಹಿತಿ ಹೇಳುತ್ತಾರೆ. ಆ ಸ್ಥಳಗಳನ್ನು ತೋರಿಸುತ್ತಾರೆ. ಕೆಲವು ವಿಶಿಷ್ಟ ಸ್ಥಳಗಳಲ್ಲಿ ಫೋಟೊಗ್ರಾಫರ ಫೋಟೊ ತೆಗೆದುಕೊಡುತ್ತಾರೆ. ಕುದುರೆಯವರು ಕುದುರೆ ಮೇಲಿಂದ ಸುತ್ತಾಡಿಸಿಕೊಂಡು ಬರುತ್ತಾರೆ, ಕುದುರೆಯ ಗಾಡಿಯಲ್ಲಿ ಕೂಡ್ರಿಸಿ ತಿರುಗಾಡಿಸುತ್ತಾರೆ. ಈ ಎಲ್ಲ ಕೆಲಸಗಳನ್ನು ಅಲ್ಲಿಯ ಸ್ಥಳೀಯ ಜನರು ಮಾಡುತ್ತಾರೆ. ಆ ಕೆಲಸಗಳಿಂದ ಅವರಿಗೆ ಸಾಕಷ್ಟು ಸಂಭಾವನೆ ದೊರೆಯುತ್ತದೆ. ಅಂದರೆ ಪರ್ಯಟನೆಯು ಅವರ ಉಪಜೀವನದ ಸಾಧನವಾಗುತ್ತದೆ.

**ತಿಳಿದುಕೊಳ್ಳಿರಿ.**

ಉತ್ತಮ ದರ್ಜೆಯ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡುವುದು, ಯಾವುದೊಂದು ಸ್ಥಳದ ಸ್ಥಾನಿಕ ಸಂಸ್ಕೃತಿ, ಇತಿಹಾಸ, ಪರಂಪರೆ, ಐತಿಹಾಸಿಕ ಸ್ಮಾರಕಗಳಿಗೆ ಭೇಟಿ ನೀಡುವುದು, ಅಲ್ಲಿಯ ಜನರು ವಿವಿಧ ಕ್ಷೇತ್ರಗಳಲ್ಲಿ ದೊರಕಿಸಿದ ಯಶಸ್ಸನ್ನು ಅಭ್ಯಸಿಸುವುದು, ಅದರಂತೆ ಅಲ್ಲಿಯ ನೃತ್ಯ, ಸಂಗೀತ, ಮಹೋತ್ಸವಗಳಲ್ಲಿ ಭಾಗವಹಿಸುವುದು ಇತ್ಯಾದಿ ಉದ್ದೇಶಗಳಿಂದ ಮಾಡಿದ ಪರ್ಯಟನೆಯೆಂದರೆ ಸಾಂಸ್ಕೃತಿಕ ಪರ್ಯಟನೆ.

**ಹೇಳಿ ನೋಡೋಣ.**

- ಪರ್ಯಟನೆಯಿಂದಾಗಿ ನಿಮ್ಮ ಪರಿಸರದಲ್ಲಿ ಯಾವ ಯಾವ ಉದ್ಯೋಗಗಳು ನಿರ್ಮಾಣವಾಗಿವೆ?
- ಪರ್ಯಟನೆಯಿಂದಾಗಿ ಪರಿಸರದಲ್ಲಿಯ ಜನರ ಜೀವನಮಟ್ಟದಲ್ಲಿ ಯಾವ ಬದಲಾವಣೆಯಾದುದು ಕಂಡುಬರುತ್ತದೆ?

## ಅಭ್ಯಾಸ

**1. (ಅ) ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ದುಕೊಂಡು ವಿಧಾನಗಳನ್ನು ಪೂರ್ಣಮಾಡಿರಿ.**

(1) ಕುಕ್‌ನು ........... ಮಾರಾಟ ಮಾಡುವ ಎಜನ್ಸಿ ವ್ಯವಸಾಯವನ್ನು ಆರಂಭಿಸಿದನು.
(ಅ) ಹಸ್ತಕೌಶಲ್ಯದ ವಸ್ತುಗಳನ್ನು
(ಬ) ಆಟಿಗೆಗಳನ್ನು
(ಕ) ಖಾದ್ಯ ಪದಾರ್ಥಗಳನ್ನು
(ಡ) ಪ್ರಯಾಣಿಕ ತಿಕೀಟುಗಳನ್ನು

(2) ಮಹಾಬಳೇಶ್ವರದ ಹತ್ತಿರದಲ್ಲಿರುವ ಭಿಲಾರ ಇದು ........... ಊರು ಎಂದು ಪ್ರಸಿದ್ಧವಾಗಿದೆ.
(ಅ) ಪುಸ್ತಕಗಳ (ಬ) ವನಸ್ಪತಿಗಳ
(ಕ) ಮಾವಿನ ಹಣ್ಣುಗಳ (ಡ) ಕೋಟೆಗಳ

**(ಬ) ಕೆಳಗಿನವುಗಳಲ್ಲಿ ತಪ್ಪಾದ ಜೊತೆಯನ್ನು ಗುರುತಿಸಿ ಬರೆಯಿರಿ.**

(1) ಮಾಥೇರಾನ - ತಂಪು ಹವೆಯ ಸ್ಥಳ
(2) ತಾಡೋಬಾ - ಗುಹೆಗಳು
(3) ಕೊಲ್ಹಾಪೂರ - ದೇವಸ್ಥಾನ
(4) ಅಜಂತಾ - ಜಾಗತಿಕ ವಿಶ್ವಪರಂಪರೆಯ ಸ್ಥಳ

**2. ಕೆಳಗಿನ ವಿಧಾನಗಳನ್ನು ಕಾರಣ ಸಹಿತ ಸ್ಪಷ್ಟಪಡಿಸಿರಿ.**

(1) ಇಂದಿನ ಕಾಲದಲ್ಲಿ ವಿದೇಶಗಳಿಗೆ ಹೋಗುವ ಪ್ರಮಾಣದಲ್ಲಿ ವೃದ್ಧಿಯಾಗುತ್ತಿದೆ.
(2) ನಾವು ನಮ್ಮ ನೈಸರ್ಗಿಕ ಮತ್ತು ಸಾಂಸ್ಕೃತಿಕ ವಿಶ್ವಪರಂಪರೆಯ ರಕ್ಷಣೆ ಮಾಡಬೇಕು.


**3. ಟಿಪ್ಪಣಿ ಬರೆಯಿರಿ.**

(1) ಪರ್ಯಟನೆಯ ಪರಂಪರೆ
(2) ಮಾರ್ಕೊ ಪೋಲೊ
(3) ಕೃಷಿಪರ್ಯಟನೆ

**4. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರ ಉತ್ತರ ಬರೆಯಿರಿ.**

(1) ಪರ್ಯಟನೆಯ ವಿಕಾಸಕ್ಕಾಗಿ ಯಾವ ರೀತಿಯ ಕಾಳಜಿ ವಹಿಸುವುದು ಅವಶ್ಯಕವಾಗಿದೆ?
(2) ಪರ್ಯಟನೆಯ ವ್ಯವಸಾಯದಿಂದಾಗಿ ಸ್ಥಾನಿಕ ಮಟ್ಟದಲ್ಲಿ ರೋಜಗಾರು ನಿರ್ಮಿತಿ ಹೇಗೆ ಆಗುತ್ತದೆ?
(3) ಪರ್ಯಟನೆಯ ದೃಷ್ಟಿಯಿಂದ ನಿಮ್ಮ ಪರಿಸರದ ವಿಕಾಸವನ್ನು ಹೇಗೆ ಮಾಡುವಿರಿ?

**5. ಮುಂದಿನ ಸಂಕಲ್ಪನಾ ಚಿತ್ರವನ್ನು ಪೂರ್ಣಮಾಡಿರಿ.**




**6. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರ ಉತ್ತರ ಬರೆಯಿರಿ.**

(1) ಪರ್ಯಟನೆಗೆ ಸಂಬಂಧಿತವಾದ ಉದ್ಯೋಗಗಳನ್ನು ಸ್ಪಷ್ಟಪಡಿಸಿರಿ.
(2) ಪರ್ಯಟನೆಯ ಯಾವುದೇ ಮೂರು ಪ್ರಕಾರಗಳನ್ನು ಸ್ಪಷ್ಟಪಡಿಸಿರಿ.

**ಉಪಕ್ರಮ**

ಐತಿಹಾಸಿಕ ಸ್ಥಳಗಳ ರಕ್ಷಣೆ ಹಾಗೂ ಸಂವರ್ಧನೆಯ ಅವಶ್ಯಕತೆಯನ್ನು ಸ್ಪಷ್ಟಪಡಿಸಿರಿ. ಅದಕ್ಕಾಗಿ ಯಾವ ಉಪಾಯ ಯೋಜನೆಗಳನ್ನು ಮಾಡಬಹುದು ಎಂಬುದನ್ನು ಚರ್ಚಿಸಿರಿ.

4UKV9G

# 9. ಐತಿಹಾಸಿಕ ಆಸ್ತಿಯ ಸಂರಕ್ಷಣೆ

**9.1 ಇತಿಹಾಸದ ಸಾಧನಗಳು ಮತ್ತು ಅವುಗಳ ರಕ್ಷಣೆ.**

**9.2 ಕೆಲವು ಪ್ರಸಿದ್ಧ ಸಂಗ್ರಹಾಲಯಗಳು.**

**9.3 ಗ್ರಂಥಾಲಯಗಳು ಮತ್ತು ಅಭಿಲೇಖಾಗಾರ.**

**9.4 ಕೋಶವಾಙ್ಮಯ.**

ಅನೇಕ ಇತಿಹಾಸಕಾರರು ಮಾಡಿದ ಅವಿರತ ಪರಿಶ್ರಮದ ಪರಿಣಾಮವೆಂದರೆ ಇಂದು ನಮಗೆ ಲಭ್ಯವಾಗಿರುವ ಇತಿಸಾಸದ ಸಾಧನಗಳು ಹಾಗೂ ಆ ಸಾಧನಗಳ ಆಧಾರದಿಂದ ಬರೆಯಲ್ಪಟ್ಟ ಗ್ರಂಥಗಳು. ಅತ್ಯಂತ ಅಮೂಲ್ಯವಾದ ಈ ಐತಿಹಾಸಿದ ಆಸ್ತಿಗಳ ಸಂರಕ್ಷಣೆ ಮತ್ತು ಸಂವರ್ಧನೆ ಮಾಡುವ ಹಾಗೂ ಅದರಲ್ಲಿಯ ಆಯ್ದ ದಸ್ತಾವೇಜುಗಳು, ಗ್ರಂಥಗಳು, ಹಾಗೂ ಪುರಾತನ ವಸ್ತುಗಳನ್ನು ಪ್ರದರ್ಶಿತಗೊಳಿಸುವ ಕಾರ್ಯವನ್ನು ಸಂಗ್ರಹಾಲಯಗಳು, ಅವುಗಳಿಗೆ ಸಂಬಂಧಿತ ಅಭಿಲೇಖಾಗಾರಗಳು ಮತ್ತು ಗ್ರಂಥಾಲಯಗಳು ಮಾಡುತ್ತವೆ. ಅವರ ಕಾರ್ಯಗಳ ಶಾಸ್ತ್ರೋಕ್ತ ಮಾಹಿತಿಯು ಜನತೆಯವರೆಗೆ ತಲುಪಬೇಕೆಂದು ಅವರ ವತಿಯಿಂದ ಸಂಶೋಧನ ನಿಯತಕಾಲಿಕೆಗಳನ್ನು ಮತ್ತು ಇತರ ಪ್ರಕಾಶನಗಳನ್ನು ಪ್ರಸಿದ್ಧಪಡಿಸಲಾಗುತ್ತದೆ.

ಯಾವ ದಸ್ತಾವೇಜು, ಪುರಾತನ ವಸ್ತು ಮುಂತಾದವುಗಳನ್ನು ಪ್ರದರ್ಶಿತಗೊಳಿಸಲಾಗುವುದಿಲ್ಲವೋ, ಆದರೆ ಐತಿಹಾಸಿಕ ದೃಷ್ಟಿಯಿಂದ ಮಹತ್ವದ್ದಾಗಿರುತ್ತವೆಯೋ ಅವುಗಳನ್ನು ಅಭಿಲೇಖಾಗಾರಗಳಲ್ಲಿ ಸಂರಕ್ಷಿಸಲಾಗುತ್ತದೆ. ಸಂಶೋಧಕರಿಗೆ ಆ ದಸ್ತಾವೇಜುಗಳನ್ನು ಹಾಗೂ ಪುರಾತನ ವಸ್ತುಗಳನ್ನು ಅವಶ್ಯಕತೆಗನುಸಾರವಾಗಿ ಲಭ್ಯಮಾಡಿಕೊಡಲಾಗುತ್ತದೆ. ಗ್ರಂಥಾಲಯಗಳು ಗ್ರಂಥಗಳ ರಕ್ಷಣೆ ಮತ್ತು ವ್ಯವಸ್ಥಾಪನೆ ಮಾಡುತ್ತವೆ.

## 9.1 ಇತಿಹಾಸದ ಸಾಧನಗಳು ಹಾಗೂ ಅವುಗಳ ರಕ್ಷಣೆ

ಇತಿಹಾಸದ ಸಾಧನಗಳನ್ನು ದೊರಕಿಸುವುದು, ಅವುಗಳನ್ನು ದಾಖಲು ಮಾಡಿ ಅವುಗಳ ಸೂಚಿಯನ್ನು ತಯಾರಿಸುವುದು, ಹಸ್ತಲಿಖಿತಗಳು, ಹಳೆಯ ಗ್ರಂಥಗಳು, ಪುರಾತನ ವಸ್ತುಗಳ ರೂಪದಲ್ಲಿರುವ ಭೌತಿಕ ಸಾಧನಗಳನ್ನು ಸ್ವಚ್ಛಗೊಳಿಸಿ ಅವುಗಳನ್ನು ಪ್ರದರ್ಶಿತಗೊಳಿಸುವುದು. ಮುಂತಾದವುಗಳನ್ನು ಅತ್ಯಂತ ಕಾಳಜಿಪೂರ್ವಕವಾಗಿ ಮಾಡಬೇಕಾಗುತ್ತದೆ. ಆ ಕೆಲಸಕ್ಕಾಗಿ ಮತ್ತು ವಿವಿಧ ವಿಷಯಗಳಲ್ಲಿಯ ಕೃತಿಗಳಿಗಾಗಿ ತರಬೇತಿಯ ಅವಶ್ಯಕತೆ ಇರುತ್ತದೆ. ಯೋಗ್ಯ ತರಬೇತಿ ದೊರೆತ ನಂತರವೇ ಈ ಕೃತಿಗಳನ್ನು ಮಾಡಲು ಬರುತ್ತದೆ.

### 1. ಮೌಖಿಕ ಸಾಧನಗಳು.

- ಜಾನಪದ ಗೀತೆಗಳು, ಕಥೆಗಳು ಮುಂತಾದವುಗಳ ಸಂಕಲನ ಮಾಡುವುದು.
- ಸಂಕಲಿಕ ಸಾಹಿತ್ಯದ ವರ್ಗೀಕರಣ ಮತ್ತು ವಿಶ್ಲೇಷಣೆ ಮಾಡುವುದು, ಅನ್ವಯಾರ್ಥವನ್ನು ಹಚ್ಚುವುದು.
- ಸಂಶೋಧಿತ ಮೌಖಿಕ ಸಾಹಿತ್ಯವನ್ನು ಪ್ರಕಾಶನಗೊಳಿಸುವುದು.

**ಉಪಯುಕ್ತ ತರಬೇತಿ:**

(1) ಸಮಾಜಶಾಸ್ತ್ರ (2) ಸಾಮಾಜಿಕ ಮಾನವಶಾಸ್ತ್ರ. (3) ಮಿಥಕಗಳು ಮತ್ತು ಭಾಷಾಶಾಸ್ತ್ರ. (4) ಗ್ರಂಥಾಲಯ ವ್ಯವಸ್ಥಾಪನೆ. (5) ಇತಿಹಾಸ ಮತ್ತು ಇತಿಹಾಸ ಸಂಶೋಧನೆಯ ಪದ್ಧತಿ. (6) ಸಂಶೋಧನಾತ್ಮಕ ಲೇಖನ.

### 2. ಲಿಖಿತ ಸಾಧನಗಳು

- ತಾಮ್ರ ಪಟಗಳು, ದರಬಾರದಲ್ಲಿಯ ಕಾಗದ ಪತ್ರಗಳು, ಖಾಸಗಿ ಪತ್ರಗಳು ಮತ್ತು ದಿನಚರಿಗಳು, ಐತಿಹಾಸಿಕ ಗ್ರಂಥಗಳು, ಹಸ್ತಲಿಖಿತಗಳು, ಚಿತ್ರಗಳು, ಛಾಯಾಚಿತ್ರಗಳು, ಹಳೆಯ ಗ್ರಂಥಗಳು ಇತ್ಯಾದಿ ದಸ್ತಾವೇಜುಗಳ ಸಂಕಲನ-ಸಂಪಾದನೆ ಮಾಡುವುದು.
- ದಸ್ತಾವೇಜುಗಳ ಸಂವರ್ಧನೆಗಾಗಿ ಅವಶ್ಯಕವಾಗಿರುವ ಸ್ವಚ್ಛತೆ ಮತ್ತು ಇತರ ರಾಸಾಯನಿಕ ಪ್ರಕ್ರಿಯೆ ಮಾಡುವುದು.
- ದಸ್ತಾವೇಜುಗಳ ಐತಿಹಾಸಿಕ ಮೂಲ್ಯವನ್ನು ನಿರ್ಧರಿಸುವುದು.
- ಆಯ್ದ ದಸ್ತಾವೇಜುಗಳನ್ನು ಪ್ರದರ್ಶಿಸುವುದು.
- ಸಂಪಾದಿತ ಸಾಹಿತ್ಯ ಮತ್ತು ಸಂಶೋಧನೆಯ ಅನುಮಾನವನ್ನು ಪ್ರಕಾಶಿತಗೊಳಿಸುವುದು.

**ಉಪಯುಕ್ತ ತರಬೇತಿ;**

1. ಬ್ರಾಹ್ಮೀ, ಮೋಡಿ, ಪರ್ಶಿಯನ್‌ಗಳಂತಹ ಲಿಪಿ ಮತ್ತು ಅವುಗಳ ವಿಕಾಸಕ್ರಮದ ಜ್ಞಾನ
2. ಇತಿಹಾಸಕಾಲೀನ ಸಮಾಜರಚನೆ ಮತ್ತು ಪರಂಪರೆ, ಸಾಹಿತ್ಯ ಮತ್ತು ಸಂಸ್ಕೃತಿ, ರಾಜಪ್ರಭುತ್ವ, ಸರಕಾರ ಪದ್ಧತಿ ಇತ್ಯಾದಿಗಳ ಪ್ರಾಥಮಿಕ ಜ್ಞಾನ
3. ವಿವಿಧ ಚಿತ್ರಶೈಲಿ, ಶಿಲ್ಪಕಲಾಶೈಲಿ ಮತ್ತು ಅವುಗಳ ವಿಕಾಸಕ್ರಮಗಳ ಜ್ಞಾನ

4. ಕಾಗದದ ಪ್ರಕಾರಗಳು, ಮಸಿ ಮತ್ತು ಬಣ್ಣಗಳ ಜ್ಞಾನ.
5. ಕೊರೆದ ಲೇಖನಗಳಿಗಾಗಿ ಬಳಸಿದ ಕಲ್ಲು, ಲೋಹ ಇವುಗಳ ಸ್ವರೂಪದ ಬಗ್ಗೆ ಮಾಹಿತಿ.
6. ದಸ್ತಾವೇಜುಗಳ ಸ್ವಚ್ಛತೆ ಮತ್ತು ಸಂವರ್ಧನೆಗಾಗಿ ಅವಶ್ಯಕವಾಗಿರುವ ರಾಸಾಯನಿಕ ಪ್ರಕ್ರಿಯೆಗಳಿಗಾಗಿ ತಗಲುವ ಉಪಕರಣ ಹಾಗೂ ರಸಾಯನಗಳ ಮಾಹಿತಿ.
7. ಸಂಗ್ರಹಾಲಯದ ಮೊಗಶಾಲೆಯಲ್ಲಿಯ ಪ್ರದರ್ಶನ ವ್ಯವಸ್ಥಾಪನೆ ಮತ್ತು ಮಾಹಿತಿ ತಂತ್ರಜ್ಞಾನ.
8. ಸಂಶೋಧನಾತ್ಮಕ ಲೇಖನ.

**3. ಭೌತಿಕ ಸಾಧನಗಳು.**

- ಪುರಾತನ ವಸ್ತುಗಳ ಸಂಕಲನ, ಕಾಲಖಂಡ ಹಾಗೂ ಪ್ರಕಾರಗಳಿಗನುಸಾರ ವರ್ಗೀಕರಣೆ ಮಾಡುವುದು, ಸೂಚಿ ತಯಾರಿಸುವುದು.
- ಪುರಾತನ ವಸ್ತುಗಳ ಸಂವರ್ಧನೆಗಾಗಿ ಅವಶ್ಯಕವಾಗಿರುವ ಸ್ವಚ್ಛತೆ ಮತ್ತು ಇತರ ರಾಸಾಯನಿಕ ಪ್ರಕ್ರಿಯೆ ಮಾಡುವುದು.
- ಆಯ್ದ ಪುರಾತನ ವಸ್ತು ಇಲ್ಲವೆ ಅವುಗಳ ಪ್ರತಿಕೃತಿಗಳನ್ನು ಪ್ರದರ್ಶಿಸುವುದು.
- ಪುರಾತನ ವಸ್ತುಗಳನ್ನು ಕುರಿತು ಸಂಶೋಧನಾತ್ಮಕ ಲೇಖನವನ್ನು ಪ್ರಸಿದ್ಧಗೊಳಿಸುವುದು.
- ವನಸ್ಪತಿ ಮತ್ತು ಪ್ರಾಣಿಗಳ ಅಶ್ಮೀಭೂತ ಅವಶೇಷಗಳ (ಜೀವಾಶ್ಮ) ವರ್ಗೀಕರಣ ಮಾಡುವುದು. ಸೂಚಿಯನ್ನು ತಯಾರಿಸುವುದು.
- ಆಯ್ದ ಜೀವಾಶ್ಮ ಇಲ್ಲವೆ ಅವುಗಳ ಪ್ರತಿಕೃತಿಗಳನ್ನು ಪ್ರದರ್ಶಿಸುವುದು.

**ಉಪಯುಕ್ತ ತರಬೇತಿ:**

1. ಪುರಾತತ್ವೀಯ ಅಭ್ಯಾಸ ಪದ್ಧತಿ, ಸಿದ್ಧಾಂತ ಮತ್ತು ಪ್ರಾಚೀನ ಸಂಸ್ಕೃತಿಗಳ ಪರಿಚಯ.
2. ಪುರಾತನ ವಸ್ತುಗಳನ್ನು ತಯಾರಿಸುವ ಸಲುವಾಗಿ ಬಳಸಿದ ಕಲ್ಲು, ಖನಿಜಗಳು, ಲೋಹ, ಜಿಗುಟು ಮಣ್ಣು ಇತ್ಯಾದಿ ಸಾಧನಗಳ ಪ್ರಾದೇಶಿಕ ಮೂಲಗಳು, ಅವುಗಳ ರಸಾಯನಶಾಸ್ತ್ರೀಯ ವೈಶಿಷ್ಟ್ಯಗಳ ಜ್ಞಾನ.
3. ಪುರಾತನ ವಸ್ತುಗಳ ಸ್ವಚ್ಛತೆ ಮತ್ತು ಇತರ ರಾಸಾಯನಿಕ ಪ್ರಕ್ರಿಯೆಗಳಿಗಾಗಿ ತಗಲುವ ಉಪಕರಣಗಳು ಮತ್ತು ರಸಾಯನಗಳ ಮಾಹಿತಿ.
4. ವಿವಿಧ ಕಲಾಶೈಲಿ ಮತ್ತು ಅವುಗಳ ವಿಕಾಸಕ್ರಮ – ಇವುಗಳ ಜ್ಞಾನ.
5. ಪುರಾತನ ವಸ್ತು ಮತ್ತು ಜೀವಾಶ್ಮ ಇವುಗಳ ಪ್ರತಿಕೃತಿಗಳನ್ನು ತಯಾರಿಸುವ ಕೌಶಲ್ಯ
6. ಸಂಗ್ರಹಾಲಯದ ಮೊಗಶಾಲೆಯಲ್ಲಿಯ ಪ್ರದರ್ಶನ ವ್ಯವಸ್ಥಾಪನೆ ಮತ್ತು ಮಾಹಿತಿ ತಂತ್ರಜ್ಞಾನ.
7. ಸಂಶೋಧನಾತ್ಮಕ ಲೇಖನ.

## 9.2 ಕೆಲವು ಪ್ರಸಿದ್ಧ ಸಂಗ್ರಹಾಲಯಗಳು:

ಮಧ್ಯಯುಗದಲ್ಲಿ ಯುರೋಪನಲ್ಲಿಯ ರಾಜಮನೆತನದಲ್ಲಿಯ ವ್ಯಕ್ತಿಗಳು ಮತ್ತು ಶ್ರೀಮಂತ ಜನರು ಸಂಗ್ರಹಿಸಿದ ಕಲಾವಸ್ತುಗಳ ವ್ಯವಸ್ಥಾಪನೆಯ ಅವಶ್ಯಕತೆಯಿಂದಾಗಿ ಸಂಗ್ರಹಾಲಯಗಳ ಕಲ್ಪನೆಯು ಉದಯಕ್ಕೆ ಬಂದಿತು.

**ಲುವ್ರ ಸಂಗ್ರಹಾಲಯ, ಫ್ರಾನ್ಸ:** ಪ್ಯಾರಿಸ್ ನಗರದಲ್ಲಿಯ ಲುವ್ರ ಸಂಗ್ರಹಾಲಯದ ಸ್ಥಾಪನೆಯು ಕ್ರಿಸ್ತಶಕ ಹದಿನೆಂಟನೆಯ ಶತಮಾನದಲ್ಲಿ ಆಯಿತು. ಫ್ರೆಂಚ್ ರಾಜಮನೆತನದಲ್ಲಿಯ ವ್ಯಕ್ತಿಗಳು ಸಂಗ್ರಹಿಸಿದ ಕಲಾ ವಸ್ತುಗಳನ್ನು ಪ್ರಥಮ ಲುವ್ರ ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಯಿತು. ಅದರಲ್ಲಿ ಲಿಯೋನಾರ್ಡೋದ ವಿಂಚಿ ಎಂಬ ಜಗತ್ಪ್ರಸಿದ್ಧ ಇಟಾಲಿಯನ್ ಚಿತ್ರಕಾರನು ಚಿತ್ರಿಸಿದ 'ಮೋನಾಲಿಸಾ' ಈ ಬಹುಚರ್ಚಿತ ಚಿತ್ರದ ಸಮಾವೇಶವಿದೆ. ಲಿಯೋನಾರ್ಡೋ ದ ವಿಂಚಿ ಇವನು ಹದಿನಾರನೆಯ ಶತಮಾನದಲ್ಲಿ ಆಗಿಹೋದ ಫ್ರಾನ್ಸಿನ ರಾಜ ಒಂದನೆಯ ಫ್ರಾನ್ಸಿಸ್‌ನ ಆಸ್ಥಾನದಲ್ಲಿದ್ದನು. ನೇಪೋಲಿಯನ ಬೋನಾರ್ಪಾರ್ಟನು ತನ್ನ ದಾಳಿಗಳ ಸಮಯದಲ್ಲಿ ತಾಯ್ನಾಡಿಗೆ ತಂದ ಕಲಾವಸ್ತುಗಳಿಂದಾಗಿ ಲುವ್ರ ಸಂಗ್ರಹಾಲಯದಲ್ಲಿಯ ಸಂಗ್ರಹವು ಸಾಕಷ್ಟು ಹೆಚ್ಚಿತು. ಸದ್ಯದಲ್ಲಿ ಈ ಸಂಗ್ರಹಾಲಯದಲ್ಲಿ ಶಿಲಾಯುಗದಿಂದ ಹಿಡಿದು ಆಧುನಿಕ ಕಾಲದವರೆಗಿನ 3 ಲಕ್ಷ 80 ಸಾವಿರಕ್ಕಿಂತ ಹೆಚ್ಚು ಕಲಾ ವಸ್ತುಗಳಿವೆ.


ಮೋನಾಲಿಸಾ

**ಬ್ರಿಟಿಷ ಸಂಗ್ರಹಾಲಯ, ಇಂಗ್ಲಂಡ:** ಲಂಡನ ನಗರದಲ್ಲಿರುವ ಬ್ರಿಟಿಷ ಸಂಗ್ರಹಾಲಯದ ಸ್ಥಾಪನೆಯು ಕ್ರಿಸ್ತಶಕ ಹದಿನೆಂಟನೆಯ ಶತಮಾನದಲ್ಲಾಯಿತು. ತತ್ಕಾಲೀನ ನಿಸರ್ಗಶಾಸ್ತ್ರಜ್ಞನಾದ ಸರ ಹ್ಯಾನ್ಸ ಸ್ಲೋವನ ಇವನು ತನ್ನ ಸಂಗ್ರಹದಲ್ಲಿಯ ಸುಮಾರು ಎಪ್ಪತ್ತೊಂದು ಸಾವಿರ ವಸ್ತುಗಳನ್ನು ಇಂಗ್ಲಂಡಿನ ರಾಜ ಎರಡನೆಯ ಜಾರ್ಜ ಇವನಿಗೆ ಕೊಟ್ಟನು. ಅವುಗಳಲ್ಲಿ ಅನೇಕ ಗ್ರಂಥಗಳು, ಚಿತ್ರಗಳು, ವನಸ್ಪತಿಗಳ ನಮೂನೆಗಳು ಇತ್ಯಾದಿಗಳ ಸಮಾವೇಶವಿತ್ತು.

ಮುಂದೆ ಇಂಗ್ಲೀಷರು ತಮ್ಮ ಅಧಿಪತ್ಯದಲ್ಲಿರುವ ವಿವಿಧ ವಸಾಹತುಗಳಿಂದ ತಾಯ್ನಾಡಿಗೆ ತಂದ ಕಲಾವಸ್ತುಗಳು ಮತ್ತು

ಪ್ರಾಚೀನ ಅವಶೇಷಗಳಿಂದಾಗಿ ಬ್ರಿಟಿಷ ಸಂಗ್ರಹಾಲಯದಲ್ಲಿಯ ವಸ್ತುಗಳ ಸಂಖ್ಯೆ ಹೆಚ್ಚುತ್ತ ಹೋಯಿತು. ಇಂದು ಈ ಸಂಗ್ರಹಾಲಯದಲ್ಲಿ ಸುಮಾರು ಎಂಭತ್ತು ಲಕ್ಷ ವಸ್ತುಗಳ ಸಂಗ್ರಹವಿದೆ. ಭಾರತದಲ್ಲಿಯ ಅನೇಕ ಪುರಾತನ ವಸ್ತುಗಳ ಸಮಾವೇಶ ಅದರಲ್ಲಿದೆ.



ಬ್ರಿಟಿಷ ಸಂಗ್ರಹಾಲಯ, ಇಂಗ್ಲಂಡ

**ನ್ಯಾಶನಲ ಮ್ಯುಝಿಯಮ ಆಫ ನ್ಯಾಚರಲ ಹಿಸ್ಟರಿ; ಯುನೈಟೆಡ್ ಸ್ಟೇಟ್ಸ ಆಫ್ ಅಮೇರಿಕಾ:** ಅಮೇರಿಕೆಯಲ್ಲಿಯ ಸ್ಮಿಥಸೋನಿಯನ ಇನ್‌ಸ್ಟಿಟ್ಯೂಶನ ಎಂಬ ಸಂಸ್ಥೆಯ ವ್ಯವಸ್ಥಾಪನೆಯಲ್ಲಿರುವ ನೈಸರ್ಗಿಕ ಇತಿಹಾಸದ ಈ ಸಂಗ್ರಹಾಲಯವು ಕ್ರಿಸ್ತಶಕ 1846ರಲ್ಲಿ ಆರಂಭವಾಯಿತು. ಇಲ್ಲಿ ವನಸ್ಪತಿ, ಪ್ರಾಣಿ ಇವುಗಳ ಅವಶೇಷಗಳು ಮತ್ತು ಜೀವಾಶ್ಮ ಖನಿಜಗಳು, ಕಲ್ಲುಗಳು, ಮಾನವ ಪ್ರಜಾತಿಯ ಅಶ್ಮೀಭೂತ ಅವಶೇಷಗಳು ಹಾಗೂ ಪುರಾತನ ವಸ್ತುಗಳು ಇವುಗಳ ಹನ್ನೆರಡು ಕೋಟಿಗಿಂತ ಹೆಚ್ಚು ನಮೂನೆಗಳನ್ನು ಸಂಗ್ರಹಿಸಿಡಲಾಗಿದೆ.

**ತಿಳಿದುಕೊಳ್ಳಿರಿ.**

**ಭಾರತದಲ್ಲಿಯ ಪ್ರಸಿದ್ಧ ಸಂಗ್ರಹಾಲಯಗಳು**

ಇಂಡಿಯನ್ ಮ್ಯುಝಿಯಮ, ಕೋಲಕಾತಾ; ನ್ಯಾಶನಲ್ ಮ್ಯುಝಿಯಮ, ದಿಲ್ಲಿ; ಛತ್ರಪತಿ ಶಿವಾಜಿ ಮಹಾರಾಜ ವಸ್ತುಸಂಗ್ರಹಾಲಯ, ಮುಂಬಯಿ; ಸಾಲಾರಜಂಗ ಮ್ಯುಝಿಯಮ, ಹೈದರಾಬಾದ; ದ ಕ್ಯಾಲಿಕೊ ಮ್ಯುಝಿಯಮ ಆಫ ಟೆಕ್ಸ್‌ಟೈಲ್ಸ, ಅಹಮದಾಬಾದ ಇವು ಭಾರತದಲ್ಲಿಯ ಪ್ರಸಿದ್ಧ ಸಂಗ್ರಹಾಲಯಗಳಲ್ಲಿಯ ಕೆಲವು ಸಂಗ್ರಹಾಲಯಗಳಾಗಿವೆ.

**ಭಾರತದಲ್ಲಿಯ ಸಂಗ್ರಹಾಲಯಗಳು:** ಕೋಲಕಾತಾದಲ್ಲಿಯ 'ಭಾರತೀಯ ಸಂಗ್ರಹಾಲಯ' ಇದು ಭಾರತದಲ್ಲಿಯ ಪ್ರಥಮ ಸಂಗ್ರಹಾಲಯವಾಗಿದ್ದು 'ಏಶಿಯಾಟಿಕ್ ಸೊಸೈಟಿ ಆಫ ಬೆಂಗಾಲ' ಈ ಸಂಸ್ಥೆಯ ವತಿಯಿಂದ ಕ್ರಿಸ್ತಶಕ 1814ರಲ್ಲಿ ಇದರ ಸ್ಥಾಪನೆಯಾಯಿತು. ಕ್ರಿಸ್ತಶಕ 1851ರಲ್ಲಿ ಚೆನ್ನೈಯಲ್ಲಿ ಆರಂಭವಾದ 'ಗವ್ಹರ್ನಮೆಂಟ ಮ್ಯುಝಿಯಮ' ಇದು ಭಾರತದಲ್ಲಿಯ ಎರಡನೆಯ (ದ್ವಿತೀಯ) ಸಂಗ್ರಹಾಲಯ. ಕ್ರಿಸ್ತಶಕ 1949ರಲ್ಲಿ ದಿಲ್ಲಿಯಲ್ಲಿಯ 'ರಾಷ್ಟ್ರೀಯ ವಸ್ತು ಸಂಗ್ರಹಾಲಯ'ದ (ನ್ಯಾಶನಲ ಮ್ಯುಝಿಯಮ) ಸ್ಥಾಪನೆಯಾಯಿತು.ಇಂದು ಭಾರತದಲ್ಲಿಯ ವಿವಿಧ ರಾಜ್ಯಗಳಲ್ಲಿ ಅನೇಕ ಸಂಗ್ರಹಾಲಯಗಳಿವೆ. ಬಹುಮಟ್ಟಿಗೆ ದೊಡ್ಡ ಸಂಗ್ರಹಾಲಯಗಳಿಗೆ ಸ್ವಂತದ ಅಭಿಲೇಖಾಗಾರ ಮತ್ತು ಗ್ರಂಥಾಲಯಗಳಿರುತ್ತವೆ. ಕೆಲವು ಸಂಗ್ರಹಾಲಯಗಳು ವಿಶ್ವವಿದ್ಯಾಲಯದೊಂದಿಗೆ ಸಂಲಗ್ನವಾಗಿರುತ್ತವೆ. ಇಂಥ ಸಂಗ್ರಹಾಲಯಗಳ ವತಿಯಿಂದ ಸಂಗ್ರಹಾಲಯಶಾಸ್ತ್ರ ವಿಷಯದ ವಿವಿಧ ಅಭ್ಯಾಸಕ್ರಮಗಳನ್ನು ಕಲಿಸಲಾಗುತ್ತದೆ.



ನ್ಯಾಶನಲ್ ಮ್ಯುಝಿಯಮ ಆಫ ನ್ಯಾಚರಲ ಹಿಸ್ಟರಿ

ಸಂಗ್ರಹಾಲಯ ಶಾಸ್ತ್ರದಲ್ಲಿ ಡಿಗ್ರಿ ಮತ್ತು ಡಿಪ್ಲೋಮಾ ಅಭ್ಯಾಸಕ್ರಮಗಳನ್ನು ಲಭ್ಯಮಾಡಿಕೊಡುವ ಭಾರತದಲ್ಲಿಯ ಕೆಲವು ಪ್ರಮುಖ ಸಂಸ್ಥೆ ಮತ್ತು ವಿಶ್ವವಿದ್ಯಾಲಯಗಳು:

1. ರಾಷ್ಟ್ರೀಯ ವಸ್ತುಸಂಗ್ರಹಾಲಯ, ದಿಲ್ಲಿ
2. ಮಹಾರಾಜ ಸಯಾಜಿರಾವ ವಿಶ್ವವಿದ್ಯಾಲಯ, ವಡೋದರಾ.
3. ಕೋಲಕಾತಾ ವಿಶ್ವವಿದ್ಯಾಲಯ, ಕೋಲಕಾತಾ.
4. ಬನಾರಸ ಹಿಂದೂ ವಿಶ್ವವಿದ್ಯಾಲಯ, ವಾರಾಣಸಿ.
5. ಅಲಿಗಢ ಮುಸ್ಲಿಮ ಯುನಿವ್ಹರ್ಸಿಟಿ, ಅಲಿಗಢ.
6. ಜಿವಾಜಿ ವಿಶ್ವವಿದ್ಯಾಲಯ, ಗ್ವಾಲಿಯರ.

**ಛತ್ರಪತಿ ಶಿವಾಜಿ ಮಹಾರಾಜ ವಸ್ತುಸಂಗ್ರಹಾಲಯ, ಮುಂಬಯಿ:** ಕ್ರಿಸ್ತಶಕ 1904ರಲ್ಲಿ ಮುಂಬಯಿಯಲ್ಲಿಯ ಕೆಲವು ಪ್ರತಿಷ್ಠಿತ ನಾಗರಿಕರು ಒಂದೆಡೆ ಬಂದು ಪ್ರಿನ್ಸ ಆಫ ವೇಲ್ಸನ ಭಾರತ ಭೇಟಿಯ ಸ್ಮರಣಾರ್ಥ ಒಂದು ವಸ್ತುಸಂಗ್ರಹಾಲಯವನ್ನು ಸ್ಥಾಪಿಸುವ ನಿರ್ಣಯವನ್ನು ಕೈಕೊಂಡರು. ಕ್ರಿಸ್ತಶಕ 1905ರ ನವಂಬರ ತಿಂಗಳಲ್ಲಿ ಈ ಸಂಗ್ರಹಾಲಯದ ಕಟ್ಟಡದ ಅಡಿಗಲ್ಲನ್ನು ಇಡಲಾಯಿತು. ಹಾಗೂ ಸಂಗ್ರಹಾಲಯಕ್ಕೆ 'ಪ್ರಿನ್ಸ ಆಫ ವೇಲ್ಸ ಮ್ಯುಝಿಯಮ ಆಫ ವೆಸ್ಟರ್ನ್ ಇಂಡಿಯಾ' ಎಂಬ ಹೆಸರನ್ನು ನಿಶ್ಚಿತಪಡಿಸಲಾಯಿತು. ಕ್ರಿಸ್ತಶಕ 1998ರಲ್ಲಿ ಸಂಗ್ರಹಾಲಯದ ಹೆಸರನ್ನು ಬದಲಾಯಿಸಿ 'ಛತ್ರಪತಿ ಶಿವಾಜಿ ಮಹಾರಾಜ ವಸ್ತು ಸಂಗ್ರಹಾಲಯ' ಎಂದು ಇಡಲಾಯಿತು.



ಛತ್ರಪತಿ ಶಿವಾಜಿ ಮಹಾರಾಜ ವಸ್ತುಸಂಗ್ರಹಾಲಯ, ಮುಂಬಯಿ.

ಸಂಗ್ರಹಾಲಯದ ಕಟ್ಟಡವನ್ನು ಇಂಡೊ-ಗೋಥಿಕ್ ಶೈಲಿಯಲ್ಲಿ ಕಟ್ಟಲಾಗಿದೆ. ಈ ಕಟ್ಟಡಕ್ಕೆ ಮುಂಬಯಿ ನಗರದಲ್ಲಿಯ 'ಪ್ರಥಮ ದರ್ಜೆಯ ಸಾಂಸ್ಕೃತಿಕ ಪರಂಪರೆಯ ಕಟ್ಟಡ' ಎಂಬ ದರ್ಜೆಯನ್ನು ನೀಡಲಾಗಿದೆ. ಸಂಗ್ರಹಾಲಯದಲ್ಲಿ ಕಲೆ, ಪುರಾತತ್ವ ಮತ್ತು ನಿಸರ್ಗದ ಇತಿಹಾಸ ಹೀಗೆ ಮೂರು ವರ್ಗಗಳಲ್ಲಿ ವಿಭಾಗಿಸಲ್ಪಟ್ಟ ಸುಮಾರು ಐವತ್ತು ಸಾವಿರ ಪುರಾತನ ವಸ್ತುಗಳನ್ನು ಸಂಗ್ರಹಿಸಿಡಲಾಗಿದೆ.

## 9.3 ಗ್ರಂಥಾಲಯಗಳು ಮತ್ತು ಅಭಿಲೇಖಾಗಾರ

ಗ್ರಂಥಾಲಯಗಳು ಜ್ಞಾನದ ಮತ್ತು ಮಾಹಿತಿಯ ಭಾಂಡಾರಗಳಾಗಿವೆ. ಗ್ರಂಥಾಲಯ ಶಾಸ್ತ್ರವು ವ್ಯವಸ್ಥಾಪನಾಶಾಸ್ತ್ರ, ಮಾಹಿತಿ ತಂತ್ರಜ್ಞಾನ, ಶಿಕ್ಷಣಶಾಸ್ತ್ರಗಳಂತಹ ವಿಷಯಗಳೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದೆ. ಗ್ರಂಥಗಳ ಸಂಕಲನೆ, ಅವುಗಳ ಸುವ್ಯವಸ್ಥಿತ ಆಯೋಜನೆ, ರಕ್ಷಣೆ ಮತ್ತು ಸಂವರ್ಧನೆ, ಮಾಹಿತಿಯ ಮೂಲಗಳ ಪ್ರಸಾರಣೆಗಳಂತಹ ಮಹತ್ವದ ಕಾರ್ಯಗಳನ್ನು ಗ್ರಂಥಾಲಯಗಳ ಮುಖಾಂತರ ನಿರ್ವಹಿಸಲಾಗುತ್ತದೆ. ಇದರಲ್ಲಿ ಬಹುತೇಕ ಕಾರ್ಯಗಳನ್ನು ಅತ್ಯಾಧುನಿಕ ಗಣಕಯಂತ್ರದ ಪ್ರಣಾಲಿಯ ಆಧಾರದಿಂದ ಮಾಡಲಾಗುತ್ತದೆ. ವಾಚಕರಿಗೆ ಅವಶ್ಯಕತೆಗನುಸಾರವಾಗಿ ಬೇಕಾದಾಗ ಬೇಕಾದ ಪುಸ್ತಕವನ್ನು ಲಭ್ಯಮಾಡಿಕೊಡುವುದಕ್ಕೆ ಗ್ರಂಥಾಲಯ ವ್ಯವಸ್ಥಾಪನೆಯಲ್ಲಿ ತುಂಬಾ ಮಹತ್ವವಿದೆ.

ತಕ್ಷಶಿಲಾ ವಿಶ್ವವಿದ್ಯಾಲಯದಲ್ಲಿಯ ಗ್ರಂಥಾಲಯ (ಕ್ರಿ.ಶ. ಪೂ ಸುಮಾರು ಐದನೆಯ ಶತಮಾನದಿಂದ ಕ್ರಿ.ಶ ಐದನೆಯ ಶತಮಾನ) ಮೆಸೋಪೊಟೇಮಿಯಾದಲ್ಲಿಯ ಆ್ಯಸೀರಿಯನ್ ಸಾಮ್ರಾಜ್ಯದ ಸಾಮ್ರಾಟನಾದ ಅಸುರಬಾನಿಪಾಲ ಇವನ ಗ್ರಂಥಾಲಯ (ಕ್ರಿ.ಶ.ಪೂ ಏಳನೆಯ ಶತಮಾನ) ಹಾಗೂ ಇಜಿಪ್ತನ ಅಲೆಕ್ಝಾಂಡ್ರಿಯಾ ಎಂಬಲ್ಲಿಯ ಗ್ರಂಥಾಲಯ (ಕ್ರಿ.ಶ.ಪೂ ನಾಲ್ಕನೆಯ ಶತಮಾನ) ಇವು ಜಗತ್ತಿನಲ್ಲಿಯ ಅತ್ಯಂತ ಪ್ರಾಚೀನ ಗ್ರಂಥಾಲಯಗಳಾಗಿದ್ದವೆಂದು ತಿಳಿಯಲಾಗುತ್ತದೆ.

ತಮಿಳುನಾಡುವಿನ ತಂಜಾವರ ಎಂಬಲ್ಲಿಯ 'ಸರಸ್ವತಿ ಮಹಾಲ ಗ್ರಂಥಾಲಯ' ಇದು ಕ್ರಿಸ್ತಶಕ ಹದಿನಾರನೆಯ-ಹದಿನೇಳನೆಯ ಶತಮಾನದಲ್ಲಿಯ ನಾಯಕ ರಾಜರುಗಳ ಕಾಲದಲ್ಲಿ ಕಟ್ಟಲ್ಪಟ್ಟಿತು. ಕ್ರಿ.ಶ. 1675ರಲ್ಲಿ ವ್ಯಂಕೋಜಿ ರಾಜೆ ಭೋಸಲೆ ಇವರು ತಂಜಾವರ ಗೆದ್ದುಕೊಂಡು ತನ್ನದಾದ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದರು. ವ್ಯಂಕೋಜಿ ರಾಜೆ ಭೋಸಲೆ ಮತ್ತು ಅವರ ವಂಶಜರು ಸರಸ್ವತಿ ಮಹಾಲ ಗ್ರಂಥಾಲಯವನ್ನು ಅಧಿಕಾಧಿಕ ಸಮೃದ್ಧಗೊಳಿಸಿದರು. ಅದರಲ್ಲಿ ಸರಫೋಜಿರಾಜೆ ಭೋಸಲೆಯವರದು ಸಿಂಹಪಾಲು. ಅವರಿಗೆ ಗೌರವವನ್ನು ತೋರಿಸುವ ಸಲುವಾಗಿ ಕ್ರಿಸ್ತಶಕ 1918ರಲ್ಲಿ ಈ ಗ್ರಂಥಾಲಯಕ್ಕೆ ಅವರ ಹೆಸರನ್ನು ನೀಡಲಾಯಿತು. ಈ ಗ್ರಂಥಾಲಯದಲ್ಲಿ ಸುಮಾರು ನಾಲ್ವತ್ತೊಂಬತ್ತು ಸಾವಿರ ಗ್ರಂಥಗಳಿವೆ.

ಭಾರತದಲ್ಲಿಯ ಅನೇಕ ಗ್ರಂಥಾಲಯಗಳ ಪೈಕಿ ಕೆಲವು ಗ್ರಂಥಾಲಯಗಳು ವಿಶೇಷ ಉಲ್ಲೇಖನೀಯವಾಗಿವೆ. ಅವುಗಳಲ್ಲಿ ಕೋಲಕಾತಾದಲ್ಲಿಯ 'ನ್ಯಾಶನಲ ಲೈಬ್ರರಿ, ದಿಲ್ಲಿಯಲ್ಲಿಯ ನೆಹರೂ ಮೆಮೋರಿಯಲ್ ಮ್ಯುಝಿಯಮ ಆ್ಯಂಡ ಲೈಬ್ರರಿ', ಹೈದರಾಬಾದದಲ್ಲಿಯ 'ಸ್ಟೇಟ ಸೆಂಟ್ರಲ ಲೈಬ್ರರಿ', ಮುಂಬಯಿಯಲ್ಲಿಯ 'ಲೈಬ್ರರಿ ಆಫ ಏಶಿಯಾಟಿಕ ಸೊಸೈಟಿ' ಹಾಗೂ 'ಡೆವ್ಹಿಡ ಸಸೂನ ಲೈಬ್ರರಿ' ಇತ್ಯಾದಿ ಗ್ರಂಥಾಲಯಗಳ ಸಮಾವೇಶವಾಗುತ್ತದೆ.

ಅಭಿಲೇಖಾಗಾರಗಳ ವ್ಯವಸ್ಥಾಪನೆಯು ತಾಂತ್ರಿಕ ದೃಷ್ಟಿಯಿಂದ ಗ್ರಂಥಾಲಯ ವ್ಯವಸ್ಥಾಪನೆಯದೇ ಒಂದು ಅಂಗವಾಗಿರುತ್ತದೆ. ಮಹತ್ವದ ದಾಖಲೆಗಳಿರುವ ಕಾಗದ ಪತ್ರಗಳನ್ನು ಅವುಗಳಲ್ಲಿ ಯಾವುದೇ ಬದಲಾವಣೆ ಮಾಡದೇ ಸುರಕ್ಷಿತವಾಗಿಡುವುದು, ಅವುಗಳ ಸೂಚಿಯನ್ನು ತಯಾರಿಸುವುದು ಹಾಗೂ ಬೇಕಾದಾಗ ಅವುಗಳನ್ನು ಉಪಲಬ್ಧ

ಮಾಡಿಕೊಡುವುದು. ಈ ಕಾರ್ಯಗಳು ಅಭಿಲೇಖಾಗಾರದ ವ್ಯವಸ್ಥಾಪನೆಯಲ್ಲಿ ಮಹತ್ವದ್ದಾಗಿರುತ್ತವೆ. ಅದರಿಂದಾಗಿ ಈ ಕಾಗದ ಪತ್ರಗಳನ್ನು ಐತಿಹಾಸಿಕ ದೃಷ್ಟಿಯಿಂದ ಅತ್ಯಂತ ವಿಶ್ವಾಸಾರ್ಹವೆಂದು ತಿಳಿಯಲಾಗುತ್ತದೆ. ಗಣಕಯಂತ್ರ ಪ್ರಣಾಲಿಯ ಉಪಯೋಗದಿಂದಾಗಿ ಗ್ರಂಥಾಲಯ ಮತ್ತು ಅಭಿಲೇಖಾಗಾರ ಇವುಗಳ ಆಧುನಿಕ ಕಾಲದಲ್ಲಿಯ ವ್ಯವಸ್ಥಾಪನೆಯು ಅಪರಿಹಾರ್ಯವಾಗಿ ಮಾಹಿತಿ ತಂತ್ರಜ್ಞಾನದ ಜೊತೆಗೆ ಜೋಡಿಸಲ್ಪಟ್ಟಿದೆ.

ಭಾರತದಲ್ಲಿಯ ಪ್ರಥಮ ಸರಕಾರಿ ಅಭಿಲೇಖಾಗಾರವು ಕ್ರಿಸ್ತಶಕ 1891ರಲ್ಲಿ 'ಇಂಪೀರಿಯಲ ರೆಕಾರ್ಡ ಡಿಪಾರ್ಟಮೆಂಟ' ಎಂಬ ಹೆಸರಿನಿಂದ ಕೋಲಕಾತಾದಲ್ಲಿ ಸ್ಥಾಪನೆಯಾಯಿತು. ಕ್ರಿಸ್ತಶಕ 1911ರಲ್ಲಿ ಅದನ್ನು ದಿಲ್ಲಿಗೆ ತರಲಾಯಿತು.

ಕ್ರಿಸ್ತಶಕ 1998ರಲ್ಲಿ ಭಾರತದ ತತ್ಕಾಲೀನ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಇವರು ಅದನ್ನು ರಾಷ್ಟ್ರೀಯ ಅಭಿಲೇಖಾಗಾರವೆಂದು ಘೋಷಿಸಿ ಜನತೆಯ ಸಲುವಾಗಿ ತೆರೆದಿಡಲಾಗಿದೆಯೆಂದು ಜಾಹೀರು ಮಾಡಿದರು. ಅದು ಭಾರತ ಸರಕಾರದ ಸಾಂಸ್ಕೃತಿಕ ಸಚಿವಾಲಯದ ಅಂತರ್ಗತವಾಗಿರುವ ಇಲಾಖೆಯಾಗಿದೆ. ಕ್ರಿಸ್ತಶಕ 1748ರಿಂದ ಮೊದಲುಗೊಂಡು ಎಲ್ಲ ಕಾಗದ ಪತ್ರಗಳನ್ನು ಇಲ್ಲಿ ಕ್ರಮವಾಗಿ ಹಚ್ಚಿ ಇಡಲಾಗಿದೆ. ಅದರಲ್ಲಿ ಇಂಗ್ಲೀಷ, ಅರಬಿ, ಹಿಂದಿ, ಫಾರಸಿ, ಸಂಸ್ಕೃತ, ಉರ್ದು ಈ ಭಾಷೆಗಳಲ್ಲಿಯ ಮತ್ತು ಮೋಡಿ ಲಿಪಿಯಲ್ಲಿಯ ದಾಖಲೆಗಳ ಸಮಾವೇಶವಿದೆ. ಈ ದಾಖಲೆಗಳನ್ನು ಸಾರ್ವಜನಿಕ, ಪ್ರಾಚ್ಯವಿದ್ಯಾವಿಷಯದ, ಹಸ್ತಲಿಖಿತಗಳು ಮತ್ತು ಖಾಸಗಿ ಕಾಗದ ಪತ್ರಗಳು ಎಂಬ ನಾಲ್ಕು ಪ್ರಕಾರಗಳಲ್ಲಿ ವರ್ಗೀಕರಿಸಲಾಗಿದೆ.

ಅದಲ್ಲದೆ ಭಾರತದಲ್ಲಿಯ ಪ್ರತಿಯೊಂದು ರಾಜ್ಯಸರಕಾರಕ್ಕೆ ಸ್ವತಂತ್ರ ಅಭಿಲೇಖಾಗಾರಗಳಿವೆ. ಮುಂಬಯಿ, ಪುಣೆ, ಕೊಲ್ಹಾಪೂರ, ಔರಂಗಾಬಾದ ಮತ್ತು ನಾಗಪೂರಗಳಲ್ಲಿ ಮಹಾರಾಷ್ಟ್ರ ರಾಜ್ಯಸರಕಾರದ ಅಭಿಲೇಖಾಗಾರ ಸಂಚಾಲನಾಲಯದ ಶಾಖೆಗಳಿವೆ. ಪುಣೆ ಅಭಿಲೇಖಾಗಾರದಲ್ಲಿ ಮರಾಠರ ಇತಿಹಾಸಕ್ಕೆ ಸಂಬಂಧಿತವಾದ ಸುಮಾರು ಐದುಕೋಟಿ ಮೋಡಿ ಲಿಪಿಯಲ್ಲಿಯ ಕಾಗದ ಪತ್ರಗಳಿವೆ. ಅದಕ್ಕೆ ಪೇಶವೆ ದಪ್ತರ ಎನ್ನುತ್ತಾರೆ.

## 9.4 ಕೋಶವಾಙ್ಮಯ

ಕೋಶವೆಂದರೆ ಶಬ್ದಗಳ, ವಿವಿಧ ಮಾಹಿತಿಯ ಮತ್ತು ಜ್ಞಾನದ ಸುವ್ಯವಸ್ಥಿತ ಸಂಗ್ರಹ. ವಿಶಿಷ್ಟ ಪದ್ಧತಿಯಿಂದ ಮಾಡಿದ ವಿವಿಧ ಪ್ರಕಾರದ ಜ್ಞಾನದ ಸಂಕಲನ ಮತ್ತು ರಚನೆಯೇ ಕೋಶ. ಉಪಲಬ್ಧ ಜ್ಞಾನದ ವ್ಯವಸ್ಥಾಪನೆ ಮತ್ತು ಸುಲಭರೀತಿಯಿಂದ ಮಾಡಿದ ಅದರ ಉಪಲಬ್ಧಿಯ ವ್ಯವಸ್ಥೆ ಇದು ಅದರ ಉದ್ದೇಶವಾಗಿದೆ.

**ಕೋಶದ ಅವಶ್ಯಕತೆ:** ಕೋಶದಿಂದಾಗಿ ವಾಚಕರವರೆಗೆ ಜ್ಞಾನವನ್ನು ತಲುಪಿಸಲಾಗುತ್ತದೆ, ಅವರ ಜಿಜ್ಞಾಸೆಯನ್ನು ಪೂರ್ಣಮಾಡುವ ಪ್ರಯತ್ನ ಮಾಡಲಾಗುತ್ತದೆ. ಯಾವುದೊಂದು ಸಮಸ್ಯೆಯ ಮೂಲದವರೆಗೆ ಹೋಗಿ ಅದನ್ನು ಬಗೆಹರಿಸಲಾಗುವುದು. ವಾಚಕನಿಗೆ ತನ್ನ ಅಭ್ಯಾಸವನ್ನು ಹೆಚ್ಚಿಸಲು ಪ್ರೇರಣೆ ದೊರೆಯುತ್ತದೆ. ಯಾವ ಅಭ್ಯಾಸಕರು ಸಂಶೋಧಕರಾಗಿರುತ್ತಾರೆಯೋ ಅವರಿಗಾಗಿ ಜ್ಞಾನದ ಪೂರ್ವ ಸಂಗ್ರಹವನ್ನು ಉಪಲಬ್ಧ ಮಾಡಿಕೊಟ್ಟು ಅದರಲ್ಲಿ ಹೆಚ್ಚಳವನ್ನು ಮಾಡುವ ಮತ್ತು ಸಂಶೋಧನೆಯನ್ನುಮಾಡುವ ಅವಶ್ಯಕತೆಯನ್ನು ಕೋಶಗಳು ನಿರ್ಮಾಣ ಮಾಡುತ್ತವೆ. ಕೋಶವಾಙ್ಮಯವು ರಾಷ್ಟ್ರದ ಸಾಂಸ್ಕೃತಿಕ ಅವಸ್ಥೆಯ ಪ್ರತೀಕವಾಗಿದ್ದು ಸಮಾಜದ ಬೌದ್ಧಿಕ ಅಥವಾ ಸಾಂಸ್ಕೃತಿಕ ಅವಶ್ಯಕತೆಗಳು ಯಾವ ಯಾವ ಪ್ರಕಾರದ್ದಿರುತ್ತವೆಯೋ ಆ ಪ್ರಕಾರದ ಕೋಶವಾಙ್ಮಯದ ನಿರ್ಮಿತಿಯು ಆಯಾ ಸಮಾಜದಲ್ಲಿ ಆಗುತ್ತದೆ.

ಕೋಶದಲ್ಲಿಯ ಮಾಹಿತಿಯ ರಚನೆಗಾಗಿ, ಖಚಿತತೆ, ನಿಖರತೆ, ವಸ್ತು ನಿಷ್ಠತೆ, ಹತೋಟಿ ಹಾಗೂ ಆಧುನಿಕತೆ ಈ ಸಂಗತಿಗಳು ಅವಶ್ಯಕವಾಗಿರುತ್ತವೆ. ಆಧುನಿಕತೆಯನ್ನು ಕಾಪಾಡುವ ಸಲುವಾಗಿ ನಿಶ್ಚಿತ ಕಾಲಾವಧಿಯಲ್ಲಿ ಕೋಶಗಳ ಸುಧಾರಿತ ಆವೃತ್ತಿಗಳನ್ನು ಇಲ್ಲವೆ ಪುರವಣಿಗಳನ್ನು ತೆಗೆಯಬೇಕಾಗುತ್ತದೆ.

ಕೋಶರಚನೆ ಮಾಡುವಾಗ ಸ್ಥೂಲವಾಗಿ ವರ್ಣಮಾಲೆಗನುಸಾರ ಮತ್ತು ವಿಷಯಾನುಸಾರ ಎಂಬ ಎರಡು ಪದ್ಧತಿಗಳನ್ನು ಉಪಯೋಗಿಸುತ್ತಾರೆ. ಇದನ್ನು ಮಾಡುತ್ತಿರುವಾಗ ವಾಚಕರ ಅನುಕೂಲತೆ ಮತ್ತು ಮಾಹಿತಿ ಶೋಧಿಸುವ ಸೌಕರ್ಯ ಈ ಸಂಗತಿಗಳನ್ನು ಗಮನದಲ್ಲಿರಿಸಬೇಕಾಗುತ್ತದೆ. ಕೋಶದ ಕೊನೆಗೆ ಸೂಚಿಯನ್ನು ಕೊಡಲಾಗಿದ್ದರೆ ವಾಚಕರಿಗೆ ಉತ್ತಮ ಅನುಕೂಲತೆ ಉಂಟಾಗುತ್ತದೆ.

ಮೇಲೆ ತಿಳಿಸಿದ ಕೋಶರಚನೆಯನ್ನು ವ್ಯಕ್ತಿ ಅಥವಾ ಸಂಪಾದಕಮಂಡಳವು ಮಾಡಬಲ್ಲದು. ಕೋಶವಾಙ್ಮಯದಲ್ಲಿಯ ಲೇಖನಮಾಡುವಾಗ ವಿವಿಧ ವಿಷಯಗಳಲ್ಲಿಯ ತಜ್ಞರ ಅವಶ್ಯಕತೆಯುಂಟಾಗುತ್ತದೆ.

**ಕೋಶದ ಪ್ರಕಾರಗಳು:** ಕೋಶಗಳನ್ನು ಸಾಮಾನ್ಯವಾಗಿ ನಾಲ್ಕು ವಿಭಾಗಗಳಲ್ಲಿ ವರ್ಗೀಕರಿಸಲಾಗುತ್ತದೆ. (1) ಶಬ್ದಕೋಶ (2) ವಿಶ್ವಕೋಶ (3) ಕೋಶಸದೃಶ ವಾಙ್ಮಯ (4) ಸೂಚಿ ವಾಙ್ಮಯ

**(1) ಶಬ್ದಕೋಶ:** ಇದರಲ್ಲಿ ಶಬ್ದಗಳ ಸಂಗ್ರಹ, ಶಬ್ದಗಳ ಅರ್ಥ, ಸಮಾನಾರ್ಥಕ ಶಬ್ದ, ಪರ್ಯಾಯ ಶಬ್ದ ಮತ್ತು ಶಬ್ದಗಳ ವ್ಯುತ್ಪತ್ತಿಗಳನ್ನು ಕೊಡಲಾಗಿರುತ್ತದೆ. ಶಬ್ದಕೋಶಗಳ ಮಹತ್ವದ ಪ್ರಕಾರಗಳೆಂದರೆ- ಸರ್ವಸಂಗ್ರಾಹಕ, ವಿಶಿಷ್ಟ

ಶಬ್ದಕೋಶ, ಪರಿಭಾಷಾಕೋಶ, ವ್ಯುತ್ಪತ್ತಿಕೋಶ, ಸಮಾನಾರ್ಥ ಇಲ್ಲವೆ ವಿರುದ್ಧಾರ್ಥ ಶಬ್ದಕೋಶ, ಗಾದೆ ಮಾತು ಮತ್ತು ಪಡೆನುಡಿಗಳ ಸಂಗ್ರಹ ಕೋಶ ಇತ್ಯಾದಿ.

**(2) ವಿಶ್ವಕೋಶ:** ವಿಶ್ವಕೋಶದಲ್ಲಿ ಎರಡು ಭಾಗಗಳಿವೆ. (ಅ) ಸರ್ವಸಂಗ್ರಾಹಕ (ಉದಾ., ಎನ್‌ಸೈಕ್ಲೋಪಿಡಿಯಾ ಬ್ರಿಟಾನಿಕಾ, ಮಹಾರಾಷ್ಟ್ರೀಯ ಜ್ಞಾನಕೋಶ, ಮರಾಠಿ ವಿಶ್ವಕೋಶ ಇತ್ಯಾದಿ) (ಆ) ವಿಶಿಷ್ಟ ವಿಷಯದ ಕೋಶ- ಇವು ಆಯಾ ವಿಷಯಗಳಿಗೆ ಸಮರ್ಪಿಸಿಕೊಂಡ ಕೋಶಗಳಿರುತ್ತವೆ. ಉದಾ., ಭಾರತೀಯ ಸಂಸ್ಕೃತಿ ಕೋಶ, ವ್ಯಾಯಾಮ ಜ್ಞಾನಕೋಶ ಇತ್ಯಾದಿ.

**(3) ಕೋಶಸದೃಶ ವಾಙ್ಮಯ:** ಇದರಲ್ಲಿ ಯಾವುದೊಂದು ವಿಷಯದ ಸಮಗ್ರ ರಚನೆಯನ್ನು ಮಾಡಲಾಗಿರುತ್ತದೆ. ಇದರಲ್ಲಿ ವಿಶಿಷ್ಟ ವಿಷಯಾನುಸಾರವಾಗಿ ತಜ್ಞರ ಕಡೆಯಿಂದ ಲೇಖನಗಳನ್ನು ಬರೆಸಿಕೊಂಡು ಗ್ರಂಥನಿರ್ಮಿತಿ ಮಾಡುತ್ತಾರೆ. ಉದಾ., ಮಹಾರಾಷ್ಟ್ರ ಜೀವನ ಸಂಪುಟ - 1,2, ಶಹರ ಪುಣೆ ಸಂಪುಟ-1,2, ಇಯರಬುಕ್ (ಮನೋರಮಾ, ಟೈಮ್ಸ್, ಆಫ ಇಂಡಿಯಾ)

**(4) ಸೂಚಿ ವಾಙ್ಮಯ:** ಗ್ರಂಥದ ಕೊನೆಗೆ ಕೊಟ್ಟ ಆ ಗ್ರಂಥದಲ್ಲಿಯ ವ್ಯಕ್ತಿ, ವಿಷಯ, ಸ್ಥಳ ಮತ್ತು ಗ್ರಂಥಗಳ ಪಟ್ಟಿ, ಹಾಗೂ ಶಬ್ದಗಳ ಪಟ್ಟಿಗಳಿಗೆ ಸೂಚಿ ಎನ್ನುತ್ತಾರೆ. ಸೂಚಿಯು ಸಾಮಾನ್ಯವಾಗಿ ವರ್ಣಮಾಲೆಗನುಸಾರವಾಗಿ ಇರುತ್ತದೆ. ಅದು ಆಯಾ ಗ್ರಂಥಗಳ ವಾಚನಕ್ಕೆ ಸಹಾಯ ಮಾಡುವಂತಹದಿರುತ್ತದೆ. ಉದಾ., ದಾತೆಯವರು ಸಿದ್ಧಪಡಿಸಿದ ಮರಾಠಿ ನಿಯತಕಾಲಿಕೆಗಳ ಸೂಚಿ.

**ಕೋಶ ಮತ್ತು ಇತಿಹಾಸ :** ಇತಿಹಾಸ ವಿಷಯಯಲ್ಲಿ ಮತ್ತು ಕೋಶದಲ್ಲಿ ವಸ್ತುನಿಷ್ಠತೆಗೆ ಮಹತ್ವವಿರುತ್ತದೆ. ಇದು ಇವೆರಡರ ನಡುವಿನ ಸಮಾನ ಸಂಬಂಧವಾಗಿದೆ. ಪ್ರತಿಯೊಂದು ರಾಷ್ಟ್ರದಲ್ಲಿಯ, ಪ್ರತಿಯೊಂದು ಭಾಷೆಯಲ್ಲಿಯ ವಿಶ್ವಕೋಶಗಳು ಭಿನ್ನವಾಗಿರುತ್ತವೆ. ಏಕೆಂದರೆ ಅವುಗಳ ಪ್ರಾಧಾನ್ಯಕ್ರಮಗಳು ಭಿನ್ನವಾಗಿರುತ್ತವೆ. ಸ್ವರಾಷ್ಟ್ರದ ಧ್ಯೇಯಧೋರಣೆ, ಜೀವನ ಮೂಲ್ಯ ಮತ್ತು ಆದರ್ಶಗಳ ಪ್ರಭಾವವು ಕೋಶದ ಮೇಲೆ ಉಂಟಾಗುತ್ತದೆ. ತತ್ವಜ್ಞಾನ ಮತ್ತು ಪರಂಪರೆಗಳ ಪ್ರಭಾವ ಕೂಡ ಕೋಶದ ಮೇಲೆ ಬೀಳುತ್ತದೆ. ರಾಷ್ಟ್ರಾಭಿಮಾನವನ್ನು ಜಾಗೃತವಾಗಿರಿಸುವ ಪ್ರಯತ್ನವನ್ನು ಕೋಶಗಳ ಮುಖಾಂತರ ಮಾಡಲು ಬರುತ್ತದೆ. ಉದಾ., ಮಹಾದೇವ ಶಾಸ್ತ್ರಿ ಜೋಶಿಯವರು ಸಂಪಾದಿಸಿದ ಭಾರತೀಯ ಸಂಸ್ಕೃತಿ ಕೋಶ. ಜೀವನದ ವಿವಿಧ ಕ್ಷೇತ್ರಗಳಲ್ಲಿಯ ಜ್ಞಾನವನ್ನು ಎಲ್ಲ ಜನರ ವಿಕಾಸಕ್ಕಾಗಿ ದೊರಕಿಸಿಕೊಡುವುದು, ಈ ಕೋಶರಚನೆಯ ಪ್ರೇರಣೆಯಾಗಿರುತ್ತದೆ. ಜ್ಞಾನಾರ್ಜನೆ ಮತ್ತು ಜ್ಞಾನಪ್ರಸಾರ ಇವುಗಳನ್ನು ಜೀವನಶ್ರದ್ಧೆಗಳೆಂದು ತಿಳಿದು ಅದರ ಸಲುವಾಗಿ ವೈಯಕ್ತಿಕ ಮತ್ತು ಸಾಮೂಹಿಕ ರೂಪದಲ್ಲಿ ಪ್ರಯತ್ನ ಮಾಡಲಾಗುತ್ತದೆ. ಆದ್ದರಿಂದ ಕೋಶವನ್ನು ಸಮಾಜದ ಲಾಂಛನವೆಂದೇ ತಿಳಿಯಲಾಗುತ್ತದೆ. ಸಮಾಜದ ಪ್ರಜ್ಞೆ ಮತ್ತು ಪ್ರತಿಭೆ ಇವುಗಳ ಪ್ರಾತಿನಿಧಿಕ ಆವಿಷ್ಕಾರವನ್ನು ಕೋಶರಚನೆಯಲ್ಲಿ ಕಾಣಬಹುದು.



**ಗೊತ್ತಿದೆಯೇ ನಿಮಗೆ?**

ಪಶ್ಚಿಮದ ಕಡೆಯ ದೇಶಗಳಲ್ಲಿ (1) 'ನ್ಯಾಚರಲ ಹಿಸ್ಟರಿ' (ಕ್ರಿ.ಶ. ಮೊದಲನೆಯ ಶತಮಾನ) ಇದು ಹಿರಿಯ ಪ್ಲಿನಿಯು ರಚಿಸಿದ ಮೊದಲನೆಯ ಕೋಶ. (2) ಡಿಡೇರೊ ಇವರ ಹದಿನೆಂಟನೆಯ ಶತಮಾನದಲ್ಲಿಯ ಫ್ರೆಂಚ ವಿಶ್ವಕೋಶವು ಮಹತ್ವದ ಕೋಶವಾಗಿದೆ. (3) ಎನ್‌ಸೈಕ್ಲೋಪೀಡಿಯಾ ಆಫ ಬ್ರಿಟಾನಿಕಾ ಈ ವಿಶ್ವಕೋಶವು ಪ್ರಥಮ ಕ್ರಿ.ಶ. 1767ರಲ್ಲಿ ಪ್ರಸಿದ್ಧವಾಯಿತು. ಇದನ್ನು ಕೋಶ ರಚನೆಯ ಪ್ರಗತಿಯಲ್ಲಿಯ ಅತ್ಯಂತ ಮಹತ್ವದ ಹಂತವೆಂದು ತಿಳಿಯಲಾಗುತ್ತದೆ.

ಸಂಸ್ಕೃತ ಭಾಷೆಯಲ್ಲಿ ನಿಘಂಟು, ಧಾತುಪಾಠಗಳಂತಹ ಶಬ್ದಕೋಶಗಳ ಪರಂಪರೆಯು ಪ್ರಾಚೀನವಾಗಿದೆ. ಮಧ್ಯಯುಗದಲ್ಲಿ ಮಹಾನುಭಾವ ಪಂಥದವರ ಕೋಶರಚನೆ, ಛತ್ರಪತಿ ಶಿವಾಜಿ ಮಹಾರಾಜರ ಆಡಳಿತಕಾಲದಲ್ಲಿಯ ರಾಜ್ಯವ್ಯವಹಾರಕೋಶ ಇವು ಮಹತ್ವದ್ದಾಗಿವೆ.

**ಇತಿಹಾಸ ವಿಷಯಕ್ಕೆ ಸಂಬಂಧಿತ ಕೋಶ :** ಇತಿಹಾಸ ವಿಷಯದಲ್ಲಿ ಸಮೃದ್ಧವಾದ ಕೋಶಪರಂಪರೆಯಿದೆ. ರಘುನಾಥ ಭಾಸ್ಕರ ಗೋಡಬೋಲೆಯವರ ಭಾರತವರ್ಷೀಯ ಪಾಚೀನ ಐತಿಹಾಸಿಕ ಕೋಶವು (ಕ್ರಿ.ಶ.1876). ಆದ್ಯ ಕೋಶ ಹೌದು ಭಾರತವರ್ಷೀಯ ಪ್ರಾಚೀನ ಐತಿಹಾಸಿಕ ಕೋಶದಲ್ಲಿ ಪ್ರಾಚೀನ ಕಾಲದಲ್ಲಿಯ ಭಾರತೀಯ ವ್ಯಕ್ತಿ ಮತ್ತು ಸ್ಥಳಗಳು ಒಳಗೊಂಡಿವೆ. ಈ ಕೋಶದಲ್ಲಿ 'ಭರತವರ್ಷದಲ್ಲಿ ಹಿಂದೆ ಆಗಿ ಹೋದ ಪ್ರಸಿದ್ಧ ಜನರ, ಅವರ ಹೆಂಡಂದಿರ, ಪುತ್ರರ, ಅವರ ಧರ್ಮ, ಅವರ ದೇಶ ಮತ್ತು ರಾಜಧಾನಿಗಳ, ಅದರಂತೆ ಆ ದೇಶಗಳಲ್ಲಿಯ ನದಿ ಮತ್ತು ಪರ್ವತವನ್ನೊಳಗೊಂಡ ಇತಿಹಾಸವನ್ನು' ಕೊಡಲಾಗಿದೆ.

ಶ್ರೀಧರ ವ್ಯಂಕಟೇಶ ಕೇತಕರ ಇವರ 'ಮಹಾರಾಷ್ಟ್ರೀಯ ಜ್ಞಾನಕೋಶ'ದ ಇಪ್ಪತ್ತೂರು ಸಂಪುಟಗಳಿವೆ. ಮರಾಠಿ ಜನರನ್ನು ಬಹುಶ್ರುತರನ್ನಾಗಿ ಮಾಡಬೇಕು, ಅವರ ಜ್ಞಾನದ ಕ್ಷಿತಿಜ ವಿಸ್ತರಿಸಬೇಕು, ಅವರ ವಿಚಾರಗಳ ವಲಯವು ಅಧಿಕ ವ್ಯಾಪಕವಾಗಬೇಕು ಹಾಗೂ ಜಗತ್ತಿನಲ್ಲಿಯ ಮುಂದುವರಿದ ಜನರ ಸರಿಸಮಾನವಾಗಿ ಅವರು ಪರಿಪಕ್ವವಾಗಬೇಕು

ಎಂಬುದು ಕೇತಕರ ಇವರ ಜ್ಞಾನಕೋಶ ರಚನೆಯ ಹಿಂದಿನ ನಿಲುವಾಗಿತ್ತು. ಈ ಸಂಪುಟಗಳ ಮೂಲಕ ಅವರು ವ್ಯಾಪಕ ಇತಿಹಾಸದ ರಚನೆಯನ್ನು ಮಾಡಿದ್ದಾರೆ.

ಇದರ ನಂತರದ ಮಹತ್ವದ ಕೋಶವೆಂದರೆ ಭಾರತವರ್ಷೀಯ ಚರಿತ್ರಕೋಶ. ಸಿದ್ಧೇಶ್ವರಶಾಸ್ತ್ರಿ ಚಿತ್ರಾವ ಇವರು 'ಭಾರತೀಯ ಚರಿತ್ರಕೋಶ ಮಂಡಳ'ದ ಸ್ಥಾಪನೆಮಾಡಿ ಅದರ ಪರವಾಗಿ ಭಾರತವರ್ಷೀಯ ಪ್ರಾಚೀನ ಚರಿತ್ರಕೋಶ (ಕ್ರಿ.ಶ.1932), ಭಾರತವರ್ಷೀಯ ಮಧ್ಯಯುಗೀನ ಚರಿತ್ರಕೋಶ (ಕ್ರಿ.ಶ.1937), ಭಾರತವರ್ಷೀಯ ಅರ್ವಾಚೀನ ಚರಿತ್ರಕೋಶ (ಕ್ರಿ.ಶ,.1946) ಎಂಬ ಮೂರು ಚರಿತ್ರಕೋಶಗಳನ್ನು ಸಂಪಾದಿಸಿ ಪ್ರಕಟಪಡಿಸಿದರು. ಈ ಕೋಶಗಳ ಕಲ್ಪನೆ ಬರಬೇಕೆಂದು ಪ್ರಾಚೀನ ಚರಿತ್ರಕೋಶದಲ್ಲಿಯ ದಾಖಲೆಗಳನ್ನು ನೋಡಬಹುದು. ಈ ಕೋಶದಲ್ಲಿ ಶ್ರುತಿ, ಸ್ಮೃತಿ, ಸೂತ್ರಗಳು, ವೇದಾಂಗಗಳು, ಉಪನಿಷತ್ತುಗಳು, ಪುರಾಣಗಳು ಹಾಗೂ ಜೈನ ಮತ್ತು ಬೌದ್ಧ ಸಾಹಿತ್ಯದಲ್ಲಿ ವಿವರಿಸಲ್ಪಟ್ಟ ವ್ಯಕ್ತಿಗಳ ಮಾಹಿತಿ ನೀಡಲಾಗಿದೆ.



**ಗೊತ್ತಿದೆಯೇ ನಿಮಗೆ?**

**ಕೆಲವು ವೈಶಿಷ್ಟ್ಯಪೂರ್ಣ ಕೋಶಗಳು**

(1) ಸಂಗೀತಶಾಸ್ತ್ರಕಾರ ವ ಕಲಾವಂತ ಯಾಂಚಾ ಇತಿಹಾಸ (ಲಕ್ಷ್ಮಣ ದತ್ತಾತ್ರಯ ಜೋಶಿ).

(2) ಕ್ರಾಂತಿಕಾರಕಾಂಚಾ ಚರಿತ್ರಕೋಶ (ಶಂ.ರಾ. ದಾತೆ) ಇದರಲ್ಲಿ ಭಾರತದಲ್ಲಿಯ ಸುಮಾರು 250 ಕ್ರಾಂತಿಕಾರಕರ ಚರಿತ್ರೆ ಮತ್ತು ಭಾವಚಿತ್ರಗಳಿವೆ.

(3) ಸ್ವಾತಂತ್ರ್ಯ ಸೈನಿಕ : ಚರಿತ್ರಕೋಶ (ನ.ರ. ಫಾಟಕ) ಈ ಕೋಶದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರತ್ಯಕ್ಷ ಮರಣದಂಡನೆ, ಸೆರೆಮನೆವಾಸ ಶಿಕ್ಷೆಗಳನ್ನು ಅನುಭವಿಸಿದ ಮತ್ತು ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ಮಾಡಿದ ಸ್ವಾತಂತ್ರ್ಯ ಸೈನಿಕರ ಮಾಹಿತಿ ಇದೆ.

**ಸ್ಥಳ ಕೋಶ :** ಇತಿಹಾಸದ ಅಭ್ಯಾಸಕ್ಕಾಗಿ ಭೂಗೋಲ ಮಹತ್ವದ್ದಾಗಿದೆ. ವಿವಿಧ ಐತಿಹಾಸಿಕ ಸ್ಥಳಗಳ ವಿಷಯದಲ್ಲಿ ಮಾಹಿತಿ ನೀಡುವ ಕೋಶಗಳಿವೆ.

(1) ಮಹಾನುಭಾವ ಪಂಥದಲ್ಲಿಯ ವ್ಯಾಸ ಮುನಿಗಳು ರಚಿಸಿದ ಸ್ಥಾನಪೋಥಿ ಅಥವಾ ಸ್ಥಾನಗ್ರಂಥ (14ನೆಯ ಶತಮಾನ) ಈ ಗ್ರಂಥದಲ್ಲಿ ಮಹಾನುಭಾವ ಪಂಥದ ಪ್ರವರ್ತಕರಾದ ಶ್ರೀಚಕ್ರಧರ ಸ್ವಾಮಿಗಳು ಯಾವ ಯಾವ ಊರಿಗೆ ಭೇಟಿ ನೀಡಿದರೋ ಆ ಊರುಗಳ ಸವಿಸ್ತಾರ ದಾಖಲೆಗಳಿವೆ. ಈ ಗ್ರಂಥದ ಮೇಲಿಂದ ತತ್ಕಾಲೀನ ಮಹಾರಾಷ್ಟ್ರದ ಕಲ್ಪನೆ ಬರುತ್ತದೆ. ಲೀಳಾಚರಿತ್ರದಲ್ಲಿಯ ವಿವಿಧ ಘಟನೆಗಳು ಯಾವಾಗ, ಯಾವ ಸ್ಥಳದಲ್ಲಿ ಮತ್ತು ಯಾವ ಪ್ರಸಂಗದಿಂದಾಗಿ ಸಂಭವಿಸಿದವು ಎಂಬುದನ್ನೂ ಸ್ಥಾನ ಗ್ರಂಥಕಾರರು ಹೇಳುತ್ತಾರೆ. ಅದರಿಂದಾಗಿ ಶ್ರೀಚಕ್ರಧರ ಸ್ವಾಮಿಗಳ ಚರಿತ್ರೆಯನ್ನು ಬರೆಯಲು ಇದು ಉತ್ತಮ ಸಂದರ್ಭಗ್ರಂಥವಾಗಿದೆ.

(2) ಪ್ರಾಚೀನ ಭಾರತೀಯ ಸ್ಥಳಕೋಶ (1969) : ಸಿದ್ದೇಶ್ವರ ಶಾಸ್ತ್ರಿ ಚಿತ್ರಾವ ಇವರು ಈ ಕೋಶದ ರಚನೆ ಮಾಡಿದ್ದಾರೆ. ವೈದಿಕ ಸಾಹಿತ್ಯ, ಕೌಟಿಲ್ಯನ ಅರ್ಥಶಾಸ್ತ್ರ, ಪಾಣಿನಿಯ ವ್ಯಾಕರಣ, ವಾಲ್ಮಿಕಿ - ರಾಮಾಯಣ, ಮಹಾಭಾರತ, ಪುರಾಣಗಳು, ಮಧ್ಯಯುಗೀನ ಸಂಸ್ಕೃತ ಮತ್ತು ಶಬ್ದಕೋಶ ಸಾಹಿತ್ಯ, ಅದರಂತೆ ಫಾರ್ಸಿ, ಜೈನ, ಬೌದ್ಧ, ಗ್ರೀಕ ಹಾಗೂ ಚೀನಿ ಸಾಹಿತ್ಯ - ಇವುಗಳಲ್ಲಿಯ ಭೌಗೋಲಿಕ ಸ್ಥಳಗಳ ಮಾಹಿತಿಯನ್ನು ಕೋಶದಲ್ಲಿ ನೀಡಲಾಗಿದೆ.

**ವಿಶ್ವ ಕೋಶ :** ಮಹಾರಾಷ್ಟ್ರ ರಾಜ್ಯದ ಮೊದಲನೆಯ ಮುಖ್ಯಮಂತ್ರಿ ಯಶವಂತರಾವ ಚವ್ಹಾಣ ಇವರು ಮರಾಠಿ ಭಾಷೆ ಮತ್ತು ಸಾಹಿತ್ಯಗಳ ಅಭಿವೃದ್ಧಿಗಾಗಿ ಮಹಾರಾಷ್ಟ್ರ ರಾಜ್ಯ ಸಾಹಿತ್ಯ ಸಂಸ್ಕೃತಿ ಮಂಡಳದ ವತಿಯಿಂದ ಮರಾಠಿ ವಿಶ್ವಕೋಶ ನಿರ್ಮಿತಿಗೆ ಚಾಲನೆ ನೀಡಿದರು. ತರ್ಕತೀರ್ಥ ಲಕ್ಷ್ಮಣಶಾಸ್ತ್ರಿ ಜೋಶಿಯವರ ನೇತೃತ್ವದಲ್ಲಿ ವಿಶ್ವಕೋಶ ನಿರ್ಮಿತಿ ಆರಂಭವಾಯಿತು. ಜಗತ್ತಿನಲ್ಲಿಯ ಜ್ಞಾನವನ್ನು ಸಾರಾಂಶ ರೂಪದಲ್ಲಿ ಈ ಕೋಶದಲ್ಲಿ ಅಳವಡಿಸಲಾಗಿದೆ. ಇತಿಹಾಸ ವಿಷಯಕ್ಕೆ ಸಂಬಂಧಿತವಾದ ಮಹತ್ವದ ದಾಖಲೆಗಳು ಇದರಲ್ಲಿವೆ.

**ಭಾರತೀಯ ಸಂಸ್ಕೃತಿ ಕೋಶ :** ಮಹಾದೇವಶಾಸ್ತ್ರಿ ಜೋಶಿಯವರ ಸಂಪಾದಕತ್ವದಲ್ಲಿ ಭಾರತೀಯ ಸಂಸ್ಕೃತಿ ಕೋಶದ ಹತ್ತು ಸಂಪುಟಗಳನ್ನು ತಯಾರಿಸಲಾಯಿತು. ಈ ಕೋಶದಲ್ಲಿ ಆಸೇತು ಹಿಮಾಚಲ - ಇಂಥ ಭಾರತದ ಇತಿಹಾಸ, ಭೂಗೋಲ, ಭಿನ್ನ ಭಾಷೆಯ ಜನರು, ಅವರು ರಚಿಸಿದ ಇತಿಹಾಸ, ಹಬ್ಬ-ಉತ್ಸವಗಳು ಮತ್ತು ಸಾಂಸ್ಕೃತಿಕ ವಿಷಯಗಳನ್ನು ಗಣನೆಗೆ ತಂದುಕೊಳ್ಳಲಾಗಿದೆ.

**ಸಂಜ್ಞಾ ಕೋಶ :** ಇತಿಹಾಸದಲ್ಲಿಯ ಸಂಜ್ಞೆಗಳನ್ನು ಬೇರ್ಪಡಿಸಿ ತೆಗೆದು ಅವುಗಳನ್ನು ತಿಳಿಸಿಹೇಳುವ ಕೋಶವನ್ನು ಇತಿಹಾಸದಲ್ಲಿ ತಯಾರಿಸುತ್ತಾರೆ. ಅಭ್ಯಾಸಕರಿಗೆ ಅದರ ಉಪಯೋಗವಾಗುತ್ತದೆ.

ಇತಿಹಾಸ ವಿಷಯದ ಅಭ್ಯಾಸಕರಿಗೆ ಕೋಶರಚನೆಯ ಕಾರ್ಯದಲ್ಲಿ ಸಾಕಷ್ಟು ಅವಕಾಶಗಳು ಲಭ್ಯವಾಗಿರುತ್ತವೆ.

ಯಾವುದೇ ವಿಷಯದ ಕೋಶವಿರಲಿ ಅದಕ್ಕೆ ಇತಿಹಾಸವನ್ನು ಜೋಡಿಸುವುದು ಅವಶ್ಯಕವಾಗಿರುತ್ತದೆ. ಪ್ರತಿಯೊಂದು ವಿಷಯಕ್ಕೆ ಇತಿಹಾಸವಿರುತ್ತದೆ. ಇತಿಹಾಸದ ಅಭ್ಯಾಸಕರು ಕೋಶಗಳ ಅಭ್ಯಾಸದಿಂದ ಘಟನಾಕೋಶ, ದಿನವೈಶಿಷ್ಟ್ಯ, ವ್ಯಕ್ತಿಕೋಶ, ಸಂಜ್ಞಾಕೋಶ, ಸ್ಥಳಕೋಶ ಇತ್ಯಾದಿ ಕೋಶಗಳನ್ನು ತಯಾರಿಸುವುದರಲ್ಲಿ ಭಾಗವಹಿಸಬಹುದು.

ಈ ಪಠ್ಯಪುಸ್ತದ ಅಭ್ಯಾಸದ ನಂತರ – ಇತಿಹಾಸ ವಿಷಯದಲ್ಲಿ ಪ್ರಾವೀಣ್ಯವನ್ನು ಪಡೆದರೆ ಅನೇಕ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳು ದೊರಕಬಲ್ಲವು ಎಂಬುದು ನಿಮ್ಮ ಗಮನಕ್ಕೆ ಬಂದಿರಬಹುದು. ಈ ಪಠ್ಯಪುಸ್ತದಲ್ಲಿ ಕೊಟ್ಟ ಮಾಹಿತಿಯ ಉಪಯೋಗ ಮಾಡಿಕೊಂಡು ನೀವು ನಿಮ್ಮ ಅಭಿರುಚಿಯ ಪ್ರಕಾರ ಭವಿಷ್ಯದಲ್ಲಿಯ ಕಾರ್ಯಕ್ಷೇತ್ರವನ್ನು ಆಯ್ಕೆ ಮಾಡಬಹುದು.



## ಅಭ್ಯಾಸ

**1. (ಅ) ಕೆಳಗೆ ಕೊಟ್ಟ ಪರ್ಯಾಯಗಳಲ್ಲಿ ಯೋಗ್ಯ ಪರ್ಯಾಯವನ್ನು ಆಯ್ದುಕೊಂಡು ವಿಧಾನಗಳನ್ನು ಪೂರ್ಣಮಾಡಿರಿ.**

(1) ಲಿಯೋನಾರ್ದೋ ದ ವಿಂಚಿ ಎಂಬ ಜಗತ್ಪ್ರಸಿದ್ಧ ಇಟಾಲಿಯನ್ ಚಿತ್ರಕಾರನು ಚಿತ್ರಿಸಿದ .......... ಈ ಚಿತ್ರದ ಸಮಾವೇಶವು ಲುವ್ರ ಸಂಗ್ರಹಾಲಯದಲ್ಲಿದೆ.

(ಅ) ನೆಪೋಲಿಯನ (ಬ) ಮೋನಾಲಿಸಾ

(ಕ) ಹ್ಯಾನ್ಸ ಸ್ಲೋವನ (ಡ) ಎರಡನೆಯ ಜಾರ್ಜ

(2) ಕೋಲಕಾತಾದಲ್ಲಿಯ ........... ಇದು ಭಾರತದಲ್ಲಿಯ ಪ್ರಥಮ ಸಂಗ್ರಹಾಲಯವಾಗಿದೆ.

(ಅ) ಗವ್ಹರ್ನಮೆಂಟ ಮ್ಯುಝಿಯಮ

(ಬ) ರಾಷ್ಟ್ರೀಯ ವಸ್ತು ಸಂಗ್ರಹಾಲಯ

(ಕ) ಛತ್ರಪತಿ ಶಿವಾಜಿ ಮಹಾರಾಜ ವಸ್ತು ಸಂಗ್ರಹಾಲಯ

(ಡ) ಭಾರತೀಯ ಸಂಗ್ರಹಾಲಯ

**(ಬ) ಕೆಳಗಿನವುಗಳಲ್ಲಿ ತಪ್ಪಾದ ಜೊತೆಯನ್ನು ಗುರುತಿಸಿ ಬರೆಯಿರಿ.**

(1) ಮಹಾರಾಜ ಸಯಾಜಿರಾವ ವಿಶ್ವವಿದ್ಯಾಲಯ – ದಿಲ್ಲಿ

(2) ಬನಾರಸ ಹಿಂದೂ ವಿಶ್ವವಿದ್ಯಾಲಯ – ವಾರಾಣಸಿ

(3) ಅಲಿಗಢ ಮುಸ್ಲಿಮ ಯುನಿವ್ಹರ್ಸಿಟಿ – ಅಲಿಗಢ

(4) ಜಿವಾಜಿ ವಿಶ್ವವಿದ್ಯಾಲಯ – ಗ್ವಾಲಿಯರ

**2. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಅಭಿಲೇಖಾಗಾರಗಳು ಮತ್ತು ಗ್ರಂಥಾಲಯಗಳು ನಿಯತಕಾಲಿಕೆ ಮತ್ತು ಇತರ ಪ್ರಕಾಶನಗಳನ್ನು ಪ್ರಸಿದ್ಧ ಪಡಿಸುತ್ತವೆ.

4UURB4

(2) ವಿವಿಧ ವಿಷಯಗಳಲ್ಲಿಯ ಕೃತಿಗಳಿಗಾಗಿ ತರಬೇತಿಯ ಅವಶ್ಯಕತೆ ಇರುತ್ತದೆ.

**3. ಟಿಪ್ಪಣಿ ಬರೆಯಿರಿ.**

(1) ಸ್ಥಳ ಕೋಶ (2) ವಿಶ್ವಕೋಶ


(3) ಸಂಜ್ಞಾಕೋಶ (4) ಸರಸ್ವತಿ ಮಹಾಲ ಗ್ರಂಥಾಲಯ

**4. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರ ಉತ್ತರ ಬರೆಯಿರಿ.**

(1) ಗ್ರಂಥಾಲಯ ವ್ಯವಸ್ಥಾಪನೆಯು ಏಕೆ ಮಹತ್ವದ್ದಾಗಿದೆ?

(2) ಅಭಿಲೇಖಾಗಾರದ ವ್ಯವಸ್ಥಾಪನೆಯಲ್ಲಿ ಯಾವ ಕಾರ್ಯಗಳು ಮಹತ್ವದ್ದಾಗಿವೆ?

**5. ಕೆಳಗಿನ ಕಲ್ಪನಾ ಚಿತ್ರವನ್ನು ಪೂರ್ಣಮಾಡಿರಿ.**




**ಉಪಕ್ರಮ**

ಇಂಟರ್ನೆಟ ಸಹಾಯದಿಂದ ಮಹಾರಾಷ್ಟದಲ್ಲಿಯ ಪ್ರಮುಖ ಗ್ರಂಥಾಲಯಗಳ ಮಾಹಿತಿ ಪಡೆಯಿರಿ. ನಿಮ್ಮ ಪರಿಸರದಲ್ಲಿಯ ಗ್ರಂಥಾಲಯಕ್ಕೆ ಭೇಟಿ ನೀಡಿ ಅಲ್ಲಿಯ ಕಾರ್ಯಪದ್ಧತಿಯನ್ನು ತಿಳಿದುಕೊಳ್ಳಿರಿ.

# ರಾಜ್ಯಶಾಸ್ತ್ರ

## ಅನುಕ್ರಮಣಿಕೆ


| ಅ. ಕ್ರ | ಪಾಠಗಳ ಹೆಸರು | ಪುಟ ಸಂಖ್ಯೆ |
|---|---|---|
| 1. | ಸಂವಿಧಾನದ ಮುನ್ನಡೆ | 69 |
| 2. | ಚುನಾವಣಾ ಪ್ರಕ್ರಿಯೆ | 75 |
| 3. | ರಾಜಕೀಯ ಪಕ್ಷಗಳು | 82 |
| 4. | ಸಾಮಾಜಿಕ ಮತ್ತು ರಾಜಕೀಯ ಚಳುವಳಿ | 91 |
| 5. | ಭಾರತೀಯ ಪ್ರಜಾಪ್ರಭುತ್ವವು ಎದುರಿಸುತ್ತಿರುವ ಆಹ್ವಾನಗಳು | 97 |

# ಕ್ಷಮತಾ ವಿಧಾನಗಳು

| ಅ.ಕ್ರ. | ಘಟಕ | ಕ್ಷಮತೆ |
|---|---|---|
| 1. | ಸಂವಿಧಾನದ ಮುನ್ನಡೆ | ■ ಸಂವಿಧಾನದಿಂದ ಭಾರತದಲ್ಲಿಯ ಪ್ರಜಾಪ್ರಭುತ್ವವು ದೃಢವಾಗಿದೆ ಎಂಬುದನ್ನು ತಿಳಿದುಕೊಳ್ಳುವೆವು.<br>■ ಸಂವಿಧಾನದ ಮುನ್ನಡೆಯು ಸಾಮಾಜಿಕ ಪರಿವರ್ತನೆಯ ದಿಶೆಯಲ್ಲಿ ನಡೆಯುತ್ತಿದೆ ಎಂಬುದರ ಅರಿವು ನಿರ್ಮಾಣವಾಗುವದು. |
| 2. | ಚುನಾವಣಾ ಪ್ರಕ್ರಿಯೆ | ■ ಚುನಾವಣಾ ಆಯೋಗದ ಮಹತ್ವ ತಿಳಿದುಕೊಳ್ಳುವುದು.<br>■ ಚುನಾವಣೆಯಲ್ಲಿ ಪ್ರತಿಯೊಬ್ಬ ಮತದಾರನು ಮತದಾನ ಮಾಡುವುದು ಇದು ಸಂವಿಧಾನಾತ್ಮಕ ಹೊಣೆಯಾಗಿದೆ ಎಂಬುದರ ಅರಿವು ವಿಕಾಸವಾಗುವದು.<br>■ ಚುನಾವಣಾ ಪ್ರಕ್ರಿಯೆಯಲ್ಲಿ ಜನರ ಪಾತ್ರ ಮಹತ್ವದ್ದಾಗಿರುತ್ತದೆ ಎಂಬುದನ್ನು ಗುರುತಿಸುವುದು.<br>■ ಚುನಾವಣಾ ಪ್ರಕ್ರಿಯೆಯ ಮಾಹಿತಿಯನ್ನು ದೊರಕಿಸಲು ವ್ಹಿಡಿಯೋ ಕ್ಲಿಪ್‌ದ ಸಹಾಯವನ್ನು ಪಡೆದುಕೊಳ್ಳುವುದು.<br>■ ಮತದಾರ ಸಂಘದ ನಕಾಶೆಯಲ್ಲಿ ಸ್ವಂತದ ಮತದಾರ ಸಂಘವನ್ನು ಶೋಧಿಸುವುದು ಲೋಕಸಭಾ ಮತದಾರ ಸಂಘವನ್ನು ಶೋಧಿಸುವುದು/ತೋರಿಸುವುದು. |
| 3. | ರಾಜಕೀಯ ಪಕ್ಷಗಳು (ರಾಷ್ಟ್ರೀಯ) | ■ ರಾಜಕೀಯ ಪಕ್ಷಗಳ ಹೊಣೆಗಾರಿಕೆ ಮತ್ತು ಕಾರ್ಯಗಳನ್ನು ತಿಳಿದುಕೊಳ್ಳುವುದು.<br>■ ಹೊಸದಾಗಿ ಅಸ್ತಿತ್ವದಲ್ಲಿ ಬರುವ ಪಕ್ಷಗಳ ಕಾರಣ ಮಿಮಾಂಶೆ ಮಾಡುವುದು<br>■ ಭಾರತದಲ್ಲಿಯ ರಾಷ್ಟ್ರೀಯ ಪಕ್ಷಗಳ ಧೋರಣೆಗಳ ತುಲನೆ ಮಾಡಿ ನಿಷ್ಕರ್ಷ ತೆಗೆಯುವುದು.<br>■ ರಾಜಕೀಯ ಪಕ್ಷಗಳ ಚುನಾವಣಾ ಚಿನ್ಹೆಗಳ ಸಂಗ್ರಹ ಮಾಡಿ ಕೋಷ್ಟಕವನ್ನು ತಯಾರಿಸುವುದು. |
| 4. | ರಾಜಕೀಯ ಪಕ್ಷ (ಪ್ರಾದೇಶಿಕ) | ■ ಮಹಾರಾಷ್ಟ್ರದಲ್ಲಿಯ ಪ್ರಾದೇಶಿಕ ಪಕ್ಷಗಳ ತತ್ವಗಳು ಮತ್ತು ಕಾರ್ಯಗಳನ್ನು ಹೇಳುವುದು.<br>■ ಯಾವುದೇ ಪಕ್ಷದ ಮುಂದಾಳುಗಳು, ಅವರ ಸಭೆಗಳು ಮುಂತಾದ ಸುದ್ದಿಗಳನ್ನು ಸಂಗ್ರಹಿಸುವುದು.<br>■ ಪ್ರಾದೇಶಿಕ ಪಕ್ಷಗಳು ಏಕೆ ಪ್ರಬಲವಾಗುತ್ತವೆ ಎಂಬುದರ ಚರ್ಚೆ ಮಾಡುವುದು. |
| 5. | ಸಾಮಾಜಿಕ ಮತ್ತು ರಾಜಕೀಯ ಚಳುವಳಿ | ■ ಸಾಮಾಜಿಕ ಮತ್ತು ರಾಜಕೀಯ ಚಳುವಳಿಗಳ ಅರ್ಥವನ್ನು ತಿಳಿದುಕೊಳ್ಳುವುದು<br>■ ಸಾಮಾಜಿಕ ಚಳುವಳಿಗಳು ಜನಜಾಗೃತಿಗಾಗಿ ಯಾವ ಮಾರ್ಗಗಳನ್ನು ಅವಲಂಬಿಸುವವು ಎಂಬುದನ್ನು ಗುರುತಿಸುವುದು.<br>■ ಮಹಿಳೆ ಮತ್ತು ಇತರ ದುರ್ಬಲ ಘಟಕಗಳ ಸಕ್ಷಮೀಕರಣದ ಅರ್ಥವನ್ನು ಹೇಳುವುದು<br>■ ರೈತ ಮತ್ತು ಕಾರ್ಮಿಕರ ಬೇಡಿಕೆಗಳ ಮಾಹಿತಿಯನ್ನು ಮಾಡಿಕೊಳ್ಳುವುದು.<br>■ ವಿದ್ಯಾರ್ಥಿ ಚಳುವಳಿಗಳ ಕುರಿತು ವೃತ್ತಪತ್ರಿಕೆಯಲ್ಲಿಯ ಸುದ್ದಿಗಳನ್ನು ಸಂಗ್ರಹಿಸುವುದು. |
| 6. | ಭಾರತೀಯ ಪ್ರಜಾಪ್ರಭುತ್ವವು ಎದುರಿಸುತ್ತಿರುವ ಆಹ್ವಾನಗಳು | ■ 'ವಿವಿಧತೆಯಲ್ಲಿ ಏಕತೆ' ಇದರ ಅರ್ಥವನ್ನು ಹೇಳುವುದು<br>■ ಭಾರತದಲ್ಲಿಯ ವಿವಿಧತೆಯ ಆದರ ಮಾಡುವ ವೃತ್ತಿಯು ವಿಕಾಸಗೊಳ್ಳುವುದು<br>■ ವಿವಿಧ ಆವ್ಹಾನೆಗಳ ವಸ್ತುನಿಷ್ಠ ಸ್ವರೂಪವನ್ನು ಸ್ಪಷ್ಟಪಡಿಸುವುದು<br>■ ಅಂತರ್ಗತ ಆವ್ಹಾನಗಳನ್ನು ಹೇಗೆ ಎದುರಿಸಬಹುದು ಎಂಬುದರ ವಿವೇಚನೆ ಮಾಡುವುದು. |

# 1. ಸಂವಿಧಾನದ ಮುನ್ನಡೆ

ರಾಜ್ಯಶಾಸ್ತ್ರದ ಇಲ್ಲಿಯವರೆಗಿನ ಪಠ್ಯಪುಸ್ತಕಗಳಿಂದ ನಾವು ಸ್ಥಾನಿಕ ಸ್ವರಾಜ್ಯ ಸಂಸ್ಥೆ, ಭಾರತೀಯ ಸಂವಿಧಾನದಲ್ಲಿಯ ಮೌಲ್ಯಗಳು, ಮತ್ತು ಅದರಿಂದ ವ್ಯಕ್ತವಾಗುವ ತತ್ವಜ್ಞಾನ, ಅದರೊಂದಿಗೆ ಸಂವಿಧಾನವು ನಿರ್ಮಾಣ ಮಾಡಿದ ಸರಕಾರಿ ವ್ಯವಸ್ಥೆ ಮತ್ತು ಅಂತರರಾಷ್ಟ್ರೀಯ ಸಂಬಂಧಗಳಲ್ಲಿಯ ಭಾರತದ ಸ್ಥಾನ ಇವುಗಳ ವಿಸ್ತೃತವಾದ ಪುನರಾವಲೋಕನೆ ಮಾಡಲಾಗಿದೆ. ಭಾರತದ ಸಂವಿಧಾನವು ಭಾರತದ ಸಾರ್ವಭೌಮ, ಸಮಾಜವಾದಿ ಧರ್ಮ ನಿರಪೇಕ್ಷ ಪ್ರಜಾಪ್ರಭುತ್ವ ಗಣರಾಜ್ಯವನ್ನು ನಿರ್ಮಾಣ ಮಾಡುವ ಉದ್ದೇಶಗಳನ್ನು ಮಂಡಿಸಿದೆ. ನಾಗರಿಕರಿಗೆ ನ್ಯಾಯ ದೊರಕಬೇಕು, ಅವರ ಸ್ವಾತಂತ್ರ್ಯ ಅಬಾಧಿತವಾಗಿ ಉಳಿಯ ಬೇಕೆಂದು ಸಂವಿಧಾನದಲ್ಲಿ ಅತ್ಯಂತ ಮಹತ್ವ ಪೂರ್ಣವಾದ ಉಪಾಯಯೋಜನೆಗಳನ್ನು ಮಾಡಲಾಗಿದೆ. ಸಾಮಾಜಿಕ ನ್ಯಾಯ ಮತ್ತು ಸಮತೆಯ ಮೇಲೆ ಆಧರಿಸಿದ ಒಂದು ಪ್ರಗತಿಪರವಾದ ವಿಕಸಿತ ಸಮಾಜ ನಿರ್ಮಾಣ ಮಾಡುವ ಒಂದು ಸಾಧನವೆಂದು ಭಾರತದ ಸಂವಿಧಾನದ ಕಡೆಗೆ ನೋಡಲಾಗುವದು. ಭಾರತದಲ್ಲಿ ಸಂವಿಧಾನಕ್ಕನುಸರಿಸಿ ರಾಜ್ಯಕಾರಭಾರ ಮಾಡಲು 26 ಜನೇವರಿ 1950ರಿಂದ ಪ್ರಾರಂಭವಾಯಿತು. ಅಂದಿನಿಂದ ಇಂದಿನವರೆಗೆ ಸಂವಿಧಾನದ ಆಧಾರದಿಂದ ಯಾವ ರಾಜ್ಯಕಾರಭಾರವಾಗಿದೆಯೋ ಅದರಿಂದ ಭಾರತದಲ್ಲಿಯ ಪ್ರಜಾಪ್ರಭುತ್ವದ ವ್ಯಾಪಕವಾಗುತ್ತ ಹೋದ ಸ್ವರೂಪ, ಭಾರತದಲ್ಲಿಯ ರಾಜಕೀಯ ಪ್ರಕ್ರಿಯೆಯಲ್ಲಾದ ಮಹತ್ವದ ಬದಲಾವಣೆ, ಸಾಮಾಜಿಕ ನ್ಯಾಯ ಮತ್ತು ಸಮತೆ ಪ್ರಸ್ಥಾಪಿಸಲು ಇಟ್ಟ ಹೆಜ್ಜೆಗಳು, ಮುಂತಾದವುಗಳ ಪುನರಾವ ಲೋಕನವನ್ನು ಪ್ರಸ್ತುತ ಪ್ರಕರಣದಲ್ಲಿ ನಾವು ಸ್ವಲ್ಪದರಲ್ಲಿ ತೆಗೆದುಕೊಳ್ಳುವವರಿದ್ದೇವೆ. ಈ ಆಶಯವು ಮೂರು ಅಂಶಗಳಿಗೆ ಮಾತ್ರ ಸೀಮಿತವಾಗಿದೆ. 1) ಪ್ರಜಾಪ್ರಭುತ್ವ 2) ಸಾಮಾಜಿಕ ನ್ಯಾಯ ಮತ್ತು ಸಮತೆ 3) ನ್ಯಾಯ ವ್ಯವಸ್ಥೆ

## ಪ್ರಜಾಪ್ರಭುತ್ವ

**ರಾಜಕೀಯ ಪರಿಪಕ್ವತೆ:** ಪ್ರಜಾಪ್ರಭುತ್ವ ಶಾಸನಪದ್ಧತಿಯ ಸಂರಚನೆ ಮಾತ್ರ ಇದ್ದರೆ ನಡೆಯದು. ಆ ಸಂರಚನೆಯ ಆಧಾರದಿಂದ ಪ್ರತ್ಯಕ್ಷ ವ್ಯವಹಾರ ನಡೆದರೇನೇ ಪ್ರಜಾಪ್ರಭುತ್ವವು ಸಮಾಜದ ರಾಜಕೀಯ ಜೀವನದ ಒಂದು ಅವಿಭಾಜ್ಯ ಅಂಗವಾಗುವುದು. ಅದಕ್ಕನುಸರಿಸಿ ನಮ್ಮ ದೇಶದಲ್ಲಿ ಜನರಿಗೆ ನೇರ ಪ್ರತಿನಿಧಿತ್ವ ಕೊಡುವ ಸಂಸತ್ತು, ರಾಜ್ಯ ವಿಧಾನಸಭೆ ಮತ್ತು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿವೆ. ಜನರ ಸಹಭಾಗದ ಮತ್ತು ರಾಜಕೀಯ ಸ್ಪರ್ಧೆಯ ವಿಚಾರ ಮಾಡಿದರೆ ಭಾರತದಲ್ಲಿಯ ಪ್ರಜಾಪ್ರಭುತ್ವವು ದೊಡ್ಡ ಪ್ರಮಾಣದಲ್ಲಿ ಯಶಸ್ವಿಯಾದದ್ದು ಕಂಡುಬರುವದು. ನಿಶ್ಚಿತ ಅವಧಿಯ ನಂತರ ಮುಕ್ತ ಮತ್ತು ನ್ಯಾಯವಾದ ವಾತಾವರಣದಲ್ಲಿ ಆಗುವ ಚುನಾವಣೆಗಳು ಇವು ಭಾರತದ ಪ್ರಜಾಪ್ರಭುತ್ವದ ಯಶಸ್ಸುಗಳು ಆಗಿವೆ. ಜನಸಂಖ್ಯೆ ಮತ್ತು ವಿಸ್ತಾರ ಇವೆರಡರಲ್ಲಿ ದೊಡ್ಡದಾದ ನಮ್ಮ ದೇಶದಲ್ಲಿ ವಿವಿಧ ಮಟ್ಟಗಳಲ್ಲಿ ಚುನಾವಣೆಗಳನ್ನು ತೆಗೆದು ಕೊಳ್ಳುವದು ಆವ್ಹಾನಾತ್ಮಕವಾಗಿದೆ. ಮೇಲಿಂದ ಮೇಲೆ ಆಗುವ ಚುನಾವಣೆಗಳಿಂದ ಭಾರತದ ಮತದಾರರ ರಾಜಕೀಯ ಅರಿವು ಪರಿಪಕ್ವವಾಗಲು ಸಹಾಯವಾಗಿದೆ. ಚುನಾವಣೆಯ ಸಂದರ್ಭದಲ್ಲಿ ಎದುರು ಬರುವ ಸಾರ್ವಜನಿಕ ಧೋರಣೆ ಮತ್ತು ಅನೇಕ ಪ್ರಶ್ನೆಗಳ ಕುರಿತು ಭಾರತದ ಮತದಾರರು ಪಾತ್ರವಹಿಸುತ್ತಿದ್ದಾರೆ. ಪ್ರಶ್ನೆಗಳ ಪರ್ಯಾಯಗಳ ವಿಚಾರಮಾಡಿ ಮತದಾನ ಮಾಡುವ ವೃತ್ತಿಯಲ್ಲಿ ಹೆಚ್ಚಳವಾಗಿದೆ.

**ಮತಾಧಿಕಾರ:** ಭಾರತದ ಸಂವಿಧಾನವು ಪ್ರೌಢ ಮತಾಧಿಕಾರದ ವ್ಯವಸ್ಥೆಯನ್ನು ಮಾಡಿಯೇ ಇತ್ತು. ಅದಕ್ಕನುಸರಿಸಿ ಮತಾಧಿಕಾರದ ವ್ಯಾಪ್ತಿಯು ಮೂಲದಲ್ಲಿಯೇ ವ್ಯಾಪಕವಾಗಿತ್ತು ಮತಾಧಿಕಾರದ ಸಂಕೋಚ ಮಾಡುವ ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಪ್ರಚಲಿತವಿದ್ದ ಎಲ್ಲ ವ್ಯವಸ್ಥೆಗಳನ್ನು ನಷ್ಟ ಮಾಡಿ ಸ್ವತಂತ್ರ ಭಾರತದಲ್ಲಿ ಪ್ರತಿಯೊಬ್ಬ ಸ್ತ್ರೀ ಪುರುಷರಿಗೆ 21 ವರ್ಷ ವಯಸ್ಸಿನ ಕರಾರನ್ನು ನಿಶ್ಚಿತಗೊಳಿಸಿ ಮತದಾನದ ಹಕ್ಕನ್ನು ಸಂವಿದಾನವು ನೀಡಿತ್ತು. ಅದನ್ನು ಮತ್ತಷ್ಟು ವ್ಯಾಪಕಗೊಳಿಸಿ ಮತದಾರರ ವಯಸ್ಸನ್ನು 21ರಿಂದ 18 ವರ್ಷಗಳವರೆಗೆ ತರಲಾಯಿತು. ಸ್ವತಂತ್ರ ಭಾರತದಲ್ಲಿಯ ಹೊಸ ಯುವವರ್ಗಕ್ಕೆ ಇದರಿಂದಾಗಿಯೇ ರಾಜಕೀಯ ಅವಕಾಶವು ಲಭಿಸಿತು. ಹೀಗೆ ಪ್ರಜಾಪ್ರಭುತ್ವದ ವ್ಯಾಪ್ತಿಯನ್ನು ಹೆಚ್ಚಿಸುವ ಬದಲಾವಣೆಗಳಿಂದ ಭಾರತದ ಪ್ರಜಾಪ್ರಭುತ್ವವು ಜಗತ್ತಿನಲ್ಲಿ ಎಲ್ಲಕ್ಕೂ ದೊಡ್ಡ ಪ್ರಜಾಪ್ರಭುತ್ವವೆಂದು ತಿಳಿಯಲಾಗುತ್ತದೆ. ಇಷ್ಟೊಂದು ಮತದಾರರ ಸಂಖ್ಯೆ ಅನ್ಯ ಯಾವುದೇ ಪ್ರಜಾಪ್ರಭುತ್ವವುಳ್ಳ ದೇಶದಲ್ಲಿ ದೊರೆಯುವದಿಲ್ಲ. ಈ ಬದಲಾವಣೆಯು ಕೇವಲ ಸಂಖ್ಯಾತ್ಮಕವಾಗಿರದೇ ಅದು ಗುಣಾತ್ಮಕವೂ ಆಗಿದೆ. ಹಲವಾರು ರಾಜಕೀಯ ಪಕ್ಷಗಳು ಈ ಯುವ ಮತದಾರರ ಬೆಂಬಲದಿಂದ ಸತ್ತೆಯ ಸ್ಪರ್ಧೆಯಲ್ಲಿ ಇಳಿದವು. ಭಾರತದಲ್ಲಿಯ ರಾಜಕೀಯ ಸ್ಪರ್ಧೆಯ ಸ್ವರೂಪವೂ ಸಹ ಇದರಿಂದ ಬದಲಾಗಿದೆ. ಜನರ ಆಶೆ-ಆಕಾಂಕ್ಷೆಗಳಿಗೆ ಪ್ರತಿನಿಧಿತ್ವವನ್ನು ಕೊಡುವ ಉದ್ದೇಶದಿಂದ ಇಂದು ಅನೇಕ ಪಕ್ಷಗಳು ಈ ಸ್ಪರ್ಧೆಯಲ್ಲಿ ಕಂಡು ಬರುವವು.

**ಪ್ರಜಾಪ್ರಭುತ್ವದ ವಿಕೇಂದ್ರಿಕರಣ:** ಅಧಿಕಾರದ ವಿಕೇಂದ್ರಿಕರಣ ಇದು ಪ್ರಜಾಪ್ರಭುತ್ವದ ತಿರುಳು ಆಗಿದೆ. ವಿಕೇಂದ್ರಿಕರಣದಿಂದ ಅಧಿಕಾರದ ದುರುಪಯೋಗಕ್ಕೆ ಹೇಗೆ ಪೆಟ್ಟು ಬೀಳುವದೋ ಹಾಗೆಯೇ ಸಾಮಾನ್ಯ ಜನತೆಗೆ ಆಡಳಿತದಲ್ಲಿ ಸಹಭಾಗಿಯಾಗುವ ಅವಸರಗಳೂ ದೊರಕುವವು. ಪ್ರಜಾಪ್ರಭುತ್ವದ ವಿಕೇಂದ್ರಿಕರಣದ ಸಂದರ್ಭದಲ್ಲಿ ಸಂವಿಧಾನದಲ್ಲಿಯ ಮಾರ್ಗದರ್ಶಕ ತತ್ವಗಳಲ್ಲಿ ಕೆಲವು ಏರ್ಪಾಡುಗಳನ್ನು ಮಾಡಲಾಗಿದೆ. ಸ್ಥಾನಿಕ ಮಟ್ಟದಲ್ಲಿಯ ಶಾಸನಸಂಸ್ಥೆಗಳಿಗೆ ಸಾಕಷ್ಟು ಅಧಿಕಾರವನ್ನು ನೀಡಿ ಅವುಗಳ ಮೂಲಕ ನಿಜವಾದ ಪ್ರಜಾಪ್ರಭುತ್ವವನ್ನು ಪ್ರತ್ಯಕ್ಷದಲ್ಲಿ ತರುವ ಪ್ರಯತ್ನ ಮಾಡಬೇಕು ಎಂಬ ಸ್ವರೂಪದ ಆ ಮಾರ್ಗದರ್ಶಕ ತತ್ವಗಳಿವೆ. ಅದಕ್ಕೆ ಅನುಸರಿಸಿ ಸ್ವತಂತ್ರ ಭಾರತದಲ್ಲಿ ಪ್ರಜಾಪ್ರಭುತ್ವ ವಿಕೇಂದ್ರಿಕರಣದ ಬಹಳ ಪ್ರಯತ್ನಗಳಾದವು. ಅದರಲ್ಲಿಯ ಎಲ್ಲಕ್ಕೂ ದೊಡ್ಡ ಪ್ರಯತ್ನವು 73 ಮತ್ತು 74ನೇ ಸಂವಿಧಾನ ತಿದ್ದುಪಡೆಯಾಗಿತ್ತು. ಈ ತಿದ್ದುಪಡೆಯಿಂದ ಸ್ಥಾನಿಕ ಸ್ವರಾಜ್ಯಸಂಸ್ಥೆಗಳಿಗೆ ಸಂವಿಧಾನದ ಮಾನ್ಯತೆ ದೊರಕಿದ್ದಲ್ಲದೆ ಅದಕ್ಕಿಂತ ಹೆಚ್ಚು ಅವರ ಅಧಿಕಾರದಲ್ಲಿ ಬಲು ದೊಡ್ಡ ಹೆಚ್ಚಳವಾಯಿತು.

**ಕೆಳಗಿನ ಬದಲಾವಣೆಗಳು ಯಾವುದರಿಂದಾದವು ಎಂಬುದನ್ನು ಹೇಳಬಲ್ಲಿರಾ?**

- ರಾಜ್ಯಕಾರಭಾರದಲ್ಲಿ ಮಹಿಳೆಯರ ಸಹಭಾಗ ಹೆಚ್ಚಾಗಲೆಂದು ಅವರಿಗಾಗಿ ಕಾಯ್ದಿರಿಸಿದ ಸ್ಥಳಗಳನ್ನು ಇಡಲಾಯಿತು.
- ದುರ್ಬಲ ಸಮಾಜ ಘಟಕಗಳಿಗೆ ಆಡಳಿತದಲ್ಲಿ ಸಹಭಾಗಿ ಆಗಲು ಬರಬೇಕೆಂದು ಅವರಿಗಾಗಿ ಮೀಸಲು ಸ್ಥಳಗಳನ್ನು ಇಡಲಾಯಿತು.
- ರಾಜ್ಯ ಚುನಾವಣಾ ಆಯೋಗದ ನಿರ್ಮಾಣ ಮಾಡಲಾಯಿತು.
- ಸಂವಿಧಾನದಲ್ಲಿ ಹನ್ನೊಂದು ಮತ್ತು ಹನ್ನೆರಡು ಹೀಗೆ ಎರಡು ಹೊಸ ಪರಿಶಿಷ್ಟಗಳನ್ನು ಸೇರಿಸಲಾಯಿತು.

**ಮಾಹಿತಿಯ ಅಧಿಕಾರ (RTI 2005) :** ಪ್ರಜಾಪ್ರಭುತ್ವದಲ್ಲಿ ನಾಗರಿಕರ ಸಕ್ಷಮಿಕರಣವು ಅನೇಕ ಮಾರ್ಗಗಳಿಂದ ಆಗಬೇಕು. ನಾಗರಿಕರಿಗೆ ಸಹಭಾಗದ ಅವಸರವನ್ನು ಕೊಡುತ್ತಿರುವಾಗಲೇ ಅವರೊಂದಿಗೆ ಇರುವ ಸರಕಾರದ ಸಂವಾದ ಹೆಚ್ಚಾಗಬೇಕು. ಸರಕಾರ ಮತ್ತು ನಾಗರಿಕ ಇವರಲ್ಲಿ ಎಷ್ಟು ಕಡಿಮೆ ಅಂತರ ಮತ್ತು ಸಂವಾದ ಹೆಚ್ಚೋ ಅಷ್ಟು ಪ್ರಜಾಪ್ರಭುತ್ವ ಪ್ರಕ್ರಿಯೆಯು ಸಾಮರ್ಥ್ಯ ಉಳ್ಳದ್ದು ಹಾಗೂ ಸುಧೃಡವಾಗುವದು. ಅವರಲ್ಲಿಯ ಪರಸ್ಪರ ವಿಶ್ವಾಸ ಹೆಚ್ಚಿಸಲು ಸರಕಾರ ಏನು ಮಾಡುವದು. ಎಂಬುದು ನಾಗರಿಕರಿಗೆ ತಿಳಿಯಬೇಕು. ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಇವು ಸುಶಾಸನದ ಎರಡು ವೈಶಿಷ್ಟ್ಯಗಳಾಗಿವೆ. ಇವನ್ನು ಪ್ರತ್ಯಕ್ಷವಾಗಿ ತರಲು ಭಾರತೀಯ ನಾಗರಿಕರಿಗೆ ಮಾಹಿತಿಯ ಅಧಿಕಾರವನ್ನು ಕೊಡಲಾಯಿತು. ಮಾಹಿತಿಯ ಅಧಿಕಾರದಿಂದ ಸರಕಾರದ ಆಡಳಿತದಲ್ಲಿಯ ಗುಪ್ತತೆಯು ಕಡಿಮೆಯಾಯಿತು ಮತ್ತು ಸರಕಾರದ ವ್ಯವಹಾರವು ಹೆಚ್ಚು ಸ್ಪಷ್ಟ ಮತ್ತು ಪಾರದರ್ಶಕವಾಗಲು ಸಹಾಯವಾಯಿತು.

ಇ.ಸ. 2000ರ ನಂತರದ ಕಾಲದಲ್ಲಿ ನಾಗರಿಕರಿಗಾಗಿ ಸುಧಾರಣೆ ಮಾಡುವಾಗ ಅದು ಅವರ ಹಕ್ಕು ಎಂದು, ಸುಧಾರಣೆ ಮಾಡುವದರ ಕಡೆಗೆ ಒಲವು ಹೆಚ್ಚಿತು.



**ನಿಮಗೆ ಗೊತ್ತಿದೆಯೇ?**

**ಹಕ್ಕುಗಳನ್ನು ಧರಿಸಿದ ದೃಷ್ಟಿಕೋನ (Rights based approach) :** ಸ್ವಾತಂತ್ರ್ಯದ ನಂತರದ ಕೆಲ ದಶಕಗಳಲ್ಲಿ ಭಾರತದಲ್ಲಿ ಪ್ರಜಾಪ್ರಭುತ್ವೀಕರಣವಾಗ ಬೇಕೆಂದು ಹಲವಾರು ಸುಧಾರಣೆಗಳಾದವು. ಆದರೆ ಅದರಲ್ಲಿ ನಾಗರಿಕರಕಡೆಗೆ 'ಲಾಭಾರ್ಥಿ' ಎಂದು ನೋಡುವ ದೃಷ್ಟಿ ಇತ್ತು. ಕಳೆದ ಕೆಲವು ದಶಕಗಳಲ್ಲಿಯ ದೃಷ್ಟಿಕೋನದಿಂದ ಮಾತ್ರ ಅದು ನಾಗರಿಕರ ಹಕ್ಕು ಆಗಿದೆ ಎಂಬ ಸುಧಾರಣೆಗಳು ಆಗುತ್ತಿವೆ.

ಈ ಪ್ರಕಾರದ ದೃಷ್ಟಿಕೋನದಿಂದ ಸರಕಾರ ಮತ್ತು ನಾಗರಿಕ ಇವರ ಸಂಬಂಧಗಳಲ್ಲಿ ಯಾವ ಬದಲಾವಣೆ ಆಗಬಹುದು ಎಂದು ನಿಮಗೆ ಅನಿಸುತ್ತದೆ?

**ಚರ್ಚೆ ಮಾಡಿರಿ**

ಭಾರತೀಯ ನಾಗರಿಕರಿಗೆ ವ್ಯವಸಾಯ ದೊರಕಿಸುವ ಹಕ್ಕು ಇರಬೇಕು ಎಂದು ನಿಮಗೆ ಅನ್ನಿಸುವದೇ?

ಎಲ್ಲರಿಗೂ ವಸತಿಯ ಹಕ್ಕು ದೊರೆತರೆ ನಮ್ಮ ದೇಶದಲ್ಲಿಯ ಪ್ರಜಾಪ್ರಭುತ್ವದ ಮೇಲೆ ಅದರಿಂದ ಯಾವ ಪರಿಣಾಮಗಳಾಗಬಹುದು ಎಂದು ನಿಮಗೆ ಅನಿಸುವುದು?

ಅದನ್ನನುಸರಿಸಿ ಮಾಹಿತಿಯ, ಶಿಕ್ಷಣದ ಮತ್ತು ಅನ್ನ ಸುರಕ್ಷೆಯ ಹಕ್ಕು ಭಾರತೀಯರಿಗೆ ದೊರಕಿದೆ. ಈ ಹಕ್ಕುಗಳಿಂದಾಗಿ ಭಾರತದಲ್ಲಿಯ ಪ್ರಜಾಪ್ರಭುತ್ವವು ನಿಶ್ಚಿತವಾಗಿ ಬಲಶಾಲಿಯಾಗಿದೆ.

## ಸಾಮಾಜಿಕ ನ್ಯಾಯ ಮತ್ತು ಸಮತೆ

ಸಾಮಾಜಿಕ ನ್ಯಾಯ ಮತ್ತು ಸಮತೆಗಳು ನಮ್ಮ ಸಂವಿಧಾನದ ಉದ್ದೇಶಗಳಾಗಿವೆ. ಈ ಎರಡೂ ಮೂಲ್ಯಗಳ ಮೇಲೆ ಆಧರಿಸಿದ ಒಂದು ಹೊಸ ಸಮಾಜ ನಿರ್ಮಾಣ ಮಾಡುವದು ಇದು ನಮ್ಮ ಧ್ಯೇಯವಾಗಿದೆ. ಸಂವಿಧಾನವು ಆ ದಿಶೆಯಲ್ಲಿ ಹೋಗುವ ಮಾರ್ಗವನ್ನು ಸ್ಪಷ್ಟಪಡಿಸಿದೆ ಮತ್ತು ದಿಶೆಯಲ್ಲಿ ನಮ್ಮ ಪ್ರಗತಿಯೂ ಆಗುತ್ತಲಿದೆ.

ಸಾಮಾಜಿಕ ನ್ಯಾಯ ಪ್ರಸ್ಥಾಪಿಸುವದೆಂದರೆ, ಯಾವ ಯಾವ ಸಾಮಾಜಿಕ ಸಂಗತಿಗಳಿಂದ ವ್ಯಕ್ತಿಗಳ ಮೇಲೆ ಅನ್ಯಾಯವಾಗುವದೋ ಅದನ್ನು ದೂರ ಮಾಡುವದು ಮತ್ತು ವ್ಯಕ್ತಿ ಎಂದು ಎಲ್ಲರ ದರ್ಜೆ ಸಮಾನವಿರುವದು ಎಂದು ಆಗ್ರಹ ಹಿಡಿಯುವದು. ಜಾತಿ, ಧರ್ಮ,ಭಾಷೆ, ಲಿಂಗ, ಜನ್ಮಸ್ಥಾನ, ವಂಶ, ಸಂಪತ್ತು ಮುಂತಾದವುಗಳ ಮೇಲಿಂದ ಶ್ರೇಷ್ಠ ಮತ್ತು ಕನಿಷ್ಠ ಎಂಬ ಭೇದ ಮಾಡದೇ ಇರುವದು ಮತ್ತು ಎಲ್ಲರಿಗೂ ವಿಕಾಸದ ಸಮಾನ ಅವಕಾಶವನ್ನು ದೊರಕಿಸಿಕೊಡುವದು. ಇದು ನ್ಯಾಯ ಮತ್ತು ಸಮತೆಯ ಉದ್ದೇಶವಾಗಿದೆ.

ಸಾಮಾಜಿಕ ನ್ಯಾಯ ಮತ್ತು ಸಮತೆಗಳನ್ನು ಪ್ರಸ್ಥಾಪಿಸಲು ಸಮಾಜದಲ್ಲಿ ಎಲ್ಲ ಹಂತಗಳಲ್ಲಿ ಪ್ರಯತ್ನ ಮಾಡಬೇಕಾಗುವದು, ಆದರೆ ಸರಕಾರದ ಧೋರಣೆಗಳಿಗೆ ಮತ್ತು ಅನ್ಯ ಪ್ರಯತ್ನಗಳಿಗೆ ವಿಶೇಷ ಮಹತ್ವವಿರುವದು. ಪ್ರಜಾಪ್ರಭುತ್ವವು ಹೆಚ್ಚೆಚ್ಚು ಸರ್ವ ಸಮಾವೇಶಕವಾಗಬೇಕಾದರೆ ಎಲ್ಲ ಸಾಮಾಜಿಕ ಘಟಕಗಳು ಮುಖ್ಯ ಪ್ರವಾಹದಲ್ಲಿ ಬರಬೇಕು. ಪ್ರಜಾಪ್ರಭುತ್ವ ಇದು ಎಲ್ಲ ಸಾಮಾಜಿಕ ಘಟಕಗಳನ್ನು ಸೇರ್ಪಡಿಸಿಕೊಳ್ಳುವ ಪ್ರಕ್ರಿಯೆಯಾಗಿದೆ. ಹಾಗೆಯೇ ಸಮಾವೇಶವುಳ್ಳ ಪ್ರಜಾಪ್ರಭುತ್ವದಿಂದ ಸಮಾಜದಲ್ಲಿಯ ಸಂಘರ್ಷಗಳೂ ಕಡಿಮೆಯಾಗುವವು ಈ ದೃಷ್ಟಿಯಿಂದ ನಮ್ಮ ದೇಶದಲ್ಲಿ ಯಾವ ಪ್ರಯತ್ನಗಳಾಗಿವೆ ಎಂಬುದನ್ನು ನೋಡೋಣ.

**ಮೀಸಲು ಸ್ಥಳಗಳ ಧೋರಣೆ:** ಯಾವ ಜನಸಮೂಹ ಅಥವಾ ಸಮಾಜ ಘಟಕಗಳು ಶಿಕ್ಷಣ ಮತ್ತು ಉದ್ಯೋಗಗಳ ಅವಕಾಶದಿಂದ ದೀರ್ಘಕಾಲದವರೆಗೆ ವಂಚಿತವಾಗಿವೆಯೋ ಸಮಾಜದ ಅಂತಹ ಘಟಕಗಳಿಗಾಗಿ ಮೀಸಲು ಸ್ಥಳಗಳ ಧೋರಣೆಯನ್ನು ಸ್ವೀಕರಿಸಲಾಯಿತು. ಅದರ ಪ್ರಕಾರ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗಾಗಿ ಶಿಕ್ಷಣ ಮತ್ತು ಸರಕಾರಿ ನೌಕರಿಗಳಲ್ಲಿ ಕೆಲಸ್ಥಳಗಳನ್ನು ಕಾಯ್ದಿರಿಸಲಾಗುವದು. ಹಾಗೆಯೇ ಇತರ ಹಿಂದುಳಿದ ವರ್ಗದವರಿಗೂ ಮೀಸಲು ಸ್ಥಳಗಳ ವ್ಯವಸ್ಥೆ ಮಾಡಲಾಗಿದೆ.

**ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರ ಮೇಲಾಗುವ ಅತ್ಯಾಚಾರಗಳಿಂದ ಸಂರಕ್ಷಣೆ ನೀಡುವ ಕಾಯ್ದೆ:**

ಸಾಮಾಜಿಕ ನ್ಯಾಯ ಮತ್ತು ಸಮತೆಯನ್ನು ಪ್ರಸ್ಥಾಪಿಸುವ ದೃಷ್ಟಿಯಿಂದ ಈ ಒಂದು ಮಹತ್ವದ ಕಾಯ್ದೆಯನ್ನು ಜಾರಿಗೆ ತರಲಾಯಿತು. ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ವ್ಯಕ್ತಿಗಳ ಮೇಲೆ ಯಾವುದೇ ರೀತಿಯ ಅನ್ಯಾಯ ಮಾಡಲು ಈ ಕಾಯ್ದೆಯ ಮೂಲಕ ನಿರ್ಬಂಧ ಹೇರಲಾಗಿದ್ದು,



**ಮಾಡಿ ನೋಡಿರಿ.**

ಮೇಲಿನ ಕಾಯ್ದೆಯಲ್ಲಿಯ ವ್ಯವಸ್ಥೆಗಳನ್ನು ಓದಿರಿ. ಶಿಕ್ಷಕರ ಸಹಾಯದಿಂದ ಅವುಗಳನ್ನು ತಿಳಿದುಕೊಳ್ಳಿರಿ. ಅತ್ಯಾಚಾರವಾಗಲೇಬಾರದೆಂದು ಯಾವ ಪ್ರಯತ್ನಗಳ ಅವಶ್ಯಕತೆ ಇದೆ?

ಅತ್ಯಾಚಾರವೆಸಗಿದರೆ ಶಿಕ್ಷೆಯ ಏರ್ಪಾಡು ಮಾಡಲಾಗಿದೆ.

**ಅಲ್ಪ ಸಂಖ್ಯಾತರ ಕುರಿತಾದ ಏರ್ಪಾಡು:** ಭಾರತೀಯ ಸಂವಿಧಾನವು ಅಲ್ಪ ಸಂಖ್ಯಾತರ ಸಂರಕ್ಷಣೆ ಮಾಡಲು ಹಲವಾರು ಏರ್ಪಾಡುಗಳನ್ನು ಮಾಡಿದೆ. ಅಲ್ಪ ಸಂಖ್ಯಾತರಿಗೆ ಶಿಕ್ಷಣದ ಮತ್ತು ವ್ಯವಸಾಯಗಳ ಅವಕಾಶ ದೊರಕಿಸಲು ಸರಕಾರವು ಹಲವಾರು ಯೋಜನೆಗಳನ್ನು ಕೈಗೊಂಡಿದೆ. ಭಾರತೀಯ ಸಂವಿಧಾನವು ಜಾತಿ, ಧರ್ಮ, ವಂಶ, ಭಾಷೆ ಮತ್ತು ಪ್ರದೇಶ ಮುಂತಾದ ಘಟಕಗಳನ್ನಾಧರಿಸಿ ಭೇದಭಾವ ಮಾಡಲು ಪ್ರತಿಬಂಧಿಸಿದೆ. ಅಲ್ಪ ಸಂಖ್ಯಾತರ ಕುರಿತು ಇವು ವ್ಯಾಪಕ ಏರ್ಪಾಡುಗಳಾಗಿದ್ದು ಸಮತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು ಮತ್ತು ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳಿಂದ ಅಲ್ಪ ಸಂಖ್ಯಾಕರರಿಗೆ ಮೂಲಭೂತ ಸ್ವರೂಪದ ಸಂರಕ್ಷಣೆ ದೊರಕಿದೆ.

**ಮಹಿಳೆಯರ ಕುರಿತಾದ ಕಾಯ್ದೆ ಮತ್ತು ಪ್ರತಿನಿಧಿತ್ವ ವಿಷಯದಲ್ಲಿಯ ಏರ್ಪಾಡುಗಳು:** ಸ್ವಾತಂತ್ರ್ಯೋತ್ತರ ಕಾಲದಿಂದ ಮಹಿಳಾ ಸಕ್ಷಮೀಕರಣದ ಪ್ರಯತ್ನಗಳು ಪ್ರಾರಂಭವಾದವು. ಮಹಿಳೆಯರಲ್ಲಿಯ ನಿರಕ್ಷರತೆ ದೂರ ಮಾಡುವದು, ಅವರಿಗೆ ವಿಕಾಸದ ಸಾಕಷ್ಟು ಸೌಲಭ್ಯಗಳನ್ನು ಕೊಡುವದು. ಇದಕ್ಕಾಗಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಮಹಿಳೆಯರ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಕೆಲವು ಧೋರಣೆಗಳನ್ನು ನಿಶ್ಚಿತಗೊಳಿಸಲಾಯಿತು.

ಮಹಿಳೆಯರಿಗೆ ತಂದೆಯ ಮತ್ತು ಗಂಡನ ಸಂಪತ್ತಿನಲ್ಲಿ ಸಮಾನ ಪಾಲು, ವರದಕ್ಷಿಣೆ ಪ್ರತಿಬಂಧಕ ಕಾಯ್ದೆ, ಲೈಂಗಿಕ ಅತ್ಯಾಚಾರದಿಂದ ಸಂರಕ್ಷಣೆ ಕೊಡುವ ಕಾಯ್ದೆ, ಕೌಟುಂಬಿಕ ಹಿಂಸಾಚಾರ ಪ್ರತಿಬಂಧಕ ಕಾಯ್ದೆ ಹೀಗೆ ಕೆಲವು ಮಹತ್ವಪೂರ್ಣವಾದ ಏರ್ಪಾಡಿನಿಂದ ಮಹಿಳೆಯರಿಗೆ ಅವರ ಸ್ವಾತಂತ್ರ್ಯವನ್ನು ರಕ್ಷಿಸಲು ಮತ್ತು ಸ್ವಂತ:ದ ವಿಕಾಸ ಸಾಧಿಸಲು ಅನುಕೂಲ ವಾತಾವರಣಗಳನ್ನು ನಿರ್ಮಾಣ ಮಾಡಲಾಗಿದೆ.

ನಮ್ಮ ದೇಶದಲ್ಲಿ ರಾಜಕಾರಣ ಮತ್ತು ರಾಜಕೀಯ ಸಂಸ್ಥೆ ಇವುಗಳಲ್ಲಿಯ ಸ್ತ್ರೀಯರ ಪ್ರತಿನಿಧಿತ್ವವು

ಪ್ರಾರಂಭದಿಂದಲೇ ಕಡಿಮೆಯಾಗಿದೆ. ಜಗತ್ತಿನಲ್ಲಿಯ ಅನೇಕ ದೇಶಗಳು ಮಹಿಳೆಯರ ಪ್ರತಿನಿಧಿತ್ವವನ್ನು ಹೆಚ್ಚಿಸಲು ಪ್ರಯತ್ನಿಸಿವೆ. ಭಾರತದಲ್ಲಿಯೂ ಈ ನಿಟ್ಟಿನಲ್ಲಿ ಬದಲಾವಣೆಯಾಗುತ್ತಲಿದೆ. 73ನೆಯ ಮತ್ತು 74ನೆಯ ಸಂವಿಧಾನ ತಿದ್ದುಪಡೆಯಿಂದ ಸ್ಥಾನಿಕ ಸರಕಾರಿ ಸಂಸ್ಥೆಗಳಲ್ಲಿ ಮಹಿಳೆಯರಿಗಾಗಿ 33% ಸ್ಥಳಗಳನ್ನು ಕಾಯ್ದಿರಿಸಲಾಗಿದೆ. ನಂತರ ಈ ಪ್ರಮಾಣವನ್ನು ಮಹಾರಾಷ್ಟ್ರದೊಂದಿಗೆ ಅನೇಕ ರಾಜ್ಯಗಳಲ್ಲಿ 50%ದ ವರೆಗೆ ಹೆಚ್ಚಿಸಲಾಗಿದೆ. ಮಹಿಳೆಯರಿಗಾಗಿ ರಾಷ್ಟ್ರೀಯ ಮಹಿಳಾ ಆಯೋಗದ ಸ್ಥಾಪನೆ ಮಾಡಲಾಗಿದೆ. ರಾಜ್ಯಗಳಲ್ಲಿಯೂ ರಾಜ್ಯ ಮಹಿಳಾ ಆಯೋಗವಿದೆ.

ಮನೆ ಮನೆಗಳಲ್ಲಿಯ ಹಿಂಸಾಚಾರದಿಂದ ಮಹಿಳೆಯರಿಗೆ ಸಂರಕ್ಷಣೆ ಕೊಡುವ ಕಾಯ್ದೆ ಇದು ಪ್ರಜಾಪ್ರಭುತ್ವಕ್ಕೆ ಪೋಷಕವಾದ ಮಹತ್ವದ ಹೆಜ್ಜೆಯಾಗಿದೆ. ಸ್ತ್ರೀಯ ಪ್ರತಿಷ್ಠೆ ಮತ್ತು ಆತ್ಮಸನ್ಮಾನ ಕಾಪಾಡುವ ಅವಶ್ಯಕತೆಯನ್ನು ಈ ಕಾಯ್ದೆಯು ಅಧೋರೇಖಿತ ಗೊಳಿಸಿತು. ಪಾರಂಪರಿಕ ವರ್ಚಸ್ಸು ಮತ್ತು ಅಧಿಕಾರವನ್ನು ತಿರಸ್ಕರಿಸುವ ಈ ನಿರ್ಣಯದಿಂದ ಭಾರತೀಯ ಪ್ರಜಾಪ್ರಭುತ್ವದ ಅಧಿಕಾರ ಹೆಚ್ಚಿಸಿತು ಅದರ ಸಮಾವೇಶವನ್ನು ಹೆಚ್ಚು ಅರ್ಥಪೂರ್ಣ ಮಾಡಿತು.



**ಮಾಡಿ ನೋಡಿರಿ**

### ಲೋಕಸಭೆಯಲ್ಲಿಯ ಮಹಿಳೆಯರ ಪ್ರತಿನಿಧಿತ್ವ

| ಕ್ರಮಾಂಕ | ವರ್ಷ | ಮಹಿಳಾ ಸಂಸದ ಸದಸ್ಯರು ಸಂಖ್ಯಾ | ಮಹಿಳಾ ಸಂಸದ ಸದಸ್ಯರು ಶೇಕಡಾವಾರು |
|---|---|---|---|
| 1. | 1951-52 | 22 | 4.50% |
| 2. | 1957 | 22 | 4.45% |
| 3. | 1962 | 31 | 6.28% |
| 4. | 1967 | 29 | 5.58% |
| 5. | 1971 | 28 | 5.41% |
| 6. | 1977 | 19 | 3.51% |
| 7. | 1980 | 28 | 5.29% |
| 8. | 1984 | 43 | 7.95% |
| 9. | 1989 | 29 | 5.48% |
| 10. | 1991 | 39 | 7.30% |
| 11. | 1996 | 40 | 7.37% |
| 12. | 1998 | 43 | 7.92% |
| 13. | 1999 | 49 | 9.02% |
| 14. | 2004 | 45 | 8.29% |
| 15. | 2009 | 59 | 10.87% |
| 16. | 2014 | 66 | 12.15% |

ಪಕ್ಕದ ಕೋಷ್ಟಕವನ್ನು ಕಾಳಜಿಪೂರ್ವಕವಾಗಿ ಓದಿರಿ ಮತ್ತು ಕೊಟ್ಟ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

- ಎಲ್ಲಕ್ಕೂ ಕಡಿಮೆ ಮಹಿಳಾ ಸಂಸದ ಸದಸ್ಯರ ಸಂಖ್ಯೆ ಯಾವ ವರ್ಷದ ಚುನಾವಣೆಯಲ್ಲಿ ಕಂಡು ಬರುವದು?
- ಎಲ್ಲಕ್ಕೂ ಹೆಚ್ಚು ಮಹಿಳಾ ಸಂಸದ ಸದಸ್ಯರ ಸಂಖ್ಯೆ ಯಾವ ವರ್ಷದ ಚುನಾವಣೆಯಲ್ಲಿ ಕಂಡು ಬರುವದು.
- ಕೋಷ್ಟಕದಲ್ಲಿಯ ಮಾಹಿತಿಯ ಆಧಾರದಿಂದ ಲೋಕಸಭಾ ಚುನಾವಣೆಯಲ್ಲಿಯ ಮಹಿಳಾ ಸಂಸದ ಸದಸ್ಯರ (1951-2014) ವೃತ್ತಾಲೇಖ (Pie Chart)/ಸ್ತಂಭಾಲೇಖ (Bar Chart) ಸಿದ್ಧ ಪಡಿಸಿರಿ

**ನಿಮಗೆ ಏನು ಅನಿಸುವದು?**

ಸಾರ್ವಜನಿಕ ಜೀವನದಲ್ಲಿಯ ಮಹಿಳೆಯರ ದೃಶ್ಯಮಾನತೆ (visibility) ಕಡಿಮೆಯೇ ಉಳಿದಿದೆ. ಕುಟುಂಬ ರಚನೆ, ಸಾಮಾಜಿಕ ಪರಿಸರ ಆರ್ಥಿಕ ಕ್ಷೇತ್ರ ಮತ್ತು ರಾಜಕೀಯ ಅವಕಾಶಗಳು ಹೆಚ್ಚೆಚ್ಚು ಸಿಗುತ್ತ ಹೋದರೆ ಮಹಿಳೆಯರಿಗೆ ನಿರ್ಣಯ ಪ್ರಕ್ರಿಯೆಯಲ್ಲಿ ಭಾಗವಹಿಸಿ ಒಟ್ಟು ರಾಜ್ಯಕಾರಭಾರಕ್ಕೆ ಬೇರೆ ದಿಶೆಕೊಡುವ ಅವಸರ ಸಿಗಬಹುದು. ಇದಕ್ಕಾಗಿ ಪ್ರಾತಿನಿಧಿಕ ಸಂಸ್ಥೆಗಳಲ್ಲಿ ಮಹಿಳೆಯರ ಸಹಭಾಗ ಹೆಚ್ಚಾಗಬೇಕು.

## ನ್ಯಾಯಾಲಯದ ಪಾತ್ರ

ಪ್ರಜಾಪ್ರಭುತ್ವವನ್ನು ಬಲಶಾಲಿಯಾಗಿ ಮಾಡುವ ಪ್ರಕ್ರಿಯೆಯಲ್ಲಿ ಮತ್ತು ಸಾಮಾಜಿಕ ನ್ಯಾಯ ಮತ್ತು ಸಮತೆ ಈ ಉದ್ದೇಶಗಳ ದಿಶೆಯಲ್ಲಿ ದೇಶದ ಪ್ರಗತಿ ಮಾಡುವಲ್ಲಿ ಭಾರತದಲ್ಲಿಯ ನ್ಯಾಯಾಲಯಗಳ ಪಾತ್ರವೂ ಬಹಳ ಮಹತ್ವದ್ದಾಗಿದೆ. ನ್ಯಾಯಾಲಯವು ಸಂವಿಧಾನದಲ್ಲಿಯ ವ್ಯವಸ್ಥೆಗಳ ಅರ್ಥ ಹೇಳುವಾಗ ಸಂವಿದಾನದ ಮೂಲ ಉದ್ದೇಶಗಳು ಮತ್ತು ಸಂವಿಧಾನಕಾರರ ಉದ್ದೇಶ ಇವುಗಳಿಗೆ ಪ್ರಾಧಾನ್ಯತೆ ಕೊಟ್ಟಿದೆ.

ನ್ಯಾಯಾಲಯದ ಈ ಸಂದರ್ಭದಲ್ಲಿಯ ಕೊಡುಗೆಯನ್ನು ನಾವು ಕೆಳಗಿನ ಅಂಶಗಳ ಸಹಾಯದಿಂದ ತಿಳಿದುಕೊಳ್ಳೋಣ.

**(1) ಸಂವಿಧಾನದ ಮೂಲಭೂತ ಚೌಕಟ್ಟು:** ಸಂವಿಧಾನವು ಪ್ರವಾಹಿಯಾಗಿರುವದು ಯಾವುದೇ ಜೀವಂತ ದಸ್ತಾವೇಜಿನಂತೆ (living document) ಅದರ ಸ್ವರೂಪವಿರುವದು. ಪರಿಸ್ಥಿತಿಗೆ ಅನುಸರಿಸಿ ಸಂವಿಧಾನದಲ್ಲಿ ಬದಲಾವಣೆ ಮಾಡಬೇಕಾಗುವದು ಮತ್ತು ಆ ಅಧಿಕಾರ ಅರ್ಥಾತ ಸಂಸತ್ತಿಗಿದೆ. ಸಂಸತ್ತಿನ ಈ ಅಧಿಕಾರವನ್ನು ಮನ್ನಿಸುತ್ತ ನ್ಯಾಯಾಲಯವು ಸಂಸತ್ತಿಗೆ ಅದರ ಅಧಿಕಾರದ ಮೇಲಿನ ಮರ್ಯಾದೆಗಳ ಅರಿವು ಮಾಡಿಕೊಟ್ಟಿದೆ. ಸಂವಿಧಾನದಲ್ಲಿ ತಿದ್ದುಪಡೆ ಮಾಡುವಾಗ ಸಂವಿಧಾನದ ಮೂಲಭೂತ ಚೌಕಟ್ಟಿಗೆ (Basic structure of the Constitution) ಸಂಸತ್ತಿಗೆ ಧಕ್ಕೆ ಹಚ್ಚಲು ಬರುವದಿಲ್ಲವೆಂಬ ನಿರ್ಧಾರವನ್ನು ನ್ಯಾಯಾಲಯವು ತೆಗೆದುಕೊಂಡಿದೆ.

**ಇದನ್ನೂ ತಿಳಿದುಕೊಳ್ಳಿರಿ !**

ಸಂವಿಧಾನದ ಮೂಲಭೂತ ಚೌಕಟ್ಟಿನಲ್ಲಿ ಸಾಧಾರಣವಾಗಿ ಮುಂದಿನ ಏರ್ಪಾಡುಗಳ ಸಮಾವೇಶವಾಗುವದು.

- ಸರಕಾರದ ಪ್ರಜಾಸತ್ತಾಕ ಮತ್ತು ಪ್ರಜಾಪ್ರಭುತ್ವ ಸ್ವರೂಪ
- ಸಂವಿಧಾನದ ಸಂಘರಾಜ್ಯಾತ್ಮಕ ಸ್ವರೂಪ
- ದೇಶದ ಐಕ್ಯ ಮತ್ತು ಏಕಾತ್ಮತೆಯ ಸಂವರ್ಧನೆ
- ದೇಶದ ಸಾರ್ವಭೌಮತ್ವ
- ಧರ್ಮನಿರಪೇಕ್ಷತೆ ಮತ್ತು ಸಂವಿಧಾನದ ಸರ್ವಶ್ರೇಷ್ಠತೆ

**(2) ನ್ಯಾಯಾಲಯದ ಮಹತ್ವಪೂರ್ಣ ನಿರ್ಣಯ:** ಸಂವಿಧಾನದಲ್ಲಿಯ ಮೂಲಭೂತ ಹಕ್ಕುಗಳ ಮೂಲಕ ನಾಗರಿಕರಿಗೆ ದೊರೆತ ಸಂರಕ್ಷಣೆ ಹೆಚ್ಚು ಅರ್ಥಪೂರ್ಣ ಮಾಡುವ ದೃಷ್ಟಿಯಿಂದ ನ್ಯಾಯಾಲಯವು ಅನೇಕ ನಿರ್ಣಯಗಳನ್ನು ನೀಡಿದೆ. ನ್ಯಾಯಾಲಯವು ಯಾವ ಕೆಲವು ಮಹತ್ವದ ವಿಷಯಗಳ ಮೇಲೆ ನಿರ್ಣಯ ಕೊಟ್ಟಿದೆಯೋ ಅವುಗಳಲ್ಲಿ ಬಾಲಕರ ಹಕ್ಕು, ಮಾನವೀ ಹಕ್ಕುಗಳ ರಕ್ಷಣೆ, ಮಹಿಳೆಯರ ಪ್ರತಿಷ್ಠೆ ಮತ್ತು ಸನ್ಮಾನ ಕೊಡುವ ಅವಶ್ಯಕತೆ, ವ್ಯಕ್ತಿ ಸ್ವಾತಂತ್ರ್ಯ, ಆದಿವಾಸಿ ಸಬಲೀಕರಣ ಇಂತಹ ವಿಷಯಗಳ ಸಮಾವೇಶ ಮಾಡಲು ಬರುವುದು. ನ್ಯಾಯಾಲಯದ ಈ ವಿಷಯಗಳ ಮೇಲಿನ ನಿರ್ಣಯದಿಂದ ಭಾರತದಲ್ಲಿಯ ರಾಜಕೀಯ ಪ್ರಕ್ರಿಯೆ ಪರಿಪಕ್ವವಾಗಲು ಸಹಾಯವಾಗಿದೆ.

**ತಿಳಿದುಕೊಳ್ಳಿರಿ! ಸ್ವಲ್ಪ ಮಹತ್ವದ್ದಾಗಿದೆ**

ಪ್ರಜಾಪ್ರಭುತ್ವಕ್ಕಾಗಿ ಒಳ್ಳೆಯ ಆಡಳಿತ ಇಲ್ಲವೆ ಒಳ್ಳೆಯ ಆಡಳಿತದ ವ್ಯವಹಾರ ಮಾಡುವದು ಅವಶ್ಯಕವಿರುವದು. ಅದಕ್ಕಾಗಿ ಕೆಳಗಿನ ವೈಶಿಷ್ಟ್ಯಗಳ ಸಮಾವೇಶ ಅವಶ್ಯಕವಿರುವದು. ಸುಆಡಳಿತದ ಈ ವೈಶಿಷ್ಟ್ಯಗಳನ್ನು ಪ್ರಜಾಪ್ರಭುತ್ವದಲ್ಲಿ ತರಲು ಏನು ಮಾಡಬೇಕಾಗುವದು?

- ಉತ್ತರದಾಯಿತ್ವ/ಹೊಣೆಗಾರಿಕೆ ಅರಿಯುವ ಸರಕಾರ
- ಪ್ರಭಾವಉಳ್ಳ ಮತ್ತು ಕಾರ್ಯಕ್ಷಮ ಸರಕಾರ
- ಪ್ರತಿಸಾದಾತ್ಮಕ ಸರಕಾರ
- ಪಾರದರ್ಶಕ ಕಾರ್ಯಕಲಾಪ
- ನ್ಯಾಯ ಮತ್ತು ಸರ್ವಸಮಾವೇಶವಿರುವ ವಿಕಾಸ
- ಶಾಸಕೀಯ ವ್ಯವಸ್ಥೆಯಲ್ಲಿ ಮತ್ತು ನಿರ್ಣಯ ಪ್ರಕ್ರಿಯೆಯಲ್ಲಿ ಜನರ ಸಹಭಾಗ

**ತಿಳಿದುಕೊಳ್ಳಿರಿ !**

ಸರ್ವೋಚ್ಚ ನ್ಯಾಯಾಲಯವು ಇತ್ತೀಚಿನ ಕೆಲವು ವರ್ಷಗಳಲ್ಲಿ ಮೇಲಿನ ವಿಷಯದ ಮೇಲೆ ಯಾವ ನಿರ್ಣಯ ಕೊಟ್ಟಿದೆ ಅದನ್ನು ಹುಡುಕಿರಿ ಮತ್ತು ಅದರ ಮೇಲೆ ಚರ್ಚೆ ಮಾಡಿರಿ.

ಭಾರತದಲ್ಲಿಯ ಪ್ರಜಾಪ್ರಭುತ್ವದ ಸಂದರ್ಭದಲ್ಲಿ ಸಂವಿಧಾನ ಮತ್ತು ಅದನ್ನು ಆಧರಿಸಿದ ಸರಕಾರವು ಮಾಡಿದ ಮುನ್ನಡೆ ಇವುಗಳನ್ನು ನಾವು ಇಲ್ಲಿ ಅಭ್ಯಸಿಸಿದ್ದೇವೆ. ಆದಾಗ್ಯೂಭಾರತದ ಪ್ರಜಾಪ್ರಭುತ್ವದ ಮುಂದೆ ಅನೇಕ ಆವ್ಹಾನಗಳಿವೆ. ಸರಕಾರದ ಕಾಯ್ದೆಗಳಿಂದ ಮತ್ತು ಧೋರಣೆಗಳಿಂದ ಎಲ್ಲ ಸಮಸ್ಯೆಗಳು ಕೊನೆಗೊಂಡಿವೆ, ಎಂದು ಇದರ ಅರ್ಥವಿಲ್ಲ, ಇಂದಿಗೂ ನಮ್ಮೆದುರು ಅನೇಕ ಹೊಸ ಪ್ರಶ್ನೆಗಳಿವೆ, ಆದರೆ ಪ್ರಜಾಪ್ರಭುತ್ವಕ್ಕಾಗಿ ಅವಶ್ಯವಾದ ಜನರ ವಿಚಾರಗಳು ಸಾವಕಾಶವಾಗಿ ರೂಪುಗೊಂಡಿವೆ.

ಮುಂದಿನ ಪಾಠದಲ್ಲಿ ನಾವು ಭಾರತದಲ್ಲಿಯ ಚುನಾವಣಾ ಪ್ರಕ್ರಿಯೆ ಕುರಿತು ಮಾಹಿತಿ ಪಡೆಯುವವರಿದ್ದೇವೆ.



## ಅಭ್ಯಾಸ

**1. ಕೆಳಗಿನ ಯೋಗ್ಯ ಪರ್ಯಾಯವನ್ನಾಯ್ದು ಬಿಟ್ಟ ಸ್ಥಳವನ್ನು ತುಂಬಿ ವಾಕ್ಯಗಳನ್ನು ಪೂರ್ಣಗೊಳಿಸಿರಿ.**

(1) ಮಹಾರಾಷ್ಟ್ರದಲ್ಲಿ ಸ್ಥಾನಿಕ ಸರಕಾರ ಸಂಸ್ಥೆಗಳಲ್ಲಿ ಮಹಿಳೆಯರಿಗಾಗಿ .......... ಸ್ಥಳಗಳನ್ನು ಮೀಸಲಾಗಿ ಇಡಲಾಗಿದೆ

(ಅ) 25% (ಬ) 30%

(ಕ) 40% (ಡ) 50%

(2) ಮುಂದಿನ ಯಾವ ಕಾಯ್ದೆಯ ಮೂಲಕ ಮಹಿಳೆಯರಿಗೆ ಅವರ ಸ್ವಾತಂತ್ರ್ಯ ರಕ್ಷಿಸಲು ಮತ್ತು ಸ್ವತ:ದ ವಿಕಾಸ ಸಾಧಿಸಲು ಅನುಕೂಲ ವಾತಾವರಣ ನಿರ್ಮಾಣ ಮಾಡಲಾಗಿದೆ? ........

(ಅ) ಮಾಹಿತಿಯ ಅಧಿಕಾರದ ಕಾಯ್ದೆ

(ಬ) ವರದಕ್ಷಿಣೆ ಪ್ರತಿಬಂಧಕ ಕಾಯ್ದೆ

(ಕ) ಆಹಾರ ಸುರಕ್ಷಾ ಕಾಯ್ದೆ

(ಡ) ಇವುಗಳಲ್ಲಿ ಯಾವುದೂ ಇಲ್ಲ

(3) ಪ್ರಜಾಪ್ರಭುತ್ವದ ತಿರುಳು ಅಂದರೆ ........

(ಅ) ಪ್ರೌಢ ಮತದಾನ ಅಧಿಕಾರ

(ಬ) ಆಡಳಿತದ ವಿಕೇಂದ್ರಿಕರಣ

(ಕ) ಮೀಸಲು ಸ್ಥಳಗಳ ಧೋರಣೆ

(ಡ) ನ್ಯಾಯಾಲಯದ ನಿರ್ಣಯ

**2. ಕೆಳಗಿನ ವಿಧಾನಗಳು ಸರಿಯೋ, ತಪ್ಪೋ ಎಂಬುದನ್ನು ಕಾರಣ ಕೊಟ್ಟು ಸ್ಪಷ್ಟ ಪಡಿಸಿರಿ.**

(1) ಭಾರತದ ಪ್ರಜಾಪ್ರಭುತ್ವವು ಜಗತ್ತಿನಲ್ಲಿ ಎಲ್ಲಕ್ಕೂ ದೊಡ್ಡ ಪ್ರಜಾಪ್ರಭುತ್ವವೆಂದು ತಿಳಿಯಲಾಗುತ್ತದೆ.

(2) ಮಾಹಿತಿಯ ಅಧಿಕಾರದಿಂದ ಸರಕಾರದ ಕಾರಭಾರದಲ್ಲಿಯ ಗುಪ್ತತೆಯು ಹೆಚ್ಚಾಗಿದೆ.

(3) ಸಂವಿಧಾನದ ಸ್ವರೂಪವು ಒಂದು ದಸ್ತಾವೇಜಿನಂತೆ ಇರುವದು.

**3. ಮುಂದಿನ ಸಂಕಲ್ಪನೆಗಳನ್ನು ಸ್ಪಷ್ಟ ಪಡಿಸಿರಿ.**

(1) ಹಕ್ಕುಗಳ ಆಧಾರಿತ ದೃಷ್ಟಿಕೋನ.

(2) ಮಾಹಿತಿಯ ಅಧಿಕಾರ.

(3) ಲೋಕಸಭೆಯಲ್ಲಿ ಮಹಿಳೆಯರ ಪ್ರತಿನಿಧಿತ್ವ

**4. ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

(1) ಮತದಾರರ ವಯಸ್ಸು 21ರಿಂದ 18 ವರ್ಷ ಮಾಡಿದ್ದರಿಂದ ಯಾವ ಪರಿಣಾಮವಾಗಿವೆ?

(2) ಸಾಮಾಜಿಕ ನ್ಯಾಯ ಪ್ರಸ್ಥಾಪಿಸುವದು ಎಂದರೆ ಏನು?

(3) ನ್ಯಾಯಾಲಯವು ಕೊಟ್ಟ ಯಾವ ಯಾವ ನಿರ್ಣಯದಿಂದ ಮಹಿಳೆಯರ ಸನ್ಮಾನ ಮತ್ತು ಪ್ರತಿಷ್ಠೆಯ ರಕ್ಷಣೆ ಆಗಿದೆ?

### ಉಪಕ್ರಮ

(1) ಮಾಹಿತಿಯ ಅಧಿಕಾರದಿಂದ ಯಾವ ಪ್ರಕಾರದ ಮಾಹಿತಿಯನ್ನು ದೊರಕಿಸಲು ಬರುವದು, ಎಂಬುದರ ಬಗೆಗೆ ಶಿಕ್ಷಕರ ಸಹಾಯದಿಂದ ಮಾಹಿತಿಯನ್ನು ದೊರಕಿಸಿಕೊಳ್ಳಿರಿ.

(2) ಅಲ್ಪ ಸಂಖ್ಯಾಕ ವಿದ್ಯಾರ್ಥಿಗಳಿಗಾಗಿ ಸರಕಾರವು ಯಾವ ರಿಯಾಯತು-ಸೌಲಭ್ಯಗಳನ್ನು ಕೊಡುವದು ಎಂಬುದರ ಯಾದಿಯನ್ನು ತಯಾರಿಸಿರಿ.

(3) ರಾಷ್ಟ್ರೀಯ ಚುನಾವಣಾ ಆರೋಗದ ಅಧಿಕೃತ ಸಂಕೇತ ಸ್ಥಳಕ್ಕೆ ಭೇಟಿ ನೀಡಿ ಆಕುರಿತು ಹೆಚ್ಚಿನ ಮಾಹಿತಿಯನ್ನು ದೊರಕಿಸಿಕೊಳ್ಳಿರಿ.

(4) ತಮ್ಮ ಪರಿಸರದಲ್ಲಿಯ ಸ್ಥಾನಿಕ ಆಡಳಿತ ಸಂಸ್ಥೆಗಳಲ್ಲಿ ಪ್ರತಿನಿಧಿತ್ವ ಮಾಡುವ ಮಹಿಳಾ ಪ್ರತಿನಿಧಿಗಳ ಭೇಟಿ ಮಾಡಿ ಅವರ ಸಂದರ್ಶನ ಪಡೆಯಿರಿ.

4V4HCR

# 2. ಚುನಾವಣಾ ಪ್ರಕ್ರಿಯೆ

ಭಾರತದ ಪ್ರಜಾಪ್ರಭುತ್ವದ ದಿಶೆಯಲ್ಲಿ ಆಗುವ ಪ್ರಗತಿಯಲ್ಲಿ ಚುನಾವಣೆಗಳ ಪಾಲು ಬಹಳ ದೊಡ್ಡದಿದೆ. ಚುನಾವಣೆ ಮತ್ತು ಪ್ರತಿನಿಧಿತ್ವ ಇವು ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದ ಅತ್ಯಂತ ಮಹತ್ವದ ಪ್ರಕ್ರಿಯೆಗಳಾಗಿದ್ದು ಚುನಾವಣೆಯ ಮೂಲಕ ಜನಪ್ರತಿನಿಧಿಗಳು ಆರಿಸಲ್ಪಡುವರು, ಇದು ನಿಮಗೆ ಗೊತ್ತಿದೆ. ಚುನಾವಣೆಗಳಿಂದ ಶಾಂತತೆಯ ಮಾರ್ಗದಿಂದ ಆಡಳಿತ ಬದಲಾಗುವುದು. ಬೇರೆ ಬೇರೆ ಪಕ್ಷಗಳಿಗೆ ಆಡಳಿತದ ಅವಕಾಶ ದೊರಕುವದು. ಸರಕಾರದ ಧೋರಣೆಗಳಲ್ಲಿ ಬದಲಾವಣೆಯಾಗುವದು ಮತ್ತು ಸಮಾಜ ಜೀವನವೂ ಬದಲಿಸುವದು. ನಾವು ಯಾವ ಪ್ರತಿನಿಧಿಗಳನ್ನು ಆರಿಸಿಕೊಡುವೆವೋ ಅವರು ಕಾರ್ಯಕ್ಷಮ, ಪ್ರಾಮಾಣಿಕ, ವಿಶ್ವಾಸವಿರುವ ಜನಮತವನ್ನು ಆದರಿಸುವವರಿರಬೇಕೆಂಬ ಭಾವನೆ ಇರುವದು. ಯಾವ ಚುನಾವಣಾ ಪ್ರಕ್ರಿಯೆಯ ಮೂಲಕ ಅವರನ್ನು ಆರಿಸಿ ಕೊಡುವವರಿದ್ದೇವೆಯೋ, ಆ ಚುನಾವಣಾ ಪ್ರಕ್ರಿಯೆಯೂ ಮುಕ್ತವಾದದ್ದು ನ್ಯಾಯಪೂರ್ಣ ಮತ್ತು ವಿಶ್ವಾಸಉಳ್ಳದ್ದಿರಬೇಕು. ಈ ದೃಷ್ಟಿಯಿಂದ ಭಾರತದ ಸಂವಿಧಾನವು ಚುನಾವಣೆಗಳನ್ನು ತೆಗೆದುಕೊಳ್ಳಲು ಒಂದು ಸ್ವತಂತ್ರ ಚುನಾವಣಾ ಆಯೋಗದ ವ್ಯವಸ್ಥೆ ಮಾಡಿದೆ.

ಭಾರತದ ಚುನಾವಣಾ ಆಯೋಗ ಮತ್ತು ರಾಜ್ಯ ಮಟ್ಟದಲ್ಲಿ ಇರುವ ರಾಜ್ಯ ಚುನಾವಣಾ ಆಯೋಗಗಳು ನಮ್ಮ ದೇಶದಲ್ಲಿಯ ಎಲ್ಲ ಮಹತ್ವದ ಚುನಾವಣೆಗಳನ್ನು ತೆಗೆದುಕೊಳ್ಳುತ್ತವೆ. ಚುನಾವಣೆಯ ದಿನಾಂಕಗಳನ್ನು ಘೋಷಿಸುವದರಿಂದ ಹಿಡಿದು ಚುನಾವಣೆಯ ಫಲಿತಾಂಶವನ್ನು ಜಾಹೀರು ಪಡೆಸುವ ತನಕ ಎಲ್ಲ ಚುನಾವಣಾ ಪ್ರಕ್ರಿಯೆಯು ಚುನಾವಣಾ ಆಯೋಗದ ಮಾರ್ಗದರ್ಶನದಲ್ಲಿ ಮತ್ತು ನಿಯಂತ್ರಣದಲ್ಲಿ ನಡೆಯುವದು. ಚುನಾವಣಾ ಪ್ರಕ್ರಿಯೆಯು ಒಂದು ದೊಡ್ಡ ಮತ್ತು ವ್ಯಾಪಕವಾದ ಪ್ರಜಾಪ್ರಭುತ್ವದ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿದೆ.

**ನಿಮಗೆ ಗೊತ್ತಿದೆಯೇ?**

ಪ್ರತಿನಿಧಿತ್ವವೆಂದರೇನು? ಆಧುನಿಕ ಪ್ರಜಾಪ್ರಭುತ್ವವು ಇದು ಪ್ರಾತಿನಿಧಿಕ ಪ್ರಜಾಪ್ರಭುತ್ವವಾಗಿದೆ. ಪ್ರಜಾಪ್ರಭುತ್ವದಲ್ಲಿಯ ನಿರ್ಣಯ ಪ್ರಕ್ರಿಯೆಯಲ್ಲಿ ಎಲ್ಲ ಜನರನ್ನು ಸಮಾವೇಶಗೊಳಿಸುವದು ಸಾಧ್ಯವಿಲ್ಲ. ಇದರಿಂದ ಜನರು ತಮ್ಮುವತಿಯಿಂದ ಕೆಲವು ಜನರನ್ನು ಆಡಳಿತ ಮಾಡಲು ತಮ್ಮ ಪ್ರತಿನಿಧಿ ಎಂದು ಆರಿಸಿ ಕೊಡುವ ಪದ್ಧತಿ ನಿರ್ಮಾಣವಾಯಿತು. ಪ್ರತಿನಿಧಿಗಳು ಜನತೆಯ ಜವಾಬದಾರಿ ತೆಗೆದುಕೊಂಡು ಜನರ ಕಲ್ಯಾಣಕ್ಕೆ ಪ್ರಾಧಾನ್ಯತೆ ಕೊಡುತ್ತ ರಾಜ್ಯಕಾರಭಾರ ಮಾಡುವದು ಅಪೇಕ್ಷಿತವಾಗಿರುವದು.

ಪ್ರಸ್ತುತ ಪಾಠದಲ್ಲಿ ನಾವು ಚುನಾವಣಾ ಆಯೋಗದ ರಚನೆ, ಕಾರ್ಯಕ್ರಮಗಳು ಮತ್ತು ಪಾತ್ರ ತಿಳಿದುಕೊಳ್ಳುವವರಿದ್ದೇವೆ. ಚುನಾವಣಾ ಪ್ರಕ್ರಿಯೆಯಲ್ಲಿ ಯಾವ ಸುಧಾರಣೆಗಳು ಅವಶ್ಯಕವಾಗಿವೆ, ಎಂಬುದರ ಚರ್ಚೆಯನ್ನೂ ನಾವು ಮಾಡುವವರಿದ್ದೇವೆ.

## ಚುನಾವಣಾ ಆಯೋಗ

ಭಾರತದಲ್ಲಿಯ ಚುನಾವಣಾ ಪ್ರಕ್ರಿಯೆಯ ಕೇಂದ್ರ ಸ್ಥಾನದಲ್ಲಿಯೇ ಚುನಾವಣಾ ಆಯೋಗವಿದೆ. ಭಾರತೀಯ ಸಂವಿಧಾನದ ಕಲಮು 324 ಇದು ಸ್ವಾಯತ್ತತೆ ಪದ್ಧತಿಯನ್ನು ನಿರ್ಮಾಣ ಮಾಡಿದ್ದು ಅದರಿಲ್ಲಿ ಒಬ್ಬ ಮುಖ್ಯ ಚುನಾವಣಾ ಮುಖ್ಯ ಅಧಿಕಾರಿ ಮತ್ತು ಅನ್ಯ ಇಬ್ಬರು ಚುನಾವಣಾ ಸಹ ಅಧಿಕಾರಿಗಳು ಇರುವರು.

ಚುನಾವಣಾ ಅಧಿಕಾರಿಗಳ ನೇಮಕವನ್ನು ರಾಷ್ಟ್ರಪತಿ ಯವರು ಮಾಡುವರು. ಚುನಾವಣಾ ಆಯೋಗದ ಸ್ವಾತಂತ್ರ್ಯದ ರಕ್ಷಣೆಯಾಗಲೆಂದು ಮುಖ್ಯ ಚುನಾವಣಾ ಅಧಿಕಾರಿಯನ್ನು ಸಹಜವಾಗಿ ಇಲ್ಲವೆ ಯಾವುದೇ ರಾಜಕೀಯ ಕಾರಣದಿಂದ ಪದಚ್ಯುತರನ್ನಾಗಿ ಮಾಡಲಾಗುವದಿಲ್ಲ. ಚುನಾವಣಾ ಆಯೋಗದ ಖರ್ಚಿಗಾಗಿ ಸ್ವತಂತ್ರ ಆರ್ಥಿಕ ವ್ಯವಸ್ಥೆ ಇರುವದು.

**ನಿಮಗೆ ಗೊತ್ತಿದೆಯೇ?**



ಸುಕುಮಾರ ಸೇನ

ಸುಕುಮಾರ ಸೇನ ಇವರು ಸ್ವತಂತ್ರ ಭಾರತದ ಮೊದಲ ನೆಯ ಮುಖ್ಯ ಚುನಾವಣಾ ಅಧಿಕಾರಿ ಆಗಿದ್ದರು. 1921 ರಲ್ಲಿ ಸೇನ ಇವರು ಬ್ರಿಟಿಷಕಾಲದ ಭಾರತೀಯ ಆಡಳಿತ ಸೇವೆ ಯಲ್ಲಿ ಸೇರಿ ಕೊಂಡರು. ಮುಂದೆ 1950ರಲ್ಲಿ ಚುನಾವಣಾ ಆಯೋಗದ ಸ್ಥಾಪನೆಯಾದ ನಂತರ ಅವರಿಗೆ ಚುನಾವಣಾ ಅಧಿಕಾರಿ ಎಂದು ನೇಮಿಸಲಾಯಿತು. ಬಹಳ ಪ್ರತಿಕೂಲ ಮತ್ತು ಕಠಿಣ ಪರಿಸ್ಥಿತಿಯಲ್ಲಿ ಸೇನ ಇವರು ಬಹಳ ಕೌಶಲ್ಯದಿಂದ ಆಯೋಗದ ಕಾರ್ಯಕಲಾಪವನ್ನು ನಡೆಸಿಕೊಂಡು ಹೋದರು.

ಚುನಾವಣಾ ಆಯೋಗದ ಹತ್ತಿರ ಸ್ವತಂತ್ರ ಸಿಬ್ಬಂದಿ ವರ್ಗವಿಲ್ಲ. ಇತರ ಸರಕಾರಿ ಅಧಿಕಾರಿಗಳು, ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದ ಸಹಾಯದಿಂದ ಚುನಾವಣೆಯ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವದು.

## ಚುನಾವಣಾ ಆಯೋಗದ ಕಾರ್ಯಗಳು

**(1) ಮತದಾರ ಪಟ್ಟಿ ತಯಾರಿಸುವದು:** ವಯಸ್ಸಿನ 18 ವರ್ಷಗಳು ಪೂರ್ಣವಾದ ಪ್ರತಿಯೊಬ್ಬ ಭಾರತದ ನಾಗರಿಕನಿಗೆ ಮತದಾನದ ಹಕ್ಕು ಇದೆ. ಅದನ್ನು ಅಮಲಿನಲ್ಲಿ ತರಲು ಅವನ ಹೆಸರು ಮತದಾರ ಪಟ್ಟಿಯಲ್ಲಿ ಇರಬೇಕಾಗುವದು. ಮತದಾರ ಯಾದಿಯನ್ನು ತಯಾರಿಸುವದು, ಅದನ್ನು ಸುಧಾರಿತಗೊಳಿಸುವದು, ಹೊಸ ಮತದಾರರನ್ನು ಸಮಾವೇಶ ಗೊಳಿಸುವದು ಮುಂತಾದ ಕೆಲಸಗಳನ್ನು ಚುನಾವಣಾ ಆಯೋಗವು ಮಾಡುವದು. ಮತದಾರರಿಗೆ ಗುರುತಿನ ಪತ್ರ ಕೊಡುವ ಅಧಿಕಾರ ಚುನಾವಣಾ ಆಯೋಗಕ್ಕಿದೆ.



**ನಿಮಗೆ ಗೊತ್ತಿದೆಯೇ?**

ಮತದಾರ ನೋಂದಣಿಗಾಗಿ ವಿಶೇಷ ಮತದಾರ ಜಾಗೃತಿ ಅಭಿಯಾನ ರೂಪಿಸಲಾಗುತ್ತದೆ. ಅದಕ್ಕಾಗಿ ರಾಷ್ಟ್ರೀಯ ಮತದಾರ ದಿವಸವನ್ನು ಆಚರಿಸಲಾಗುತ್ತದೆ.

**(2) ಚುನಾವಣೆಗಳ ವೇಳಾಪತ್ರಿಕೆ ಮತ್ತು ಸಂಪೂರ್ಣ ಕಾರ್ಯಕ್ರಮವನ್ನು ನಿರ್ಧರಿಸುವದು:** ಚುನಾವಣೆಯ ಸಂಪೂರ್ಣ ಸಂಚಾಲನೆಯು ಚುನಾವಣಾ ಆಯೋಗದ ಮೇಲಿನ ಹೊಣೆಯಾಗಿದ್ದರಿಂದ ಯಾವ ರಾಜ್ಯದಲ್ಲಿ ಯಾವಾಗ ಮತ್ತು ಎಷ್ಟೆಷ್ಟು ಹಂತಗಳಲ್ಲಿ ಚುನಾವಣೆಗಳನ್ನು ತೆಗೆದುಕೊಳ್ಳಬೇಕು ಎಂಬುದನ್ನು ಚುನಾವಣಾ ಆಯೋಗವು ನಿರ್ಧರಿಸುತ್ತದೆ.

**(3) ಅಭ್ಯರ್ಥಿಗಳ ಅರ್ಜಿಗಳ ಆಯ್ಕೆ:** ಚುನಾವಣೆಯ ದಿನಾಂಕ ಜಾಹೀರುಪಡಿಸಿದ ನಂತರ ವಿವಿಧ ರಾಜಕೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಚುನಾವಣೆಗೆ ನಿಲ್ಲಿಸುವರು. ಹಾಗೆಯೇ ಯಾವುದೇ ಪಕ್ಷದ ಬೆಂಬಲವಿಲ್ಲದೆ ಸ್ವತಂತ್ರವಾಗಿ ಕೆಲವು ಅಭ್ಯರ್ಥಿಗಳು ಚುನಾವಣೆಗೆ ನಿಲ್ಲುತ್ತಾರೆ. ಇಂಥ ಅಪಕ್ಷ ಅಭ್ಯರ್ಥಿಗಳ ಸಹಿತ ಚುನಾವಣೆಗೆ ನಿಲ್ಲುವ ಎಲ್ಲ ಅಭ್ಯರ್ಥಿಗಳಿಗೆ ತಮ್ಮ ಅರ್ಜಿ ತುಂಬಬೇಕಾಗುವದು ಮತ್ತು ಅದರಲ್ಲಿ ಸ್ವಂತದ ಕುರಿತು ಎಲ್ಲ ಮಾಹಿತಿಯನ್ನು ತುಂಬಬೇಕಾಗುವದು. ಈ ಅರ್ಜಿಗಳ ಕೂಲಂಕಶವಾದ ಆಯ್ಕೆ ಚುನಾವಣಾ ಆಯೋಗ ಮಾಡುವದು ಮತ್ತು ಪಾತ್ರರಾದ ಅಭ್ಯರ್ಥಿಗಳಿಗೆ ಚುನಾವಣೆಗೆ ನಿಲ್ಲಲು ಅನುಮತಿಕೊಡುವದು.



**ಹೀಗೇಕೆ ಮಾಡಬೇಕಾಗುವದು?**

- ಅಭ್ಯರ್ಥಿಗಳಿಗೆ ಕೇವಲ ವಯಸ್ಸಿನ ಬಂಧನವಿರುವಾಗ ಅವರಿಗೆ ಇತರ ಮಾಹಿತಿಯನ್ನು ಚುನಾವಣಾ ಆಯೋಗಕ್ಕೆ ಕೊಡುವದು ಏಕೆ ಮಹತ್ವದ್ದಾಗಿದೆ?
- ಅಭ್ಯರ್ಥಿಗಳಿಗೆ ತಮ್ಮ ಆಸ್ತಿಯ ಮಾಹಿತಿಯನ್ನು ಚುನಾವಣಾ ಆಯೋಗಕ್ಕೆ ಏಕೆ ಕೊಡಬೇಕಾಗುವದು?

**(4) ರಾಜಕೀಯ ಪಕ್ಷಗಳಿಗೆ ಮಾನ್ಯತೆ ಕೊಡುವದು:** ನಮ್ಮ ದೇಶದಲ್ಲಿ ಬಹುಪಕ್ಷ ಪದ್ಧತಿ ಇದೆ. ಹಾಗೆಯೇ ಹೊಸ ಹೊಸ ಪಕ್ಷಗಳು ನಿರ್ಮಾಣವಾಗುತ್ತವೆ. ಪಕ್ಷಗಳಲ್ಲಿ ಒಡಕು ಉಂಟಾಗಿ ಹೊಸ ಪಕ್ಷಗಳು ಅಸ್ತಿತ್ವದಲ್ಲಿ ಬರುವವು. ಇಂಥ ಎಲ್ಲ ಪಕ್ಷಗಳಿಗೆ ಚುನಾವಣಾ ಆಯೋಗದ ಮಾನ್ಯತೆ ಅವಶ್ಯಕವಾಗಿರುವದು. ಯಾವುದೇ ಪಕ್ಷದ ಮಾನ್ಯತೆಯನ್ನು ರದ್ದುಗೊಳಿಸುವ ಅಧಿಕಾರವೂ ಚುನಾವಣಾ ಆಯೋಗಕ್ಕಿರುವದು. ಚುನಾವಣಾ ಆಯೋಗವು ರಾಜಕೀಯ ಪಕ್ಷಗಳಿಗೆ ಚುನಾವಣಾ ಚಿನ್ಹೆಯನ್ನು ಕೊಡುವದು.

**(5) ಚುನಾವಣೆಗೆ ಸಂಬಂಧಿಸಿದ ತಂಟೆಗಳನ್ನು ಬಗೆಹರಿಸುವದು:** ಚುನಾವಣೆಗೆ ಸಂಬಂಧಿಸಿದ ಕೆಲವು ತಂಟೆಗಳು ನಿರ್ಮಾಣವಾದರೆ ಅದನ್ನು ಬಗೆಹರಿಸುವ ಹೊಣೆ ಚುನಾವಣಾ ಆಯೋಗಕ್ಕಿದೆ. ಅದಕ್ಕೆ ಅನುಸರಿಸಿ ಯಾವುದೇ ಮತದಾರ ಸಂಘದಲ್ಲಿ ಮತ್ತೊಮ್ಮೆ ಚುನಾವಣೆಯನ್ನು ತೆಗೆದುಕೊಳ್ಳುವದು ಇಲ್ಲವೆ ಅಭ್ಯರ್ಥಿಗಳ ಅಪಾತ್ರತೆಯನ್ನು ಘೋಷಿಸುವದು ಈ ಕಾರ್ಯಗಳನ್ನು ಚುನಾವಣಾ ಆಯೋಗ ಮಾಡುವದು.

**ನೀವು ಹೇಳಬಹುದೇ**

ರಾಜಕೀಯ ಪಕ್ಷಗಳಿಗೆ ಮಾನ್ಯತೆ ಕೊಡುವಾಗ ಚುನಾವಣಾ ಆಯೋಗವು ಯಾವ ಒರೆಗಲ್ಲನ್ನು ಹಚ್ಚುವದು?




**ಹೀಗೆ ಏಕೆ?**

- ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗಾಗಿ ಕೆಲವೊಂದು ಮತದಾರ ಸಂಘಗಳನ್ನು ಮೀಸಲಾಗಿ ಇಡಲಾಗುತ್ತದೆ.
- ಎಲ್ಲ ರಾಜಕೀಯ ಪಕ್ಷಗಳಿಗೆ ಚುನಾವಣಾ ಚಿನ್ಹೆಗಳಿರುವವು.
- ಚುನಾವಣೆಯ ಮತ್ತು ಮತ ಎಣಿಕೆಯಾಗುವಾಗ ರಾಜಕೀಯ ಪಕ್ಷಗಳ ಅಧಿಕೃತ ಪ್ರತಿನಿಧಿಗಳು ಉಪಸ್ಥಿತರಿರುವರು.
- ದೂರದರ್ಶನ, ಆಕಾಶವಾಣಿ ಈ ಪ್ರಸಾರ ಮಾಧ್ಯಮಗಳ ಮೇಲೆ ತಮ್ಮ ಹೇಳಿಕೆಯನ್ನು ಮಂಡಿಸುವಲ್ಲಿ ಮಾನ್ಯತೆಯುಳ್ಳ ಎಲ್ಲ ಪಕ್ಷಗಳಿಗೆ, ಸಮಾನ ಅವಕಾಶ ಇರುವುದು.

**ಮತದಾರ ಸಂಘದ ಪುನರ್‌ರಚನೆ:** ಲೋಕಸಭೆಯಲ್ಲಿ ಒಟ್ಟು ಸದಸ್ಯರ ಸಂಖ್ಯೆ 543 ಇದೆ. ಈ ಸದಸ್ಯರು ಹೇಗೆ ಆರಿಸಿ ಬರುವರು? ಪ್ರತಿಯೊಬ್ಬ ಸಭಾಸದನು ಒಂದು ಮತದಾರ ಸಂಘದ ಪ್ರತಿನಿಧಿತ್ವ ಮಾಡುವನು ಅಂದರೆ ಲೋಕಸಭೆಯ 543 ಮತದಾರ ಸಂಘಗಳಿವೆ. ಈ ಮತದಾರ ಸಂಘಗಳ ನಿರ್ಮಾಣ ಮಾಡುವ ಕಾರ್ಯವನ್ನು ಮಿತಿ ಇಡುವ ಸಮಿತಿ (Delimitation Commission) ಯದ್ದಾಗಿದೆ. ಯಾವುದೇ ಒತ್ತಡವಿಲ್ಲದೆ ಈ ವ್ಯವಸ್ಥೆಯು ತಟಸ್ಥವಾಗಿ ಮತದಾರ ಸಂಘದ ಪುನರ್‌ರಚನೆ ಮಾಡುವವದು.

**ತಿಳಿದುಕೊಳ್ಳಿರಿ.**

ಮತದಾನ ಮಾಡುವದು ಇದು ತಮ್ಮ ಕರ್ತವ್ಯವಾಗಿದೆ ಮತ್ತು ಹೊಣೆಯೂ ಕೂಡಾ!




**ಕೆಳಗಿನವುಗಳಲ್ಲಿ ಯಾವ ಎರಡು ವಿಷಯಗಳು ಆಚಾರಸಂಹಿತೆಯನ್ನು ಭಂಗಗೊಳಿಸುವವಿವೆ ಎಂದು ನಿಮಗೆ ಅನಿಸುವದು.**

* ಅಭ್ಯರ್ಥಿಗಳಿಂದ ವಸಾಹತಿನಲ್ಲಿ ಗೃಹೋಪಯೋಗಿ ವಸ್ತುಗಳ ಹಂಚುವಿಕೆ.
* ಆರಿಸಿ ಕೊಟ್ಟರೆ, ನೀರಿನ ಪ್ರಶ್ನೆ ಬಿಡಿಸುವ ಆಶ್ವಾಸನೆ.
* ಮನೆ ಮನೆಗೆ ಹೋಗಿ ಮತದಾರರಿಗೆ ಭೆಟ್ಟಿಯಾಗುವದು ಮತ್ತು ಆರಿಸಿ ತರುವಂತೆ ವಿನಂತಿ ಮಾಡುವದು.
* ಜಾತಿ ಮತ್ತು ಧರ್ಮದ ಆವ್ಹಾನ ಮಾಡಿ ಬೆಂಬಲ ಪಡೆಯುವದು.

ಮತದಾರರಿಗಾಗಿ ಇದ್ದ ಆಚಾರಸಂಹಿತೆಯಲ್ಲಿ ನೀವು ಯಾವ ನಿಯಮಗಳ ಸಮಾವೇಶ ಮಾಡಬಲ್ಲಿರಿ?



**ಲಕ್ಷ್ಯದಲ್ಲಿ ಇಡಿರಿ.**

ಹಿಮಾಚಲ ಪ್ರದೇಶ ಈ ರಾಜ್ಯದಲ್ಲಿಯ ಶ್ಯಾಮ ಶರಣ ನೇಗಿ ಇವರು ಭಾರತದ ಮೊದಲನೇ ಮತದಾರರು. 25 ಅಕ್ಟೋಬರ 1951ರಲ್ಲಿ ತೆಗೆದುಕೊಂಡ ಲೋಕಸಭಾ ಚುನಾವಣೆಯಲ್ಲಿ ಅವರು ತನ್ನ ಮತದಾನದ ಹಕ್ಕನ್ನು ಪೂರ್ಣಗೊಳಿಸಿದರು.

**ಚುನಾವಣಾ ಪ್ರಕ್ರಿಯೆ:**

ಮತದಾರ ಸಂಘದ ನಿರ್ಮಿತಿ

↓

ಮತದಾರ ಪಟ್ಟಿಗಳನ್ನು ನಿಶ್ಚಿಸುವುದು

↓

ಅಭ್ಯರ್ಥಿಗಳಿಂದ ನಾಮಾಂಕನ ಪತ್ರ ಮತ್ತು ಆಯ್ಕೆ

↓

ಚುನಾವಣೆಯ ಪ್ರಚಾರ

↓

ಪ್ರತ್ಯಕ್ಷ ಮತದಾನ

↓

ಮತಗಳ ಎಣಿಕೆ

↓

ಚುನಾವಣೆಯ ಫಲಿತಾಂಶ

↓

ಚುನಾವಣೆಗೆ ಸಂಬಂಧಿಸಿದ ತಂಟೆಗಳ ನಿರಾಕರಣ

**ಆಚಾರ ಸಂಹಿತೆ ಎಂದರೇನು?**

ಭಾರತದಲ್ಲಿಯ ಚುನಾವಣೆಗಳು ಹೆಚ್ಚೆಚ್ಚು ಮುಕ್ತ ಮತ್ತು ಕಾನೂನುಬದ್ಧ ವಾತಾವರಣದಲ್ಲಿ ಆಗಲು ಚುನಾವಣಾ ಆಯೋಗವು ಸ್ವತಂತ್ರವಾಗಿ ಯಾವ ಉಪಾಯಯೋಜನೆಯನ್ನು ಯೋಜಿಸಿದೆಯೋ, ಅದರಲ್ಲಿ ಆಚಾರ ಸಂಹಿತೆಯ (code of conduct) ಸಮಾವೇಶ ಮಾಡಬಹುದು. ಕಳೆದ ಹಲವು ದಶಕಗಳಿಂದ ಚುನಾವಣಾ ಆಯೋಗವು ತನ್ನ ಎಲ್ಲ ಅಧಿಕಾರವನ್ನು ಉಪಯೋಗಿಸಿ ಚುನಾವಣೆಯಲ್ಲಿಯ ಆಯೋಗ್ಯ ಕೃತಿಗಳನ್ನು ತಡೆಹಿಡಿಯುವ ಪ್ರಯತ್ನ ಮಾಡಿದೆ. ಚುನಾವಣೆಗೆ ಮುಂಚೆ ಮತ್ತು ಚುನಾವಣೆಯ ಸಮಯದಲ್ಲಿ ಸರಕಾರ, ರಾಜಕೀಯ ಪಕ್ಷ ಮತ್ತು ಮತದಾರರು ಚುನಾವಣೆಯ ಕುರಿತು ಯಾವ ನಿಯಮಗಳ ಪಾಲನೆ ಮಾಡಬೇಕು ಎಂಬುದನ್ನು ಆಚಾರ ಸಂಹಿತೆಯಲ್ಲಿ ಸ್ಪಷ್ಟಪಡಿಸಿರುತ್ತಾರೆ. ಸರಕಾರಕ್ಕೂ ಈ ನಿಯಮದ ಭಂಗ ಮಾಡಲು ಬರುವುದಿಲ್ಲ. ಕಳೆದ ಕೆಲವು ಚುನಾವಣೆಗಳಲ್ಲಿ ಆಚಾರಸಂಹಿತೆಯ ಸಂದರ್ಭದಲ್ಲಿಯ ಕಾರ್ಯಾಚರಣೆಯಿಂದಾಗಿ ಸಾಮಾನ್ಯ ಮತದಾರರು ಸಮಾಧಾನದಿಂದ ಇದ್ದದ್ದು ಕಂಡುಬರುವುದು.

**ಮುಕ್ತ ಮತ್ತು ಕಾನೂನುಬದ್ಧ ಚುನಾವಣೆ ತೆಗೆದುಕೊಳ್ಳುವಲ್ಲಿನ ಆಹ್ವಾನಗಳು:** ನಮ್ಮ ದೇಶದ ವಿಸ್ತಾರ ಮತ್ತು ಮತದಾರರ ಸಂಖ್ಯೆಯನ್ನು ಗಮನಕ್ಕೆ ತೆಗೆದುಕೊಂಡರೆ ಚುನಾವಣೆಗಳನ್ನು ತೆಗೆದುಕೊಳ್ಳುವದು ಬಹಳ ಆಹ್ವಾನಾತ್ಮಕ ಕೆಲಸವಾಗಿದೆ. ಚುನಾವಣಾ ಆಯೋಗಕ್ಕೆ ಕಾನೂನಿನ ಚೌಕಟ್ಟಿನಲ್ಲಿದ್ದುಕೊಂಡು ಈ ಆಹ್ವಾನಗಳನ್ನು ಎದುರಿಸಬೇಕಾಗುವದು. ಕೆಲವೊಂದು ಆಹ್ವಾನಗಳ ಉಲ್ಲೇಖ ಇಲ್ಲಿದೆ.

- ಚುನಾವಣೆಯಲ್ಲಿ ಆರ್ಥಿಕ ದುರ್ವ್ಯವಹಾರ ದೊಡ್ಡ ಪ್ರಮಾಣದಲ್ಲಿ ಆಗುವದು. ಅದನ್ನು ತಡೆಯಲು ಚುನಾವಣಾ ಆಯೋಗಕ್ಕೆ ಅನೇಕ ಉಪಾಯ ಯೋಜನೆಗಳನ್ನು ಮಾಡಬೇಕಾಗುವದು.
- ಕೆಲವು ಅಭ್ಯರ್ಥಿಗಳ ಅಪರಾಧಿ ಹಿನ್ನೆಲೆ ಇದ್ದರೂ ರಾಜಕೀಯ ಪಕ್ಷಗಳು ಅವರಿಗೆ ಟಿಕೇಟ ಕೊಡುವರು ಮತ್ತು ಅವರು ಆರಿಸಿ ಕೂಡಾ ಬರುವರು ಇದರಿಂದ ರಾಜಕೀಯ ಅಪರಾಧವಾಗುವದಲ್ಲದೆ ಚುನಾವಣಾ ಆಯೋಗಕ್ಕೆ ಮುಕ್ತ ವಾತಾವರಣದ ರಕ್ಷಣೆ ಮಾಡಲೂ ತೊಂದರೆಯಗುತ್ತದೆ.
- ಚುನಾವಣೆಗಳಲ್ಲಿ ಆಗುವ ಹಿಂಸೆ ಇದೊಂದು ದೊಡ್ಡ ಆಹ್ವಾನವಾಗಿದೆ. ಚುನಾವಣಾ ಕಾಲದಲ್ಲಿ ಆಗುವ ಹಿಂಸೆಯ ಪ್ರಮಾಣ ಹೆಚ್ಚುತ್ತಲಿವೆ. ಹಿಂಸೆಯನ್ನು ತಡೆಗಟ್ಟಲು ಎಲ್ಲ ರಾಜಕೀಯ ಪಕ್ಷಗಳು ಮುಂದಾಳುತನ ವಹಿಸಿ ಚುನಾವಣಾ ಆಯೋಗಕ್ಕೆ ಸಹಾಯ ಮಾಡಬೇಕು.



**ಗೊತ್ತಿದೆಯೇ ನಿಮಗೆ?**

ಮೊದಲನೇ ಲೋಕಸಭಾ ಚುನಾವಣೆಯ ವೇಳೆಗೆ ಮತದಾರರ ಯಾದಿಯನ್ನು ಸಿದ್ಧಗೊಳಿಸುವ ಕಾರ್ಯ ಆಹ್ವಾನಾತ್ಮಕವಾಗಿತ್ತು. ನಮ್ಮ ದೇಶದಲ್ಲಿ ನಿರಕ್ಷರತೆಯ ಪ್ರಮಾಣ ಹೆಚ್ಚಾಗಿತ್ತು ಮತ್ತು ಅದರಿಂದ ಮತದಾನ ಮಾಡುವ ವಿಶೇಷ ಪದ್ಧತಿಯನ್ನು ಉಪಯೋಗಿಸಲಾಯಿತು. ಮತದಾನಕ್ಕಾಗಿ ಕಬ್ಬಿಣದ ಸುಮಾರು ಇಪ್ಪತ್ತು ಲಕ್ಷ ಮತಪೆಟ್ಟಿಗೆಗಳನ್ನು ತಯಾರಿಸಲಾಯಿತು ಮತ್ತು ಆ ಮತ ಪೆಟ್ಟಿಗೆಗಳ ಮೇಲೆ ಪಕ್ಷಗಳ ಚುನಾವಣಾ ಚಿನ್ಹೆಗಳನ್ನು ಅಂಟಿಸಲಾಯಿತು. ಯಾವ ಪಕ್ಷಕ್ಕೆ ಮತದಾನ ಮಾಡುವದಿದೆಯೋ ಆ ಪಕ್ಷದ ಚುನಾವಣಾ ಚಿನ್ಹೆ ಇದ್ದ ಪೆಟ್ಟಿಗೆಯಲ್ಲಿ ಮತದಾರರು ಬರಿದಾದ ಕಾಗದವನ್ನು ಮಡಿಕೆಹಾಕಿ ಹಾಕುವದು ಹೀಗೆ ಈ ಪದ್ಧತಿಯನ್ನು ನಿರ್ಧರಿಸಲಾಯಿತು. ಇದರಿಂದ ನಿರಕ್ಷರ ಜನರಿಗೆ ಮತದಾನ ಮಾಡಲು ಬಂದಿತು.

- ರಾಜಕಾರಣದ ಮೇಲೆ ತಮ್ಮದೇ ಕುಟುಂಬದ ಪ್ರಭಾವವಿರಲಿ ಎಂದು ಸಂಬಂಧಿಕರಿಗೇನೇ ಚುನಾವಣೆಯ ಅಭ್ಯರ್ಥಿತನವನ್ನು ಕೊಡುವ ಪ್ರಯತ್ನ ಮಾಡಲಾಗುತ್ತದೆ. ಇದರಿಂದ ಪ್ರಾತಿನಿಧಿಕ ಸಂಸ್ಥೆಗಳಲ್ಲಿ ಕೌಟುಂಬಿಕ ಏಕಾಧಿಕಾರ ನಿರ್ಮಾಣವಾಗಬಲ್ಲದು.

**ವಿಚಾರ ಮಾಡಿರಿ.**

- ಒಂದೇ ಮನೆತನದ ಏಕಸ್ವಾಮ್ಯಾಧಿಕಾರದಿಂದ ರಾಜಕೀಯ ಪಕ್ಷಗಳಿಗೆ ಯಾವ ಹಾನಿ ಆಗುತ್ತಿರಬಹುದು?
- ‘ಒಂದು ಮತ, ಒಂದು ಮೌಲ್ಯ’ ಇದರಿಂದ ನಿಮಗೇನು ತಿಳಿಯುವದು?

**ಚುನಾವಣೆಯಲ್ಲಿ ಸುಧಾರಣೆ:** ಚುನಾವಣೆಗಳು ಸತತವಾಗಿ ನಡೆಯುವ ಪ್ರಕ್ರಿಯೆಯಾಗಿದೆ. ಚುನಾವಣೆಯ ಮೇಲೆ ಪ್ರಜಾಪ್ರಭುತ್ವದ ಭವಿತವ್ಯವು ಅವಲಂಬಿಸಿರುತ್ತದೆ. ಯೋಗ್ಯ ಸುಧಾರಣೆ ಮಾಡಿದರೆ ಚುನಾವಣಾ ಪ್ರಕ್ರಿಯೆಯ ವಿಶ್ವಾಸಾರ್ಹತೆಯು ಹೆಚ್ಚಾಗುವದು. ಇಲ್ಲಿ ಚುನಾವಣೆಯ ಕೆಲವೊಂದು ಸುಧಾರಣೆಗಳನ್ನು ಸೂಚಿಸಲಾಗಿದೆ. ಅದರ ಯಾವ ಪರಿಣಾಮವಾಗಬಹುದು ಎಂದು ನಿಮಗೆ ಅನಿಸುವದು?

- ಸ್ತ್ರೀಯರ ರಾಜಕಾರಣದಲ್ಲಿಯ ಪ್ರತಿನಿಧಿತ್ವವನ್ನು ಹೆಚ್ಚಿಸಲು ರಾಜಕೀಯ ಪಕ್ಷಗಳು ಉಮೇದವಾರಿಯನ್ನು ಕೊಡುವಾಗಲೇ 50% ಮಹಿಳಾ ಉಮೇದುವಾರರನ್ನು ಕೊಡಬೇಕು ಮತ್ತು ಅವರನ್ನು ಆರಿಸಿ ತರುವ ಪ್ರಯತ್ನ ಮಾಡಬೇಕು.
- ಅಪರಾಧಿ ಹಿನ್ನೆಲೆ ಇದ್ದ ವ್ಯಕ್ತಿಗಳಿಗೆ ರಾಜಕೀಯ ಪಕ್ಷಗಳು ಉಮೇದುವಾರಿಯನ್ನು ಕೊಡಬಾರದು. ಈ ಸಂದರ್ಭದಲ್ಲಿ ನ್ಯಾಯಾಲಯವು ನೀಡಿದ ತೀರ್ಪನ್ನು ಕೂಲಂಕಷವಾಗಿ ಪಾಲಿಸಬೇಕು.
- ಚುನಾವಣೆಯ ಖರ್ಚನ್ನು ಸರಕಾರವು ಮಾಡಬೇಕು. ಇದರಿಂದ ರಾಜಕೀಯ ಪಕ್ಷಗಳು ಆರ್ಥಿಕ ದುರ್ವ್ಯವಹಾರ ಮಾಡಲಾರವು ಮತ್ತು ಚುನಾವಣೆಯಲ್ಲಿಯ ಆಗುವ ಹಣದ ದುರುಪಯೋಗವನ್ನು ತಡೆಯಬಹುದು.
- ಜನ ಪ್ರತಿನಿಧಿತ್ವದ ಕಾಯ್ದೆಯಲ್ಲಿಯೂ ಆ ದೃಷ್ಟಿಯಿಂದ ಬದಲಾವಣೆ ಮಾಡಿ, ಅಪರಾಧಿ ಹಿನ್ನೆಲೆಯುಳ್ಳ ಉಮೇದವಾರರು ಚುನಾವಣೆಯಲ್ಲಿ ಭಾಗವಹಿಸಲಾರರು ಎಂಬುದರ ಕಾಳಜಿವಹಿಸಿಕೊಳ್ಳಬೇಕು.

**ಮತಪೆಟ್ಟಿಗೆಯಿಂದ ಇ.ವ್ಹಿ.ಎಮ್ ಮಶಿನದವರೆಗಿನ ಪ್ರವಾಸ**

ಸ್ವತಂತ್ರ ಭಾರತದ ಮೊದಲನೆಯ ಚುನಾವಣೆಯು 1951-52ರಲ್ಲಾಯಿತು. ಚುನಾವಣೆಯ ರಾಜಕಾರಣಕ್ಕೆ ಮತ್ತು ಅದರಿಂದ ಪ್ರಜಾಪ್ರಭುತ್ವಕ್ಕೆ ಆಕಾರ ಕೊಡಲು ಈ ಕಾಲದಲ್ಲಿ ಪ್ರಾರಂಭವಾಯಿತು. ಪ್ರಾರಂಭದ ಅನೇಕ ಚುನಾವಣೆಗಳಲ್ಲಿ ಮತದಾನ ಪೆಟ್ಟಿಗೆಗಳ ಉಪಯೋಗ ಮಾಡಲಾಗುತ್ತಿತ್ತು. 1990ರ ದಶಕದಿಂದ ಮಾತ್ರ ಇಲೆಕ್ಟ್ರಾನಿಕ್ ವೋಟಿಂಗ್ ಮಶೀನ (EVM Machine)ವನ್ನು ಉಪಯೋಗಿಸಲಾಗಹತ್ತಿತ್ತು. ಮತದಾನ ಮಾಡುವಾಗ ಯಂತ್ರದ ಉಪಯೋಗ ಪ್ರಾರಂಭವಾಗಿದ್ದರಿಂದ ಅನೇಕ ಸಂಗತಿಗಳು ಸಾಧ್ಯವಾಗಲಾರಂಭಿಸಿದವು. ಇವ್ಹಿಎಮ್ ಮಶೀನಿನ ಮೇಲೆ ಸೂಚಿಸಿದ ಉಮೇದವಾರರಲ್ಲಿ ಯಾರಿಗೂ ಮತ ಕೊಡುವದಿಲ್ಲದಿದ್ದರೆ





ಮೇಲಿನವರಲ್ಲಿ ಯಾರೂ ಇಲ್ಲ (None Of The Above-NOTA) ಈ ಪರ್ಯಾಯವನ್ನು ಮತದಾರರಿಗೆ ಸಾಧ್ಯವಾಯಿತು. ವಿಕಲಚೇತನಾಂಗ ವ್ಯಕ್ತಿಗಳಿಗೂ ಮತದಾನ ಮಾಡಲು ಸುಲಭವಾಗಹತ್ತಿತು. ಪರ್ಯಾವರಣದ ರಕ್ಷಣೆಗೆ ಸಹಾಯವಾಯಿತು. ವಿಶೇಷವಾಗಿ ಮರಗಳ ಕಡಿಯುವಿಕೆಗೆ ಪ್ರತಿಬಂಧ ಬಂದಿತು. ಅಲ್ಲದೆ ಚುನಾವಣೆಗಳ ಫಲಿತಾಂಶಗಳೂ ಬೇಗ ಬರಲಾರಂಭಿಸಿದವು.

**ಇದನ್ನೂ ತಿಳಿದುಕೊಳ್ಳಿರಿ**

**ಸಾರ್ವತ್ರಿಕ ಚುನಾವಣೆಗಳು -** ಪ್ರತಿ ಐದು ವರ್ಷಗಳಿಗೊಮ್ಮೆ ಆಗುವ ಲೋಕಸಭೆಯ ಚುನಾವಣೆಗಳಿಗೆ ಸಾರ್ವತ್ರಿಕ ಚುನಾವಣೆ ಎಂದು ಅನ್ನುವರು

**ಮಧ್ಯಾವಧಿ ಚುನಾವಣೆ -** ಆರಿಸಿ ಬಂದ ಸರಕಾರವು ಅವಧಿಗಿಂತ ಮುಂಚೆ ಅಲ್ಪ ಮತದಲ್ಲಿ ಬಂದರೆ ಇಲ್ಲವೆ ಸಮಿಶ್ರ ಸರಕಾರವಿದ್ದರೆ ಅಥವಾ ಘಟಕ ಪಕ್ಷಗಳು ಬೆಂಬಲವನ್ನು ಹಿಂತೆಗೆದರೆ ಸರಕಾರದ ಬಹುಮತವು ಕೊನೆಗೊಳ್ಳುವದು. ಪರ್ಯಾಯದ ಸರಕಾರವನ್ನು ಸ್ಥಾಪಿಸಲು ಸಾಧ್ಯವಾಗದಿದ್ದರೆ, ಇಂತಹ ಸಮಯದಲ್ಲಿ, ಅವಧಿ ಪೂರ್ಣವಾಗುವದರೊಳಗೆ ಚುನಾವಣೆಗಳನ್ನು ತೆಗೆದುಕೊಳ್ಳಬೇಕಾಗುವದು. ಅವುಗಳನ್ನು ಮಧ್ಯಾವಧಿ ಚುನಾವಣೆಗಳೆಂದು ಗುರುತಿಸಲಾಗುವವು.

**ಉಪ ಚುನಾವಣೆಗಳು -** ವಿಧಾನಸಭೆ, ಲೋಕಸಭೆ ಮತ್ತು ಸ್ಥಾನಿಕ ಸರಕಾರ ಸಂಸ್ಥೆಗಳಲ್ಲಿಯ ಯಾವುದೇ ಜನಪ್ರತಿನಿಧಿಯು ರಾಜೀನಾಮೆ ನೀಡಿದರೆ ಅಥವಾ ಯಾವುದೇ ಜನಪ್ರತಿನಿಧಿಯು ಮರಣ ಹೊಂದಿದರೆ ಆ ಸ್ಥಳವು ಬರಿದಾಗುವದು, ಆ ಸ್ಥಾನಕ್ಕಾಗಿ ಪುನಃ ಚುನಾವಣೆಯನ್ನು ತೆಗೆದುಕೊಳ್ಳಬೇಕಾಗುವದು. ಅದಕ್ಕೆ ಉಪಚುನಾವಣೆ ಎಂದು ಕರೆಯುವರು.



**ಗೊತ್ತಿದೆಯೇ ನಿಮಗೆ?**

8 ಅಕ್ಟೋಬರ 2010ರಂದು ಚುನಾವಣಾ ಆಯೋಗವು ತಜ್ಞರ ಸಮಾವೇಶವುಳ್ಳ ಒಂದು ಸಮಿತಿಯನ್ನು ಸ್ಥಾಪಿಸಿತು. ಅದರಲ್ಲಿ ಇಲೆಕ್ಟ್ರಾನಿಕ ಮತದಾನ ಯಂತ್ರಗಳಲ್ಲಿ ಮತದಾರರನ್ನು ಪರೀಕ್ಷಿಸಿದ ಪಾವತಿ VVPAT (Voter Verified Paper Audit Trail) ಈ ವ್ಯವಸ್ಥೆಯನ್ನು ಸಮಾವೇಶಗೊಳಿಸಲು ನಿರ್ಧರಿಸಲಾಯಿತು ಮತ್ತು ಅದಕ್ಕೆ ಎಲ್ಲ ರಾಜಕೀಯ ಪಕ್ಷಗಳು ಬೆಂಬಲ ನೀಡಿದವು. ಮತದಾರರಿಗೆ ಅವರು ನೀಡಿದ ಮತ ಯೋಗ್ಯ ರೀತಿಯಿಂದ ನೋಂದಾಯಿಸಲ್ಪಟ್ಟಿದೆಯೋ, ಇಲ್ಲವೋ ಎಂಬುದನ್ನು ಪರೀಕ್ಷಿಸುವ ಸೌಲಭ್ಯ ಉಪಲಬ್ಧವಾಯಿತು. ಚುನಾವಣೆಯಲ್ಲಿಯ ದುರ್ವ್ಯವಹಾರ ನಿಲ್ಲಿಸಲು ಇದೊಂದು ಮಹತ್ವದ ಹೆಜ್ಜೆ ಹಾಕಲಾಯಿತು.

ಈ ಪಾಠದಲ್ಲಿ ನಾವು ಚುನಾವಣೆಯ ಪ್ರಕ್ರಿಯೆಯ ಬಗೆಗೆ ಎಲ್ಲ ರೀತಿಯಿಂದ ವಿಚಾರ ಮಾಡಿದೆವು. ಮುಂದಿನ ಪಾಠದಲ್ಲಿ ನಾವು ಭಾರತದಲ್ಲಿಯ ರಾಜಕೀಯ ಪಕ್ಷಗಳ ಅಭ್ಯಾಸ ಮಾಡಲಿರುವೆವು.



## ಅಭ್ಯಾಸ

**1. ಕೆಳಗಿನ ಪರ್ಯಾಯಗಳಲ್ಲಿ ಯೋಗ್ಯ ಪರ್ಯಾಯವನ್ನಾರಿಸಿ ವಿಧಾನಗಳನ್ನು ಪೂರ್ಣ ಮಾಡಿರಿ.**

(1) ಚುನಾವಣಾ ಅಧಿಕಾರಿಯ ನೇಮಕಾತಿಯನ್ನು ........... ಮಾಡುತ್ತಾರೆ.
(ಅ) ರಾಷ್ಟ್ರಪತಿ (ಬ) ಪ್ರಧಾನಮಂತ್ರಿ
(ಕ) ಲೋಕಸಭಾ ಸಭಾಪತಿ (ಡ) ಉಪರಾಷ್ಟ್ರಪತಿ

(2) ಸ್ವತಂತ್ರ ಭಾರತದಲ್ಲಿಯ ಮೊದಲ ಮುಖ್ಯ ಚುನಾವಣಾ ಆಯುಕ್ತರು ಎಂದು ...........ಇವರ ನೇಮಕಾತಿಯಾಯಿತು
(ಅ) ಡಾ. ರಾಜೇಂದ್ರ ಪ್ರಸಾದ (ಬ) ಟಿ. ಎನ್ ಶೇಷನ್
(ಕ) ಸುಕುಮಾರ ಸೇನ (ಡ)ನೀಲಾ ಸತ್ಯನಾರಾಯಣ

(3) ಮತದಾರ ಸಂಘದ ನಿರ್ಮಾಣ ಮಾಡುವ ಕೆಲಸವನ್ನು ಚುನಾವಣಾ...........ಆಯೋಗದ ಸಮಿತಿ ಮಾಡುವದು.
(ಅ) ಆಯ್ಕೆ (ಬ) ಮಿತಿ ಇಡುವ
(ಕ) ಮತದಾನ (ಡ) ವೇಳಾಪತ್ರಿಕೆ


**2. ಮುಂದಿನ ವಿಧಾನಗಳು ಸರಿಯೋ ತಪ್ಪೋ ಎಂಬುದನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಚುನಾವಣಾ ಆಯೋಗವು ಚುನಾವಣೆಯ ವೇಳೆಗೆ ಆಚಾರ ಸಂಹಿತೆಯನ್ನು ಜಾರಿಗೆ ತರುವದು.
(2) ವಿಶಿಷ್ಟ ಪ್ರಸಂಗದಲ್ಲಿ ಚುನಾವಣಾ ಆಯೋಗವು ಯಾವುದೇ ಮತದಾರ ಸಂಘದಲ್ಲಿ ಪುನ: ಚುನಾವಣೆಯನ್ನು ತೆಗೆದುಕೊಳ್ಳುವದು.
(3) ಯಾವುದೇ ಘಟಕರಾಜ್ಯದಲ್ಲಿ ಯಾವಾಗ ಮತ್ತು ಎಷ್ಟು ಹಂತಗಳಲ್ಲಿ ಚುನಾವಣೆಗಳನ್ನು ತೆಗೆದುಕೊಳ್ಳುವದು ಎಂಬುದನ್ನು ರಾಜ್ಯ ಸರಕಾರ ನಿರ್ಧರಿಸುವದು.

**3. ಸಂಕಲ್ಪನೆ ಸ್ಪಷ್ಟ ಪಡಿಸಿರಿ.**

(1) ಮತದಾರ ಸಂಘದ ಪುನರ್ರಚನೆ
(2) ಮಧ್ಯಾವಧಿ ಚುಣಾವಣೆ

## 4. ಮುಂದಿನ ಸಂಕಲ್ಪನಾಚಿತ್ರವನ್ನು ಪೂರ್ಣ ಮಾಡಿರಿ




## 5. ಮುಂದಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರಿಸಿರಿ

(1) ಚುನಾವಣಾ ಆಯೋಗದ ಕಾರ್ಯಗಳನ್ನು ಸ್ಪಷ್ಟಪಡಿಸಿರಿ.

(2) ಚುನಾವಣಾ ಅಧಿಕಾರಿಯ ಸ್ಥಾನದ ಪದದ ಬಗೆಗೆ ಹೆಚ್ಚಿನ ಮಾಹಿತಿ ಬರೆಯಿರಿ.

(3) ಚುನಾವಣಾ ಆಚಾರಸಂಹಿತೆ ಎಂದರೇನು, ಎಂಬುದನ್ನು ಸ್ಪಷ್ಟ ಪಡಿಸಿರಿ.

**ಉಪಕ್ರಮ**

ಅಭಿರೂಪ ಮತದಾನ ಪ್ರಕ್ರಿಯೆ (mock poll) ಶಾಲೆಯಲ್ಲಿ ಆಯೋಜಿಸಿ ಮತದಾನ ಪ್ರಕ್ರಿಯೆ ತಿಳಿದುಕೊಳ್ಳಿರಿ.

4VDIEE

# 3. ರಾಜಕೀಯ ಪಕ್ಷಗಳು

ಹಿಂದಿನ ಪಾಠದಲ್ಲಿ ನಾವು ಸಂವಿಧಾನದ ಮುನ್ನಡೆ ಮತ್ತು ಚುನಾವಣಾ ಪ್ರಕ್ರಿಯೆದ ಸ್ವರೂಪವನ್ನು ತಿಳಿದುಕೊಂಡಿದ್ದೇವೆ. ಸಾಮಾನ್ಯ ಜನತೆ, ಪ್ರಜಾಪ್ರಭುತ್ವ, ಪ್ರತಿನಿಧಿತ್ವ ಮತ್ತು ಚುನಾವಣೆಗಳು ಈ ಎಲ್ಲವನ್ನು ಜೋಡಿಸುವ ಎಲ್ಲಕ್ಕೂ ಮಹತ್ವದ ಕೊಂಡಿ ರಾಜಕೀಯ ಪಕ್ಷವಿರುವವು. ನಾವು ರಾಜಕಾರಣದ ಕುರಿತು ಏನನ್ನು ಕೇಳುತ್ತೇವೊ ಅಥವಾ ಓದುತ್ತೇವೆಯೋ ಅದು ಬಹಳಷ್ಟು ಪಕ್ಷಗಳಿಗೆ ಸಂಬಂಧಿಸಿರುತ್ತದೆ. ರಾಜಕೀಯ ಪಕ್ಷಗಳ ಅಸ್ತಿತ್ವ ಎಲ್ಲ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇರುತ್ತದೆ. ಆದಾಗ್ಯೂ ಪ್ರಜಾಪ್ರಭುತ್ವದಿಂದ ರಾಜಕೀಯ ಪಕ್ಷಗಳು ಅಧಿಕಾರಕ್ಕಾಗಿ ಸ್ಪರ್ಧೆ ಮಾಡುತ್ತವೆ. ಪ್ರಸ್ತುತ ಪಾಠದಲ್ಲಿ ನಾವು ಭಾರತದಲ್ಲಿಯ ರಾಜಕೀಯ ಪಕ್ಷಪದ್ಧತಿಯ ಪರಿಚಯ ಮಾಡಿಕೊಳ್ಳುವವರಿದ್ದೇವೆ.

ನಿಮ್ಮ ಶಾಲೆಯಲ್ಲಿ ಮತ್ತು ಪರಿಸರದಲ್ಲಿ ನೀವು ಅನೇಕ ಗುಂಪು, ಸಂಸ್ಥೆ ಅಥವಾ ಸಂಘಟನೆಗಳು ಯಾವುದಾದರೂ ಕೆಲಸದ ಬೆನ್ನು ಹತ್ತಿರುವದನ್ನು ನೋಡಿರಬಹುದು. ಸಾರ್ವಜನಿಕ ಪ್ರಶ್ನೆಗಳನ್ನು ಬಿಡಿಸುವದಕ್ಕಾಗಿ ಯಾವುದೋ ಸಂಘಟನೆಯು ಮುಂದಾಳುತನ ವಹಿಸುವದು. ವಿವಿಧ ಚಳುವಳಿಗಳ ಆಂದೋಲನಗಳ ಕುರಿತು ಕೂಡಾ ಓದುವಿರಿ. ಇದರ ಅರ್ಥವೇನೆಂದರೆ ಸಮಾಜದಲ್ಲಿ ಯಾವ ರೀತಿ ಗುಂಪು, ಸಂಸ್ಥೆ, ಚಳುವಳಿ ಸಕ್ರೀಯವಾಗಿ ಇರುವವು, ಹಾಗೆಯೇ ರಾಜಕೀಯ ಪಕ್ಷಗಳೂ ಚುನಾವಣೆಯಲ್ಲಿ ಹೋರಾಡಲು ಮುಂದಾಳುತನ ವಹಿಸಿದ್ದು ಕಾಣಬಹುದು. ಸಮಾಜದಲ್ಲಿಯ ಅನ್ಯ ಸಂಸ್ಥೆಗಳು, ಸಂಘಟನೆಗಳು ಮತ್ತು ರಾಜಕೀಯ ಪಕ್ಷ ಇವುಗಳಲ್ಲಿ ಭೇದವಿದೆ. ರಾಜಕೀಯ ಪಕ್ಷಗಳು ಒಂದು ಪ್ರಕಾರ ಸಾಮಾಜಿಕ ಸಂಘಟನೆಗಳಾಗಿರುತ್ತವೆ. ಆದರೆ ಅವರ ಉದ್ದೇಶ ಮತ್ತು ಕಾರ್ಯಪದ್ಧತಿ ಮಾತ್ರ ಭಿನ್ನವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನಮಗೆ ಏನು ಹೇಳಬಹುದೆಂದರೆ ರಾಜಕೀಯ ಅಧಿಕಾರ ದೊರಕಿಸಲು ಯಾವಾಗ ಜನರು ಒಟ್ಟಿಗೆ ಬಂದು ಚುನಾವಣಾ ಪ್ರಕ್ರಿಯೆಯಲ್ಲಿ ಸಹಭಾಗಿಗಳಾಗುವರೋ ಆಗ ಆ ಸಂಘಟನೆಗಳಿಗೆ 'ರಾಜಕೀಯ ಅಧಿಕಾರ ದೊರಕಿಸಲು ಯಾವಾಗ ಜನರು ಒಟ್ಟಿಗೆ ಬಂದು ಚುನಾವಣಾ ಪ್ರಕ್ರಿಯೆಯಲ್ಲಿ ಸಹಭಾಗಿಗಳಾಗುವರೋ ಆಗ ಆ ಸಂಘಟನೆಗಳಿಗೆ 'ರಾಜಕೀಯ ಪಕ್ಷ' ಎನ್ನಲಾಗುವದು. ರಾಜಕೀಯ ಪಕ್ಷವೆಂದರೆ ಚುನಾವಣೆಯಲ್ಲಿ ಹೋರಾಡಿ ಅದನ್ನು ಗೆಲ್ಲಲು ಮತ್ತು ನಂತರ ಅಧಿಕಾರ ದೊರಕಿಸಿ, ತಮ್ಮ ಪಕ್ಷದ ಸರಕಾರ ಸ್ಥಾಪನೆ ಮಾಡುವ ಜನರ ಗುಂಪು ಅಹುದು.

ರಾಜಕೀಯ ಪಕ್ಷಗಳ ಕೆಲವು ಮುಖ್ಯ ವೈಶಿಷ್ಟ್ಯಗಳನ್ನು ನಿಮಗೆ ಈ ಮುಂದಿನಂತೆ ಹೇಳಬಹುದು.

**ಅಧಿಕಾರ ದೊರಕಿಸುವದು:** ರಾಜಕೀಯ ಪಕ್ಷಗಳ ಮುಖ್ಯ ಉದ್ದೇಶವು ಕೇವಲ ಚುನಾವಣೆಗಳ ಮೂಲಕ ಅಧಿಕಾರ ದೊರಕಿಸುವದು ಇರುವದು. ಅದಕ್ಕಾಗಿ ಸತ್ತೆಗಾಗಿ ವಿವಿಧ ರಾಜಕೀಯ ಪಕ್ಷಗಳು ಪರಸ್ಪರರೊಂದಿಗೆ ಸತತ ಸ್ಪರ್ಧೆಯನ್ನು ನಡೆಸುತ್ತಿರುತ್ತವೆ. ಇಂಥ ಸ್ಪರ್ಧೆ ನಡೆಸುವದು ಅಯೋಗ್ಯವಲ್ಲ, ಆದರೆ ಸ್ಪರ್ಧೆಯ ಸ್ವರೂಪವು ಪಕ್ಷಪಾತವಿಲ್ಲದ್ದಿರಬೇಕು.

**ವಿಚಾರ ಸರಣಿಯ ಆಧಾರ:** ಪ್ರತಿಯೊಂದು ರಾಜಕೀಯ ಪಕ್ಷವು ಕೆಲವು ಧೋರಣೆಗಳ, ವಿಚಾರಗಳ ಪುರಸ್ಕಾರ ಮಾಡುವಂತಹುಗಳಾಗಿರುತ್ತವೆ. ಸಾರ್ವಜನಿಕ ಪ್ರಶ್ನೆಗಳ ಕುರಿತು ಪಕ್ಷಗಳ ಒಂದು ವಿಶಿಷ್ಟ ಪಾತ್ರವಿರುವದು. ಈ ಎಲ್ಲವುಗಳ ಸಮಾವೇಶದಿಂದ ಪಕ್ಷದ ವಿಚಾರ ಸರಣಿ ಸಿದ್ಧವಾಗುವದು. ಈ ವಿಚಾರಸರಣಿ ಯಾರಿಗೆ ಯೋಗ್ಯವೆನಿಸುವದೋ ಆ ಜನರು ಆಯಾ ಪಕ್ಷಕ್ಕೆ ಬೆಂಬಲಿಸುವರು. ಪಕ್ಷಕ್ಕೆ ಜನರ ಯಾವ ಬೆಂಬಲ ದೊರಕುವದೋ, ಅದಕ್ಕೆ ಆ ಪಕ್ಷದ ಜನಾಧಾರ ಎಂದು ಸಹ ಅನ್ನುವರು. ಆಧುನಿಕ ಕಾಲದಲ್ಲಿ ಎಲ್ಲ ರಾಜಕೀಯ ಪಕ್ಷಗಳ ವಿಚಾರಸರಣಿಯು ಒಂದೇ ಸಮಾನವಾಗಿ ಕಾಣಿಸುವದು, ಇದರಿಂದ ಪಕ್ಷಗಳಲ್ಲಿ ವಿಚಾರಸರಣಿಯ ಮೇಲೆ ಆಧರಿಸಿದ ಭೇದ ಮಾಡುವದು ಕಠಿಣವಾಗಿದೆ.

**ಪಕ್ಷ ಕಾರ್ಯಕ್ರಮ:** ವಿಚಾರ ಸರಣಿಯನ್ನು ಪ್ರತ್ಯಕ್ಷದಲ್ಲಿ ತರಲು ರಾಜಕೀಯ ಪಕ್ಷಗಳು ಅದರ ಮೇಲೆ ಆಧರಿಸಿದ ಕಾರ್ಯಕ್ರಮಗಳನ್ನು ನಿಶ್ಚಿತಗೊಳಿಸುತ್ತಾರೆ. ಸತ್ತೆಯು ದೊರಕಿತೆಂದರೆ ಈ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುತ್ತಾರೆ. ಸತ್ತೆಯು ದೊರೆಯದಿದ್ದರೂ ಕಾರ್ಯಕ್ರಮಗಳ ಆಧಾರದಿಂದ ಜನರ ಬೆಂಬಲ ಪಡೆಯುವ ಪ್ರಯತ್ನವನ್ನು ರಾಜಕೀಯ ಪಕ್ಷಗಳು ಮಾಡುತ್ತವೆ.

**ಸರಕಾರದ ಸ್ಥಾಪನೆ ಮಾಡುವದು:** ರಾಜಕೀಯ ಪಕ್ಷಗಳು ಸರಕಾರದ ಸ್ಥಾಪನೆ ಮಾಡುವವು ಮತ್ತು ದೇಶದ ರಾಜ್ಯಕಾರಭಾರ ಮಾಡುತ್ತಾರೆ ಅರ್ಥಾತ ಈ ಕಾರ್ಯ ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷದ್ದಾಗಿರುತ್ತದೆ. ಯಾವ ಪಕ್ಷಕ್ಕೆ ಬಹುಮತ ದೊರಕುವದಿಲ್ಲವೋ ಅವರು ವಿರೋಧಿ ಪಕ್ಷವೆಂದು ಕಾರ್ಯ ಮಾಡುವರು.

**ಸರಕಾರ ಮತ್ತು ಜನತೆ ಇವುಗಳಲ್ಲಿಯ ಕೊಂಡಿ:** ರಾಜಕೀಯ ಪಕ್ಷಗಳು ಸರಕಾರ ಮತ್ತು ಜನತೆ ಇವುಗಳಲ್ಲಿಯ ಕೊಂಡಿ ಎಂದು ಕೆಲಸ ಮಾಡುತ್ತವೆ. ಜನರ ಬೇಡಿಕೆಗಳು ಮತ್ತು ತಕರಾರುಗಳನ್ನು ಸರಕಾರದವರೆಗೆ ಮುಟ್ಟಿಸುವ ಕಾರ್ಯ ರಾಜಕೀಯ ಪಕ್ಷಗಳು ಮಾಡುವವು. ಆದರೆ ಸರಕಾರವು ಪಕ್ಷದ ಮೂಲಕ ತನ್ನ ಧೋರಣೆ-ಕಾರ್ಯಕ್ರಮಗಳಿಗೆ ಬೆಂಬಲ ಪಡೆಯುವ ಪ್ರಯತ್ನ ಮಾಡುವದು.

**ವರ್ತಮಾನ ಪತ್ರಿಕೆಗಳಲ್ಲಿಯ ಈ ಸುದ್ದಿಗಳಿಂದ ನಿಮಗೆ ಏನು ತಿಳಿದಿದೆ ಎಂಬುದನ್ನು ಸ್ವಲ್ಪದರಲ್ಲಿ ಹೇಳಿರಿ.**

- ಆಡಳಿತ ಪಕ್ಷದ ವಿರುದ್ಧ ಎಲ್ಲ ವಿರೋಧಿ ಪಕ್ಷಗಳ ಮುಂಬೈಯಲ್ಲಿ ಸಭೆ ಜರುಗಿತು. ರೈತರ ಪ್ರಶ್ನೆಯನ್ನು ಎತ್ತಿ ಹಿಡಿಯಲಿರುವರು!
- ಆಡಳಿತ ಪಕ್ಷವು ಗ್ರಾಮೀಣ ಭಾಗದಲ್ಲಿ ಸಂವಾದಯಾತ್ರೆಯ ಆಯೋಜನೆ ಮಾಡಿತು.

ತಿಳಿಯಿರಿ, ನೀವು ವಿರೋಧಿ ಪಕ್ಷದ ಮುಂದಾಳು ಇರುವಿರಿ, ಮತ್ತು ಆರೋಗ್ಯ ಕ್ಷೇತ್ರದಲ್ಲಿ ಸರಕಾರವು ಒಳ್ಳೆಯ ಕಾರ್ಯ ಮಾಡಿಲ್ಲ ಇದು ನಿಮ್ಮ ಪಕ್ಷದ ಗಮನಕ್ಕೆ ಬಂದಿದೆ. ವಿರೋಧಿ ಪಕ್ಷದ ಮುಂದಾಳು ಎಂದು ನೀವು ಏನು ಮಾಡಬಲ್ಲಿರಿ?

**ವಿಚಾರ ಮಾಡಿರಿ ಮತ್ತು ಬರೆಯಿರಿ.**

ಮಹಾತ್ಮಾ ಗಾಂಧಿ, ವಿನೋಬಾ ಭಾವೆ ಮತ್ತು ಜಯಪ್ರಕಾಶ ನಾರಾಯಣ ಇವರು 'ಪಕ್ಷವಿರಹಿತ' ಪ್ರಜಾಪ್ರಭುತ್ವದ ಕಲ್ಪನೆಯನ್ನು ಮಂಡಿಸಿದರು. ಆಧುನಿಕ ಕಾಲದಲ್ಲಿ ಇಂಥ ಪ್ರಜಾಪ್ರಭುತ್ವ ತರುವದಿದ್ದರೆ ಏನು ಮಾಡಬೇಕಾಗುವದು?

## ಭಾರತದಲ್ಲಿಯ ಪಕ್ಷ ಪದ್ಧತಿಯ ಬದಲಾಗುತ್ತಿರುವ ಸ್ವರೂಪ:

(1) ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕಾಂಗ್ರೆಸ ಇದೊಂದೇ ಪ್ರಬಲ ಪಕ್ಷವಾಗಿತ್ತು. ಕೆಲವು ಅಪವಾದ ಬಿಟ್ಟರೆ ಕೇಂದ್ರ ಮತ್ತು ರಾಜ್ಯಮಟ್ಟದಲ್ಲಿ ಈ ಪಕ್ಷಕ್ಕೆ ಬಹುಮತವಿತ್ತು. ಭಾರತದ ರಾಜಕಾರಣದ ಮೇಲೆ ಈ ಪಕ್ಷದ ಹಿಡಿತವಿತ್ತು ಅಂತೆಯೆ ಈ ಕಾಲದಲ್ಲಿಯ ಪಕ್ಷ ಪದ್ಧತಿಯ ವರ್ಣನೆಯನ್ನು 'ಒಂದು ಪ್ರಬಲ ಪಕ್ಷ ಪದ್ಧತಿ' ಎಂದು ಮಾಡಲಾಗುತ್ತದೆ.

(2) ಒಂದು ಪ್ರಬಲ ಪಕ್ಷ ಪದ್ಧತಿಗೆ 1977ರಲ್ಲಿ ಆವ್ಹಾನ ಕೊಡಲಾಯಿತು. ಈ ಆವ್ಹಾನವನ್ನು ಕಾಂಗ್ರೆಸ ಬಿಟ್ಟು ಉಳಿದ ಪಕ್ಷಗಳು ಒಟ್ಟಿಗೆ ಬಂದು ನೀಡಿದವು.

(3) 1989ರ ಲೋಕಸಭಾ ಚುನಾವಣೆಯ ನಂತರ ರಾಜಕಾರಣದಲ್ಲಿ ಒಂದೇ ಪಕ್ಷದ ವರ್ಚಸ್ವವಿರುವದು ಈ ಸಂಗತಿ-ಕೊನೆಗೊಂಡಿತು. ಆನಂತರದ ಕಾಲದಲ್ಲಿ ಅನೇಕ ಪಕ್ಷಗಳು ಒಟ್ಟಿಗೆ ಬಂದು ಸಮಿಶ್ರ ಸರಕಾರ ಸ್ಥಾಪಿಸಲು ಪ್ರಾರಂಭವಾಯಿತು. ಸಮಿಶ್ರ ಸರಕಾರವನ್ನು ಸ್ಥಾಪಿಸುವ ಪ್ರಯೋಗವನ್ನು ಭಾರತೀಯ ಜನತಾ ಪಕ್ಷ ಮತ್ತು ಕಾಂಗ್ರೆಸ ಈ ಎರಡೂ ಪಕ್ಷಗಳು ಮಾಡಿದವು. ಸಮಿಶ್ರ ಸರಕಾರದಿಂದ ಅಸ್ಥಿರತೆ ನಿರ್ಮಾಣವಾಗುವದು ಎಂಬ ತಿಳಿವಳಿಕೆಯನ್ನು ನಮ್ಮ ದೇಶದಲ್ಲಿಯ ಪಕ್ಷ ಪದ್ಧತಿಯು ಸುಳ್ಳು ಮಾಡಿ ತೋರಿಸಿತು. ಸಮಿಶ್ರ ಸರಕಾರ ಈ ಸಂಗತಿಯು ಈಗ ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಸ್ಥಿರವಾಗಿದೆ.



**ಗೊತ್ತಿದೆಯೇ ನಿಮಗೆ?**

- ಒಂದೇ ರಾಜಕೀಯ ಪಕ್ಷದ ಕೈಯಲ್ಲಿ ಅಧಿಕಾರ ದೀರ್ಘಕಾಲದವರೆಗೆ ಇದ್ದರೆ ಮತ್ತು ಅನ್ಯ ಯಾವುದೇ ಪಕ್ಷ ರಾಜಕಾರಣದಲ್ಲಿ ಪ್ರಭಾವಶಾಲಿ ಯಾಗಿರದಿದ್ದರೆ ಆ ಪಕ್ಷ ಪದ್ಧತಿಗೆ 'ಏಕಪಕ್ಷ ಪದ್ಧತಿ' ಎಂದು ಅನ್ನುವರು.
- ರಾಜಕಾರಣದಲ್ಲಿ ಎರಡು ರಾಜಕೀಯ ಪಕ್ಷಗಳು ಪ್ರಭಾವಶಾಲಿಯಾಗಿ ಇರುತ್ತವೆ ಮತ್ತು ಅದಲು ಬದಲಾಗಿ ಈ ಎರಡೂ ರಾಜಕೀಯ ಪಕ್ಷಗಳ ಕೈಯಲ್ಲಿ ಅಧಿಕಾರ ಬರುವದು. ಆಗ ಈ ಆಡಳಿತ ಪದ್ಧತಿಗೆ 'ದ್ವಿಪಕ್ಷ ಪದ್ಧತಿ' ಎನ್ನುವರು.
- ಅನೇಕ ರಾಜಕೀಯ ಪಕ್ಷಗಳು ಅಧಿಕಾರದ ಸ್ಪರ್ಧೆಯಲ್ಲಿ ಇರುವವು ಮತ್ತು ಎಲ್ಲರದೂ ಹೆಚ್ಚು ಕಡಿಮೆ ಪ್ರಮಾಣದಲ್ಲಿ ರಾಜಕೀಯ ಪ್ರಭಾವವಿರುವದು. ಇಂತಹ ಪದ್ಧತಿಯನ್ನು ಬಹುಪಕ್ಷ ಪದ್ಧತಿ' ಎಂದು ಗುರುತಿಸಲಾಗುವದು.



**ಮಾಡಿ ನೋಡಿರಿ.**

ರಾಜಕೀಯ ಪಕ್ಷಗಳ ಪ್ರಮುಖ ಎರಡು ಸಮಿಶ್ರ ಗುಂಪು ಗಳನ್ನು ಇಲ್ಲಿ ಕೊಡಲಾಗಿದೆ. ಅದರಲ್ಲಿಯ ಘಟಕ ಪಕ್ಷಗಳನ್ನು ಶೋಧಿಸಿರಿ ಮತ್ತು ಅವುಗಳ ಹೆಸರುಗಳನ್ನು ಬರೆಯಿರಿ.

(1) ರಾಷ್ಟ್ರೀಯ ಪ್ರಜಾಪ್ರಭುತ್ವ ಸಮ್ಮಿಶ್ರ ಪಕ್ಷ (NDA)

(2) ಸಂಯುಕ್ತ ಪುರೋಗಾಮಿ ಸಮ್ಮಿಶ್ರ ಪಕ್ಷ (UPA)

**ಇದನ್ನೂ ತಿಳಿದುಕೊಳ್ಳಿರಿ.**

ರಾಷ್ಟ್ರೀಯ ಪಕ್ಷ ಮತ್ತು ಪ್ರಾದೇಶಿಕ ಪಕ್ಷ ಯಾವುದಕ್ಕೆ ಅನುತ್ತಾರೆ?

**ರಾಷ್ಟ್ರೀಯ ಪಕ್ಷವೆಂದು ಮಾನ್ಯತೆ ಪಡೆಯಲು ಚುನಾವಣಾ ಆಯೋಗವು ಸ್ಪಷ್ಟ ಪಡಿಸಿದ ಮುಂದಿನ ಒರೆಗಲ್ಲುಗಳ ಪೂರ್ತತೆಯಾಗಬೇಕಾಗುವದು.**

(ಅ) ನಾಲ್ಕು ಇಲ್ಲವೆ ಹೆಚ್ಚು ರಾಜ್ಯಗಳಲ್ಲಿ ಲೋಕಸಭಾ ಇಲ್ಲವೆ ವಿಧಾನಸಭೆಯ ಹಿಂದಿನ ಚುನಾವಣೆಯಲ್ಲಿ ಕನಿಷ್ಠ 6% ವೈಧ ಮತಗಳು ಪಡೆಯುವದು ಅವಶ್ಯಕವಾಗಿರುವದು. ಹಾಗೆಯೇ ಹಿಂದಿನ ಚುನಾವಣೆಯಲ್ಲಿ ಯಾವುದೇ ರಾಜ್ಯದಿಂದ ಅಥವಾ ರಾಜ್ಯಗಳಿಂದ ಕನಿಷ್ಠ ನಾಲ್ಕು ಸದಸ್ಯರು ಲೋಕಸಭೆಗೆ ಆರಿಸಿ ಬರಬೇಕು.

ಇಲ್ಲವೆ

(ಬ) ಒಟ್ಟು ಲೋಕಸಭಾ ಮತದಾರ ಸಂಘದ ಸುಮಾರು 2% ಮತದಾರ ಸಂಘಗಳಿಂದ ಹಾಗೆಯೇ ಸುಮಾರು ಮೂರು ರಾಜ್ಯಗಳಿಂದ ಉಮೆದವಾರರು ಆರಿಸಿ ಬರುವದು ಅವಶ್ಯಕವಾಗಿರುವದು.

**ಪ್ರಾದೇಶಿಕ ಇಲ್ಲವೆ ರಾಜ್ಯಮಟ್ಟದ ಪಕ್ಷವೆಂದು ಮಾನ್ಯತೆ ದೊರೆಯಲು ಚುನಾವಣಾ ಆಯೋಗವು ಮುಂದಿನ ಒರೆಗಲ್ಲನ್ನು ಸ್ಪಷ್ಟಪಡಿಸಿದೆ.**

(ಅ) ಲೋಕಸಭಾ ಇಲ್ಲವೆ ವಿಧಾನಸಭೆಯ ಹಿಂದಿನ ಚುನಾವಣೆಯಲ್ಲಿ ಸುಮಾರು 6% ಮತಗಳು ದೊರಕುವದು ಮತ್ತು ಸುಮಾರು ಎರಡು ಸದಸ್ಯರು ವಿಧಾನಸಭೆಗೆ ಆರಿಸಿಬರುವದು ಅವಶ್ಯಕವಿರುವದು.

ಇಲ್ಲವೆ

(ಬ) ವಿಧಾನಸಭೆಯ ಒಟ್ಟು ಸದಸ್ಯಸಂಖ್ಯೆಯ ಸುಮಾರು 3% ಸ್ಥಳಗಳು ಇಲ್ಲವೆ ಸುಮಾರು ಮೂರು ಸ್ಥಳಗಳು ದೊರಕುವದು ಅವಶ್ಯಕವಾಗಿದೆ.

ಭಾರತದಲ್ಲಿಯ ಕೆಲವು ಪ್ರಮುಖ ರಾಜಕೀಯ ಪಕ್ಷಗಳ ಪರಿಚಯವನ್ನು ನಾವು ಮಾಡಿಕೊಳ್ಳೋಣ.

## ರಾಷ್ಟ್ರೀಯ ಪಕ್ಷ

(ಸಂದರ್ಭ: Election Commission of India, Notification No. 56/201/PPS-111, dated 13 December 2016)

**(1) ಭಾರತೀಯ ರಾಷ್ಟ್ರೀಯ ಕಾಂಗ್ರೆಸ:** 1885ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ಥಾಪನೆಯಾಯಿತು. ಸ್ಥಾಪನೆಯ ವೇಳೆಗೆ ಕಾಂಗ್ರೆಸ ಇದು ಸರ್ವಸಮಾವೇಶಕ ಸ್ವರೂಪದ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಪ್ರಯತ್ನ ಮಾಡುವ ಚಳುವಳಿಯಾಗಿತ್ತು. ಇದರಿಂದ ಅದರಲ್ಲಿ ವಿವಿಧ ವಿಚಾರಸರಣಿಗಳಿರುವ ಗುಂಪುಗಳು ಒಟ್ಟಿಗೆ ಬಂದಿದ್ದವು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕಾಂಗ್ರೆಸ ಒಂದು ಎಲ್ಲಕ್ಕೂ ಪ್ರಭಾವಿ ಪಕ್ಷವೆಂದು ಉದಯಕ್ಕೆ ಬಂದಿತು. ಧರ್ಮನಿರಪೇಕ್ಷತೆ, ಸರ್ವಾಂಗೀಣ ವಿಕಾಸ, ದುರ್ಬಲ ಘಟಕಗಳಿಗಾಗಿ ಮತ್ತು ಅಲ್ಪಸಂಖ್ಯಾಕ ವರ್ಗಕ್ಕಾಗಿ 'ಸಮಾನ ಹಕ್ಕು', ವ್ಯಾಪಕ ಸಮಾಜಕಲ್ಯಾಣ' ಇದು ಈ ಪಕ್ಷದ ಪ್ರಾರಂಭದಿಂದ ಇರುವ ಧೋರಣೆ ಆಗಿದೆ. ಅದನ್ನನುಸರಿಸಿ ಈ ಪಕ್ಷವು ಅನೇಕ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತಂದಿತು. ಪ್ರಜಾಪ್ರಭುತ್ವ ಸಮಾಜವಾದ, ಅಂತರರಾಷ್ಟ್ರೀಯ ಶಾಂತತೆ ಮತ್ತು ಸಾಮಾಜಿಕ ಸಮತೆ ಇವುಗಳ ಮೇಲೆ ಈ ಪಕ್ಷದ ವಿಶ್ವಾಸವಿದೆ.

**(2) ಭಾರತೀಯ ಕಮ್ಯುನಿಸ್ಟ ಪಕ್ಷ:** ಮಾರ್ಕ್ಸವಾದಿ ವಿಚಾರಸರಣಿಯ ಮೇಲೆ ಆಧರಿಸಿದ ಈ ಪಕ್ಷದ ಸ್ಥಾಪನೆ 1925ರಲ್ಲಿ ಆಯಿತು. ಭಾರತದಲ್ಲಿಯ ಇದೊಂದು ಹಳೆಯ ಪಕ್ಷವಾಗಿದೆ. ಕಾರ್ಮಿಕ, ಕಷ್ಟ ಮಾಡುವ ವರ್ಗ ಮತ್ತು ಕೆಲಸಗಾರರ (ದುಡಿಮೆದಾರರ) ಹಿತಕ್ಕಾಗಿ ಈ ಪಕ್ಷ ಕಾರ್ಯ ಮಾಡುವದು. ಬಂಡವಾಳಶಾಹಿಗೆ ಈ ಪಕ್ಷದ ವಿರೋಧವಿದೆ.

1960ರ ದಶಕದಲ್ಲಿ ಚೀನ ಮತ್ತು ಸೋವ್ಹಿಯತ್ ಯುನಿಯನ ಈ ಎರಡೂ ಸಾಮ್ಯವಾದಿ ದೇಶಗಳಲ್ಲಿ ಯಾರ ನೇತೃತ್ವವನ್ನು ಸ್ವೀಕರಿಸಬೇಕು, ಎಂಬುದರ ಮೇಲೆ ಈ ಪಕ್ಷದಲ್ಲಿಯ ಮುಂದಾಳುಗಳಲ್ಲಿ ವೈಚಾರಿಕ ಮತಭಿನ್ನತೆಯಾಯಿತು ಮತ್ತು ಭಾರತೀಯ ಕಮ್ಯುನಿಷ್ಟ ಪಕ್ಷದಲ್ಲಿ ಒಡಕು ಉಂಟಾಯಿತು ಹಾಗೂ ಅದರಿಂದ ಭಾರತೀಯ ಕಮ್ಯುನಿಷ್ಟ ಪಕ್ಷ (ಮಾರ್ಕ್ಸವಾದಿ) 1964ರಲ್ಲಿ ಈ ಪಕ್ಷದ ಸ್ಥಾಪನೆಯಾಯಿತು.

**(3) ಭಾರತೀಯ ಜನತಾ ಪಕ್ಷ:** ಭಾರತೀಯ ಜನತಾಪಕ್ಷ ಇದು ರಾಷ್ಟ್ರೀಯ ಮಟ್ಟದಲ್ಲಿಯ ಒಂದು ಮಹತ್ವದ ಪಕ್ಷವಾಗಿದೆ.


ಭಾರತೀಯ ಜನಸಂಘ ಈ ಪಕ್ಷವು 1951ರಲ್ಲಿ ಸ್ಥಾಪಿಸಲ್ಪಟ್ಟಿತು. 1977ರಲ್ಲಿ ಸ್ಥಾಪನೆಗೊಂಡ ಜನತಾ ಪಕ್ಷದಲ್ಲಿ ಭಾರತೀಯ ಜನಸಂಘವು ವಿಲೀನವಾಯಿತು. ಆದರೆ ಜನತಾ ಪಕ್ಷದ ಈ ಸ್ವರೂಪ ಬಹಳ ಕಾಲ ಉಳಿಯಲಿಲ್ಲ, ಪಕ್ಷ ಒಡೆಯಿತು ಮತ್ತು ಅದರಲ್ಲಿಯ ಭಾರತೀಯ ಜನಸಂಘವು ಭಾರತೀಯ ಜನತಾಪಕ್ಷ ಎಂಬ ಹೆಸರಿನಿಂದ 1980ರಲ್ಲಿ ಹೊಸ ಪಕ್ಷದ ಸ್ಥಾಪನೆ ಮಾಡಿತು. ಪ್ರಾಚೀನ ಭಾರತೀಯ ಸಂಸ್ಕೃತಿ, ಪರಂಪರೆ ಇವುಗಳ ರಕ್ಷಣೆ ಮಾಡಬೇಕು. ಇದು ಈ ಪಕ್ಷದ ಭೂಮಿಕೆಯಾಗಿದೆ. ಆರ್ಥಿಕ ಸುಧಾರಣೆಗಳ ಮೇಲೆ ಈ ಪಕ್ಷದ ಒತ್ತು ಇದೆ.



**(4) ಭಾರತೀಯ ಕಮ್ಯುನಿಷ್ಟ ಪಕ್ಷ (ಮಾರ್ಕ್ಸವಾದಿ):** ಸಮಾಜವಾದ, ಧರ್ಮನಿರಪೇಕ್ಷತೆ ಮತ್ತು ಪ್ರಜಾಪ್ರಭುತ್ವ ಇವುಗಳನ್ನು ಈ ಪಕ್ಷವು ಪುರಸ್ಕರಿಸುತ್ತದೆ. ಸಾಮ್ರಾಜ್ಯವಾದವನ್ನು ಇದು ವಿರೋಧಿಸುತ್ತದೆ. ಕಾರ್ಮಿಕ, ರೈತ, ಹೊಲಕೂಲಿಕಾರ ಇವರ ಹಿತ ಸಂಬಂಧಗಳ ರಕ್ಷಣೆ ಮಾಡುವದು ಇದು ಈ ಪಕ್ಷದ ಧೋರಣೆಯಾಗಿದೆ.



**(5) ಬಹುಜನ ಸಮಾಜ ಪಕ್ಷ:** ಬಹುಜನ ಸಮಾಜ ಪಕ್ಷ ಇದು ಸಮಾಜವಾದಿ ವಿಚಾರಸರಣಿಯ ಪಕ್ಷವಾಗಿದೆ. ಬಹುಜನರ ಹಿತ ಇದು ಈ ಪಕ್ಷದ ಉದ್ದಿಷ್ಟವಾಗಿದ್ದು 1984ರಲ್ಲಿ ಈ ಪಕ್ಷದ ಸ್ಥಾಪನೆಯಾಯಿತು. ದಲಿತ, ಆದಿವಾಸಿ, ಇತರ ಹಿಂದುಳಿದ ಮತ್ತು ಅಲ್ಪಸಂಖ್ಯಾಕ ಇವರ ಸಮಾವೇಶ 'ಬಹುಜನ' ಈ ಶಬ್ದದಲ್ಲಿ ಆಗುವದು. ಬಹುಜನ ಸಮಾಜಕ್ಕೆ ಅಧಿಕಾರವನ್ನು ದೊರಕಿಸಿ ಕೊಡುವದು ಈ ಪಕ್ಷದ ಉದ್ದೇಶವಾಗಿದೆ.



**(6) ರಾಷ್ಟ್ರವಾದಿ ಕಾಂಗ್ರೆಸ ಪಕ್ಷ:** ಕಾಂಗ್ರೆಸ್ಸಿನಿಂದ ಹೊರಬಿದ್ದು ರಾಷ್ಟ್ರವಾದಿ ಕಾಂಗ್ರೆಸ ಪಕ್ಷದ ಸ್ಥಾಪನೆ 1999ರಲ್ಲಿ ಆಯಿತು. ಪ್ರಜಾಪ್ರಭುತ್ವ ಸಮತೆ, ಧರ್ಮನಿರಪೇಕ್ಷತೆ ಈ ಮೌಲ್ಯಗಳ ಮೇಲೆ ಈ ಪಕ್ಷದ ವಿಶ್ವಾಸವಿದೆ. ಕಾಂಗ್ರೆಸ ಪಕ್ಷದೊಂದಿಗೆ ಮೈತ್ರಿಕೂಟ ಮಾಡಿ ಈ ಪಕ್ಷವು 1999ರಿಂದ 2014ರವರೆಗೆ ಮಹಾರಾಷ್ಟ್ರದಲ್ಲಿ ಅಧಿಕಾರದಲ್ಲಿತ್ತು. ಅಲ್ಲದೆ




ಕೇಂದ್ರದಲ್ಲಿಯೂ 2004ರಿಂದ 2014ರ ಪ್ರದೀರ್ಘ ಕಾಲಾವಧಿ ಯವರೆಗೆ ಈ ಪಕ್ಷವು ಕಾಂಗ್ರೆಸ್ಸಿನ ನೇತೃತ್ವದಲ್ಲಿಯ ಸಮ್ಮಿಶ್ರ ಸರಕಾರದ ಒಂದು ಘಟಕ ಪಕ್ಷವಾಗಿತ್ತು.

**(7) ತೃಣಮೂಲ ಕಾಂಗ್ರೆಸ:** ಆಲ್ ಇಂಡಿಯಾ ತೃಣಮೂಲ ಕಾಂಗ್ರೆಸ ಈ ಪಕ್ಷದ ಸ್ಥಾಪನೆಯು 1998ರಲ್ಲಿ ಆಯಿತು. 2016ರಲ್ಲಿ ಚುನಾವಣಾ ಆಯೋಗವು ಈ ಪಕ್ಷಕ್ಕೆ ರಾಷ್ಟ್ರೀಯ ಪಕ್ಷವೆಂದು ಮಾನ್ಯತೆ ನೀಡಿತು. ಪ್ರಜಾಪ್ರಭುತ್ವ, ಧರ್ಮನಿರಪೇಕ್ಷತೆ ಮತ್ತು ದುರ್ಬಲ ಘಟಕಗಳ ಸಂರಕ್ಷಣೆ ಇದು ಈ ಪಕ್ಷದ ಧೋರಣೆ ಯಾಗಿದೆ.



**ಲೋಕಸಭಾ ಚುನಾವಣೆ 2009 ಮತ್ತು 2014ರಲ್ಲಿ ರಾಷ್ಟ್ರೀಯ ಪಕ್ಷಗಳು ದೊರಕಿಸಿದ ಸ್ಥಳಗಳು**

| ರಾಜಕೀಯ ಪಕ್ಷಗಳ ಹೆಸರು | ದೊರಕಿದ ಸ್ಥಳಗಳು | |
|---|---|---|
| | **2009** | **2014** |
| ಭಾರತೀಯ ರಾಷ್ಟ್ರೀಯ ಕಾಂಗ್ರೆಸ | 206 | 44 |
| ಭಾರತೀಯ ಕಮ್ಯುನಿಸ್ಟ ಪಕ್ಷ | 4 | 1 |
| ಭಾರತೀಯ ಜನತಾ ಪಕ್ಷ | 116 | 282 |
| ಭಾರತೀಯ ಕಮ್ಯುನಿಸ್ಟ ಪಕ್ಷ (ಮಾರ್ಕ್ಸವಾದಿ) | 16 | 9 |
| ಬಹುಜನ ಸಮಾಜ ಪಕ್ಷ | 21 | – |
| ರಾಷ್ಟ್ರವಾದಿ ಕಾಂಗ್ರೆಸ ಪಕ್ಷ | 9 | 6 |




ವರ್ತಮಾನ ಪತ್ರಗಳಲ್ಲಿ ನೀವು ಇಂತಹ ಪ್ರಕಾರದ ಸುದ್ದಿಗಳನ್ನು ಓದಿರಬಹುದು. ಇದರಿಂದ ನಿಮಗೆ ಭಾರತೀಯ ಸಂಘರಾಜ್ಯದಲ್ಲಿಯ ವಿವಿಧ ರಾಜ್ಯಗಳಲ್ಲಿಯ ಪಕ್ಷಗಳ ಕುರಿತು ಮಾಹಿತಿ ತಿಳಿದು ಬಂದಿದೆ.

- ಈ ಪಕ್ಷಗಳು ಕೇವಲ ರಾಜ್ಯಗಳಿಗೆ ಸೀಮಿತವಾಗಿವೆಯೇ?
- ರಾಜ್ಯದಲ್ಲಿಯ ಕೆಲವು ಮುಂದಾಳುಗಳು ರಾಷ್ಟ್ರೀಯ ಮಟ್ಟದಲ್ಲಿ ಕಾಣಿಸುವರು ಅಲ್ಲದೆ ಕೆಲವರು ರಾಜ್ಯದಲ್ಲಿ ಮಾತ್ರ ಪ್ರಭಾವಶಾಲಿಯಾಗಿರುವರು. ಹೀಗೇಕೆ?

ನಿಮಗೆ ಬಿದ್ದ ಇಂತಹ ಪ್ರಶ್ನೆಗಳ ಆಧಾರದಿಂದ ನಾವು ಭಾರತದಲ್ಲಿಯ ಕೆಲವು ಪ್ರಾದೇಶಿಕ ಪಕ್ಷಗಳ ಪರಿಚಯವನ್ನು ಸ್ವಲ್ಪದರಲ್ಲಿ ಮಾಡಿಕೊಳ್ಳೋಣ. ಭಾರತದ ನಾಲ್ಕು ದಿಕ್ಕುಗಳ ರಾಜ್ಯಗಳಲ್ಲಿಯ ಕೆಲವು ಪ್ರಾತಿನಿಧಿಕ ಪಕ್ಷಗಳ ವಿಚಾರವನ್ನು ಇಲ್ಲಿ ಮಾಡುವವರಿದ್ದೇವೆ.

ಭಾರತದ ವಿವಿಧ ಪ್ರದೇಶಗಳಲ್ಲಿ ವಿವಿಧ ಭಾಷೆಯನ್ನಾಡುವ ಮತ್ತು ಪರಂಪರೆ, ಸಂಸ್ಕೃತಿ ಇವುಗಳಲ್ಲಿಯೂ ವಿವಿಧತೆ ಇರುವ ಜನರಿದ್ದಾರೆ. ಪ್ರದೇಶ ಮತ್ತು ಅವರ ಒಂದು ಸ್ವತಂತ್ರ ಭಾಷೆ ಇಂಥ ಚಿತ್ರ ಕಾಣಿಸುವದು. ಪ್ರದೇಶಗಳ ಭೌಗೋಲಿಕ ರೂಪದಲ್ಲಿಯೂ ವಿವಿಧತೆ ಇದೆ. ಮಹಾರಾಷ್ಟ್ರದಲ್ಲಿಯ ವಿವಿಧ ಭೌಗೋಲಿಕ ಪ್ರದೇಶಗಳ ಅಭ್ಯಾಸವನ್ನು ನೀವು ಮಾಡಿದ್ದೀರಿ. ಮಹಾರಾಷ್ಟ್ರವು ಹೇಗೆ ಮಧ್ಯಪ್ರದೇಶ ಇಲ್ಲವೆ ಕರ್ನಾಟಕ ಇವುಗಳಿಗಿಂತ ಭಿನ್ನವಾಗಿದೆಯೋ ಹಾಗೆಯೇ ಮಹಾರಾಷ್ಟ್ರದಲ್ಲಿ ಭೌಗೋಲಿಕ, ಸಾಂಸ್ಕೃತಿಕ ವಿವಿಧತೆ ಕಂಡು ಬರುವುದು.

ತಮ್ಮ ಭಾಷೆ ಮತ್ತು ತಮ್ಮ ಪ್ರದೇಶ ಇವುಗಳ ಕುರಿತು ಆತ್ಮೀಯತೆಯ ಭಾವನೆ ನಿರ್ಮಾಣವಾಗಿ ಕೆಲಕಾಲದ ನಂತರ ಅದರ ಬಗೆಗೆ ಅಭಿಮಾನ ನಿರ್ಮಾಣವಾದರೆ ಅದರಿಂದ 'ಪ್ರಾದೇಶಿಕತೆ'ಯ ಗಡಿ ನಿರ್ಮಾಣವಾಗುವದು. ಜನರು ತಮ್ಮ ಪ್ರದೇಶದ ಹಿತದ ಮತ್ತು ವಿಕಾಸದ ವಿಚಾರಕ್ಕೆ ಪ್ರಾಧಾನ್ಯತೆ ನೀಡುವವರು ತಮ್ಮ ಭಾಷೆ ತಮ್ಮ ಸಾಹಿತ್ಯ, ಪರಂಪರೆ, ಸಾಮಾಜಿಕ ಸುಧಾರಣೆಗಳ ಇತಿಹಾಸ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಳುವಳಿ ಮುಂತಾದವುಗಳ ಕುರಿತು ಅಭಿಮಾನ ಪಡುವರು ಹಾಗೂ ಅದರಿಂದ ಭಾಷೆಯ ಅಭಿಮಾನ ಪ್ರಬಲವಾಗಲಾರಂಭಿಸುವದು. ತಮ್ಮ ಪ್ರದೇಶದ ವಿಕಾಸವಾಗಬೇಕು, ಅಲ್ಲಿಯ ಸಾಧನಸಾಮಗ್ರಿ ಮತ್ತು ಉದ್ಯೋಗಗಳ ಅವಕಾಶದ ಮೇಲೆ ತಮ್ಮ ಹಕ್ಕು ಇರಬೇಕು. ಈ ಭಾವನೆಗಳು ಪ್ರಾದೇಶಿಕ ಅಭಿಮಾನದ ರೂಪ ತಳೆಯುವುದು.

ಇಂತಹ ಪ್ರಕಾರದ ಭಾಷೆಯ, ಪ್ರದೇಶದ ಸಂಸ್ಕೃತಿ ಮತ್ತು ಅವುಗಳೊಂದಿಗೆ ಸಂಲಗ್ನವಾಗಿರುವ ಅಭಿಮಾನ ಒಟ್ಟುಗೂಡಿದರೆ ಅದರಿಂದ ಪ್ರದೇಶದ ಭಾವನೆ ಬೆಳೆಯುವುದು. ಇದರಿಂದ ಕೆಲವು ಸಲ ಸ್ವತಂತ್ರ ರಾಜಕೀಯ ಪಕ್ಷ ಅಸ್ತಿತ್ವದಲ್ಲಿ ಬರುವವು ಮತ್ತು ಒಮ್ಮೊಮ್ಮೆ ವಿವಿಧ ಬಲವಂತ ಹೇರುವ ಗುಂಪುಗಳು, ಚಳುವಳಿಗಳು ನಿರ್ಮಾಣವಾಗುವವು. ಇವುಗಳೆಲ್ಲರ ಗುರಿ ಒಂದೇ ಇರುವದು. ಅದು ಎಂದರೆ ತಮ್ಮ ಪ್ರದೇಶದ ಹಿತಸಂಬಂಧದ ರಕ್ಷಣೆ ಮಾಡುವದು.

## ಪ್ರಾದೇಶಿಕ ಪಕ್ಷ

ವಿಶಿಷ್ಟ ಪ್ರದೇಶದ ಭಿನ್ನತೆಯ ಅಭಿಮಾನ ಪಡುವ ಮತ್ತು ಅದರ ವಿಕಾಸವಾಗಬೇಕು ಎಂದು ಅಧಿಕಾರದ ಸ್ಪರ್ಧೆಯಲ್ಲಿ ಇಳಿಯುವ ರಾಜಕೀಯ ಗುಂಪುಗಳಿಗೆ 'ಪ್ರಾದೇಶಿಕ ಪಕ್ಷ' ಅನ್ನುವರು. ಅವರ ಪ್ರಭಾವ ಆಯಾ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರುವದು. ಆದರೂ ತಮ್ಮ ಪ್ರದೇಶದ ಪ್ರಭಾವೀ ಪಾತ್ರವನ್ನು ವಹಿಸಿ ಅವರು ರಾಷ್ಟ್ರೀಯ ರಾಜಕಾರಣದ ಮೇಲೆ ತಮ್ಮ ಪ್ರಭಾವಬೀರುತ್ತಾರೆ. ಪ್ರಾದೇಶಿಕ ಪಕ್ಷಗಳು, ಪ್ರಾದೇಶಿಕ ಸಮಸ್ಯೆಗಳಿಗೆ ಪ್ರಾಧಾನ್ಯತೆಯನ್ನು ನೀಡುವವು. ತಮ್ಮ ಪ್ರದೇಶದ

ವಿಕಾಸ ಮಾಡಲು ಅವರಿಗೆ ಕೇವಲ ಅಧಿಕಾರಕ್ಕಿಂತಲೂ ಸ್ವಾಯುತ್ತತೆ ಅವಶ್ಯಕವೆನಿಸುವದು. ಸಂಘ ಆಡಳಿತಕ್ಕೆ ಸಹಕಾರ್ಯ ಮಾಡುತ್ತ ತಮ್ಮ ಸ್ವಾಯುತ್ತತೆಯ ಕ್ಷೇತ್ರವನ್ನು ಅಬಾಧಿತವಾಗಿಡುವ ಪ್ರಯತ್ನವನ್ನು ಪ್ರಾದೇಶಿಕ ಪಕ್ಷಗಳು ಮಾಡುತ್ತವೆ.

ಹಾಗೆಯೇ ಪ್ರಾದೇಶಿಕ ಸಮಸ್ಯೆಗಳು ಪ್ರಾದೇಶಿಕ ಮಟ್ಟದಲ್ಲಿಯೇ ಬಗೆಹರಿಸಬೇಕು. ಅಧಿಕಾರ ಆ ಪ್ರದೇಶದಲ್ಲಿಯ ವ್ಯಕ್ತಿಗಳ ಕೈಯಲ್ಲಿಯೇ ಇರಬೇಕು, ಆಡಳಿತದಲ್ಲಿ ಮತ್ತು ವ್ಯವಸಾಯಗಳಲ್ಲಿ ಆ ಪ್ರದೇಶದ ಜನರಿಗೆ ಅಗ್ರಕ್ರಮ ಕೊಡಬೇಕು ಎಂಬ ಆಗ್ರಹ ಪ್ರಾದೇಶಿಕ ಪಕ್ಷಗಳದ್ದಿರುತ್ತದೆ.

**ಭಾರತದಲ್ಲಿಯ ಪ್ರಾದೇಶಿಕ ಪಕ್ಷಗಳ ಬದಲಾಗುತ್ತಿರುವ ಸ್ವರೂಪ:** ಸ್ವಾತಂತ್ರ್ಯೋತ್ತರ ಕಾಲದಿಂದ ಭಾರತದಲ್ಲಿ ಪ್ರಾದೇಶಿಕ ಪಕ್ಷಗಳು ಅಸ್ತಿತ್ವದಲ್ಲಿವೆ, ಆದರೆ ಅವುಗಳ ಸ್ವರೂಪದಲ್ಲಿ ಮತ್ತು ಭೂಮಿಕೆಯಲ್ಲಿ ಮಾತ್ರ ಮಹತ್ವದ ಬದಲಾವಣೆಯಾದದ್ದು ಕಂಡು ಬರುವದು.

(1) ಪ್ರಾರಂಭದ ಕಾಲದಲ್ಲಿ ಪ್ರಾದೇಶಿಕ ಅಭಿಮಾನದಿಂದ ಕೆಲವು ವಿದ್ರೋಹಿ ಚಳುವಳಿಗಳಾದವು. ಸ್ವತಂತ್ರ ಖಲಿಸ್ತಾನ, ದ್ರವಿಡಸ್ತಾನ ಇಂಥ ಬೇಡಿಕೆಗಳ ಗುರಿ ಸಂಘರಾಜ್ಯದಿಂದ ಹೊರಬಿದ್ದು ಸ್ವತಂತ್ರ ದೇಶ ನಿರ್ಮಾಣ ಮಾಡುವದಾಗಿತ್ತು. ಪಂಜಾಬ, ತಮಿಳನಾಡು, ಜಮ್ಮು ಮತ್ತು ಕಾಶ್ಮೀರ ಇಲ್ಲಿನ ಪ್ರಾದೇಶಿಕ ಪಕ್ಷಗಳ ಉದಾಹರಣೆಯನ್ನು ಈ ಸಂದರ್ಭದಲ್ಲಿ ಕೊಡಬಹುದು.

(2) ಪ್ರಾದೇಶಿಕ ಪಕ್ಷಗಳ ಭೂಮಿಕೆಯಲ್ಲಿ ಸಾವಕಾಶವಾಗಿ ಬದಲಾವಣೆಯಾಗಹತ್ತಿತು. ಸ್ವತಂತ್ರ ರಾಜ್ಯದ ಬೇಡಿಕೆಯ ಬದಲಾಗಿ ಹೆಚ್ಚಿನ ಸ್ವಾಯುತ್ತತೆ ದೊರಕಬೇಕೆಂಬ ಪ್ರಯತ್ನ ಪ್ರಾರಂಭಿಸಿದವು ಇದು ಪ್ರಾದೇಶಿಕ ಪಕ್ಷಗಳ ವಿಕಾಸದಲ್ಲಿಯ ಎರಡನೆಯ ಹಂತ ಹೌದು. ಈ ಹಂತದ ಪ್ರಾರಂಭ ಸಾಮಾನ್ಯವಾಗಿ 1990ರ ನಂತರ ಆಯಿತು

(3) ತಮ್ಮ ಪ್ರದೇಶದ ವಿಕಾಸಕ್ಕಾಗಿ ತಮ್ಮ ಪ್ರದೇಶದಲ್ಲಿಯ ಜನರಿಗೆ ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಅಧಿಕಾರ ಸಿಗಬೇಕು ಎಂಬ ಭೂಮಿಕೆಯನ್ನು ಪ್ರಾದೇಶಿಕ ಪಕ್ಷಗಳು ಈಗ ತಗೆದುಕೊಳ್ಳಹತ್ತಿವೆ.

(4) ಈಶಾನ್ಯ ಭಾರತದಲ್ಲಿಯ ಪ್ರಾದೇಶಿಕ ಪಕ್ಷಗಳ ವಿಕಾಸದ ಒಂದು ಬೇರೆ ಒಲವು ಕಾಣಿಸುವದು ಈ ಪ್ರದೇಶದಲ್ಲಿಯ ರಾಜಕೀಯ ಪಕ್ಷಗಳು ಒಡಕಿನ ಬೇಡಿಕೆಯನ್ನು ಬಿಟ್ಟು ಸ್ವಾಯುತ್ತತೆಯ ಬೇಡಿಕೆಯನ್ನು ಮಾಡಲು ಆರಂಭಿಸಿವೆ. ಈಶಾನ್ಯ ಭಾರತದಲ್ಲಿಯ ಸರ್ವ ಪ್ರಾದೇಶಿಕ ಪಕ್ಷಗಳು ಹಂತ ಹಂತವಾಗಿ ಮುಖ್ಯ ರಾಷ್ಟ್ರೀಯ ಪ್ರವಾಹದಲ್ಲಿ ಬರುತ್ತಲಿವೆ.

ಸ್ವಲ್ಪದರಲ್ಲಿ ಹೇಳುವದಾದರೆ, ಭಾರತದಲ್ಲಿಯ ಪ್ರಾದೇಶಿಕ ಪಕ್ಷಗಳ ಪ್ರವಾಸವು ಒಡಕಿನ (ವಿದ್ರೋಹಿ) ಸ್ವಾಯತ್ತತೆ ಮತ್ತು ಮುಖ್ಯ ರಾಷ್ಟ್ರೀಯ ಪ್ರವಾಹದಲ್ಲಿ ಸೇರ್ಪಡೆಯಾಗುವದು ಈ ಹಂತಗಳಿಂದ ಮುಂದುವರೆದಿದೆ. ಹಾಗೆಯೆ ರಾಷ್ಟ್ರೀಯ ರಾಜಕಾರಣದಲ್ಲಿಯೂ ಅವರ ಪ್ರಭಾವ ಹೆಚ್ಚಿದ್ದು ಸಮ್ಮಿಶ್ರ ಸರಕಾರ ಇದು ಅದರ ಒಂದು ಪರಿಣಾಮವಾಗಿದೆ.

ಭಾರತದಲ್ಲಿ ಅನೇಕ ಪ್ರಾದೇಶಿಕ ಪಕ್ಷಗಳಿವೆ. ಎಲ್ಲ ಪಕ್ಷಗಳ ಮಾಹಿತಿಯನ್ನು ಇಲ್ಲಿ ಕೊಡುವುದು ಸಾಧ್ಯವಿಲ್ಲ, ಅಂತೆಯೇ ನಾವು ಭಾರತದ ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ಉತ್ತರ ಮುಂತಾದ ಕ್ಷೇತ್ರಗಳಲ್ಲಿಯ ಕೆಲವು ಪ್ರಾತಿನಿಧಿಕ ಪಕ್ಷಗಳ ಪರಿಚಯ ಮಾಡಿಕೊಳ್ಳುವವರಿದ್ದೇವೆ.

**ಕೆಲವು ಪ್ರಮುಖ ಪ್ರಾದೇಶಿಕ ಪಕ್ಷಗಳು ಹೀಗಿವೆ**

**(1)**



ಶಿವಸೇನಾ

- ಮಹಾರಾಷ್ಟ್ರದಲ್ಲಿಯ ಪ್ರಮುಖ ರಾಜಕೀಯ ಪಕ್ಷ, 1966ರಲ್ಲಿ ಸ್ಥಾಪನೆ
- ಮರಾಠಿ ಜನರ ಹಕ್ಕುಗಳ ರಕ್ಷಣೆ, ಮರಾಠಿ ಭಾಷೆಯ ಸಂವರ್ಧನೆ, ಪರಪ್ರಾಂತೀಯರಿಗೆ ವಿರೋಧ.
- 1995ರಲ್ಲಿ ಭಾರತೀಯ ಜನತಾ ಪಕ್ಷದೊಂದಿಗೆ ಮೈತ್ರಿ ಮಾಡಿ ಶಿವಸೇನಾ ಈ ಪಕ್ಷವು ಮೊಟ್ಟಮೊದಲು ಮಹಾರಾಷ್ಟ್ರದ ಸತ್ತೆಯ ಮೇಲೆ ಬಂದಿತು. 2014ರ ಚುನಾವಣೆಯ ನಂತರ ಮಹಾರಾಷ್ಟ್ರದಲ್ಲಿ ಭಾಜಪದೊಂದಿಗೆ ಆಡಳಿತದಲ್ಲಿ ಸಹಭಾಗ. 2019ರಲ್ಲಿಯ ಚುಣಾವಣೆಯ ನಂತರ ಕಾಂಗ್ರೆಸ್ ಪಕ್ಷ ಮತ್ತು ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷ ಇವುಗಳ ಜೊತೆಗೆ ಮಹಾವಿಕಾಸ ಆಗಾಡಿ ಮಾಡಿಕೊಂಡು ಆಡಳಿತದಲ್ಲಿ.

(2)

**ಶಿರೋಮಣಿ ಅಕಾಲಿ ದಳ**

- ಪಂಜಾಬದಲ್ಲಿಯ ಮಹತ್ವದ ಪ್ರಾದೇಶಿಕ ಪಕ್ಷ 1920ರಲ್ಲಿ ಸ್ಥಾಪನೆ.
- ಧಾರ್ಮಿಕ ಮತ್ತು ಪ್ರಾದೇಶಿಕ ಸ್ವಾಭಿಮಾನವನ್ನು ಕಾಪಾಡಲು ಪ್ರಾಧಾನ್ಯತೆ.
- ಪಂಜಾಬದಲ್ಲಿ ಅನೇಕ ವರ್ಷ ಆಡಳಿತದಲ್ಲಿ.

(3)

**ಜಮ್ಮು ಮತ್ತು ಕಾಶ್ಮೀರ ನ್ಯಾಶನಲ್ ಕಾನ್ಫರನ್ಸ**

- ಕಾಶ್ಮೀರದಲ್ಲಿಯ ಪ್ರಮುಖ ಪ್ರಾದೇಶಿಕ ಪಕ್ಷ 1932ರಲ್ಲಿ ಸ್ಥಾಪನೆ.
- ಕಾಶ್ಮೀರದಲ್ಲಿಯ ಜನತೆಯ ಹಿತಸಂಬಂಧಗಳಿಗೆ ಬೆಂಬಲ, ಸ್ವಾಯತ್ತತೆಯನ್ನು ಜೋಪಾನ ಮಾಡಲು ಪ್ರಯತ್ನ.

(4)

**ಆಸಾಮ ಗಣ ಪರಿಷದ**

- ಸರಕಾರದೊಂದಿಗೆ ವಿಚಾರ ವಿನಿಮಯದಿಂದ 1985ರಲ್ಲಿ ಆಸಾಮ ಕರಾರು 1985ರಲ್ಲಿ ಸ್ಥಾಪನೆ.
- ನಿರ್ವಾಸಿತರ ಪ್ರಶ್ನೆ ಬಿಡಿಸುವದು, ಆಸಾಮದ ಸಾಂಸ್ಕೃತಿಕ, ಭಾಷಿಕ ಮತ್ತು ಸಾಮಾಜಿಕ ಭಿನ್ನತೆಯನ್ನು ಕಾಪಾಡುವದು. ಆರ್ಥಿಕ ವಿಕಾಸಕ್ಕಾಗಿ ಪ್ರಯತ್ನ.
- ಕಳೆದ ಹಲವಾರು ವರ್ಷಗಳಿಂದ ಆಸಾಮದಲ್ಲಿ ಆಡಳಿತ ಪಕ್ಷ

(5)

| ದ್ರವಿಡ ಮುನ್ನೇತ್ರ ಕಳಘಮ | |
|---|---|
|  | 1920ರಲ್ಲಿಯ ಜಸ್ಟಿಸ ಪಾರ್ಟಿ ಈ ಬ್ರಾಹ್ಮಣೇತರ ಚಳುವಳಿಯ ರೂಪಾಂತರ ದ್ರವಿಡ ಮುನ್ನೇತ್ರ ಕಳಘಮ ಈ ರಾಜಕೀಯ ಪಕ್ಷದಲ್ಲಾಯಿತು. 1944ರಲ್ಲಿ ಜಸ್ಟಿಸ್ ಪಾರ್ಟಿಯು ದ್ರವಿಡ ಕಳಘಮ ಎಂದು ಗುರುತಿಸಲಾಗಹತ್ತಿತು. 1949ರಲ್ಲಿ ಇದರಿಂದ ಒಂದು ಗುಂಪು ಹೊರ ಬಿದ್ದು ದ್ರವಿಡ ಮುನ್ನೇತ್ರ ಕಳಘಮ ಎಂಬ ಪಕ್ಷವನ್ನು ಸ್ಥಾಪಿಸಿತು. ಆದರಿಂದಲೂ ಹೊರಬಿದ್ದ ಒಂದು ಗುಂಪು ಆಲ್ ಇಂಡಿಯಾ ಅಣ್ಣಾ ದ್ರವಿಡ ಮುನ್ನೇತ್ರ ಕಳಘಮ ಈ ಪಕ್ಷದ 1972ರಲ್ಲಿ ಸ್ಥಾಪನೆ ಮಾಡಿತು.<br>ತಮಿಳ ಸ್ವಾಭಿಮಾನವನ್ನು ಕಾಪಾಡುವ ಪ್ರಯತ್ನ ಕೇಂದ್ರದ ಸಂಮಿಶ್ರ ಸರಕಾರದಲ್ಲಿ ಕೆಲವು ಕಾಲ ಸಹಭಾಗ.<br>ಎಲ್ಲ ಹಂತಗಳಿಂದ ಮತದಾರರ ಪಕ್ಷಕ್ಕೆ ಬೆಂಬಲ ದೀರ್ಘಕಾಲ ಅಧಿಕಾರದಲ್ಲಿದ್ದುದರಿಂದ ಅನೇಕ ಉಪಾಯ ಯೋಜನೆಗಳು ಕಾರ್ಯ ರೂಪಕ್ಕೆ ತಂದಿತು. |

ಭಾರತದಲ್ಲಿ ಪ್ರತಿಯೊಂದು ರಾಜ್ಯದಲ್ಲಿ ಅನೇಕ ಪ್ರಾದೇಶಿಕ ಪಕ್ಷಗಳಿವೆ. ಅವು ಆಯಾ ರಾಜ್ಯದ ರಾಜಕಾರಣದ ಮೇಲೆ ಪ್ರಭಾವ ಬೀರಿವೆ. ಆದರ ಒಂದು ಉದಾಹರಣೆಗಾಗಿ ಮಹಾರಾಷ್ಟ್ರದಲ್ಲಿಯ ಪ್ರಾದೇಶಿಕ ಪಕ್ಷಗಳ ಎರಡು ಚುನಾವಣೆಗಳಲ್ಲಿಯ ಸಾಧನೆಯನ್ನು ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

**ಮಹಾರಾಷ್ಟ್ರದಲ್ಲಿಯ ಪ್ರಾದೇಶಿಕ ಪಕ್ಷ (ವಿಧಾನ ಸಭೆಯಲ್ಲಿಯ ಪ್ರತಿನಿಧಿತ್ವ)**

| ಪಕ್ಷಗಳ ಹೆಸರು | ಗೆದ್ದ ಸ್ಥಾನಗಳು | |
|---|---|---|
| | ಚುನಾವಣೆ ವರ್ಷ 2009 | ಚುನಾವಣೆ ವರ್ಷ 2014 |
| ಶಿವಸೇನಾ | 44 | 63 |
| ಮಹಾರಾಷ್ಟ್ರ ನವನಿರ್ಮಾಣ ಸೇನಾ | 13 | 01 |
| ಶೇತಕರಿ ಕಾಮಗಾರ ಪಕ್ಷ | 04 | 03 |
| ಭಾರಿಪ ಮಹುಜನ ಮಹಾಸಂಘ | 01 | 01 |
| ಭಾರತೀಯ ರಿಪಬ್ಲಿಕನ ಪಕ್ಷ | - | - |
| ಸಮಾಜವಾದಿ ಪಕ್ಷ | 04 | 01 |
| ಬಹುಜನ ವಿಕಾಸ ಆಘಾಡಿ | 02 | 03 |

| ಪಕ್ಷಗಳ ಹೆಸರು | ಗೆದ್ದ ಸ್ಥಾನಗಳು | |
|---|---|---|
| | ಚುನಾವಣೆ ವರ್ಷ 2009 | ಚುನಾವಣೆ ವರ್ಷ 2014 |
| ರಾಷ್ಟ್ರೀಯ ಸಮಾಜ ಪಕ್ಷ | 01 | 01 |
| ಆಲ್ ಇಂಡಿಯಾ ಮಜಲಿಸ್ ಈ-ಇತೆಹದುಲ್ಲಾ ಮುಸಲಮೀನ | * | 02 |
| ಜನಸುರಾಜ್ಯ ಶಕ್ತಿ | 02 | - |
| ಲೋಕ ಸಂಗ್ರಾಮ | 01 | - |
| ಸ್ವಾಭಿಮಾನಿ ಪಕ್ಷ | 01 | - |

(* ಈ ಪಕ್ಷ 2009ರಲ್ಲಿ ಅಸ್ತಿತ್ವದಲ್ಲಿ ಇದ್ದಿದಿಲ್ಲ)



**ಹೇಳಿರಿ ನೋಡೋಣ?**

ಭಾರತದಲ್ಲಿಯ ಎಲ್ಲ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳಿವೆ. ಆ ಎಲ್ಲವುಗಳ ಬಗೆಗೆ ಇಲ್ಲಿ ಹೇಳಲು ಸಾಧ್ಯವಿಲ್ಲ. ಭಾರತದ ನಕಾಶೆಯ ಆಧಾರದಿಂದ ಇನ್ನೂ ಕೆಲವು ಪಕ್ಷಗಳ ಕುರಿತು ಮಾಹಿತಿ ಪಡೆಯಿರಿ.

ಈ ಪಾಠದಲ್ಲಿ ನಾವು ಭಾರತದಲ್ಲಿಯ ರಾಷ್ಟ್ರೀಯ ಮತ್ತು ಪ್ರಾದೇಶಿಕ ಮಟ್ಟದಲ್ಲಿಯ ರಾಜಕೀಯ ಪಕ್ಷಗಳ ಪುನರಾವಲೋಕನೆ ಮಾಡಿದ್ದೇವೆ. ಮುಂದಿನ ಪಾಠದಲ್ಲಿ ರಾಜಕೀಯ ಚಳುವಳಿಗಳ ನಮ್ಮ ಜೀವನದಲ್ಲಿಯ ಮಹತ್ವವನ್ನು ತಿಳಿದುಕೊಳ್ಳೋಣ.

## ಅಭ್ಯಾಸ

**1. ಕೆಳಗಿನ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನಾಯ್ದು ವಿಧಾನಗಳನ್ನು ಪೂರ್ಣ ಮಾಡಿರಿ.**

(1) ರಾಜಕೀಯ ಅಧಿಕಾರ ದೊರಕಿಸಲು ಯಾವಾಗ ಜನರು ಒಟ್ಟಿಗೆ ಸೇರಿ ಚುನಾವಣಾ ಪ್ರಕ್ರಿಯೆಯಲ್ಲಿ ಸಹಭಾಗಿ ಆಗುವರೋ, ಆಗ ಆ ಸಂಘಟನೆಗೆ ....... ವೆನ್ನಲಾಗುವುದು.

(ಅ) ಸರಕಾರ (ಬ) ಸಮಾಜ
(ಕ) ರಾಜಕೀಯ ಪಕ್ಷ (ಡ) ಸಾಮಾಜಿಕ ಸಂಸ್ಥೆ

(2) ನ್ಯಾಶನಲ್ ಕಾನ್ಫರನ್ಸ್ ಈ ಪಕ್ಷವು ...... ಇಲ್ಲಿದೆ.

(ಅ) ಓಡಿಶಾ (ಬ) ಆಸಾಮ
(ಕ) ಬಿಹಾರ (ಡ) ಜಮ್ಮು ಮತ್ತು ಕಾಶ್ಮೀರ

(3) ಜಸ್ಟಿಸ ಪಾರ್ಟಿ ಈ ಬ್ರಾಹ್ಮಣೇತರ ಚಳುವಳಿಯ ರೂಪಾಂತರವು ........... ಈ ರಾಜಕೀಯ ಪಕ್ಷದಲ್ಲಿ ಆಯಿತು.

(ಅ) ಆಸಾಮ ಗಣ ಪರಿಷದ
(ಬ) ಶಿವಸೇನಾ
(ಕ) ದ್ರವಿಡ ಮುನ್ನೇತ್ರ ಕಳಘಮ
(ಡ) ನ್ಯಾಶನಲ್ ಕಾನ್ಫರನ್ಸ

**2. ಮುಂದಿನ ವಿಧಾನಗಳು ಸರಿಯೋ, ತಪ್ಪೋ ಎಂಬುದನ್ನು ಕಾರಣ ಸಹಿತ ವಿವರಿಸಿರಿ.**

(1) ರಾಜಕೀಯ ಪಕ್ಷಗಳು ಸರಕಾರ ಮತ್ತು ಜನತೆ ಇವುಗಳಲ್ಲಿಯ ಕೊಂಡಿಯಂತೆ ಕೆಲಸ ಮಾಡುತ್ತವೆ.

(2) ರಾಜಕೀಯ ಪಕ್ಷಗಳು ಇವು ಸಾಮಾಜಿಕ ಸಂಘಟನೆಗಳೇ ಇರುತ್ತವೆ.

(3) ಸಂಮಿಶ್ರ ಸರಕಾರದಿಂದ ಅಸ್ಥಿರತೆ ನಿರ್ಮಾಣವಾಗುತ್ತದೆ.

(4) 'ಶಿರೋಮಣಿ ಅಕಾಲಿ ದಳ' ಇದು ರಾಷ್ಟ್ರೀಯ ಪಕ್ಷವಾಗಿದೆ.

**3. ಮುಂದಿನ ಸಂಕಲ್ಪನೆಯನ್ನು ಸ್ಪಷ್ಟ ಪಡಿಸಿರಿ.**

(1) ಪ್ರಾದೇಶಿಕತೆ (2) ರಾಷ್ಟ್ರೀಯ ಪಕ್ಷ

**4. ಕೆಳಗಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರಿಸಿರಿ.**

(1) ರಾಜಕೀಯ ಪಕ್ಷಗಳ ಪ್ರಮುಖ ವೈಶಿಷ್ಟ್ಯಗಳನ್ನು ಸ್ಪಷ್ಟಪಡಿಸಿರಿ.

(2) ಭಾರತದಲ್ಲಿಯ ಪಕ್ಷ ಪದ್ಧತಿಯ ಸ್ವರೂಪದಲ್ಲಿ ಯಾವ ಬದಲಾವಣೆಯಾಗಿದೆ?

### ಉಪಕ್ರಮ

(1) ನಿಮ್ಮ ತಂದೆ ತಾಯಿಯವರ ಹೆಸರು ಯಾವ ಲೋಕಸಭಾ ಮತದಾರ ಸಂಘದಲ್ಲಿ ಬರುವದೋ ಆ ಮತದಾರ ಸಂಘವನ್ನು ಮಹಾರಾಷ್ಟ್ರದ ನಕಾಶೆಯ ರೇಖಾಚಿತ್ರದಲ್ಲಿ ತೋರಿಸಿರಿ.

(2) ಭಾರತದ ನಕಾಶೆಯ ರೇಖಾಚಿತ್ರದಲ್ಲಿ ಪ್ರಮುಖ ರಾಜಕೀಯ ಪ್ರಾದೇಶಿಕ ಪಕ್ಷಗಳ ಪ್ರಭಾವ ಎಲ್ಲೆಲ್ಲಿ ಇದೆಯೋ, ಆ ಸ್ಥಳಗಳನ್ನು ತೋರಿಸಿರಿ.

4VMEG2

# 4. ಸಾಮಾಜಿಕ ಮತ್ತು ರಾಜಕೀಯ ಚಳುವಳಿ

ಒಂದು ಸ್ಥಾನಿಕ ವರ್ತಮಾನ ಪತ್ರಿಕೆಯಲ್ಲಿಯ ಈ ಸುದ್ದಿಯನ್ನು ಓದಿರಿ.

> ಬಾಲವಿವಾಹ ವಿರೋಧದ ಚಳುವಳಿಗೆ ಸಾಕಷ್ಟು ಯಶಸ್ಸು ದೊರಕಿದ್ದು ಬಾಲವಿವಾಹದ ಪ್ರಮಾಣದಲ್ಲಿ ಸುಮಾರು 50% ಕಡಿಮೆಯಾಗಿದೆ. ಈ ಚಳುವಳಿಯಲ್ಲಿ ಕಾರ್ಯಕರ್ತರು ಬಹಳ ಜಾಗರೂಕತೆಯಿಂದ ಕಾರ್ಯವೆಸಗಿದರು.
>
> ವರದಕ್ಷಿಣೆ ವಿರೋಧಿ ಚಳುವಳಿಯ ಕಾರ್ಯಕರ್ತರೂ ಸಾಕಷ್ಟು ಸಹಾಯ ಮಾಡಿದರು. ಇದೇ ಪರಿಸರದಲ್ಲಿ ಈಗ ಕುಪೋಷಣೆಯ ವಿರುದ್ಧದ ಅಭಿಯಾನ ಕೈಗೆತ್ತಿಕೊಳ್ಳುವದು ಅವಶ್ಯಕವಾಗಿದೆ. ಏಕೆಂದರೆ ಬಡತನ ಮತ್ತು ಕುಪೋಷಣೆ ಇವು ಬಹಳ ವಿಚಾರ ಮಾಡುವ ಸಮಸ್ಯೆಗಳಾಗಿವೆ.

- ವರ್ತಮಾನ ಪತ್ರಿಕೆಯಲ್ಲಿಯ ಈ ಸುದ್ದಿಗಳಲ್ಲಿ ಚಳುವಳಿಯ ಉಲ್ಲೇಖವಿದೆ. ಅದರ ಅರ್ಥವನ್ನು ನೀವು ಹೇಳಬಲ್ಲಿರೇ?
- ಈ ಸುದ್ದಿಯಲ್ಲಿ ಬಿಡಿ-ಬಿಡಿಯಾಗಿ ಒಂದೊಂದು ವಿಷಯ ಕಾಣಿಸುವವು ಅಂದರೆ ಚಳುವಳಿಗಳು ಒಂದೇ ವಿಷಯಕ್ಕೆ ಸಂಬಂಧಿತವಾಗಿರುತ್ತವೆಯೆ?
- ಚಳುವಳಿಗಳು ಪರಸ್ಪರಿಗೆ ಸಹಕಾರ್ಯ ಮಾಡಿದರೆ ಅವು ಹೆಚ್ಚು ಪ್ರಭಾವಶಾಲಿಯಾಗಬಹುದು ಎಂದು ನಿಮಗೆ ಅನಿಸುವುದೇ?

ಹಿಂದಿನ ಪಾಠದಲ್ಲಿ ನಾವು ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳ ಕುರಿತು ತಿಳಿದುಕೊಂಡಿದ್ದೇವೆ. ರಾಜಕೀಯ ಪಕ್ಷಗಳು ಅಧಿಕಾರದ ಸ್ಪರ್ಧೆಯಲ್ಲಿ ಇರುತ್ತವೆ ಮತ್ತು ಚುನಾವಣೆಯಲ್ಲಿ ಗೆದ್ದು ಸಾಮಾನ್ಯ ಜನರ ಪ್ರಶ್ನೆಗಳನ್ನು ಬಿಡಿಸುವ ಪ್ರಯತ್ನ ಮಾಡುತ್ತವೆ. ರಾಜಕೀಯ ಪಕ್ಷಗಳ ಭೂಮಿಕೆ ಸರ್ವಸಮಾವೇಶಕ ಸ್ವರೂಪದ್ದಿರುತ್ತದೆ ಅವರಿಗೆ ಯಾವುದಾದರೂ ಒಂದೇ ಪ್ರಶ್ನೆಯ ಮೇಲೆ ಲಕ್ಷ್ಯವನ್ನು ಕೇಂದ್ರೀಕರಿಸಲು ಬರುವದಿಲ್ಲ, ಸಾರ್ವಜನಿಕ ಸ್ವಚ್ಛತೆಯಿಂದ ಹಿಡಿದು ಅಂತರಾಳ ಸಂಶೋಧನೆಯ ವರೆಗಿನ ಎಲ್ಲ ಅಂಶಗಳ ಬಗೆಗೆ ಅವರಿಗೆ ರಾಷ್ಟ್ರೀಯ ಭೂಮಿಕೆಯಿಂದ ವಿಚಾರಮಾಡಿ ನಿರ್ಣಯವನ್ನು ತಗೆದುಕೊಳ್ಳಬೇಕಾಗುವದು. ಸಮಾಜದಲ್ಲಿಯ ಎಲ್ಲ ಸಮಾಜ ಘಟಕಗಳ ಸಮಸ್ಯೆಗಳಿಗಾಗಿ ರಾಜಕೀಯ ಪಕ್ಷಗಳ ಹತ್ತಿರ ಕೆಲವೊಂದು ಕಾರ್ಯಕ್ರಮಗಳು ಇರಬೇಕಾಗುವದು. ರೈತರು, ಕಾರ್ಮಿಕರು, ಉದ್ಯಮಿಗಳು, ಮಹಿಳೆಯರು, ತರುಣ ವರ್ಗ, ಜ್ಯೇಷ್ಠವ್ಯಕ್ತಿ ಮುಂತಾದವರ ವಿಚಾರ ಮಾಡಿ ರಾಜಕೀಯ ಪಕ್ಷಗಳು ತಮ್ಮ ಧೋರಣೆಯನ್ನು ನಿರ್ಧರಿಸುತ್ತವೆ.

## ಚಳುವಳಿ ಏಕೆ?

ಸಮಾಜದಲ್ಲಿಯ ಎಲ್ಲ ವ್ಯಕ್ತಿಗಳಿಗೆ ರಾಜಕೀಯ ಪಕ್ಷದಲ್ಲಿ ಸಹಭಾಗಿಯಾಗಿ ಸಾರ್ವಜನಿಕ ಹಿತಕ್ಕಾಗಿ ಏನಾದರೂ ಮಾಡಲು ಶಕ್ಯವಾಗುತ್ತದೆ ಎಂದಿಲ್ಲ. ಕೆಲವು ಜನರು ಯಾವುದೇ ಒಂದು ಪ್ರಶ್ನೆಯ ಮೇಲೆ ಲಕ್ಷ ಕೇಂದ್ರೀಕರಿಸಿ ಆ ಪ್ರಶ್ನೆಯನ್ನು ಅನುಸರಿಸಿ, ನೀಗಿಸುವರು. ಆ ಸಮಸ್ಯೆಯ ನಿರಾಕರಣೆಗಾಗಿ ಜನರನ್ನು ಸಂಘಟಿತಗೊಳಿಸಿ ಸರಕಾರದ ಮೇಲೆ ಯಾವುದೋ ಕೃತಿ ಮಾಡುವಂತೆ ಒತ್ತಡ ತರುವ ಪ್ರಯತ್ನ ಮಾಡುವರು. ಸತತವಾಗಿ ಕೃತಿಶೀಲರಾಗಿ ಆ ಸಮಸ್ಯೆಯಕುರಿತು ಜನಮತ ತಯಾರಿಸಿ ರಾಜಕೀಯ ಪಕ್ಷಗಳು ಮತ್ತು ಸರಕಾರದ ಮೇಲೆ ಒತ್ತಡವನ್ನು ತರುವ ಕಾರ್ಯ ಮಾಡಲಾಗುತ್ತದೆ. ಈ ಸಾಮೂಹಿಕ ಕೃತಿಗಳಿಗೆ 'ಚಳುವಳಿ' ಎಂದು ಕರೆಯುತ್ತಾರೆ. ಸಾಮೂಹಿಕ ಕೃತಿ ಇದು ಚಳುವಳಿಯ ತಿರುಳು ಇರುವದು.

ಪ್ರಜಾಪ್ರಭುತ್ವದಲ್ಲಿ ಚಳುವಳಿಗಳಿಗೆ ಬಹಳ ಮಹತ್ವ ಇರುವದು. ಚಳುವಳಿಯಿಂದ ಅನೇಕ ಸಾರ್ವಜನಿಕ ಪ್ರಶ್ನೆಗಳು ಚರ್ಚೆಗೆ ಬರುವವು. ಸರಕಾರಕ್ಕೆ ಆ ಪ್ರಶ್ನೆಗಳನ್ನು ಗಮನಕ್ಕೆ ತಗೆದುಕೊಳ್ಳಬೇಕಾಗುವದು. ಚಳುವಳಿಯಲ್ಲಿಯ ಮುಂದಾಳುಗಳು ಮತ್ತು ಕಾರ್ಯಕರ್ತರು ಸರಕಾರಕ್ಕೆ ಆ ಪ್ರಶ್ನೆಯ ಸಂದರ್ಭದಲ್ಲಿ ಅವಶ್ಯಕವಾದ ಎಲ್ಲ ಮಾಹಿತಿಯನ್ನು ಪೂರೈಸುವರು ಧೋರಣೆಯನ್ನು ರಚಿಸುವಾಗ ಸರಕಾರಕ್ಕೆ ಇಂಥ ಮಾಹಿತಿಯ ಉಪಯೋಗ ಆಗುವುದು.

ಸರಕಾರದ ಕೆಲವು ನಿರ್ಣಯಗಳಿಗೆ ಇಲ್ಲವೆ ಧೋರಣೆಗಳನ್ನು ವಿರೋಧಿಸಲು ಚಳುವಳಿಗಳನ್ನು ನಡೆಸಲಾಗುತ್ತದೆ. ನಿಷೇಧ ಇಲ್ಲವೇ ಪ್ರತಿಕಾರ ಮಾಡುವ ಹಕ್ಕು (Right to protest) ಇದು ಪ್ರಜಾಪ್ರಭುತ್ವದ ಒಂದು ಮಹತ್ವದ ಹಕ್ಕಾಗಿದೆ. ಆದರೆ ಅದನ್ನು ಅತ್ಯಂತ ಸಂಯಮದಿಂದ ಮತ್ತು ಜವಾಬ್ದಾರಿಯಿಂದ ಉಪಯೋಗಿಸಬೇಕಾಗುವುದು.



### ಹೇಳಿ ನೋಡೋಣ?

ವಲಸೆಗಾರರ ಪುನರ್ವಸನ ಯೋಗ್ಯ ರೀತಿಯಿಂದ ಆಗಬೇಕು. ಅವರ ಉಪಜೀವನದ ಸಾಧನಗಳು ಸುರಕ್ಷಿತವಾಗಿರಬೇಕು ಎಂದು ನಮ್ಮ ದೇಶದಲ್ಲಿಯ ಯಾವ ಚಳುವಳಿಗಳು ಸಕ್ರಿಯವಾಗಿದೆ?

### ಚಳುವಳಿ ಅಂದರೇನು?

- ಚಳುವಳಿ ಇದೊಂದು ಸಾಮೂಹಿಕ ಕೃತಿ ಇರುವದು. ಅದರಲ್ಲಿ ಅನೇಕ ಜನರ ಸಕ್ರಿಯ ಸಹಭಾಗ ಅಪೇಕ್ಷಿತವಾಗಿರುವದು.
- ಚಳುವಳಿ ಇದು ಜನರ ವಿಶಿಷ್ಟ ಪ್ರಶ್ನೆಯ ಸುತ್ತಲೂ ನಿರ್ಮಾಣವಾದ ಸಂಘಟನೆ ಇರುವದು. ಉದಾ., ಪ್ರದೂಷಣೆ, ಇದೊಂದೇ ಪ್ರಶ್ನೆ ತಗೆದುಕೊಂಡು ಚಳುವಳಿಯನ್ನಾರಂಭಿಸಲು ಬರುವದು.
- ಚಳುವಳಿಯ ಎದುರು ಯಾವುದೋ ನಿಶ್ಚಿತ ಸಾರ್ವಜನಿಕ ಉದ್ದೇಶ ಅಥವಾ ಪ್ರಶ್ನೆ ಇರುವದು. ಉದಾ., ಭ್ರಷ್ಟಾಚಾರ ವಿರುದ್ಧದ ಚಳುವಳಿಯ ಉದ್ದೇಶ ಭಷ್ಟಾಚಾರ ವನ್ನು ನಷ್ಟ ಮಾಡುವುದಿರುವುದು.
- ಚಳುವಳಿಗೆ ನೇತೃತ್ವವಿರುವುದು. ನೇತೃತ್ವದಿಂದ ಚಳುವಳಿಯು ಕ್ರಿಯಾಶೀಲವಾಗಿರುವದು. ಚಳುವಳಿಯ ಉದ್ದೇಶ, ಕಾರ್ಯಕ್ರಮ, ಆಂದೋಲನಾತ್ಮಕ ಹೆಜ್ಜೆ ಇವುಗಳ ಕುರಿತು ನಿರ್ಣಯ ತಗೆದುಕೊಳ್ಳಲು ಬರುವದು. ದೃಢವಾದ ನೇತೃತ್ವವಿದ್ದರೆ ಚಳುವಳಿಯು ಪರಿಣಾಮಕಾರಿಯಾಗುವುದು.
- ಚಳುವಳಿಗಳ ಸಂಘಟನೆ ಇರುತ್ತವೆ. ಸಂಘಟನೆ ಹೊರತಾಗಿ ಚಳುವಳಿಗೆ ಸತತವಾಗಿ ಪ್ರಶ್ನೆಗಳನ್ನು ಬೆಂಬಲಿಸಲು ಬರುವದಿಲ್ಲ. ಉದಾ., ರೈತರ ಚಳುವಳಿಗೆ ರೈತ ಸಂಘಟನೆಯು ಕಾರ್ಯ ಮಾಡುತ್ತದೆ.
- ಯಾವುದೇ ಚಳುವಳಿಗೆ ಜನರ ಬೆಂಬಲ ಅವಶ್ಯಕವಾಗಿರುವದು. ಚಳುವಳಿ ಯಾವ ಪ್ರಶ್ನೆಯ ಸುತ್ತಲು ನಿರ್ಮಾಣವಾಗಿದೆ ಆ ಪ್ರಶ್ನೆ ಜನರಿಗೆ ತಮ್ಮದೆನಿಸಬೇಕು. ಅದಕ್ಕಾಗಿ ನಿಶ್ಚಿತ ಕಾರ್ಯಕ್ರಮ ನಿರ್ಧರಿಸಿ, ಅದನ್ನಾಧರಿಸಿ ಚಳುವಳಿಗಳು ಜನಮತಕ್ಕೆ ಆಕಾರ ಕೊಡುವ ಪ್ರಯತ್ನ ಮಾಡುತ್ತವೆ.

**ಚರ್ಚೆ ಮಾಡಿರಿ.**

ಚಳುವಳಿಗಳು ಒಂದೇ ಪ್ರಶ್ನೆಯನ್ನು ಬೆಂಬಲಿಸುತ್ತಿದ್ದರೂ ಚಳುವಳಿಯ ಹಿಂದೆ ಒಂದು ವ್ಯಾಪಕವಾದ ವಿಚಾರ ಸರಣಿ ಇರುವದು. ಉದಾ., ಬಾಲವಿವಾಹ ಅಥವಾ ವರದಕ್ಷಿಣೆ ವಿರೋಧದ ಚಳುವಳಿಗಳ ವಿಶ್ವಾಸ ಮಹಿಳೆಯರ ಸಕ್ಷಮೀಕರಣ, ಸಾಮಾಜಿಕ ಸಮತೆ ಮುಂತಾದ ಮೌಲ್ಯಗಳ ಮೇಲೆ ಇರುವವು. ಯಥಾವಕಾಶ ಕೆಲವು ಚಳುವಳಿಗಳ ರೂಪಾಂತರ ರಾಜಕೀಯ ಪಕ್ಷದಲ್ಲಿ ಆಗುವುದು.



**ಶೋಧಿಸು ನೋಡೋಣ?**

- ಭಾರತದಲ್ಲಿಯ ಯಾವ ಚಳುವಳಿಯಿಂದ ನ್ಯಾಯಾಲಯದಲ್ಲಿ ಜನಹಿತ ಬೇಡಿಕೆ ಅರ್ಜಿ ಸಲ್ಲಿಸಿ, ನ್ಯಾಯಾಲಯಕ್ಕೆ ಅದರ ಮೇಲೆ ನಿರ್ಣಯ ಕೊಡಬೇಕಾಯಿತು?
- ಮಹಾತ್ಮಾ ಫುಲೆ, ಮಹಾತ್ಮಾ ಗಾಂಧಿ, ಸಂತ ಗಾಡಗೆ ಮಹಾರಾಜ, ಡಾ. ಬಾಬಾಸಾಹೇಬ ಅಂಬೇಡಕರ ಇವರು ಯಾವ ಚಳುವಳಿಗಳನ್ನು ಆರಂಭಿಸಿದರು?

**ಕೆಳಗಿನ ಸಂವಾದವನ್ನು ಓದಿರಿ ಮತ್ತು ಅದರ ಮೇಲೆ ಒಂದು ಪರಿಚ್ಛೇದ ಬರೆಯಿರಿ.**



**ಚರ್ಚೆ ಮಾಡಿರಿ.**

ಭಾರತದಲ್ಲಿಯ ಭೂಮಿಪುತ್ರರ ಚಳುವಳಿಗಳು ಯಾವ ಅಂಶಗಳ ಕುರಿತು ಆಗ್ರಹ ಮಾಡುತ್ತಲಿವೆ?

**ಮಾಡಿ ನೋಡಿರಿ.**

ಅಂಧಶ್ರದ್ಧಾ ನಿರ್ಮೂಲನೆ ಚಳುವಳಿ, ನದಿಗಳ, ಪ್ರದೂಷಣವನ್ನು ತಡೆಯುವ ಸಲುವಾಗಿ ಚಳುವಳಿ, ಸ್ತ್ರೀ ಭ್ರೂಣಹತ್ಯೆಯ ವಿರುದ್ಧದ ಚಳುವಳಿ, 'ನಾಟ ಇನ್ ಮಾಯ್ ನೇಮ' ಇಂಥ ಚಳುವಳಿಗಳ ಕುರಿತು ವರ್ತಮಾನ ಪತ್ರಿಕೆಯಲ್ಲಿ ಬರುವ ಸುದ್ದಿಗಳ ಸಂಕಲನೆ ಮಾಡಿರಿ.

**ಗೊತ್ತಿದೆಯೇ ನಿಮಗೆ?**

- ಸಾರ್ವಜನಿಕ ಪ್ರಶ್ನೆಗಳು ಕೇವಲ ಸಾಮಾಜಿಕ ಕ್ಷೇತ್ರದ್ದೇ ಇರುತ್ತವೆಂದಲ್ಲ. ಅವು ಸಮಾಜದ ಯಾವುದೇ ಕ್ಷೇತ್ರದಿಂದ ನಿರ್ಮಾಣವಾಗಬಹುದು. ಸಮಾಜ ಸುಧಾರಣೆಗಾಗಿ ನಮ್ಮ ದೇಶದಲ್ಲಿ ಮತ್ತು ವಿಶೇಷವಾಗಿ ಮಹಾರಾಷ್ಟ್ರದಲ್ಲಿ ಅನೇಕ ಚಳುವಳಿಗಳಾದವು ಮತ್ತು ಅದರಿಂದ ಸಮಾಜವು ಆಧುನಿಕವಾಗಲು ಆರಂಭಿಸಿತು.
- ನಮ್ಮ ಸ್ವಾತಂತ್ರ್ಯಕ್ಕಾಗಿ ಮಾಡಿದ ಹೋರಾಟವು ಕೂಡ ಒಂದು ಸಾಮಾಜಿಕ ಚಳುವಳಿಯಾಗಿತ್ತು.
- ರಾಜಕೀಯ ಮತ್ತು ಆರ್ಥಿಕ ಚಳುವಳಿಗಳಿಂದ ನಾಗರಿಕರ ಹಕ್ಕುಗಳ ರಕ್ಷಣೆ, ಮತಾಧಿಕಾರ, ಕನಿಷ್ಠ ವೇತನ, ಆರ್ಥಿಕ ಸುರಕ್ಷಿತತೆ ಇಂಥ ಪ್ರಶ್ನೆಗಳನ್ನು ಬಗೆಹರಿಸಲಾಗುತ್ತದೆ. ಸ್ವದೇಶಿ ಇದು ಒಂದು ಮಹತ್ವದ ಆರ್ಥಿಕ ಚಳುವಳಿಯಾಗಿದೆ.

## ಭಾರತದಲ್ಲಿಯ ಪ್ರಮುಖ ಚಳುವಳಿಗಳು

**ಬುಡಕಟ್ಟಿನ ಜನಾಂಗದ ಚಳುವಳಿ :** ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಬ್ರಿಟಿಷರು ಬುಡಕಟ್ಟಿನ ಜನರು ಅರಣ್ಯಸಂಪತ್ತಿನ ಮೇಲೆ ಉದರ ನಿರ್ವಾಹ ಮಾಡುವ ಹಕ್ಕಿನ ಮೇಲೆ ಬಂಧನ ಹೇರಿದರು ಛೋಟಾ ನಾಗಪೂರ ಪರಿಸರದಲ್ಲಿಯ ಕೋಲಾಮ, ಒಡಿಶಾದಲ್ಲಿಯ ಗೊಂಡ, ಮಹಾರಾಷ್ಟ್ರದಲ್ಲಿಯ ಮೀನುಗಾರರು, ಭಿಲ್ಲ, ರಾಮೋಶಿ, ಬಿಹಾರದಲ್ಲಿಯ ಸಂಥಾಳ, ಮುಂಡಾ ಬುಡಕಟ್ಟಿನ ಜನರು ದೊಡ್ಡ ಪ್ರಮಾಣದಲ್ಲಿ ಬಂಡಾಯ ಮಾಡಿದರು. ಅಂದಿನಿಂದ ಈ ಜನರ ಸಂಘರ್ಷ ನಡದೇ ಇದೆ. ಭಾರತದಲ್ಲಿಯ ಬುಡಕಟ್ಟಿನ ಜನರ ಅನೇಕ ಸಮಸ್ಯೆಗಳಿವೆ. ಅದರಲ್ಲಿಯ ಮುಖ್ಯ ಸಮಸ್ಯೆಯಂದರೆ ಅವರ ಅರಣ್ಯದ ಮೇಲಿನ ಅಧಿಕಾರಕ್ಕೆ ಒಪ್ಪಿಗೆ ನೀಡಲಿಲ್ಲ ಬುಡಕಟ್ಟಿನ ಜನರ ಚಳುವಳಿಯ ಮುಖ್ಯ ಬೇಡಿಕೆಯಂದರೆ, ಅರಣ್ಯದ ಮೇಲಿರುವ ಅಧಿಕಾರ ಮನ್ನಿಸಬೇಕು, ಅರಣ್ಯದಲ್ಲಿಯ ಉತ್ಪಾದನೆಗಳನ್ನು ಸಂಗ್ರಹಿಸುವ ಮತ್ತು ಅರಣ್ಯದ ನೆಲದ ಮೇಲೆ ಬಿತ್ತುವ ಅಧಿಕಾರ ಅವರಿಗೆ ಸಿಗಬೇಕು.


ಬಿರಸಾ ಮುಂಡಾ

**ಭಾರತದಲ್ಲಿಯ ರೈತರ ಚಳುವಳಿ :** ಭಾರತದಲ್ಲಿಯ ರೈತರ ಚಳುವಳಿಇದೊಂದು ಅತ್ಯಂತ ಮಹತ್ವದ ಚಳುವಳಿಯಾಗಿದೆ. ಬ್ರಿಟಿಷರ ಆಡಳಿತದಲ್ಲಿ ವಸಾಹತುಗಳ ಕಾಲದಲ್ಲಿ ಸರಕಾರದ ಕೃಷಿವಿರೋಧಿ ಧೋರಣೆಯಿಂದ ರೈತರು ಸಂಘಟಿತರಾಗ ಹತ್ತಿದರು. ಬಾರ್ಡೋಲಿ, ಚಂಪಾರಣ್ಯ, ಖೋತ ಈ ಚಳುವಳಿಯ ಕುರಿತು ನಿಮಗೆ ಗುರುತಿರಬಹುದು. ರೈತರ ಚಳುವಳಿಯ ಪ್ರೇರಣೆ ಮಹಾತ್ಮಾ ಫುಲೆ, ನ್ಯಾಯಮೂರ್ತಿ ರಾನಡೆ, ಮತ್ತು ಮಹಾತ್ಮಾ ಗಾಂಧಿ ಇವರ ಇವರ ವಿಚಾರಗಳಿಂದ ತಗೆದುಕೊಳ್ಳಲಾಗುತ್ತದೆ.

ಕೃಷಿ ವಿಷಯದ ಕೆಲವು ಸುಧಾರಣೆಗಳಿಂದ (ಉದಾ., ಭೂ ಹಿಡುವಳಿ ಕಾನೂನು, ಉಳುವವನದೇ ಜಮೀನು ಮುಂತಾದ) ರೈತರ ಚಳುವಳಿ ಮಂದವಾಯಿತು. ಹರಿತ ಕ್ರಾಂತಿಯ ನಂತರ ಮಾತ್ರ ರೈತರ ಚಳುವಳಿಗಳು ಹೆಚ್ಚು ಕ್ರಿಯಾಶೀಲ ಮತ್ತು ಪರಿಣಾಮಕಾರಕವಾಗ ಹತ್ತಿದವು. ಕೃಷಿ ಉತ್ಪಾದನೆ ಹೆಚ್ಚಿಸಲು ಮತ್ತು ಅನ್ನಧಾನ್ಯದ ಕುರಿತು ಸ್ವಯಂಪೂರ್ಣವಾಗಲು ಹರಿತಕ್ರಾಂತಿ ಮಾಡಲಾಯಿತು. ಆದರೆ ಬಡ ರೈತರಿಗೆ ಇದರಿಂದ ಲಾಭವಾಗಲಿಲ್ಲ, ರೈತರಲ್ಲಿ ಬಡವ, ಶ್ರೀಮಂತ ಎಂಬ ವರ್ಗ ನಿರ್ಮಾಣವಾದವು ಅವರಲ್ಲಿಯ ಅಸಂತೋಷವು ಹೆಚ್ಚಿತು ಮತ್ತು ರೈತರ ಆಂದೋಲನ ಪ್ರಾರಂಭವಾಯಿತು.

ಹೊಲದ ಬೆಳೆಗೆ ಯೋಗ್ಯ ಬೆಲೆ ಸಿಗಬೇಕು, ಒಕ್ಕಲುತನಕ್ಕೆ

ಉದ್ಯೋಗದ ದರ್ಜೆ ಸಿಗಬೇಕು, ಸ್ವಾಮಿನಾಥನ್ ಆಯೋಗದ ಶಿಫಾರಸನ್ನು ಸ್ವೀಕರಿಸಬೇಕು, ಸಾಲಮನ್ನಾ, ಸಾಲಮುಕ್ತಿ ಮತ್ತು ರಾಷ್ಟ್ರೀಯ ಕೃಷಿವಿಷಯದ ಧೋರಣೆ ಇವು ರೈತ ಸಂಘಟನೆಗಳ ಪ್ರಮುಖ ಬೇಡಿಕೆಗಳಾಗಿವೆ.

ರೈತರ ಸಂಘಟನೆ, ಭಾರತೀಯ ಕಿಸಾನ ಯುನಿಯನ್ ಆಲ್ ಇಂಡಿಯಾ ಕಿಸಾನ ಸಭೆ ಇವು ಭಾರತದಲ್ಲಿಯ ಕೆಲವು ಮಹತ್ವದ ರೈತರ ಸಂಘಟನೆಗಳಾಗಿವೆ.



**ಮಾಡಿ ನೋಡಿರಿ.**

ರೈತರ ಮತ್ತು ಹೊಲದ ಕೂಲಿಕಾರರ ಕಲ್ಯಾಣಕ್ಕಾಗಿ ಸರಕಾರವು ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ?

**ಕಾರ್ಮಿಕ ಚಳುವಳಿ :** ಭಾರತದಲ್ಲಿಯ ಕಾರ್ಮಿಕ ಚಳುವಳಿಗೆ ಔದ್ಯೋಗಿಕರಣದ ಹಿನ್ನೆಲೆ ಇದೆ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಭಾರತದಲ್ಲಿ ಬಟ್ಟೆಯ ಗಿರಣಿ, ರೇಲ್ವೆ ಕಂಪನಿಗಳು ಮುಂತಾದ ಉದ್ಯೋಗಗಳು ಪ್ರಾರಂಭವಾಗಿದ್ದವು. 1899ರಲ್ಲಿ ರೇಲ್ವೆ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಸಂಪು ಹೂಡಿದರು. ಕಾರ್ಮಿಕರ ಸಮಸ್ಯೆಗಳನ್ನು ಬಿಡಿಸಲು ವ್ಯಾಪಕವಾದ ಸಂಘಟನೆಯು ಮಾತ್ರ 1920ರಲ್ಲಿ ಸ್ಥಾಪಿತವಾಯಿತು. ಅದನ್ನು ಆಲ್ ಇಂಡಿಯಾ ಟ್ರೇಡ ಯುನಿಯನ ಕಾಂಗ್ರೆಸ' ಎಂದು ಉಲ್ಲೇಖಿಸಲಾಗುವುದು.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕಾರ್ಮಿಕ ಚಳುವಳಿಯು ಹೆಚ್ಚು ಪ್ರಭಾವಶಾಲಿಯಾಗಿ ಕೆಲಸ ಮಾಡ ಹತ್ತಿತು. 1960 ಮತ್ತು 1970ರ ದಶಕದಲ್ಲಿ ಕಾರ್ಮಿಕ ಚಳುವಳಿಯ ಅನೇಕ ಆಂದೋಲನಗಳು ಆದವು. ಆದರೆ 1980ರಿಂದ ಕಾರ್ಮಿಕ ಚಳುವಳಿಗಳು ಪಸರಿಸುತ್ತ ಹೋದವು. ಭಾರತದ ತುಂಬೆಲ್ಲ ಕಾರ್ಮಿಕರ ಪ್ರಶ್ನೆಗಳು ಹೊಸದಾಗಿ ನಿಲ್ಲುತ್ತಲಿವೆ. ಕಾರಣ ಜಾಗತೀಕರಣದ ಪರಿಣಾಮ ಕಾರ್ಮಿಕ ಚಳುವಳಿಯ ಮೇಲಾಯಿತು ಅಸ್ಥಿರ ಕೂಲಿ, ಗುತ್ತಿಗೆಯ ಕಾರ್ಮಿಕರು, ಆರ್ಥಿಕ ಅಸುರಕ್ಷಿತತೆ, ಕಾರ್ಮಿಕ ಕಾಯ್ದೆಗಳ ಸಂರಕ್ಷಣೆ ಇಲ್ಲದಿರುವದು, ಮಿತಿ ಇಲ್ಲದ ಕೆಲಸದ ಅವಧಿ ಕೆಲಸದ ಸ್ಥಳದಲ್ಲಿರುವ ಅಸುರಕ್ಷಿತತೆ, ಅನಾರೋಗ್ಯ ಮುಂತಾದವುಗಳು ಇಂದಿನ ಕಾರ್ಮಿಕ ಚಳುವಳಿಯ ಬೇಡಿಕೆಗಳಾಗಿವೆ.

ಮಾಡಿ ನೋಡಿರಿ.

ಭಾರತದಲ್ಲಿ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಜಾರಿಗೆ ಬಂದಿರುವ ಕಾರ್ಮಿಕ ವಿಷಯಕ ಕಾಯ್ದೆಗಳ ಮಾಹಿತಿಯನ್ನು ಅಂತರ್ಜಾಲದ ಸಹಾಯದಿಂದ ದೊರಕಿಸಿರಿ.

**ಸ್ತ್ರೀ ಚಳುವಳಿ :** ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಭಾರತದಲ್ಲಿ ಸ್ತ್ರೀ ಚಳುವಳಿಯ ಪ್ರಾರಂಭವು ಪುರೋಗಾಮಿ ಪುರುಷರ ಮುಂದಾಳುತನದಲ್ಲಿ ಆಯಿತು. ಸ್ತ್ರೀಯರ ಮೇಲಾಗುವ ಅನ್ಯಾಯ, ಅವರ ಶೋಷಣೆ ನಿಂತು ಅವರಿಗೆ ಸನ್ಮಾನದಿಂದ ಜೀವಿಸಲು ಬರಬೇಕು ಮತ್ತು ಸಾರ್ವಜನಿಕ ಜೀವನದಲ್ಲಿ ಸಹಭಾಗ ವಹಿಸಲು ಬರಬೇಕೆಂದು ಹಲವಾರು ಸುಧಾರಣಾ ಚಳುವಳಿಗಳು ಪ್ರಾರಂಭವಾದವು. ಈಶ್ವರಚಂದ್ರ ವಿದ್ಯಾಸಾಗರ, ರಾಜಾರಾಮ ಮೋಹನರಾಯ, ಮಹಾತ್ಮಾ ಜ್ಯೋತಿರಾವ ಫುಲೆ, ಸಾವಿತ್ರಿಬಾಯಿ ಫುಲೆ, ಮಹರ್ಷಿ ಧೋಂಡೊ ಕೇಶವ ಕರ್ವೆ, ಪಂಡಿತಾ ರಮಾಬಾಯಿ, ರಮಾಬಾಯಿ ರಾನಡೆ ಇವರ ಮುಂದಾಳುತನದಿಂದ ಸತಿ-ಪದ್ಧತಿಗೆ ವಿರೋಧ, ವಿಧವಾ ಪುನರ್ವಿವಾಹ, ಸ್ತ್ರೀ ಶಿಕ್ಷಣ, ಬಾಲವಿವಾಹಕ್ಕೆ ವಿರೋಧ, ಸ್ತ್ರೀಯರಿಗೆ ಮತದಾನದ ಹಕ್ಕು ಇಂತಹ ಸುಧಾರಣೆಗಳಾದವು. ಸ್ವಾತಂತ್ರ್ಯದ ನಂತರ ಭಾರತದ ಸಂವಿಧಾನದಲ್ಲಿ ಸ್ತ್ರೀಯರಿಗೆ ಎಲ್ಲದರಲ್ಲಿಯೂ ಸಮಾನ ಹಕ್ಕುಗಳನ್ನು ಕೊಡಲಾಗಿದೆ. ಆದರೆ ಅನೇಕ ಕ್ಷೇತ್ರಗಳಲ್ಲಿ ಸ್ತ್ರೀಯರಿಗೆ ಪ್ರತ್ಯಕ್ಷದಲ್ಲಿ ಮಾತ್ರ ಸಮಾನ ವರ್ತನೆ ಸಿಗುತ್ತಿರಲಿಲ್ಲ. ಸ್ತ್ರೀ ಸ್ವಾತಂತ್ರ್ಯ ಇದು ಈ ಕಾಲದಲ್ಲಿಯ ಸ್ತ್ರೀಯರ ಚಳುವಳಿಯ ಉದ್ದೇಶವಾಗಿತ್ತು. ಈ ಕಾಲದಲ್ಲಿಯ ಸ್ತ್ರೀಯರ ಚಳುವಳಿ ಪ್ರಾಮುಖ್ಯವಾಗಿ ಮನುಷ್ಯರೆಂದು ದರ್ಜೆಸಿಗಬೇಕು ಇದಕ್ಕಾಗಿ ಇತ್ತು. ಸ್ತ್ರೀಯರ ಸ್ವಾತಂತ್ರ್ಯ ಇದು ಕೂಡ ಅದರ ಹಿಂದಿನ ಉದ್ದೇಶವಾಗಿತ್ತು.



ಸಾವಿತ್ರಿಬಾಯಿ ಫುಲೆ



ರಮಾಬಾಯಿ ರಾನಡೆ

ಭಾರತದಲ್ಲಿ ಭ್ರಷ್ಟಾಚಾರ, ಜಾತಿವ್ಯವಸ್ಥೆಗೆ ವಿರೋಧ, ಪ್ರಖರ ಧಾರ್ಮಿಕತೆಗೆ ವಿರೋಧ ಈ ಸಮಸ್ಯೆಗಳ ವಿರುದ್ಧ ಆಂದೋಲನಗಳಾದವು. ಈ ಆಂದೋಲನಗಳಲ್ಲಿ ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಇದರಿಂದ ಸ್ತ್ರೀಯರಿಗೆ ತಮ್ಮ ಮೇಲಾಗುವ ಅನ್ಯಾಯದ ಅರಿವು ಮೂಡಿತು. ಸ್ತ್ರೀಯರ

ಮುಂದಾಳುತನದಲ್ಲಿ ಸ್ತ್ರೀಯರ ಚಳುವಳಿ ಪ್ರಾರಂಭವಾದವು. ಭಾರತದಲ್ಲಿಯ ಸ್ತ್ರೀ ಚಳುವಳಿಯ ಸ್ವರೂಪ ಅಖಂಡವಾಗಿಲ್ಲ. ಆದರೆ ಸ್ತ್ರೀಯರ ಆರೋಗ್ಯ, ಅವರ ಸಾಮಾಜಿಕ ಸುರಕ್ಷಿತತೆ, ಅವರ ಆರ್ಥಿಕ ಸ್ವಾವಲಂಬನ ಮತ್ತು ಸಬಲೀಕರಣ ಈ ಅಂಶಗಳ ವಿಚಾರ ವಿವಿಧ ಮಟ್ಟದಲ್ಲಿ ಈ ಸ್ತ್ರೀ ಸಂಘಟನೆ ಮಾಡುವದನ್ನು ಕಾಣಬಹುದು. ಸ್ತ್ರೀಯರ ಶಿಕ್ಷಣ ಮತ್ತು ಅವರಿಗೆ ಮನುಷ್ಯರೆಂಬ ದರ್ಜೆ ಮತ್ತು ಪ್ರತಿಷ್ಠೆ ದೊರಕಬೇಕು ಇದರ ಆಗ್ರಹ ಇವು ಸ್ತ್ರೀ ಚಳುವಳಿಗಳ ಮುಂದಿದ್ದ ಇಂದಿನ ಆವ್ಹಾನಗಳಾಗಿವೆ.

**ಪರ್ಯಾವರಣ ಚಳುವಳಿ :** ಪರ್ಯಾವರಣದ ನಾಶ ಇದು ಇಂದಿನ ಕಾಲದಲ್ಲಿಯ ಒಂದು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿಯ ಗಂಭೀರ ಸಮಸ್ಯೆಯಾಗಿದೆ ಇದು ನಮಗೆ ಗೊತ್ತಿದೆ. ಪರ್ಯಾವರಣದ ನಾಶ ತಡೆ ಹಿಡಿಯಲು ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಅನೇಕ ಚಳುವಳಿಗಳು ಕ್ರಿಯಾಶೀಲವಾಗಿವೆ ಮತ್ತು ಈ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಸಹಕಾರ್ಯವೂ ಬಹಳ ಹೆಚ್ಚಿನ ಪ್ರಮಾಣದಲ್ಲಿದೆ.


ಪರ್ಯಾವರಣ ರಕ್ಷಣೆ


ಡಾ. ರಾಜೇಂದ್ರ ಸಿಂಹ

ಭಾರತದ ಜಲಪುರುಷ ಈ ಹೆಸರಿನಿಂದ ಗುರುತಿಸಲಾಗುವ ಡಾ. ರಾಜೇಂದ್ರ ಸಿಂಹ ಇವರು ರಾಜಸ್ಥಾನದಲ್ಲಿ ದೊಡ್ಡ ಜಲಕ್ರಾಂತಿ ಘಟಿಸಿದ್ದಾರೆ. ರಾಜಸ್ಥಾನದಲ್ಲಿ ಸಾವಿರಾರು 'ಜೋಹಡ' (ನದಿಗಳ ಮೇಲಿನ ಮಣ್ಣಿನ ಆಣೆಕಟ್ಟು) ನಿರ್ಮಾಣ ಮಾಡುವ ಮಾಧ್ಯಮ ಮೂಲಕ ರಾಜೇಂದ್ರಸಿಂಹ ಪ್ರಸಿದ್ಧರಾಗಿದ್ದಾರೆ. ಸಿಂಹ ಇವರು ರಾಜಸ್ಥಾನದ ಮರುಭೂಮಿಯಲ್ಲಿ ನದಿಗಳನ್ನು ಪುನರುಜ್ಜೀವಿತ ಗೊಳಿಸಿದ್ದಾರೆ. ಅವರು 'ತರುಣ ಭಾರತ ಸಂಘ' ಎಂಬ ಸಂಘಟನೆಯ ಸ್ಥಾಪನೆ ಮಾಡಿ ನೂರಾರು ಊರುಗಳಲ್ಲಿ ಸುಮಾರು ಹನ್ನೊಂದು ಸಾವಿರ ಜೋಹಡಗಳ ನಿರ್ಮಾಣ ಮಾಡಿದ್ದಾರೆ. ದೇಶದ ತುಂಬೆಲ್ಲ ಪಾದಯಾತ್ರೆ ಕೈಗೊಂಡು ಜಲಸಂವರ್ಧನೆ, ನದಿಗಳನ್ನು ಪುನರುಜ್ಜೀವಿತ ಗೊಳಿಸುವದು. ವನಸಂವರ್ಧನೆ, ವನ್ಯಜೀವನ ಸಂವರ್ಧನೆ ಅಭಿಯಾನಗಳನ್ನು ನಡೆಸಿರುವರು. ಕಳೆದ 31 ವರ್ಷ ಅವರ ಈ ಸಾಮಾಜಿಕ ಚಳುವಳಿ ಪ್ರಾರಂಭವಿದೆ. ಡಾ. ರಾಜೇಂದ್ರ ಸಿಂಹ ಇವರನ್ನು ನೀರಿನ ನೋಬೆಲ ಎಂದು ತಿಳಿಯಲಾಗುವ 'ಸ್ಟಾಕಹೋಮ ವಾಟರ ಪ್ರಾಯಿಝು' ಪಡೆದಿರುವರು.

ಭಾರತದಲ್ಲಿಯೂ ಪರ್ಯಾವರಣದಲ್ಲಿಯ ವಿವಿಧ ವಿಷಯಗಳಿಗೆ ಪ್ರಾಧಾನ್ಯತೆಯನ್ನು ಕೊಡುತ್ತ ಅನೇಕ ಚಳುವಳಿಗಳು ಸಕ್ರಿಯವಾಗಿವೆ. ಜೈವ ವಿವಿಧತೆಯ ಸಂರಕ್ಷಣೆ, ನೀರಿನ ವಿವಿಧ ಮೂಲಗಳ ರಕ್ಷಣೆ, ಅರಣ್ಯಗಳ ಆವರಣ, ನದಿಗಳ ಪ್ರದೂಷಣೆ, ಹರಿತಪಟ್ಟಿಗಳ ಸಂರಕ್ಷಣೆ, ರಾಸಾಯನಿಕ ದ್ರವ್ಯಗಳ ಉಪಯೋಗ ಮತ್ತು ಅವುಗಳ ದುಷ್ಪರಿಣಾಮ ಮುಂತಾದ ಪ್ರಶ್ನೆಗಳನ್ನೆತ್ತಿಕೊಂಡು ಚಳುವಳಿಗಳು ಸಂಘರ್ಷ ಮಾಡುತ್ತಿವೆ.

**ಗ್ರಾಹಕ ಚಳುವಳಿ :** 1986ರಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆಯು ಅಸ್ತಿತ್ವದಲ್ಲಿ ಬಂದಿತು. ನಂತರ ಗ್ರಾಹಕ ಚಳುವಳಿಯ ಉದಯವಾಯಿತು. ಈ ಚಳುವಳಿಯ ಉದ್ದೇಶ ವ್ಯಾಪಕವಾಗಿದೆ. ಸಮಾಜದಲ್ಲಿಯ ಪ್ರತಿಯೊಂದು ಘಟಕ ಗ್ರಾಹಕನಾಗಿರುತ್ತಾನೆ. ಅರ್ಥ ವ್ಯವಸ್ಥೆಯಲ್ಲಿಯ ಬದಲಾವಣೆಗಳಿಂದ, ಅದರಂತೆಯೇ ಸಮಾಜ ವ್ಯವಸ್ಥೆಯಲ್ಲಿರುವ ಬದಲಾವಣೆಗಳಿಂದ ಗ್ರಾಹಕರ ಮೇಲೆ ಪರಿಣಾಮವಾಗುತ್ತದೆ.




ಅವನಿಗೆ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಕಲಬೆರಿಕೆ, ವಸ್ತುಗಳ ಹೆಚ್ಚಾದ ಬೆಲೆ ಅಳತೆಗಳಲ್ಲಿಯ ಮೋಸ ಮುಂತಾದವುಗಳು. ಇಂತಹ ಪ್ರಕಾರದ ಮೋಸಗಳಿಂದ ಗ್ರಾಹಕರ ಸಂರಕ್ಷಣೆ ಮಾಡಲು ಗ್ರಾಹಕ ಚಳುವಳಿಗಳು ಅಸ್ತಿತ್ವದಲ್ಲಿ ಬಂದವು.

ಚಳುವಳಿಗಳು ನಾಗರಿಕರ ಸಾರ್ವಜನಿಕ ಜೀವನದಲ್ಲಿ ಸಹಭಾಗ ಹೆಚ್ಚಿಸುವವು. 1980ರ ನಂತರದ ಚಳುವಳಿಗಳಿಗೆ 'ನವ ಸಾಮಾಜಿಕ ಚಳುವಳಿ' ಅನ್ನಲಾಗುತ್ತದೆ. ಕಾರಣ ಅದರ

ಸ್ವರೂಪವು ಮೊದಲಿನ ಚಳುವಳಿಗಿಂತ ಬೇರೆಯಾಗಿತ್ತು. ಅವು ಹೆಚ್ಚು ವಿಷಯ ನಿಷ್ಠ ಆಗ ತೊಡಗಿದವು. ಅಂದರೆ ಒಂದೊಂದು ವಿಷಯದ ಸುತ್ತಲೂ ಜನ-ಅಂದೋಲನ ಪ್ರಾರಂಭಿಸುವ ಪ್ರಯತ್ನಗಳು ಆಗ ಹತ್ತಿದವು.

ಮುಂದಿನ ಪಾಠದಲ್ಲಿ ನಾವು ಪ್ರಜಾಪ್ರಭುತ್ವದ ಎದುರಿಗಿದ್ದ ಆವ್ಹಾನಗಳ ವಿಚಾರ ಮಾಡುವವರಿದ್ದೇವೆ.



## ಅಭ್ಯಾಸ

**1. ಕೆಳಗಿನ ಪರ್ಯಾಯಗಳಲ್ಲಿ ಯೋಗ್ಯ ಪರ್ಯಾಯವನ್ನಾಯ್ದು ವಿಧಾನಗಳನ್ನು ಪೂರ್ಣ ಮಾಡಿರಿ.**

(1) ರೈತ ಚಳುವಳಿಯ ...... ಇದು ಪ್ರಮುಖ ಬೇಡಿಕೆಯಾಗಿತ್ತು.

(ಅ) ಅರಣ್ಯ ಭೂಮಿಯ ಮೇಲೆ ಬಿತ್ತುವ ಅಧಿಕಾರ ಸಿಗಬೇಕು.

(ಬ) ಬೆಳೆಗೆ ಯೋಗ್ಯ ಬೆಲೆ ಸಿಗಬೇಕು.

(ಕ) ಗ್ರಾಹಕರ ಸಂರಕ್ಷಣೆ ಮಾಡುವದು.

(ಡ) ಆಣೆಕಟ್ಟುಗಳನ್ನು ಕಟ್ಟಬೇಕು.

(2) ಕೃಷಿ ಉತ್ಪಾದನೆ ಹೆಚ್ಚಿಸಲು ಮತ್ತು ಅನ್ನಧಾನ್ಯಗಳ ಕುರಿತು ಸ್ವಯಂಪೂರ್ಣವಾಗಲು ...... ಮಾಡಲಾಯಿತು.

(ಅ) ಜಲಕ್ರಾಂತಿ (ಬ) ಹರಿತಕ್ರಾಂತಿ

(ಕ) ಔದ್ಯೋಗಿಕ ಕ್ರಾಂತಿ (ಡ) ಧವಲಕ್ರಾಂತಿ

**2. ಟಿಪ್ಪಣಿ ಬರೆಯಿರಿ.**

(1) ಬುಡಕಟ್ಟಿನ ಜನಾಂಗದ ಚಳುವಳಿ

(2) ಕಾರ್ಮಿಕ ಚಳುವಳಿ

**3. ಕೆಳಗಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರ ಬರೆಯಿರಿ.**

(1) ಪರ್ಯಾವರಣ ಚಳುವಳಿಯ ಕಾರ್ಯ ಸ್ಪಷ್ಟಪಡಿಸಿರಿ.

(2) ಭಾರತದಲ್ಲಿಯ ರೈತರ ಚಳುವಳಿಯ ಸ್ವರೂಪ ಸ್ಪಷ್ಟಪಡಿಸಿರಿ.

(3) ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಸ್ತ್ರೀ ಚಳುವಳಿಯು ಯಾವ ಸುಧಾರಣೆಗಳಿಗಾಗಿ ಹೋರಾಡುತ್ತಿತ್ತು?

**4. ಮುಂದಿನ ವಿಧಾನಗಳು ಸರಿಯೋ ತಪ್ಪೊ ಎಂಬುದನ್ನು ಕಾರಣಸಹಿತ ವಿವರಿಸಿರಿ.**

(1) ಪ್ರಜಾಪ್ರಭುತ್ವದಲ್ಲಿ ಚಳುವಳಿಗಳಿಗೆ ಬಹಳ ಮಹತ್ವವಿರುವದು.

(2) ಚಳುವಳಿಗೆ ಧೃಡವಾದ ನೇತೃತ್ವದ ಅವಶ್ಯಕತೆ ಇರುವದಿಲ್ಲ.

(3) ಗ್ರಾಹಕ ಚಳುವಳಿ ಅಸ್ತಿತ್ವದಲ್ಲಿ ಬಂದಿತು.

### ಉಪಕ್ರಮ

(1) ವಿವಿಧ ಸಾಮಾಜಿಕ ಚಳುವಳಿಯ ಆಂದೋಲನೆಯ ಕುರಿತು ವರ್ತಮಾನ ಪತ್ರಿಕೆಯಲ್ಲಿಯ ಸುದ್ಧಿಗಳನ್ನು ಸಂಗ್ರಹಿಸಿರಿ.

(2) ತಮ್ಮ ಪರಿಸರದಲ್ಲಿಯ ಸಾರ್ವಜನಿಕ ಸಮಸ್ಯೆ ಬಿಡಿಸಲು ಪ್ರಯತ್ನ ಮಾಡುವ ಚಳುವಳಿಯ ಕಾರ್ಯದ ಅಹವಾಲು ಬರೆಯಿರಿ.

(3) ಕಾಯಪಲ್ಯೆ ಅಥವಾ ಧಾನ್ಯ ಕೊಂಡುಕೊಳ್ಳುವಾಗ ನಿಮ್ಮ ಅಳತೆಯಲ್ಲಿ ಮೋಸವಾಗಿದೆ. ಎಂದೆನಿಸಿದರೆ ಗ್ರಾಹಕ ಸಂರಕ್ಷಣ ಕಾಯ್ದೆಯ ಮೂಲಕ ನೀವು ಹೇಗೆ ತಕರಾರು ಮಾಡುವಿರಿ, ಇದರ ನಮೂನೆ ತಯಾರಿಸಿರಿ.

4VHAHP

# 5. ಭಾರತೀಯ ಪ್ರಜಾಪ್ರಭುತ್ವವು ಎದುರಿಸುತ್ತಿರುವ ಆವ್ಹಾನಗಳು

ಈ ಹಿಂದೆ ಹೇಳಿದ ಹಾಗೆ ಪ್ರಜಾಪ್ರಭುತ್ವ ಇದು ಒಂದು ಸತತವಾಗಿ ನಡೆಯುವ ಜೀವಂತ ಪ್ರಕ್ರಿಯೆಯಾಗಿದೆ. ಪ್ರಜಾಪ್ರಭುತ್ವದ ಸ್ವೀಕಾರ ಮಾಡಿದೆವೆಂದರೆ ಪ್ರಜಾಪ್ರಭುತ್ವವು ಅಸ್ತಿತ್ವದಲ್ಲಿ ಬಂದಿತೆಂದಲ್ಲ. ಅದರಿಂದ ಪ್ರಜಾಪ್ರಭುತ್ವವನ್ನು ಉಳಿಸಲು ದಕ್ಷರಾಗಿ ಇರಬೇಕಾಗುವದು. ಇದನ್ನು ಅರಿತುಕೊಂಡು ಪ್ರಯತ್ನ ಮಾಡಬೇಕಾಗುವದು. ಪ್ರಜಾಪ್ರಭುತ್ವಕ್ಕೆ ಇರುವ ಅಪಾಯಗಳನ್ನು ಕೂಡಲೇ ಗುರುತಿಸಿ ಪ್ರಜಾಪ್ರಭುತ್ವ ಮಾರ್ಗದಿಂದಲೇ ಅದರ ನಿರಾಕರಣೆ ಮಾಡುವದು ಅವಶ್ಯಕವಿರುವದು. ಪ್ರಸ್ತುತ ಪಾಠದಲ್ಲಿ ನಾವು ಭಾರತೀಯ ಪ್ರಜಾಪ್ರಭುತ್ವದ ಎದುರು ಯಾವ ಆವ್ಹಾನಗಳಿವೆ ಎಂಬುದರ ಬಗ್ಗೆ ಪ್ರಾಮುಖ್ಯವಾಗಿ ವಿಚಾರ ಮಾಡುವವರಿದ್ದೇವೆ. ಅದಕ್ಕೂ ಮುಂಚೆ ಜಾಗತಿಕ ಮಟ್ಟದಲ್ಲಿ ಪ್ರಜಾಪ್ರಭುತ್ವದ ಮುಂದೆ ಇದ್ದ ಆವ್ಹಾನಗಳ ಬಗ್ಗೆ ಸ್ವಲ್ಪದರಲ್ಲಿ ವಿಚಾರ ಮಾಡೋಣ.

- ಇಂದು ಜಗತ್ತಿನಲ್ಲಿಯ ಪ್ರತಿಯೊಂದು ದೇಶವು ತಾವು ಪ್ರಜಾಪ್ರಭುತ್ವವಾದಿಗಳೆಂದು ಹೇಳುವವು. ಆದರೆ ಪ್ರತ್ಯಕ್ಷವಾಗಿ ಜನರ ಹಕ್ಕು ಮತ್ತು ಸ್ವಾತಂತ್ರ್ಯ ಸುರಕ್ಷಿತವಾಗಿಡುವ ಮತ್ತು ಜನರ ಕಲ್ಯಾಣಕ್ಕೆ ಪ್ರಾಧಾನ್ಯತೆಯನ್ನು ಕೊಡುವ ಪ್ರಜಾಪ್ರಭುತ್ವವು ಕಡಿಮೆ ದೇಶಗಳಲ್ಲಿ ಇದೆ. ಸೈನಿಕ ಆಡಳಿತದ ದೊಡ್ಡ ಅಪಾಯ ಪ್ರಜಾಪ್ರಭುತ್ವದ ಎದುರಿಗೆ ಇದೆ. ಇದರಿಂದ ಜಾಗತಿಕ ಮಟ್ಟದ ಮೇಲೆ ನಿಜವಾದ ಪ್ರಜಾಪ್ರಭುತ್ವದ ಪ್ರಸಾರವಾಗುವುದು ಮತ್ತು ಪ್ರತಿಯೊಂದು ದೇಶದಲ್ಲಿ ಅದರ ಅವಲಂಬನೆ ಮಾಡುವುದು ಇವು ಪ್ರಜಾಪ್ರಭುತ್ವದ ಎದುರಿಗಿದ್ದ ದೊಡ್ಡ ಆವ್ಹಾನಗಳಿವೆ. ಪ್ರಜಾಪ್ರಭುತ್ವದ ಪ್ರಸಾರದ ಈ ಆವ್ಹಾನ, ಜಾಗತಿಕ ಮಟ್ಟದಲ್ಲಿದೆ.

> ಪ್ರಜಾಪ್ರಭುತ್ವವಿಲ್ಲದ ವ್ಯವಸ್ಥೆಯಿಂದ ಪ್ರಜಾಪ್ರಭುತ್ವ ವ್ಯವಸ್ಥೆಯ ಕಡೆಗೆ ಪ್ರವಾಸ ಮಾಡುವದಾದರೆ ಯಾವ ಪ್ರಜಾಪ್ರಭುತ್ವ ಸಂಸ್ಥೆಗಳನ್ನು ನಿರ್ಮಿಸಬೇಕಾಗಬಹುದು?

- ಯಾವ ದೇಶಗಳಲ್ಲಿ ಪ್ರಜಾಪ್ರಭುತ್ವವು ಬೇರು ಬಿಟ್ಟಿದೆ ಎಂದು ನಾವು ಅನ್ನುವೆವೋ ಅಲ್ಲಿಯೂ ಪ್ರಜಾಪ್ರಭುತ್ವದ ವ್ಯವಹಾರ ಮರ್ಯಾದಿತವಾಗಿದೆ. ಭಾರತದಂತಹ ಅನ್ಯ ದೇಶಗಳಲ್ಲಿಯೂ ಪ್ರಜಾಪ್ರಭುತ್ವವೆಂದರೆ ಕೇವಲ ಮತದಾನ, ಚುನಾವಣೆ, ಸರಕಾರದ ವ್ಯವಹಾರ, ನ್ಯಾಯಾಲಯ ಮುಂತಾದವುಗಳ ಎಣಿಕೆಯಾಗುತ್ತದೆ. ಆದರೆ ಇದು ಕೇವಲ ಪ್ರಜಾಪ್ರಭುತ್ವದ ರಾಜಕೀಯ ಸ್ವರೂಪವಾಗಿದೆ. ಪ್ರಜಾಪ್ರಭುತ್ವವು ಒಂದು ವೇಳೆ ಒಂದು ಜೀವನ ಮಾರ್ಗವಾಗಬೇಕಾದರೆ ಪ್ರಜಾಪ್ರಭುತ್ವವು ಸಮಾಜದ ವಿಭಿನ್ನ ಕ್ಷೇತ್ರಗಳಲ್ಲಿ ತಲುಪಬೇಕು. ಸಮಾಜದ ಎಲ್ಲ ಘಟಕಗಳ ಸೇರ್ಪಡೆ, ಸಾಮಾಜಿಕ ಸಂಸ್ಥೆಗಳಿಗೆ ಸ್ವಾಯತ್ತತೆ. ನಾಗರಿಕರ ಸಕ್ಷಮೀಕರಣ. ಮಾನವೀ ಮೌಲ್ಯಗಳ ರಕ್ಷಣೆ ಮುಂತಾದ ಮಾರ್ಗಗಳನ್ನು ಅವಲಂಬಿಸಬೇಕಾಗುವದು. ನಿಜವಾದ ಪ್ರಜಾಪ್ರಭುತ್ವ ಬಿಂಬಿಸುವ ಈ ಕಾರ್ಯ ಪೂರ್ಣವಾಗುವ ಅವಶ್ಯಕತೆ ಇದೆ.



**ಹೇಳಿ ನೋಡೋಣ?**

ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಸಹಭಾಗಿಯಾಗಿ ಅಧಿಕಾರದಲ್ಲಿ ಪ್ರವೇಶಿಸುವರು. ಆದರೆ ರಾಜಕೀಯ ಪಕ್ಷಗಳ ಅಂತರ್ಗತ ಚುನಾವಣೆಗಳಾಗುವವೇ? ರಾಜಕೀಯ ಪಕ್ಷಗಳು ಸಂಘಟನೆಯ ಅಂತರ್ಗತ ಚುನಾವಣೆಗಳನ್ನು ತಗೆದುಕೊಳ್ಳುವದು ಅವಶ್ಯಕವಿರುವದು, ಆದರೆ ಇಂಥ ಚುನಾವಣೆಗಳು ಆಗುವವೇ?

**ನನಗೆ ತೋರಿದ ಪ್ರಶ್ನೆ ...**

ಚೀನವು ಆರ್ಥಿಕ ಸುಧಾರಣೆ ಸ್ವೀಕರಿಸಿತು. ಜಾಗತಿಕ ವ್ಯಾಪಾರ ಸಂಘಟನೆಯ ಸದಸ್ಯತ್ವವನ್ನು ಸ್ವೀಕರಿಸಿತು. ಆದರೆ ಅಲ್ಲಿ ಒಂದೇ ಪಕ್ಷದ ವರ್ಚಸ್ವವು ಹೇಗೆ ಇರಬಹುದು? ಚೀನವು ಪ್ರಜಾಪ್ರಭುತ್ವ ರಾಷ್ಟ್ರವಾಗಿದೆಯೇ?

- ಪ್ರಜಾಪ್ರಭುತ್ವದ ಬೇರುಗಳನ್ನು ಇನ್ನೂ ಆಳಕ್ಕೆ ಒಯ್ಯುವ ಇದು ಜಗತ್ತಿನಲ್ಲಿಯ ಎಲ್ಲ ಪ್ರಜಾಪ್ರಭುತ್ವವುಳ್ಳ ರಾಷ್ಟ್ರಗಳ ಮುಂದಿನ ದೊಡ್ಡ ಆವ್ಹಾನವಾಗಿದೆ. ಸ್ವಾತಂತ್ರ್ಯ, ಸಮತೆ, ಬಂಧುತ್ವ ಮತ್ತು ನ್ಯಾಯ, ಶಾಂತತೆ, ವಿಕಾಸ ಮತ್ತು ಮಾನವತಾವಾದ ಈ ಮೌಲ್ಯಗಳನ್ನು ಸಮಾಜದ ಎಲ್ಲ ಮಟ್ಟಗಳ ವರೆಗೆ ಒಯ್ಯುವದು ಅವಶ್ಯವಾಗಿದೆ. ಅದಕ್ಕಾಗಿ ಅವಶ್ಯವಾದ ವ್ಯಾಪಕ ಒಪ್ಪಿಗೆಯನ್ನೂ ಪುನಃ ಪ್ರಜಾಪ್ರಭುತ್ವದ ಮಾರ್ಗದಿಂದಲೇ ನಿರ್ಮಾಣ ಮಾಡಲು ಬರುವದು ಸಾಧ್ಯವಿದೆ. ಪ್ರಜಾಪ್ರಭುತ್ವವನ್ನು ಆಳವಾಗಿ ಒಯ್ಯಲು ಈ ಸುಧಾರಣೆಗಳ ಅವಶ್ಯಕತೆ ಇದೆ.

## ಭಾರತೀಯ ಪ್ರಜಾಪ್ರಭುತ್ವದ ಮುಂದಿರುವ ಆವ್ಹಾನಗಳು

ಪ್ರಜಾಪ್ರಭುತ್ವವನ್ನು ಹೆಚ್ಚು ಅರ್ಥಪೂರ್ಣ ಮಾಡುವ ದೃಷ್ಟಿಯಿಂದ ಸರಕಾರವು ಸತ್ತೆಯ ವಿಕೇಂದ್ರಿಕರಣ ಮಾಡುವುದು. ಮತ್ತು ಮಹಿಳಾ ಮತ್ತು ದುರ್ಬಲ

ಘಟಕಗಳಿಗೆ ಮೀಸಲಾತಿ ಈ ಉಪಾಯ ಯೋಜನೆಗಳನ್ನು ಹಮ್ಮಿಕೊಂಡಿದೆ. ಆದರೆ ಇದರಿಂದ ನಾಗರಿಕರ ಕೈಯಲ್ಲಿ ನಿಜವಾದ ಅಧಿಕಾರ ಬಂದಿದೆಯೆ ಎಂಬ ಪ್ರಶ್ನೆಯ ವಿಚಾರ ಮಾಡುವುದು ಅವಶ್ಯಕವಾಗಿದೆ.

**ಕೋಮುವಾದ ಮತ್ತು ಆತಂಕವಾದ :** ಧಾರ್ಮಿಕ ಸಂಘರ್ಷ ಮತ್ತು ಅದರಿಂದ ನಿರ್ಮಾಣವಾಗುವ ಆತಂಕವಾದ ಇವು ಭಾರತದ ಪ್ರಜಾಪ್ರಭುತ್ವದ ಮುಂದಿನ ಎಲ್ಲಕ್ಕೂ ದೊಡ್ಡ ಆಹ್ವಾನವಾಗಿವೆ. ಸಮಾಜದಲ್ಲಿ ಧಾರ್ಮಿಕ ವೈಮನಸ್ಸು ಹೆಚ್ಚಿದ್ದರಿಂದ ಸಾಮಾಜಿಕ ಸ್ಥೈರ್ಯ ನಷ್ಟವಾಗುವದು. ಆತಂಕವಾದದಂತಹ ಘಟನೆಗಳಿಂದ ಜನರ ಪ್ರಜಾಪ್ರಭುತ್ವದಲ್ಲಿಯ ಸಹಭಾಗ ಕಡಿಮೆಯಾಗುವುದು.

**ಎಡ ಉಗ್ರವಾದಿ (ನಕ್ಸಲೀಯರು) :** ನಕ್ಸಲವಾದ ಇದು ಭಾರತದಲ್ಲಿಯ ಬಹುದೊಡ್ಡ ಸಮಸ್ಯೆಯಾಗಿದೆ. ಭೂಮಿ ಹೀನ ರೈತರು, ಬುಡಕಟ್ಟಿನ ಜನಾಂಗ ಇವರ ಮೇಲಾಗುವ ಅನ್ಯಾಯವನ್ನು ದೂರ ಮಾಡಲು ನಕ್ಸಲವಾದ ಪ್ರಾರಂಭವಾಯಿತು. ಈ ನಕ್ಸಲವಾದವು ಈಗ ಉಗ್ರರೂಪ ಧರಿಸಿದೆ. ಆದರೆ ಇದರಲ್ಲಿಯ ರೈತರು ಬುಡಕಟ್ಟಿನ ಜನರು ಇವರ ಸಮಸ್ಯೆಗಳ ಮಹತ್ವ ಕಡಿಮೆಯಾಗಿ ಸರಕಾರಕ್ಕೆ ಹಿಂಸಾತ್ಮಕ ಪದ್ಧತಿಯಿಂದ ವಿರೋಧ ಮಾಡುವದು, ಪೋಲಿಸಪಡೆಯ ಮೇಲೆ ದಾಳಿ ಮಾಡುವದು ಮುಂತಾದ ಮಾರ್ಗಗಳ ಉಪಯೋಗವನ್ನು ನಕ್ಸಲವಾದಿ ಗುಂಪುಗಳು ಮಾಡುವವು.

**ಭ್ರಷ್ಟಾಚಾರ :** ಭಾರತದಲ್ಲಿ ಸಾರ್ವಜನಿಕ ಕ್ಷೇತ್ರಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರದ ಸಮಸ್ಯೆ ಕಾಣಿಸುವದು. ರಾಜಕೀಯ ಮತ್ತು ಆಡಳಿತದ ಮಟ್ಟದಲ್ಲಿಯ ಭ್ರಷ್ಟಾಚಾರದಿಂದ ಸರಕಾರದ ಕಾರ್ಯಕ್ಷಮತೆ ಕಡಿಮೆಯಾಗುವದು. ಸರಕಾರಿ ಕೆಲಸಗಳಿಗೆ ಹತ್ತುವ ವೇಳೆ, ಸಾರ್ವಜನಿಕ ಸೌಲಭ್ಯ ಮತ್ತು ಸೌಕರ್ಯಗಳ ಜಾರಿದ ಗುಣವತ್ತತೆ, ಬೇರೆ ಬೇರೆ ಆರ್ಥಿಕ ಅವ್ಯವಸ್ಥೆ ಇವುಗಳಿಂದ ಒಟ್ಟು ವ್ಯವಸ್ಥೆಯ ಕುರಿತು ಅವಿಶ್ವಾಸ ಮತ್ತು ಅಸಾಮಾಧಾನದ ಭಾವನೆಯು ಜನರಲ್ಲಿ ನಿರ್ಮಾಣವಾಗುವದು. ಚುನಾವಣಾ ಪ್ರಕ್ರಿಯೆಯಲ್ಲಾಗುವ ಭ್ರಷ್ಟಾಚಾರ, ನಕಲಿ ಮತದಾನ, ಮತದಾರರಿಗೆ ಲಂಚ ಕೊಡುವದು, ಓಡಿಸಿಕೊಂಡು, ಹೋಗುವದು ಇಂಥ ಘಟನೆಗಳಿಂದ ಜನರ ಪ್ರಜಾಪ್ರಭುತ್ವ ಪ್ರಕ್ರಿಯೆ ಮೇಲಿನ ವಿಶ್ವಾಸ ಕಡಿಮೆ ಆಗಬಹುದು.

> **ನಿಮಗೆ ಏನು ಅನಿಸುವದು ?**
>
> ರಾಜಕಾರಣದಲ್ಲಿಯ ಮನೆತನದ ತಲೆಮಾರುತನ ಇದು ಪ್ರಜಾಪ್ರಭುತ್ವದ ಮುಂದಿನ ದೊಡ್ಡ ಸಮಸ್ಯೆಯಾಗಿದೆ. ರಾಜಕಾರಣದಲ್ಲಿ ಒಂದೇ ಕುಟುಂಬದ ಏಕಾಧಿಕಾರ ನಿರ್ಮಾಣವಾಗಿದ್ದರಿಂದ ಪ್ರಜಾಪ್ರಭುತ್ವದ ವಿಸ್ತಾರ (democratic space) ಕಡಿಮೆಯಾಗುವುದು. ಸಾಮಾನ್ಯ ಜನರಿಗೆ ಸಾರ್ವಜನಿಕ ಕ್ಷೇತ್ರದಲ್ಲಿ ಸಹಭಾಗ ದೊರೆಯುದಿಲ್ಲ.

**ರಾಜಕಾರಣದ ಅಪರಾಧಿತನ :** ರಾಜಕೀಯ ಪ್ರಕ್ರಿಯೆಯಲ್ಲಿ ಅಪರಾಧಿಗಳ ಹೆಚ್ಚುತ್ತಿರುವ ಸಹಭಾಗ ಇದು ಪ್ರಜಾಪ್ರಭುತ್ವದ ವ್ಯವಸ್ಥೆಯ ಮುಂದಿದ್ದ ಒಂದು ಗಂಭೀರ ಸಮಸ್ಯೆಯಾಗಿದೆ. ಅಪರಾಧಿ ಹಿನ್ನೆಲೆ, ಅಪರಾಧಿ ಸ್ವರೂಪದ ಆರೋಪ, ಭ್ರಷ್ಟಾಚಾರದ ಆರೋಪವುಳ್ಳ ವ್ಯಕ್ತಿಗಳಿಗೆ ಕೆಲವೊಮ್ಮೆ ರಾಜಕೀಯ ಪಕ್ಷಗಳಿಂದ ಅಭ್ಯರ್ಥಿ ತನವನ್ನು ಕೊಡಲಾಗುವುದು. ಇದರಿಂದ ರಾಜಕಾರಣದಲ್ಲಿ ಹಣ ಮತ್ತು ಉಪದ್ರವ ಇವುಗಳ ಮಹತ್ವ ಹೆಚ್ಚುವದು. ಚುನಾವಣೆಯ ವೇಳೆಗೆ ಹಿಂಸಾಚಾರದ ಉಪಯೋಗವಾಗುಬಹುದು.

**ಸಾಮಾಜಿಕ ಆಹ್ವಾನಗಳು:** ಮೇಲೆ ಉಲ್ಲೇಖಿಸಿದ ಆವ್ಹಾನಗಳನ್ನು ಹೊರತುಪಡಿಸಿ ಪ್ರಜಾಪ್ರಭುತ್ವದ ಎದುರು ಕೆಲವು ಸಾಮಾಜಿಕ ಆಹ್ವಾನಗಳೂ ಇವೆ. ನಿರುದ್ಯೋಗ ವ್ಯಸನಾಧಿನತೆ, ಬರಗಾಲ, ಸಾಧನ ಸಂಪತ್ತಿನ ಅಸಮಾನ ಹಂಚುವಿಕೆ, ಬಡವ - ಶ್ರೀಮಂತರಲ್ಲಿಯ ಹೆಚ್ಚುತ್ತಿರುವ ಭೇದ, ಜಾತೀಯತೆ ಮುಂತಾದ ಸಾಮಾಜಿಕ ಪ್ರಶ್ನೆಗಳನ್ನು ಬಿಡಿಸುವದು ಅವಶ್ಯಕವಾಗಿದೆ.

### ಭಾರತದ ಪ್ರಜಾಪ್ರಭುತ್ವವನ್ನು ಯಶಸ್ವಿಗೊಳಿಸಲು ಏನು ಮಾಡಬಹುದು?

(1) ಪ್ರಜಾಪ್ರಭುತ್ವದಲ್ಲಿ ಬಹುಮತಕ್ಕೆ ಮಹತ್ವವಿದೆ. ಪ್ರಜಾಪ್ರಭುತ್ವ ಸರಕಾರ ಪದ್ಧತಿಯಲ್ಲಿ ಬಹುಮತ ಪಡೆದ ಪಕ್ಷವು ಅಧಿಕಾರಕ್ಕೆ ಬರುವದು. ಸಂಸತ್ತಿನಲ್ಲಿ ಎಲ್ಲ ನಿರ್ಣಯಗಳನ್ನು ಬಹುಮತದಿಂದ ತಗೆದುಕೊಳ್ಳಲಾಗುತ್ತವೆ. ಬಹುಸಂಖ್ಯೆ ಸಮಾಜದ ಕಲ್ಯಾಣ ಇದು ಪ್ರಜಾಪ್ರಭುತ್ವದ ಉದ್ದೇಶವಿರುವದು. ಬಹುಮತಕ್ಕೆ ಮಹತ್ವಕೊಡುವಾಗ ಅಲ್ಪ ಮತದಲ್ಲಿರುವ ಮತ್ತು ಅಲ್ಪ ಸಂಖ್ಯೆಯಲ್ಲಿರುವವರ ಮೇಲೆ ಅನ್ಯಾಯವಾಗುವ ಸಾಧ್ಯತೆ ಇರುವದು. ಪ್ರಜಾ ಪ್ರಭುತ್ವವು ಒಂದು ವೇಳೆ ಬಹುಮತದಿಂದ ನಡೆಯುವ ಸರಕಾರವಾಗಿದ್ದರೂ ಅಲ್ಪ ಮತದಲ್ಲಿರುವ ಜನರಿಗೆ ನಿರ್ಣಯ ಪ್ರಕ್ರಿಯೆಯಲ್ಲಿ ಸಮಾವೇಶಗೊಳಿಸಿಕೊಳ್ಳುವುದು, ಅವರ ಹಿತ ಸಂಬಂಧಗಳ ವಿಚಾರ ಮಾಡುವದು ಇವು ಸಹ ಸರಕಾರದ ಕರ್ತವ್ಯವಾಗಿವೆ. ಸ್ವಲ್ಪದರಲ್ಲಿ ಹೇಳುವುದಾದರೆ ಪ್ರಜಾ ಪ್ರಭುತ್ವದ ಸರಕಾರದಲ್ಲಿ ಎಲ್ಲರ ಮತಗಳಿಗೆ ಮಹತ್ವ ಇರಬೇಕು ಹಾಗೆಯೇ ಬಹುಮತದ ಸರಕಾರ ಇದು ಬಹುಸಂಖ್ಯೆಯಲ್ಲಿರುವ ಸಮಾಜದ ಸರಕಾರ ಇರಬಾರದು. ಎಲ್ಲ ಧಾರ್ಮಿಕ, ವಾಂಶಿಕ, ಭಾಷಿಕ, ಜಾತಿಯ ಗುಂಪುಗಳಿಗೆ ಪ್ರಜಾಪ್ರಭುತ್ವದಲ್ಲಿಯ ನಿರ್ಣಯ ಪ್ರಕ್ರಿಯೆಯಲ್ಲಿ ಸಹಭಾಗಿಯಾಗಲು ಸಮಾನ ಅವಕಾಶಸಿಗಬೇಕು.

(2) ಭಾರತದಲ್ಲಿಯ ನ್ಯಾಯಾಲಯಗಳು ರಾಜಕೀಯ ಪ್ರಕ್ರಿಯೆಗಳನ್ನು ಹೆಚ್ಚು ಪಾರದರ್ಶಿಕ ಮಾಡಲು ಉದ್ದೇಶ ಪೂರ್ವಕ ಪ್ರಯತ್ನ ಮಾಡುತ್ತಿರುವುದು ಕಂಡು ಬರುತ್ತಿದೆ.

ವಿಶೇಷವಾಗಿ ರಾಜಕಾರಣದ ಅಪರಾಧೀಕರಣ ತಡೆಯಲು ಅಪರಾಧಿಗಳಿಗೆ ಕಠಿಣ ಶಿಕ್ಷೆ ಮತ್ತು ರಾಜಕೀಯ ಪ್ರಕ್ರಿಯಲ್ಲಿ ಸಹಭಾಗಿಯಾಗಲು ಬಂಧನ, ಹೀಗೆ ನಿರ್ಬಂಧ ಗಳನ್ನು ನ್ಯಾಯಾಲಯವು ಹಾಕಿದೆ

(3) ಭಾರತದಲ್ಲಿಯ ಪ್ರಜಾಪ್ರಭುತ್ವವು ಯಶಸ್ವಿಯಾಗಿಸಲು ಕೇವಲ ಸರಕಾರ, ಆಡಳಿತ ಮತ್ತು ನ್ಯಾಯಾಲಯ ಮಟ್ಟದಲ್ಲಿ ಪ್ರಯತ್ನ ಮಾಡುವದು ಸಾಲದು. ಇದಕ್ಕಾಗಿ ಸಾಮಾಜಿಕ ಮತ್ತು ವೈಯಕ್ತಿಕ ಮಟ್ಟದಲ್ಲಿ ಪ್ರತಿಯೊಬ್ಬರೂ ವಿಚಾರ ಪೂರ್ವಕವಾಗಿ ಪ್ರಯತ್ನ ಮಾಡಬೇಕಾಗಿದೆ. ಶಾಸಕೀಯ ಮತ್ತು ಪ್ರಶಾಸಕೀಯ ಮಟ್ಟದಲ್ಲಿ ಸರ್ವ ಶಿಕ್ಷಾ ಅಭಿಯಾನ, ಸ್ವಚ್ಛ ಭಾರತ ಅಭಿಯಾನ, ಗ್ರಾಮ ಸಮೃದ್ಧಿ ಯೋಜನೆ, ಸ್ವ-ಸಹಾಯ ಗುಂಪುಗಳ ಸ್ಥಾಪನೆ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ರೋಜಗಾರ ಯೋಜನೆ ಇಂಥ ಅನೇಕ ಉಪಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಸ್ತ್ರೀಯರ ರಾಜಕೀಯ ಪ್ರತಿನಿಧಿತ್ವ ಹೆಚ್ಚಿಸಲು ಸ್ಥಾನಿಕ ಆಡಳಿತದ ಸಂಸ್ಥೆಗಳಲ್ಲಿ ಸ್ತ್ರೀಯರಿಗಾಗಿ 50% ಸ್ಥಳಗಳನ್ನು ಮೀಸಲಾಗಿ ಇಡಲಾಗಿದೆ.

(4) ಭಾರತದಲ್ಲಿಯ ಪ್ರಜಾಪ್ರಭುತ್ವವು ಯಶಸ್ವಿಯಾಗ ಬೇಕಾದರೆ ಎಲ್ಲ ಸ್ತರಗಳಲ್ಲಿ ನಾಗರಿಕರ ಸಹಭಾಗ ಹೆಚ್ಚಾಗಬೇಕು. ವಿಶೇಷವಾಗಿ ಶಾಸನ ವ್ಯವಹಾರಗಳ ಮಟ್ಟದಲ್ಲಿ ಅದು ಹೆಚ್ಚಿದರೆ ಸಾರ್ವಜನಿಕ ಧೋರಣೆಗಳ ಸ್ವರೂಪ ಬದಲಾಗಬಹುದು. ಸಂವಾದದಿಂದ ಅದರ ನಿರ್ಮಾಣ ವಾಗಬಹುದು. ಅಧಿಕಾರಕ್ಕೆ ಬರದವರೊಂದಿಗೂ ಕೊಡಕೊಡು ತಗೆದುಕೊಳ್ಳುವಿಕೆ ಇರುವದು, ಪ್ರಜಾಪ್ರಭುತ್ವದ ಯಶಸ್ಸಿಗಾಗಿ ಅವಶ್ಯಕವಾಗಿದೆ.

ಸಮತೆ, ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ, ಧರ್ಮ ನಿರಪೇಕ್ಷತೆ ತಮ್ಮ ವೈಯಕ್ತಿಕ ಜೀವನದಲ್ಲಿಯೂ ಈ ಮೌಲ್ಯಗಳ ಆದರ ಮತ್ತು ರಕ್ಷಣೆ ಮಾಡಬೇಕು. ನಾವು ದೇಶದ ಒಬ್ಬ ಹೊಣೆಗಾರ ನಾಗರಿಕರಿದ್ದೇವೆ ಎಂಬ ಅರಿವನ್ನು ಪ್ರತಿಯೊಬ್ಬರು ಇಟ್ಟರೆ ಮಾತ್ರ ಪ್ರಜಾಪ್ರಭುತ್ವವು ಯಶಸ್ವಿಯಾಗಬಹುದು.

## ಅಭ್ಯಾಸ

4H66JC

**1. ಕೆಳಗಿನ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನಾಯ್ದು ವಿಧಾನಗಳನ್ನು ಪೂರ್ಣ ಮಾಡಿರಿ.**

(1) ಪ್ರಜಾಪ್ರಭುತ್ವದಲ್ಲಿ ......... ಚುನಾವಣೆಯಲ್ಲಿ ಭಾಗವಹಿಸಿ ಅಧಿಕಾರ ಪ್ರವೇಶ ಮಾಡುವರು.

(ಅ) ರಾಜಕೀಯ ಪಕ್ಷ (ಬ) ನ್ಯಾಯಾಲಯಗಳು

(ಕ) ಸಾಮಾಜಿಕ ಸಂಸ್ಥೆ (ಡ) ಮೇಲಿನವುಗಳಲ್ಲಿ ಯಾವುದೂ ಇಲ್ಲ

(2) ಜಗತ್ತಿನ ಎಲ್ಲ ಪ್ರಜಾಪ್ರಭುತ್ವ ರಾಷ್ಟ್ರಗಳ ಮುಂದಿನ ದೊಡ್ಡ ಆವ್ಹಾನವೆಂದರೆ ........... .

(ಅ) ಧಾರ್ಮಿಕ ಸಂಘರ್ಷ.

(ಬ) ನಕ್ಷಲವಾದಿ ಕಾರ್ಯಾಚರಣೆ.

(ಕ) ಪ್ರಜಾಪ್ರಭುತ್ವದ ಬೇರುಗಳನ್ನು ಇನ್ನೂ ಆಳವಾಗಿ ಒಯ್ಯುವದು.

(ಡ) ಉಪದ್ರವತನದ ಮಹತ್ವ

**2. ಮುಂದಿನ ವಿಧಾನಗಳು ಸರಿಯೋ, ತಪ್ಪೊ ಎಂಬುದನ್ನು ಕಾರಣ ಸಹಿತ ವಿವರಿಸಿರಿ.**

(1) ಪ್ರಜಾಪ್ರಭುತ್ವವನ್ನು ರಕ್ಷಿಸಲು ದಕ್ಷರಾಗಿರಬೇಕಾಗುತ್ತದೆ.

(2) ಎಡ ಉಗ್ರವಾದಿ ಚಳುವಳಿಯಲ್ಲಿ ಇಂದು ರೈತ ಮತ್ತು ಬುಡಕಟ್ಟಿನ ಜನರ ಸಮಸ್ಯೆಗಳ ಮಹತ್ವ ಹೆಚ್ಚಾಗುತ್ತಲಿದೆ.

(3) ಚುನಾವಣೆಯಲ್ಲಿಯ ಭ್ರಷ್ಟಾಚಾರದಿಂದ ಜನರ ಪ್ರಜಾಪ್ರಭುತ್ವದ ಪ್ರಕ್ರಿಯೆ ಮೇಲಿನ ವಿಶ್ವಾಸಕ್ಕೆ ಧಕ್ಕೆ ತಗುಲಬಹುದು.

**3. ಸಂಕಲ್ಪನೆ ಸ್ಪಷ್ಟಪಡಿಸಿರಿ.**

(1) ಎಡ ಉಗ್ರವಾದಿ

(2) ಭ್ರಷ್ಟಾಚಾರ

**4. ಕೆಳಗಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರ ಬರೆಯಿರಿ.**

(1) ಭಾರತದಲ್ಲಿ ಪ್ರಜಾಪ್ರಭುತ್ವದ ಯಶಸ್ಸಿಗಾಗಿ ಯಾವ ಸಂಗತಿಗಳು ಅವಶ್ಯಕವಾಗಿವೆ?

(2) ರಾಜಕಾರಣದ ಅಪರಾಧೀಕರಣವಾದ್ದರಿಂದ ಯಾವ ಪರಿಣಾಮವಾಗುವವು?

(3) ರಾಜಕೀಯ ಪ್ರಕ್ರಿಯೆ ಪಾರದರ್ಶಕವಾಗಲು ಯಾವ ಪ್ರಯತ್ನ ಮಾಡಲಾಗುತ್ತದೆ?

**ಉಪಕ್ರಮ**

(1) ಭ್ರಷ್ಟಾಚಾರವನ್ನು ತಡೆಹಿಡಿಯಲು ನೀವು ಯಾವ ಉಪಾಯಯೋಜನೆಯನ್ನು ಸೂಚಿಸುವಿರಿ ಇವುಗಳ ಯಾದಿ ಮಾಡಿರಿ.

(2) 'ಭಾರತದಲ್ಲಿಯ ಆತಂಕವಾದ' ಈ ಸಮಸ್ಯೆಯ ಮೇಲೆ ವರ್ಗದಲ್ಲಿ ಗುಂಪುಚರ್ಚೆಯ ಆಯೋಜನೆ ಮಾಡಿರಿ.

(3) 'ವ್ಯಸನಮುಕ್ತಿ' ಈ ವಿಷಯದ ಮೇಲೆ ಪಥನಾಟ್ಯ ಸಾದರಪಡಿಸಿರಿ.

## ರಾಜ್ಯಶಾಸ್ತ್ರದ ಅಭ್ಯಾಸದಿಂದ ....

ಭಾರತದಲ್ಲಿಯ ಪ್ರತಿಯೊಬ್ಬ ನಾಗರಿಕ ಒಂದು ವೇಳೆ ಅವನು ಊರಲ್ಲಿ, ತಾಲೂಕಿನ ಸ್ಥಳದಲ್ಲಿ ಅಥವಾ ಪಟ್ಟಣದಲ್ಲಿ ಇರುವವನೇ ಆಗಿರಲಿ, ದಿನಾಲು ಅನೇಕ ನಾಗರಿಕ ಮತ್ತು ರಾಜಕೀಯ ಪ್ರಶ್ನೆಗಳೊಂದಿಗೆ ಸಂಪರ್ಕದಲ್ಲಿ ಬರುವನು. ವಾಸ್ತವ್ಯದ ದಾಖಲೆ, ಜಾತಿಯ ದಾಖಲೆ, ಆಧಾರ ಕಾರ್ಡ ಇವುಗಳಿಗಾಗಿ ಯಾರನ್ನು ಭೆಟ್ಟಿಯಾಗಬೇಕು. ನೀರು, ಸಾರ್ವಜನಿಕ ಸ್ವಚ್ಛತೆಯ ಕುರಿತು ಎಲ್ಲಿ ತಕರಾರು ಮಾಡಬೇಕು?

ಮನೆಗೆ ಸಂಬಂಧಿಸಿದ ಕಾಗದ ಪತ್ರಗಳನ್ನು ಎಲ್ಲಿಂದ ದೊರಕಿಸಬೇಕು ಮುಂತಾದ ವಿಷಯಗಳು ನಾಗರಿಕಶಾಸ್ತ್ರ ಮತ್ತು ರಾಜ್ಯಶಾಸ್ತ್ರದ ಅಭ್ಯಾಸದಿಂದ ತಿಳಿಯುತ್ತವೆ. ಒಳ್ಳೆಯ ನಾಗರಿಕ ನಾಗಲು, ದೇಶದ ನಾಗರಿಕನೆಂದು ನಮಗಿದ್ದ ಹಕ್ಕು-ಕರ್ತವ್ಯಗಳ ಅರಿವು ಈ ಅಭ್ಯಾಸದಿಂದ ಆಗುತ್ತದೆ. ಭಾರತದಲ್ಲಿ ಮತ್ತು ಭಾರತದ ಹೊರಗೆ ನಿಮಗೆ ಪ್ರವಾಸ ಮಾಡುವದಿದ್ದರೆ ಈ ವಿಷಯದಿಂದ ಅದರ ಮಾಹಿತಿ ದೊರಕುವದು.


ಶಾಲೆ ಮುಗಿಸಿ ನೀವು ಯಾವಾಗ ಭವಿಷ್ಯದ ಕುರಿತು ನಿಯೋಜನೆ ಮಾಡುವಿರಿ ಆಗಲೂ ನಿಮಗೆ ರಾಜ್ಯಶಾಸ್ತ್ರ ವಿಷಯದ ಸಹಾಯವಾಗುವದಿದೆ. ಕೇಂದ್ರಿಯ ಲೋಕಸೇವಾ ಆಯೋಗ, ಮಹಾರಾಷ್ಟ್ರ ಲೋಕಸೇವಾ ಆಯೋಗ ಮತ್ತು ಬ್ಯಾಂಕುಗಳಲ್ಲಿಯ ಭರ್ತಿಗಾಗಿ ಇರುವ ಪರೀಕ್ಷೆಗಳ ಅಭ್ಯಾಸಕ್ರಮದಲ್ಲಿ ಭಾರತದ ಸರಕಾರ ಮತ್ತು ರಾಜಕಾರಣ ಈ ವಿಷಯಗಳ ಸಮಾವೇಶವಿರುವದು. ನೀವು ವ್ಯವಸಾಯದ ಅವಕಾಶಕ್ಕಾಗಿ ಯಾವುದೇ ಕ್ಷೇತ್ರ ಆರಿಸಿರಿ, ರಾಜ್ಯಶಾಸ್ತ್ರ ಇದು ಅದರ ಅಡಿಗಲ್ಲು ಇದೆ. ಹಾಗೆಯೇ ಅಂತರರಾಷ್ಟ್ರೀಯ ರಾಜಕಾರಣ, ಲೋಕ ಪ್ರಶಾಸನ, ಶಾಂತತೆ ಮತ್ತು ಸಂಘರ್ಷ ಈ ವಿಷಯದ ಅಭ್ಯಾಸವೂ ರಾಜ್ಯರಾಸ್ತ್ರದ ಹೊರತಾಗಿ ಆಗಲಾರದು. ಈ ಅಭ್ಯಾಸ ವಿಷಯಗಳಲ್ಲಿ ಈಗ ನೌಕರಿಯ ಅನೇಕ ಅವಕಾಶಗಳು ಲಭ್ಯವಾಗಿವೆ. ಅವು ಕೇವಲ ಅಧ್ಯಾಪನ ಮತ್ತು ಸಂಶೋಧನ ಇದೇ ಕ್ಷೇತ್ರದಲ್ಲಿ ಇಲ್ಲ, ಮಾಹಿತಿ ತಂತ್ರಜ್ಞಾನ, ಧೋರಣೆ ವಿಶ್ಲೇಷಣೆ, ರಾಜಕೀಯ ಮುಂದಾಳುಗಳ ಸಲಹಾಗಾರ ಸಂಘಟನೆ ಇವುಗಳಲ್ಲಿಯೂ ಅನೇಕ ಅವಕಾಶಗಳು ಇವೆ.


ಜಾಗತೀಕರಣದಿಂದ ರಾಜ್ಯಶಾಸ್ತ್ರದ ವ್ಯವಹಾರಿಕ ಉಪಯೋಗ ಮಾಡಬಹುದು. ಇಂತಹ ಅನೇಕ ಅವಕಾಶಗಳನ್ನು ನಿರ್ಮಾಣ ಮಾಡಲಾಗಿದೆ. ಸರಕಾರ ಮತ್ತು ರಾಜಕಾರಣ ತಿಳಿದು ಸಂಶೋಧಕರ ಮತ್ತು ಮಧ್ಯಸ್ತ ವ್ಯಕ್ತಿಗಳು ಅವಶ್ಯಕತೆ ಇಂದು ರಾಜಕೀಯ ಪಕ್ಷ, ಒತ್ತಾಯ ಮಾಡುವವರ ಗುಂಪು ಸಂಘಟನೆಗಳು, ಸ್ವಯಂ ಸೇವಿ ಸಂಘಟನೆ ಇವರಿಗೆ ರಾಜಕೀಯ ಪ್ರಕ್ರಿಯೆ ಮತ್ತು ನೌಕರಶಾಹಿಯ ತೊಡಕು ತಿಳಿಯುವ ವ್ಯಕ್ತಿಗಳಿಗೂ ಇಂದು ಅನೇಕ ಅವಕಾಶಗಳು ಉಪಲಬ್ಧವಾಗಿವೆ.


ಜಾಗತೀಕರಣದಿಂದ ರಾಜ್ಯಶಾಸ್ತ್ರದ ವ್ಯವಹಾರಿಕ ಉಪಯೋಗ ಮಾಡಿಕೊಳ್ಳುವಂತಹ ಅನೇಕ ಅವಕಾಶಗಳು ನಿರ್ಮಾಣವಾಗಿವೆ. ಸರಕಾರ ಮತ್ತು ರಾಜಕಾರಣ ತಿಳಿದ ಸಂಶೋಧಕರ ಮತ್ತು ಮಧ್ಯಸ್ತ ವ್ಯಕ್ತಿಗಳ ಅವಶ್ಯಕತೆ ಇಂದು ರಾಜಕಿಯ ಪಕ್ಷ, ಒತ್ತಡದ ಗುಂಪು, ಸರಕಾರೇತರ ಸಂಘಟನೆಗಳು, ಸ್ವಯಂ ಸೇವಾ ಸಂಘಟನೆಗಳಿಗೆ ಇದೆ. ರಾಜಕೀಯ ಪ್ರಕ್ರಿಯೆ ಮತ್ತು ನೌಕರಶಾಹಿಯ ತೊಡಕು ತಿಳಿಯುವ ಮತ್ತು ವಿಶ್ಲೇಷಾತ್ಮಕ ಕೌಶಲ್ಯವಿರುವ ವ್ಯಕ್ತಿಗಳ ಅವಶ್ಯಕತೆ ಎಲ್ಲೆಡೆ ಇದೆ.

## छत्रपती शिवाजी महाराज स्मृतिग्रंथ

- सामान्य रयतेच्या कल्याणासाठी स्थापन केलेल्या स्वराज्य स्थापनेची कथा उलगडणारे पुस्तक.
- छत्रपती शिवाजी महाराजांच्या उत्तुंग कार्य व त्यामागची तेवढीच उत्तुंग व उदात्त भूमिका वाचकांसमोर आणणारे प्रेरणादायी वाचन साहित्य.
- इतिहास वाचनासाठी पूरक असे संदर्भ पुस्तक.







- इतिहास वाचनासाठी पूरक अशी संदर्भ पुस्तके.
- निवडक लेखक, इतिहासकारांचे प्रेरणादायी लेख.

**पुस्तक मागणीसाठी www.ebalbharati.in, www.balbharati.in संकेतस्थळावर भेट द्या.**

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

इतिहास व राज्यशास्त्र इ. १० वी (कन्नड माध्यम) ₹ 56.00











स्वच्छ भारत

एक कदम स्वच्छता की ओर